₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಸೋಮವಾರ 14.10.2024 ಸಂಪುಟ: 9 ಸಂಚಿಕೆ: 293 ಪುಟಗಳು: 10 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ

ಭಾರತಕ್ಕೆ ಕಂಚು

ಕಝಕಸ್ತಾನದ ಅಸ್ತಾನದಲ್ಲಿ ನಡೆದ ಏಷ್ಯನ್ ಟೇಬಲ್ ಟೆನ್ನಿಸ್ ಚಾಂಪಿಯನ್‌ಶಿಪ್‌ನ ಮಹಿಳಾ ವಿಭಾಗದಲ್ಲಿ ಭಾರತದ ಐಹಿಕ ಮುಖರ್ಜಿ ಮತ್ತು ಸುತೀರ್ಥ ಮುಖರ್ಜಿ ಕಂಚು ಗಳಿಸಿದ್ದಾರೆ.

ಪುಟ ತೆರೆದಂತೆ...

ಬೈ-ಎಲೆಕ್ಷನ್ ಸುತ್ತ ಪೈಪೋಟಿಯ ಹುತ್ತ

ಮೂರ್ತಿಪೂಜೆ ಆರ್.ಟಿ.ವಿಠ್ಠಲಮೂರ್ತಿ

ಸಂ.ಪುಟ | 6

ಲೋಕೊಮೋಟಿವ್‌ಗಿಂತ ದೊಡ್ಡದು ಮೋಟಿವೇಷನ್

ವಿದೇಶವಾಸಿ ಕಿರಣ್ ಉಪಾಧ್ಯಾಯ ಬಹ್ರೈನ್

ಸಂ.ಗಮ | 7

ಮಾತಂದ್ರೆ ಮಾತು

ವಿಜಯೇಂದ್ರ, ನಾನು ರಾಜೀನಾಮೆ ನೀಡುತ್ತೇನೆ ಎನ್ನುವುದಕ್ಕೆ ಅವರೇನು ಜ್ಯೋತಿಷ್ಯರೇ? ಅವರ ತಂದೆ (ಯಡಿಯೂರಪ್ಪ) ಪೋಕ್ಸೋ ಪ್ರಕರಣದಲ್ಲಿ ಸಿಲುಕಿದ್ದಾರೆ. ಮೊದಲು ಅದಕ್ಕೆ ಉತ್ತರಿಸಲಿ. ತಂದೆ ಮೇಲಿನ ಆರೋಪದ ಜವಾಬ್ದಾರಿ ಹೊತ್ತು ರಾಜೀನಾಮೆ ನೀಡಲಿ.

ಸಿದ್ದರಾಮಯ್ಯ
ಮುಖ್ಯಮಂತ್ರಿ

ದಾರಿದೀಪೋಕ್ತಿ

ನೀವು ಎಷ್ಟು ವೇಗವಾಗಿ ನಡೆಯುತ್ತೀರಿ ಎಂಬುದು ಮುಖ್ಯವಲ್ಲ. ಎಲ್ಲೂ ನಿಲ್ಲದೇ ನಡೆಯುವುದಷ್ಟೇ ಮುಖ್ಯ. ಕೆಲ ದಿನಗಳ ನಂತರ ನೀವು ಬಹು ದೂರ ಸಾಗಿರುತ್ತೀರಿ. ಇದನ್ನು ನಡೆಯುವುದಕ್ಕೊಂದೇ ಅಲ್ಲ, ಬೇರೆ ಕೆಲಸಗಳಿಗೂ ಅನ್ವಯಿಸಿಕೊಂಡರೆ ನಿಮ್ಮ ಜೀವನದಲ್ಲಿ ಅಗಾಧ ಬದಲಾವಣೆಯಾಗಿರುತ್ತದೆ.

ವಕ್ರತುಂಡೋಕ್ತಿ

ನೀವು ಸಾಕಿದ ನಾಯಿ ನಿಮ್ಮ ಮನೆಯನ್ನು ಕಾಯಬಲ್ಲುದು. ಆದರೆ ಮನೆಯಲ್ಲಿರುವ ಬ್ರೆಡ್ ಪೀಸನ್ನಲ್ಲ.

ದಸರಾ ಜಂಬೂಸವಾರಿ ನಿರ್ವಹಣೆ ವೈಫಲ್ಯ
ಪ್ರಮೋದಾದೇವಿ ಆಕ್ಷೇಪ

ಮೈಸೂರು: ದಸರಾ ಜಂಬೂಸವಾರಿ ವೇಳೆ ನಿಗದಿತ ಶುಭ ಸಮಯ ದೊಳಗೆ ಪುಷ್ಪಾರ್ಚನೆ

ಮಾಡದ ಬಗ್ಗೆ ಅಪಸ್ವರ ಕೇಳಿಬಂದ ಬೆನ್ನಲ್ಲೇ, ರಾಜ ವಂಶಸ್ಥೆ ಪ್ರಮೋದಾದೇವಿ ಒಡೆಯರ್ ಮೈಸೂರು ಜಿಲ್ಲಾಡಳಿತದ ವಿರುದ್ಧ ಅಸಮಾಧಾನ ಹೊರ ಹಾಕಿದ್ದಾರೆ. ಜಂಬೂಸವಾರಿ ವೇಳೆ ಅಂಬಾರಿ ನೀಡಲು ಅರಮನೆ ವಿಳಂಬ ಎಸಗಿಲ್ಲ. ನಿಗದಿಯಂತೆ ಅಂಬಾರಿ ನೀಡಲಾ ಗಿದೆ. ಈ ಬಗ್ಗೆ ಬೇಜವಾಬ್ದಾರಿ ಹೇಳಿಕೆ ಸಲ್ಲದು ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮುನಿಟ್ರ್ಯಾಪ್ ಪ್ರಕರಣ
ಗಣ್ಯರಿಗೆ ನೋಟಿಸ್ ನೀಡಲು ಸಿದ್ಧತೆ

ಬೆಂಗಳೂರು: ಶಾಸಕ ಮುನಿರತ್ನ ಹನಿಟ್ರ್ಯಾಪ್ ಪ್ರಕರಣದಲ್ಲಿ ಸಂತ್ರಸ್ತೆಯ ಹೇಳಿಕೆ ದಾಖಲಿಸಿರುವ ಎಸ್‌ಐಟಿ ಅಧಿಕಾರಿಗಳು ಹೇಳಿಕೆಯ ಆಧಾರದಲ್ಲಿ ಹಲವು ಗಣ್ಯರಿಗೆ ನೋಟಿಸ್ ನೀಡಲಿದ್ದಾರೆ. ಪ್ರಕರಣ ತನಿಖೆ ಚುರುಕುಗೊಂಡಿದೆ. ಹಲವು ಅಧಿಕಾರಿ ಗಳು, ಮಾಜಿ ಕಾರ್ಪೊರೇಟರ್‌ಗಳು, ರಾಜಕಾರಣಿಗಳು ಈ ಹನಿಟ್ರ್ಯಾಪ್‌ನಲ್ಲಿ ಶಾಮೀಲಾಗಿದ್ದಾರೆ ಎಂದು ಸಂತ್ರಸ್ತೆ ತಿಳಿಸಿದ್ದಾಳೆ.

ಫನ್‌ತರಂಗ
- ರಘುಪತಿ ಶೃಂಗೇರಿ -

"ಪ್ರಕರಣ ತನಿಖಾ ಹಂತದಲ್ಲಿದೆ" ಕನ್ನಡ ಸಿನಿಮಾಶೀರ್ಷಿಕೆಯಲ್ಲಿ ತೆರೆಗೆ



ಸಿದ್ಧಾರ್ಥ ಟ್ರಸ್ಟ್‌ಗೆ ಮಂಜೂರಾಗಿದ್ದ 5 ಎಕರೆ ಭೂಮಿ ಕೆಐಎಡಿಬಿಗೆ ವಾಪಸ್
ಗವರ್ನರ್ ವಿವರಣೆ ಕೇಳಿದ ಬೆನ್ನಿಗೇ ಭೂಮಿ ಹಿಂದಿರುಗಿಸಲು ಖರ್ಗೆ ಕುಟುಂಬ ನಿರ್ಧಾರ

ಸಿಎಂ ಹಾದಿ ಹಿಡಿದ ಖರ್ಗೆ

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕುಟುಂಬದ ವಿರುದ್ಧ ಕೇಳಿಬಂದಿದ್ದ ಅಕ್ರಮ ಜಮೀನು ಮಂಜೂರು ಆರೋಪದ ಬೆನ್ನಲ್ಲೇ, ಸಿದ್ಧಾರ್ಥ ಟ್ರಸ್ಟ್ ಈ ಭೂಮಿಯನ್ನು ವಾಪಸು ನೀಡಲು ಮುಂದಾಗಿದೆ. ಈ ಮೂಲಕ ಕೆಲದಿನಗಳ ಹಿಂದಷ್ಟೇ ಮುಡಾ ನಿವೇಶನಗಳನ್ನು ಹಿಂದಿರುಗಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಕುಟುಂಬದ ನಡೆಯನ್ನೇ ಖರ್ಗೆ ಕುಟುಂಬವೂ ಅನುಸರಿಸಿದೆ.

ಖರ್ಗೆ ಕುಟುಂಬಕ್ಕೆ ಸೇರಿದ್ದ ಸಿದ್ಧಾರ್ಥ ವಿಹಾರ ಟ್ರಸ್ಟ್‌ಗೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಐದು ಎಕರೆ ಜಮೀನು ಮಂಜೂರು ಮಾಡಲಾಗಿತ್ತು. ಆದರೆ ಈ ವಿಷಯವನ್ನು ಮುಂದಿಟ್ಟುಕೊಂಡು ಖರ್ಗೆ ಕುಟುಂಬವನ್ನು ರಾಷ್ಟ್ರಮಟ್ಟದಲ್ಲಿ ರಾಜಕೀಯ ಹಾಗೂ ಕಾನೂನಾತ್ಮಕವಾಗಿ ಇಕ್ಕಟ್ಟಿಗೆ ಸಿಲುಕಿಸಲು ಬಿಜೆಪಿ ಮುಂದಾದ ಬೆನ್ನಲ್ಲೇ, ಜಮೀನನ್ನು ವಾಪಸು ನೀಡಲು ತೀರ್ಮಾನಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಮುಡಾದಿಂದ ಪಡೆದಿದ್ದ 14 ನಿವೇಶನಗಳನ್ನು ವಾಪಸ್ ಮಾಡಿದ ಬೆನ್ನಲ್ಲೆ ಖರ್ಗೆ ಕುಟುಂಬವೂ ತಮ್ಮ ಕುಟುಂಬಕ್ಕೆ ಸೇರಿದ ಟ್ರಸ್ಟ್‌ಗೆ ಬೆಂಗಳೂರಿನ ಏರೋಸ್ಪೇಸ್ ಪಾರ್ಕ್‌ನಲ್ಲಿ ನೀಡಿದ್ದ 5 ಎಕರೆ ಜಮೀನನ್ನು ಕೆಐಎಡಿಬಿಗೆ ವಾಪಸ್ ನೀಡುವ ತೀರ್ಮಾನ ಮಾಡಿರುವುದು ಗಮನಾರ್ಹವಾಗಿದೆ. ಈ ಸಂಬಂಧ ಕೆಐಎಡಿಬಿಗೆ ಪತ್ರ ಬರೆದಿರುವ ಮಲ್ಲಿಕಾರ್ಜುನ ಖರ್ಗೆ ಪುತ್ರ, ಸಿದ್ಧಾರ್ಥ ವಿಹಾರ ಟ್ರಸ್ಟ್ ಅಧ್ಯಕ್ಷ ರಾಹುಲ್ ಖರ್ಗೆ ಭೂಮಿಯನ್ನು ವಾಪಸು ಪಡೆಯುವಂತೆ ಮನವಿ ಮಾಡಿದ್ದಾರೆ.

ರಾಜಕೀಯ ಆರೋಪಕ್ಕೆ ಬೇಸತ್ತು ವಾಪಸ್:ಪ್ರಿಯಾಂಕ್

ಕೆಐಎಡಿಬಿಗೆ ಪತ್ರ ಬರೆದ ಬೆನ್ನಲ್ಲೇ ಸುದ್ದಿಗೋಷ್ಠಿ ನಡೆಸಿರುವ ಸಚಿವ ಪ್ರಿಯಾಂಕ್ ಖರ್ಗೆ, ಟ್ರಸ್ಟ್‌ಗೆ ನಿಯಮಬಾಹಿರವಾಗಿ ಜಮೀನು ಪಡೆದಿಲ್ಲ. ಟ್ರಸ್ಟ್‌ನಿಂದ ಲಾಭಮಾಡುವ ಉದ್ದೇಶವಿಲ್ಲ. ಪರಿಶಿಷ್ಟ ಜಾತಿಗೆ ಸೇರಿದ್ದರೂ ರಿಯಾಯಿತಿ ದರದಲ್ಲಿ ಜಮೀನು ಪಡೆದಿಲ್ಲ. ಆದರೂ ರಾಜಕೀಯ ಆರೋಪಗಳಿಂದ ಬೇಸತ್ತು ವಾಪಸ್ ಮಾಡುವ ತೀರ್ಮಾನವನ್ನು ಮಾಡಿದ್ದೇವೆ. ಟ್ರಸ್ಟ್‌ನ ಅಧ್ಯಕ್ಷ ರಾಹುಲ್ ಖರ್ಗೆ ಅವರು ಸೆ.20ರಂದೇ ಕೆಐಎಡಿಬಿಗೆ ಜಮೀನು ಹಿಂದಿರುಗಿಸುವ ಬಗ್ಗೆ ಪತ್ರ ಬರೆದಿದ್ದಾರೆ ಎಂದು ಸ್ಪಷ್ಟಪಡಿಸಿದರು.

→ 4

ರಾಹುಲ್‌ಗೆ ಬೇಸರ

ರಾಹುಲ್ ಖರ್ಗೆ ಮೃದು ಸ್ವಭಾವದವರು. ನಾನು, ನಮ್ಮ ತಂದೆ, ನಮ್ಮ ಮಾವ ರಾಜಕೀಯದಲ್ಲಿರುವುದರಿಂದ ನಮಗೆ ಕೆಟ್ಟ ಹೆಸರು ಬರಬಾರದು ಎನ್ನುವ ಕಾರಣಕ್ಕೆ ಸೆ.20ರಂದೇ ಜಮೀನು ಹಿಂದಿರುಗಿಸುವ ಬಗ್ಗೆ ಪತ್ರ ಬರೆದಿದ್ದಾರೆ. ಬಿಜೆಪಿಯವರ ಮನಃಸ್ಥಿತಿ, ದಲಿತರ ಮಕ್ಕಳು ಮುಂದೆ ಬರುವುದು ಇವರಿಗೆ ಸಹಿಸಲಾಗುತ್ತಿಲ್ಲ ಎಂದು ಪ್ರಿಯಾಂಕ್ ಖರ್ಗೆ ವಾಗ್ದಾಳಿ ನಡೆಸಿದರು.

ಪ್ರತಿಕ್ರಿಯೆಗೆ ನಿರಾಕರಣೆ

ಭೂಮಿ ವಾಪಸು ನೀಡುವ ರಾಹುಲ್ ಖರ್ಗೆ ಅವರು ಬರೆದಿರುವ ಪತ್ರಕ್ಕೆ ಸಂಬಂಧಿಸಿದಂತೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪ್ರತಿಕ್ರಿಯಿಸಲು ನಿರಾಕರಿಸಿದ್ದಾರೆ. ಈ ಬಗ್ಗೆ ಸುದ್ದಿಗಾರರ ಪ್ರಶ್ನೆಗೆ ಯಾವುದೇ ಪ್ರತಿಕ್ರಿಯೆ ನೀಡಲು ನಿರಾಕರಿಸಿ, ಈ ಬಗ್ಗೆ ಟ್ರಸ್ಟ್ ಅಧ್ಯಕ್ಷರನ್ನೇ ಕೇಳಿ ಎಂದರು.

ಪ್ರಿಯಾಂಕ್ ಹೇಳಿದ್ದೇನು?

- ಬಿಜೆಪಿ ನಾಯಕರು ಆರೋಪಿಸುವ ಮೊದಲು ಟ್ರಸ್ಟ್‌ನ ಉದ್ದೇಶ ಗಮನಿಸಬೇಕಿತ್ತು
- ರಾಹುಲ್ ಖರ್ಗೆ ಉನ್ನತ ವ್ಯಾಸಂಗ ಮಾಡಿದ್ದಾರೆ; ಅವರ ಬಗ್ಗೆ ಬಿಜೆಪಿಗೆ ಗೊತ್ತಿಲ್ಲ
- ಜಮೀನು ಬಳಸಿಕೊಂಡು ಏರೋಸ್ಪೇಸ್ ಪಾರ್ಕ್‌ನಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿ ನೀಡುವ ಉದ್ದೇಶವಿತ್ತು
- ಕಾನೂನು ಬಾಹಿರವಾಗಿ ಜಮೀನು ಪಡೆದಿದ್ದರೆ, ಇವರು (ಬಿಜೆಪಿಗರು) ಸುಮ್ಮನೆ ಇರುತ್ತಿದ್ದರಾ?



ಏನಿದು ವಿವಾದ?

ಮಲ್ಲಿಕಾರ್ಜುನ ಖರ್ಗೆ ಪುತ್ರ ರಾಹುಲ್ ಖರ್ಗೆ ಅಧ್ಯಕ್ಷರಾಗಿರುವ ಸಿದ್ಧಾರ್ಥ ವಿಹಾರ ಟ್ರಸ್ಟ್‌ಗೆ ಕೆಐಎಡಿಬಿ 5 ಎಕರೆ ಜಮೀನನ್ನು ಶೈಕ್ಷಣಿಕ ಕಾರಣಕ್ಕೆ ಮಂಜೂರು ಮಾಡಿತ್ತು. ಆದರೆ ಈ ಜಮೀನು ಮಂಜೂರು ಮಾಡಿರುವುದೇ ಕಾನೂನು ಬಾಹಿರ. ನಾಗರಿಕ ಸೌಲಭ್ಯ(ಸಿಎ)ದ ನಿವೇಶನವನ್ನು ಶಿಕ್ಷಣ ಸಂಸ್ಥೆ ಕಟ್ಟಲು ಹಂಚಲಾಗಿದೆ ಎಂದು ವಿಧಾನ ಪರಿಷತ್‌ನ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಆರೋಪಿಸಿ ರಾಜ್ಯಪಾಲರಿಗೆ ದೂರು ನೀಡಿದ್ದರು. ಈ ದೂರಿನ ಬೆನ್ನಲ್ಲೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು ಖರ್ಗೆ ಕುಟುಂಬದ ಟ್ರಸ್ಟ್‌ಗೆ ಸಿಎ ನಿವೇಶನ ಮಂಜೂರು ಮಾಡಿರುವ ಬಗ್ಗೆ ವಿವರಣೆ ನೀಡುವಂತೆ ಮುಖ್ಯಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಪತ್ರ ಬರೆದಿದ್ದರು.

ಸಿದ್ಧಾರ್ಥ ವಿಹಾರ ಟ್ರಸ್ಟ್ ಕಾನೂನು ಬಾಹಿರವಾಗಿ ಜಮೀನು ಪಡೆದಿದ್ದರೆ ಪ್ರಧಾನಿ ಮೋದಿ, ಅಮಿತ್ ಶಾ ಸುಮ್ಮನೆ ಬಿಡುತ್ತಿದ್ದರಾ? ವಿಜಯೇಂದ್ರ, ಅಶೋಕ ಸುಮ್ಮನೆ ಇರುತ್ತಿದ್ದರಾ? ಕಲಬುರಗಿಯವರೆಗೂ ಪಾದಯಾತ್ರೆ ಮಾಡುತ್ತಿದ್ದರು. ಅವರಿಗೂ ವಾಸ್ತವ ಏನು ಎಂಬುದು ಗೊತ್ತಿದೆ. ಏನೇ ಇರಲಿ ಜಮೀನು ವಾಪಸ್ ಮಾಡುವ ನಿರ್ಧಾರ ಕೈಗೊಳ್ಳಲಾಗಿದೆ.

– **ಪ್ರಿಯಾಂಕ್ ಖರ್ಗೆ**, ಸಚಿವ

ಹುಬ್ಬಳ್ಳಿ ಗಲಭೆ ಪ್ರಕರಣ ಹಿಂಪಡೆದಿದ್ದಕ್ಕೆ ಬಿಜೆಪಿಗರ ಆಕ್ರೋಶ
ಯಾವುದೇ ಕಾನೂನುಬಾಹಿರ ತೀರ್ಮಾನವಾಗಿಲ್ಲ: ಕಾಂಗ್ರೆಸ್
ಕೋರ್ಟ್ ಅವಕಾಶ ಕೊಟ್ಟರೆ ಮಾತ್ರ ಕೇಸ್ ವಾಪಸ್- ಸಿಎಂ

ಹುಬ್ಬಳ್ಳಿ ಪ್ರಕರಣ ಕೈ-ಕಮಲಕ್ಕೆ ಅಸ್ತ್ರ

ಬೆಂಗಳೂರು/ಹುಬ್ಬಳ್ಳಿ: ಹಳೇ ಹುಬ್ಬಳ್ಳಿ ಗಲಭೆ ಪ್ರಕರಣವನ್ನು ಹಿಂಪಡೆಯುವ ರಾಜ್ಯ ಸರಕಾರದ ತೀರ್ಮಾನ ಇದೀಗ ಭಾರಿ ವಿವಾದಕ್ಕೆ ಕಾರಣವಾಗಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಕಾಂಗ್ರೆಸಿಗರು ಸಮರ್ಥಿಸಿಕೊಂಡರೆ, ಇದು ತುಷ್ಟೀಕರಣ ರಾಜಕೀಯ ಎಂದು ಬಿಜೆಪಿಗರು ವಾಗ್ದಾಳಿ ನಡೆಸಿದ್ದಾರೆ.

42 ಪ್ರಕರಣಗಳನ್ನು ಹಿಂಪಡೆಯುವಂತೆ ಸಚಿವ ಸಂಪುಟ ಉಪಸಮಿತಿ ಮಾಡಿದ್ದ ಶಿಫಾರಸ್ಸಿನ ಪ್ರಕಾರ ಕಳೆದ ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಪ್ರಕರಣವನ್ನು ಹಿಂಪಡೆಯಲಾಗಿತ್ತು. ಇದರಲ್ಲಿ ಹಳೇ ಹುಬ್ಬಳ್ಳಿಯಲ್ಲಿ ನಡೆದಿದ್ದ ಗಲಭೆ ಪ್ರಕರಣವೂ ಸೇರಿತ್ತು. ಪೊಲೀಸ್ ಠಾಣೆಗೆ ಬೆಂಕಿ ಹಚ್ಚಿದ್ದವರ ವಿರುದ್ಧ ದಾಖಲಾಗಿದ್ದ ಪ್ರಕರಣವನ್ನು 'ರಾಜಕೀಯ ಪ್ರೇರಿತ'ವೆಂದು ಹೇಳಿ ಪ್ರಕರಣವನ್ನು ಹಿಂಪಡೆಯಲಾಗಿತ್ತು.

ಈಗಾಗಲೇ ಎನ್‌ಐಎ ತನಿಖೆ ನಡೆದಿರುವುದರಿಂದ ಪ್ರಕರಣ ಹಿಂಪಡೆಯಲಾಗುವುದಿಲ್ಲ ಎನ್ನುವುದು ಬಿಜೆಪಿಗರ ವಾದವಾಗಿದೆ. ಆದರೆ ಈ ಹಿಂದೆ ಬಿಜೆಪಿ ಅಧಿಕಾರದಲ್ಲಿದ್ದ ಸಮಯದಲ್ಲಿ ಸಂಘ ಪರಿವಾರ, ಭಜರಂಗದಳ ಸೇರಿದಂತೆ ಹಲವು ಹಿಂದೂಪರ ಸಂಘಟನೆಗಳ ವಿರುದ್ಧ ದಾಖಲಾಗಿದ್ದ ಪ್ರಕರಣ ಹಿಂಪಡೆಯಲಾಗಿತ್ತು. ಇದೀಗ ಕಾನೂನುಬದ್ಧವಾಗಿಯೇ ನಾವು ಪ್ರಕರಣವನ್ನು ಹಿಂಪಡೆದಿದ್ದೇವೆ ಎನ್ನುವ ಸಮರ್ಥನೆಯನ್ನು ಕಾಂಗ್ರೆಸಿಗರು ಮಾಡಿದ್ದಾರೆ.

→ 4

ಬಿಜೆಪಿಯಿಂದ ಪ್ರತಿಭಟನೆ

ಗಲಭೆ ಪ್ರಕರಣವನ್ನು ಹಿಂಪಡೆದಿರುವುದನ್ನು ಖಂಡಿಸಿ ಧಾರವಾಡದ ಶಿವಾಜಿ ವೃತ್ತದಲ್ಲಿ ಬಿಜೆಪಿ ನಾಯಕರು ಪ್ರತಿಭಟನೆ ನಡೆಸಿದ್ದು, ಪ್ರತಿಪಕ್ಷ ನಾಯಕ ಅರವಿಂದ ಬೆಲ್ಲದ, ಮಾಜಿ ಶಾಸಕ ಅಮೃತ ದೇಸಾಯಿ ಸೇರಿದಂತೆ 50ಕ್ಕೂ ಹೆಚ್ಚು ಕಾರ್ಯಕರ್ತರನ್ನು ವಶಕ್ಕೆ ಪಡೆಯ ಲಾಯಿತು. ಹುಬ್ಬಳ್ಳಿ- ಬೆಳಗಾವಿ ಪ್ರವಾಸದಲ್ಲಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕಪ್ಪುಪಟ್ಟಿ ತೋರಿಸಿ ಕಾರ್ಯಕರ್ತರು ಪ್ರತಿಭಟನೆಗೆ ಮುಂದಾಗಿದ್ದರು. ಇದಕ್ಕೆ ಅವಕಾಶ ನೀಡದ ಪೊಲೀಸರು ಸ್ಥಳದಿಂದ ತೆರಳುವಂತೆ ಬಿಜೆಪಿ ನಾಯಕರಿಗೆ ಸೂಚನೆ ನೀಡಿದರು. ಆದರೆ ಕಪ್ಪುಪಟ್ಟಿ ಪ್ರದರ್ಶನ ಮಾಡುವುದಾಗಿ ಪಟ್ಟು ಹಿಡಿದಿದ್ದರಿಂದ ಸಿಎಂ ಆಗಮಿಸುವ ಮೊದಲೇ ಪೊಲೀಸರು ಪ್ರತಿಭಟನಾಕಾರರನ್ನು ವಶಕ್ಕೆ ಪಡೆದರು.

ಕಾಂಗ್ರೆಸ್ ಸಮರ್ಥನೆಯೇನು?

ಉದ್ದೇಶಪೂರ್ವಕವಾಗಿ ಸುಳ್ಳು ಕೇಸ್ ಹಾಕಲಾಗಿತ್ತು. ಹೋರಾಟ ಮಾಡಿದ ಸಮಯದಲ್ಲಿ ಕೇಸ್ ಹಾಕಿದ್ದರೆ ವಾಪಸ್ ತೆಗೆದುಕೊಳ್ಳುವ ಅವಕಾಶವಿದೆ. ಎಲ್ಲರ ಕಾಲದಲ್ಲೂ ಪ್ರಕರಣ ವಾಪಸ್ ಪಡೆದ ಉದಾಹರಣೆಗಳಿವೆ. ನಮ್ಮ ಸಂಪುಟದ ತೀರ್ಮಾನವನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು. ಕೋರ್ಟ್ ಅವಕಾಶ ಕೊಟ್ಟರೆ ಮಾತ್ರ ಪ್ರಕರಣ ಹಿಂಪಡೆಯುತ್ತೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ತಮಿಳುನಾಡಿನ ಕವರಪೇಟ್ಟೈನಲ್ಲಿ ನಡೆದಿದ್ದ ಅವಘಡ

ರೈಲ್ವೆ ದುರಂತ: ದುಷ್ಕೃತ್ಯದ ಶಂಕೆ

ಚೆನ್ನೈ: ತಮಿಳುನಾಡಿನ ಕವರಪೇಟ್ಟೈ ಬಳಿ ಶುಕ್ರವಾರ ಸಂಭವಿಸಿದ ಮೈಸೂರು- ದರ್ಭಾಂಗ ನಡುವಣ ಬಾಗಮತಿ ಎಕ್ಸ್‌ಪ್ರೆಸ್ ರೈಲು ದುರಂತದ ಹಿನ್ನೆಲೆಯಲ್ಲಿ ಉಗ್ರರ ದುಷ್ಕೃತ್ಯವಿರುವ ಶಂಕೆ ವ್ಯಕ್ತವಾಗಿದೆ. ಬಾಲಸೋರ್ ಘಟನೆಯಂತೆ ಈ ಅವಘಡವೂ ನಡೆದಿರುವುದರಿಂದ ಎನ್‌ಐಎ ತನಿಖೆ ತೀವ್ರಗೊಂಡಿದೆ.

ಸಿಗ್ನಲ್ ನೀಡದಿದ್ದರೂ ಲೂಪ್‌ಲೈನ ಪ್ರವೇಶಿಸಿದ್ದ ಎಕ್ಸ್‌ಪ್ರೆಸ್ ರೈಲು ಸರಕು ಸಾಗಣೆ ರೈಲಿಗೆ ಡಿಕ್ಕಿಯಾಗಿತ್ತು. 12 ಬೋಗಿಗಳು ಹಳಿತಪ್ಪಿ 20 ಜನರು ಗಾಯಗೊಂಡಿದ್ದು, ಎರಡು ಬೋಗಿಗಳಿಗೆ ಬೆಂಕಿ ಹತ್ತಿಕೊಂಡಿತ್ತು. ಕವರಪೇಟ್ಟೈ ನಿಲ್ದಾಣದ ಟ್ರ್ಯಾಕ್ ಬದಲಿಸುವ ಸಿಗ್ನಲಿಂಗ್ ಪಾಯಿಂಟ್‌ಗಳ ಬಳಿ ನಟ್ ಮತ್ತು ಬೋಲ್ಟ್ ಕಾಣೆಯಾಗಿರುವುದು ತನಿಖೆಗಿಳಿದ ತನಿಖಾಧಿಕಾರಿಗಳ ಗಮನಕ್ಕೆ ಬಂದಿದೆ. ಈ ಅವಘಡದ ಹಿಂದೆ ಕಾಣದ ಕೈಗಳ ಕೈವಾಡವಿರುವುದು ಸ್ಪಷ್ಟವಾಗಿದೆ. ಇಲಾಖೆಯ ಅನೇಕ ನಿವೃತ್ತ ಸಿಬ್ಬಂದಿಗಳೂ ಇದೇ ಸಂಶಯ ವ್ಯಕ್ತಪಡಿಸಿದ್ದಾರೆ.

→ 4

- ಟ್ರ್ಯಾಕ್ ಬದಲು ಜಾಗದಿಂದ ನಟ್-ಬೋಲ್ಟ್ ನಾಪತ್ತೆ
- ಉಗ್ರರ ಷಡ್ಯಂತ್ರದ ಬಗ್ಗೆ ಎನ್‌ಐಎ ತನಿಖೆ , ಸಾಕ್ಷ್ಯಗಳ ಸಂಗ್ರಹ, ಹೇಳಿಕೆ ದಾಖಲು
- ಬಾಗಮತಿ ಎಕ್ಸ್‌ಪ್ರೆಸ್ ರೈಲು ಲೂಪ್‌ಲೈನ್ ಪ್ರವೇಶಿಸಿದ ಬಗ್ಗೆ ನಿಗೂಢ ಅಚ್ಚರಿ

ಸೆಪ್ಟೆಂಬರ್‌ನಲ್ಲಿ 8429 ಕೋಟಿ ತೆರಿಗೆ ಸಂಗ್ರಹ

ಬೆಂಗಳೂರು: ತೆರಿಗೆ ತಾರತಮ್ಯದ ವಿರುದ್ಧ ಕೇಂದ್ರದ ವಿರುದ್ಧ ಮುಗಿಬಿದ್ದಿರುವ ನಡುವೆಯೇ, ರಾಜ್ಯದಲ್ಲಿ ಸೆಪ್ಟೆಂಬರ್‌ನಲ್ಲಿ 8429 ಕೋಟಿ ರು. ವಾಣಿಜ್ಯ ತೆರಿಗೆ ಸಂಗ್ರಹವಾಗಿದೆ. ಇದು ಕಳೆದ ಐದು ತಿಂಗಳಲ್ಲಿ ಅಧಿಕವಾಗಿದೆ.

ವಾಣಿಜ್ಯ ತೆರಿಗೆಗಳ ಇಲಾಖೆ ಮಾಹಿತಿ ಪ್ರಕಾರ ಏಪ್ರಿಲ್‌ನಲ್ಲಿ 9662.80 ಕೋಟಿ ವಾಣಿಜ್ಯ ತೆರಿಗೆ ಸಂಗ್ರಹವಾಗಿತ್ತು. ನಂತರ ಸೆಪ್ಟೆಂಬರ್‌ನಲ್ಲಿ ಮಾತ್ರ ಎಂಟು ಸಾವಿರ ಕೋಟಿ ರುಪಾಯಿಗಿಂತ ಹೆಚ್ಚು ಸಂಗ್ರಹವಾಗಿದೆ. ಆಗಸ್ಟ್‌ನಲ್ಲಿ 7978.69 ಕೋಟಿ ಸಂಗ್ರಹವಾ ಗಿತ್ತು. ಆಗಸ್ಟ್ ತೆರಿಗೆ ಸಂಗ್ರಹಕ್ಕೆ ಹೋಲಿಸಿದರೆ ಸೆಪ್ಟೆಂಬರ್‌ನಲ್ಲಿ 450.54 ಕೋಟಿ ಹೆಚ್ಚುವರಿ ಸಂಗ್ರಹವಾಗಿದೆ. ಆಗಸ್ಟ್‌ನಲ್ಲಿ 7978.69 ಕೋಟಿ ಸಂಗ್ರಹವಾಗಿತ್ತು. ಸೆಪ್ಟೆಂಬರ್‌ನಲ್ಲಿ 6330.05 ಕೋಟಿ ಸರಕು ಸೇವಾ ತೆರಿಗೆ, 2012.32 ಕೃಷಿ ಮಾರಾಟ ತೆರಿಗೆ ಹಾಗೂ 86.86 ಕೋಟಿ ರು. ವೃತ್ತಿ ತೆರಿಗೆ ಸಂಗ್ರಹವಾಗಿದೆ.

ದೇವಿಯ ಕುಂಕುಮ ಧರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ

ಪತ್ನಿ ಹೆಸರಿನಲ್ಲಿ ಯಲ್ಲಮ್ಮನಿಗೆ ಸಿಎಂ ಪೂಜೆ

ಸವದತ್ತಿ: ರೇಣುಕಾ ಯಲ್ಲಮ್ಮ ದೇವಸ್ಥಾನ ಅಭಿವೃದ್ಧಿ ಪ್ರಾಧಿಕಾರ ರಚನೆ ಮಾಡಿದ ನಂತರ ಮೊದಲ ಬಾರಿಗೆ ಸಿಎಂ ಸಿದ್ದರಾಮಯ್ಯ ಯಲ್ಲಮ್ಮ ದೇವಿ ದರ್ಶನ ಪಡೆದು ಪತ್ನಿ ಪಾರ್ವತಿ ಹೆಸರಿನಲ್ಲಿ ಪೂಜೆ ಸಲ್ಲಿಸಿದರು.

ಭಾನುವಾರ ಮಧ್ಯಾಹ್ನ ಸವದತ್ತಿ ಕ್ಷೇತ್ರಕ್ಕೆ ಆಗಮಿಸಿದ ಸಿಎಂ ಸಿದ್ದರಾಮಯ್ಯ ಅವರನ್ನು ಮಂತ್ರಘೋಷಗಳ ಮೂಲಕ ಯಲ್ಲಮ್ಮನ ಸನ್ನಿಧಿಗೆ ಸ್ವಾಗತಿಸಲಾಯಿತು. ನಂತರ ಪುರೋಹಿತರು ಸಿಎಂ ಸಿದ್ದರಾಮಯ್ಯ ಹಾಗೂ ಅವರ ಪತ್ನಿ ಪಾರ್ವತಿ ಹೆಸರಿನಲ್ಲಿ ಅರ್ಚನೆ ಮಾಡಿದರು. ಈ ವೇಳೆ, ಮುಖ್ಯಮಂತ್ರಿಯವರು ತಾವೇ ಯಲ್ಲಮ್ಮನ ಕುಂಕುಮವನ್ನು ಹಣೆಗೆ ಧರಿಸಿದ್ದು ವಿಶೇಷ.

ಈ ಸಂದರ್ಭದಲ್ಲಿ ಡಿಸಿಎಂ ಡಿ.ಕೆ ಶಿವಕುಮಾರ್, ಸಚಿವರಾದ ಸತೀಶ್ ಜಾರಕಿಹೊಳಿ, ಲಕ್ಷ್ಮೀ ಹೆಬ್ಬಾಳಕರ್, ಎಚ್.ಕೆ ಪಾಟೀಲ್, ರಾಮಲಿಂಗಾರೆಡ್ಡಿ ಸೇರಿದಂತೆ ಅನೇಕರು ಸಿಎಂ ಅವರಿಗೆ ಸಾಥ್ ನೀಡಿದರು.

ಯಲ್ಲಮ್ಮನ ಕ್ಷೇತ್ರದಲ್ಲಿ ಸಿಎಂ ಸಿದ್ದರಾಮಯ್ಯ...

ನಾಯ್ಡು ಸರಕಾರಕ್ಕೆ ಎಣ್ಣೆ ಅಂಗಡಿಯ ಅರ್ಜಿಯಿಂದಲೇ 1800 ಕೋಟಿ ರು.!

ಅಮರಾವತಿ: ಆಂಧ್ರಪ್ರದೇಶ ಸರಕಾರಕ್ಕೆ ಅಕ್ಷರಶಃ ಲಾಟರಿಯೇ ಹೊಡೆದಂತಾಗಿದೆ. ಚಿಲ್ಲರೆ ಮಾರಾಟದ ಮದ್ಯದ ಅಂಗಡಿಗಳಿಗೆ ಟೆಂಡರ್ ಕರೆದಿರುವ ರಾಜ್ಯ ಸರಕಾರಕ್ಕೆ ಅರ್ಜಿಗಳ ಮೂಲಕವೇ 1800 ಕೋಟಿ ರು. ಹಣ ಸಂಗ್ರಹವಾಗಿದೆ. ಇದು ಸರಕಾರಕ್ಕೂ ಅಚ್ಚರಿಯ ವಿಷಯವಾಗಿದೆ!

ರಾಜ್ಯದಲ್ಲಿ ಹೊಸದಾಗಿ ಚಿಲ್ಲರೆ ಮಾರಾಟದ ಮದ್ಯದ ಅಂಗಡಿಗಳನ್ನು ತೆರೆಯಲು ಪರವಾನಗಿ ನೀಡಲು ಮುಂದಾದ ರಾಜ್ಯ ಸರಕಾರ, ವಿವಿಧೆಡೆ 3396 ಮಳಿಗೆಗಳಿಗೆ ಅವಕಾಶ ಮಾಡಿಕೊಡಲು ಸಿದ್ಧವಾಗಿದೆ. ಅದಕ್ಕೆ ಅರ್ಜಿ ಸಲ್ಲಿಸುವುದಕ್ಕೆ ಕೊನೆಯ ಗಡುವನ್ನು ಅ.11ರ ಶುಕ್ರವಾರ ಸಂಜೆ 7 ಗಂಟೆಗೆ ನಿಗದಿಪಡಿಸಲಾಗಿತ್ತು. ಅಷ್ಟರೊಳಗೇ ಅರ್ಜಿಗಳ ಮಹಾಪೂರವೇ ಹರಿದುಬಂದಿದ್ದು, 87,986 ಅರ್ಜಿಗಳು ಸಲ್ಲಿಕೆಯಾಗಿವೆ.

ಟೆಂಡರ್ ಪ್ರಕಟಣೆಯಲ್ಲಿ ಅರ್ಜಿ ಶುಲ್ಕವಾಗಿ ಎರಡು ಲಕ್ಷ ರು. ಪ್ರಕಟಿಸಲಾಗಿತ್ತು. ಇದು ಮರುಪಾವತಿ ಆಗುವುದಿಲ್ಲ ಎಂದೂ ಸ್ಪಷ್ಟಪಡಿಸಲಾಗಿತ್ತು. ಹಾಗಿದ್ದೂ 3396 ಮಳಿಗೆಗಳಿಗಾಗಿ 87,986 ಮಂದಿ ಆಸಕ್ತರು 2 ಲಕ್ಷ ರು. ಸಮೇತ ಅರ್ಜಿ ಸಲ್ಲಿಸಿದ್ದರಿಂದ ಆಂಧ್ರ ಸರಕಾರದ ಬೊಕ್ಕಸಕ್ಕೆ 1800 ಕೋಟಿ ರು.ಗಳಷ್ಟು ಹಣ ಸಂಗ್ರಹವಾಗಿದೆ.

ಇದಿಷ್ಟೂ ಅರ್ಜಿಗಳು ನೇರವಾಗಿ ಮುದ್ರಿತ ಸ್ವರೂಪದಲ್ಲಿ ಸಲ್ಲಿಕೆಯಾಗಿವೆ. ಇದರಿಂದಲೇ 1792.83 ಕೋಟಿ ರು. ಅರ್ಜಿ ಶುಲ್ಕ ಸಂಗ್ರಹವಾಗಿದೆ. ಇನ್ನೂ ಹಲವರು ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಿದ್ದಾರೆ. ಅವುಗಳನ್ನೂ ಸೇರಿಸಿ ಲೆಕ್ಕಹಾಕಿದರೆ ಅರ್ಜಿಗಳ ಸಂಖ್ಯೆ 90 ಸಾವಿರ ದಾಟಬಹುದು. ಆಗ ಅರ್ಜಿ ಶುಲ್ಕದ ಒಟ್ಟು ಮೊತ್ತ 1900 ಕೋಟಿ ರು.ಗಳನ್ನೂ ಮೀರಬಹುದು ಎಂದು ರಾಜ್ಯ ಅಬಕಾರಿ ಇಲಾಖೆಯ ಅಧಿಕಾರಿಯೊಬ್ಬರು 'ಹೆಸರು ಬಹಿರಂಗ ಪಡಿಸಬಾರದು' ಎಂಬ ಷರತ್ತಿನ ಮೇಲೆ ಸುದ್ದಿಸಂಸ್ಥೆಗೆ ಮಾಹಿತಿ ನೀಡಿದ್ದಾರೆ.

→ 4

- ಆಂಧ್ರದಲ್ಲಿ ಮತ್ತೆ ಚಿಲ್ಲರೆ ಮದ್ಯ ಮಾರಾಟ ಖಾಸಗಿಗೆ
- ಅಬಕಾರಿ ಇಲಾಖೆ ಟೆಂಡರ್‌ಗೆ ಅರ್ಜಿಗಳ ಮಹಾಪೂರ
- 3396 ಮದ್ಯ ಮಳಿಗೆಗಳಿಗೆ 87986 ಅರ್ಜಿಗಳ ಸಲ್ಲಿಕೆ
- ಈ ಹಿಂದಿನ ಜಗನ್ ಸರಕಾರ ಖಾಸಗಿ ಗುತ್ತಿಗೆ ರದ್ದುಗೊಳಿಸಿತ್ತು
- 5 ವರ್ಷಗಳಿಂದ ಖಾಲಿ ಕುಳಿತಿದ್ದ ಖಾಸಗಿ ಗುತ್ತಿಗೆದಾರರಲ್ಲಿ ಈಗ ಇಮ್ಮಡಿಸಿದ ಉತ್ಸಾಹ
- ಅರ್ಹ ಅರ್ಜಿದಾರರ ಆಯ್ಕೆಗೆ ನಾಳೆ ಲಾಟರಿ ಮೂಲಕ ನಿರ್ಧಾರ

ಯಾವ ಜಿಲ್ಲೆಯಿಂದ ಹೆಚ್ಚು ಅರ್ಜಿ?

ಎನ್‌ಟಿಆರ್ ಜಿಲ್ಲೆಯಲ್ಲಿ 113 ಚಿಲ್ಲರೆ ಮದ್ಯ ಮಳಿಗೆಗಳಿಗೆ ಪರವಾನಗಿ ನೀಡಲಾಗುತ್ತಿದೆ. ಆದರೆ, ಈ ಜಿಲ್ಲೆಯಿಂದ ಅತ್ಯಧಿಕ ಸಂಖ್ಯೆಯ ಅರ್ಜಿಗಳು ಸಲ್ಲಿಕೆಯಾಗಿವೆ. ಇದೊಂದೇ ಜಿಲ್ಲೆಯಿಂದ 5787 ಅರ್ಜಿಗಳು ಬಂದಿವೆ. ಎರಡನೇ ಸ್ಥಾನದಲ್ಲಿ ಪಶ್ಚಿಮ ಗೋದಾವರಿ ಜಿಲ್ಲೆ ಇದೆ. ಇಲ್ಲಿ 170 ಮಳಿಗೆಗಳು ಲಭ್ಯವಿದ್ದು, 5362 ಅರ್ಜಿಗಳು ಬಂದಿವೆ. 144 ಮಳಿಗೆಗಳಿರುವ ಏಲೂರು ಜಿಲ್ಲೆಯಿಂದ 5339 ಅರ್ಜಿಗಳು, 127 ಮಳಿಗೆಗಳ ಗುಂಟೂರು ಜಿಲ್ಲೆಯಿಂದ 4297 ಅರ್ಜಿ, ಅಲ್ಲೂರಿ ಸೀತಾರಾಮರಾಜು ಜಿಲ್ಲೆಯಿಂದ 40 ಮಳಿಗೆಗಳಿಗೆ 1151 ಅರ್ಜಿ ಸಲ್ಲಿಕೆಯಾಗಿವೆ.

ಅರ್ಜಿಗಳ ಮಹಾಪೂರ ಏಕೆ?

ಹಿಂದಿನ ವೈಎಸ್ ಜಗನ್‌ಮೋಹನ್ ರೆಡ್ಡಿ ಸರಕಾರ ಮದ್ಯ ಚಿಲ್ಲರೆ ಮಾರಾಟವನ್ನು ಖಾಸಗಿಯವರಿಂದ ವಾಪಸ್ ಪಡೆದು ರಾಜ್ಯ ಸರಕಾರದ ಮಳಿಗೆಗಳ ಮೂಲಕವಷ್ಟೇ ಮಾರಾಟಕ್ಕೆ ಅವಕಾಶ ಮಾಡಿಕೊಟ್ಟಿತ್ತು. ಐದು ವರ್ಷಗಳಿಂದ ಖಾಸಗಿ ಮಾರಾಟಗಾರರು ಖಾಲಿ ಕುಳಿತುಕೊಳ್ಳುವಂತೆ ಆಗಿತ್ತು. ಈಗ ಚಂದ್ರಬಾಬು ನಾಯ್ಡು ನೇತೃತ್ವದ ಸರಕಾರ ಮದ್ಯದ ಚಿಲ್ಲರೆ ಮಾರಾಟವನ್ನು ಖಾಸಗಿಯವರಿಗೇ ವಹಿಸಿಕೊಡಲು ಮುಂದಾಗಿದೆ. ಹಾಗಾಗಿ ಅರ್ಜಿಗಳ ಮಹಾಪೂರವೇ ಹರಿದುಬಂದಿದೆ..!

ಗೌರಿ ಲಂಕೇಶ್ ಹತ್ಯೆ ಆರೋಪಿಗಳಿಗೆ ಸ್ವಾಗತ, ಸನ್ಮಾನ

ವಿಜಯಪುರ: ಪತ್ರಕರ್ತೆ ಗೌರಿ ಲಂಕೇಶ ಹತ್ಯೆ ಪ್ರಕರಣದಲ್ಲಿ ಜಾಮೀನು ದೊರೆತ ಬೆನ್ನಲ್ಲೇ ವಿಜಯಪುರಕ್ಕೆ ಬಂದ ಇಬ್ಬರು ಆರೋಪಿಗಳಿಗೆ ಹಿಂದೂ ಸಂಘಟನೆಯ ಮುಖಂಡರಿಂದ ಸ್ವಾಗತ ಮತ್ತು ಸನ್ಮಾನ ದೊರೆತಿದೆ. ಆರೋಪಿಗಳಾದ ಪರಶುರಾಮ್ ವಾಗ್ಮೋಡೆ, ಮನೋಹರ್ ಯಡವೆ ಕಾಳಿಕಾದೇವಿ ಮಂದಿರದಲ್ಲಿ ಪೂಜೆ ಸಲ್ಲಿಸಿದರು. ಗೌರಿ ಲಂಕೇಶ್ ಹತ್ಯೆ ಪ್ರಕರಣದಲ್ಲಿ ಸಂಬಂಧವೇ ಇರದ ಈ ಇಬ್ಬರನ್ನು ಸಿಲುಕಿಸಲಾಗಿದೆ ಎಂದು ಹಿಂದು ಮುಖಂಡ ಉಮೇಶ ವಂದಾಲ ಅಸಮಾಧಾನ ವ್ಯಕ್ತಪಡಿಸಿದರು.

ತೆಲಂಗಾಣ ಜಾತಿಗಣತಿ 2 ತಿಂಗಳಲ್ಲಿ ಪೂರ್ಣ

ಹೈದರಾಬಾದ್: ಕರ್ನಾಟಕ ಮತ್ತು ಬಿಹಾರದಂತೆ ತೆಲಂಗಾಣದಲ್ಲೂ ಜಾತಿಗಣತಿ ನಡೆಸಲು ರೇವಂತರೆಡ್ಡಿ ನೇತೃತ್ವದ ಕಾಂಗ್ರೆಸ್ ಸರಕಾರ ಮುಂದಾಗಿದೆ. ಈಗಾಗಲೇ ಈ ಬಗ್ಗೆ ರಾಜ್ಯ ವಿಧಾನಸಭೆಯಲ್ಲಿ ನಿರ್ಣಯ ಅಂಗೀಕರಿಸಲಾಗಿದೆ. ಸರಕಾರ ಅಧಿಸೂಚನೆಯನ್ನೂ ಹೊರಡಿಸಿದೆ. ಜಾತಿಗಣತಿಯನ್ನು ಎರಡು ತಿಂಗಳಲ್ಲಿ ಪೂರ್ಣಗೊಳಿಸುವಂತೆ ಸೂಚಿಸಲಾಗಿದೆ. ದುರ್ಬಲ ಜಾತಿಗಳಿಗೆ ಸರಕಾರದ ಯೋಜನೆಗಳು ಸೂಕ್ತವಾಗಿ ತಲುಪಲು ಜಾತಿಗಣತಿ ಸಹಕಾರಿಯಾಗುತ್ತದೆ ಎಂದು ತೆಲಂಗಾಣದ ಸಚಿವ ಪೊನ್ನಾಲ ಪ್ರಭಾಕರ್ ಹೇಳಿದ್ದಾರೆ.

ಬಾಬಾ ಸಿದ್ದಿಕಿಯನ್ನು ಹತ್ಯೆಗೈದಿದ್ದು ನಾವೇ

ಪಾತಕಿ ಲಾರೆನ್ಸ್ ಬಿಷ್ಣೋಯ್ ಗ್ಯಾಂಗ್ ಹೇಳಿಕೆ

ಮುಂಬೈ : ಬಾಂದ್ರಾದಲ್ಲಿ ಶನಿವಾರ ರಾತ್ರಿ



ಹಂತಕರ ಗುಂಡಿಗೆ ಬಲಿಯಾದ ಎನ್‌ಸಿಪಿಯ ಅಜಿತ್ ಪವಾರ್ ಬಣದ ಪ್ರಮುಖ ನಾಯಕ ಬಾಬಾ ಸಿದ್ದಿಕಿ ಪ್ರಕರಣದಲ್ಲಿ ಹಲವು ಸ್ಫೋಟಕ ಅಂಶಗಳು ಬೆಳಕಿಗೆ ಬಂದಿವೆ.ಸಿದ್ದಿಕಿಯನ್ನು ಹತ್ಯೆಗೈದಿದ್ದು ತಾವೇ ಎಂದು ಹರಿಯಾಣ ಮೂಲದ ಡಾನ್ ಲಾರೆನ್ಸ್ ಬಿಷ್ಣೋಯ್ ಗ್ಯಾಂಗ್ ಹೇಳಿಕೊಂಡಿದೆ.

ತಮ್ಮ ಪುತ್ರನ ಕಚೇರಿಯಲ್ಲಿದ್ದ ವೇಳೆ ದುಷ್ಕರ್ಮಿಗಳು ಮೂರು ಸುತ್ತು ಗುಂಡು ಹಾರಿಸಿದ್ದು, ತೀವ್ರವಾಗಿ ಗಾಯಗೊಂಡಿದ್ದ ಸಿದ್ದಿಕಿ ಲೀಲಾವತಿ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು. ಮಹಾರಾಷ್ಟ್ರ ಡಿಸಿಎಂ ಅಜಿತ್ ಪವಾರ್ ಹಾಗೂ ಬಾಲಿವುಡ್ ನಟ ಸಲ್ಮಾನ್ ಖಾನ್ ಆಪ್ತರಾಗಿದ್ದ ಸಿದ್ದಿಕಿ ಕುಖ್ಯಾತ ಪಾತಕಿ ದಾವೂದ್ ಇಬ್ರಾಹಿಂ ನಂಟುಹೊಂದಿದ್ದರಿಂದಲೇ ಹತ್ಯೆಗೈದಿದ್ದಾಗಿ ಬಿಷ್ಣೋಯ್ ತಂಡ ಹೇಳಿಕೊಂಡಿದೆ. ಈಗ ತಿಹಾರ್ ಸೆರೆಮನೆಯಲ್ಲಿರುವ ಬಿಷ್ಣೋಯ್ ಅಲ್ಲಿಂದಲೇ ಸಿದ್ದಿಕಿ ಹತ್ಯೆಗಾಗಿ ನಾಲ್ವರಿಗೆ ಮೂರು ಲಕ್ಷ ರು.ಗಳ ಸುಪಾರಿ ನೀಡಿದ್ದಾನೆಂದು ಹೇಳಲಾಗಿದೆ.

ಎನ್‌ಸಿಪಿ ನಾಯಕನ ಹತ್ಯೆ ಬೆನ್ನಲ್ಲೇ ನಟ ಸಲ್ಮಾನ್ ಖಾನ್ ನಿವಾಸಕ್ಕೆ ಬಿಗಿಭದ್ರತೆ ಒದಗಿಸಲಾಗಿದೆ. ಈಗಾಗಲೇ ಸಲ್ಮಾನ್ ಖಾನ್‌ಗೆ ಬಿಷ್ಣೋಯ್ ಜೀವಬೆದರಿಕೆ ಹಾಕಿದ್ದು, ಪೊಲೀಸರು ಕಟ್ಟೆಚ್ಚರ ವಹಿಸಿದ್ದಾರೆ. ಶನಿವಾರ ಇಬ್ಬರು ಹಂತಕರನ್ನು ಸೆರೆ ಹಿಡಿದಿದ್ದ ಪೊಲೀಸರು ಭಾನುವಾರ ಮತ್ತೊಬ್ಬನನ್ನು ಬಂಧಿಸಿದ್ದಾರೆ.

- ಮಹಾರಾಷ್ಟ್ರ ಡಿಸಿಎಂ ಅಜಿತ್, ನಟ ಸಲ್ಮಾನ್ ಖಾನ್ ಆಪ್ತ ಸಿದ್ದಿಕಿ
- ದಾವೂದ್ ನಂಟಿದ್ದರಿಂದಲೇ ಹತ್ಯೆ, ಬಂಧಿತ ಬಿಷ್ಣೋಯ್ ಸಹಚರರಿಂದ ಮಾಹಿತಿ
- ಮೂವರ ಸೆರೆ, ಮತ್ತೊಬ್ಬ ಹಂತಕನ ಪತ್ತೆಗೆ 10 ತಂಡ ರಚನೆ

ಕೊಲೆಗೆ ಕಾರಣವೇನು?

ಹಂತಕರ ಗುಂಡಿಗೆ ಬಲಿಯಾದ ಬಾಬಾ ಸಿದ್ದಿಕಿ ಕೊಳಚೆ ಪ್ರದೇಶದ ಪುನರ್ವಸತಿ ಯೋಜನೆಯಲ್ಲಿ ಹಲವರೊಂದಿಗೆ ವ್ಯಾಪಾರ ಸಂಬಂಧ ಭಿನ್ನಾಭಿಪ್ರಾಯ ಹೊಂದಿದ್ದೇ ಈ ಕೊಲೆಗೆ ಕಾರಣ ಎಂಬ ಮಾತುಗಳು ಕೇಳಿಬರುತ್ತಿವೆ. ಡಿಸಿಎಂ ಅಜಿತ್ ಪವಾರ್‌ಗೆ ಆಪ್ತರಾಗಿದ್ದ ಸಿದ್ದಿಕಿ , 2000-2004ರವರೆಗೂ ಮಹಾರಾಷ್ಟ್ರ ವಸತಿ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿದ್ದರು. ಕೊಳಚೆ ಪ್ರದೇಶದ ಪುನರ್ವಸತಿ ಯೋಜನೆಯಲ್ಲಿ 2,000 ಕೋಟಿ ರು. ಅವ್ಯವಹಾರದ ಆರೋಪ ಮಾಡಲಾಗಿದ್ದು, ಇ.ಡಿ.ತನಿಖೆ ಎದುರಿಸುತ್ತಿದ್ದರು.

ಸಮಾಚಾರ ಸಣ್ಣದಲ್ಲ

ಲಕ್ಷ್ಮೀ ರಂಗನಾಥಸ್ವಾಮಿ ಅಂಬಿನೋತ್ಸವ

ಹೊಸದುರ್ಗ: ತಾಲೂಕಿನ ಮೆಂಗಸಂದ್ರ ಗ್ರಾಮದಲ್ಲಿ ನೆಲೆಸಿ ಸರ್ಜನ್ ಡಾಕ್ಟರ್ ಎಂದೇ ಹೆಸರುವಾಸಿಯಾಗಿರುವ ಕಾಡುಗೊಲ್ಲರ ಆರಾಧ್ಯದೈವ ಶ್ರೀಲಕ್ಷ್ಮೀರಂಗನಾಥಸ್ವಾಮಿ ಅಂಬಿನೋತ್ಸವ ಭಕ್ತರ ಸಮ್ಮುಖದಲ್ಲಿ ವೈಭವದಿಂದ ಭಾನುವಾರ ಜರುಗಿತು. ಗ್ರಾಮದೇವತೆ ಬೇವಿನಹಳ್ಳಿ ಕರಿಯಮ್ಮದೇವಿ, ಹೊಟ್ಟೆಪ್ಪನಹಟ್ಟಿ ಕರಿಯಮ್ಮ, ಶ್ರೀ ವೀರಜೋಗಣ್ಣ ಸ್ವಾಮಿ, ವೀರಬಿಳಿಯಪ್ಪಸ್ವಾಮಿ ಪಾಲ್ಗೊಂಡಿದ್ದವು. ಶ್ರೀಲಕ್ಷ್ಮಿರಂಗನಾಥಸ್ವಾಮಿ ಲಕ್ಷಾಂತರ ಭಕ್ತರನ್ನು ತನ್ನತ್ತ ಆಕರ್ಷಿಸುತ್ತಿದೆ. ರಾಜ್ಯದ ಮೂಲೆ, ಮೂಲೆಗಳಿಂದ ಬರುವ ಯಾವುದೇ ವ್ಯಕ್ತಿಗೆ, ಜಾನುವಾರುಗಳಿಗೆ ಆಗಲಿ ಏನಾದರೂ ಹಾವು ಕಚ್ಚಿದರೆ, ಕಜ್ಜಿ, ಇಸುಬು, ಮಂಡಿನೋವು ಸೆಳೆತ ಹೀಗೆ ಹಲವು ಕಾಯಿಲೆಗಳಿಗೆ ದೂಳತ(ಪ್ರಸಾದ) ರೂಪದಲ್ಲಿ ಪೂಜಾರಪ್ಪರ ಕೈಯಿಂದ ಕೆಲಸ ನೆರವೇರಿಸಿದಾಗ ಎಲ್ಲಾ ತರಹದ ಕಾಯಿಲೆಗಳಿಂದ ಗುಣಮುಖರಾಗುತ್ತಾರೆ. ಹಾಗಾಗಿ, ಇದಕ್ಕೆ ಗ್ರಾಮದ ಗೌಡ್ರು, ಪೂಜಾರರು ಸಮಸ್ತ ಗ್ರಾಮದ ಜನತೆ ಹೀಗೆ ಎಲ್ಲರೂ ಒಂದಾಗಿ ಕೆಲಸ ಮಾಡುತ್ತಾರೆ. ಸಾವಿರಾರು ಭಕ್ತರು ಭಾಗಿಯಾಗಿ ತಮ್ಮ ಹರಕೆ ತೀರಿಸಿದರು. ನಮ್ಮ ಮನೆಯ ಹಸು, ಎಮ್ಮೆಗಳು ಕರು ಹಾಕಿದ ತಕ್ಷಣ ಲಕ್ಷ್ಮಿರಂಗನಾಥಸ್ವಾಮಿಗೆ ಎಡೆ ಪ್ರಸಾದ ಮಾಡಿದ ನಂತರ ಹಾಲನ್ನ ನಾವುಗಳು ಬಳಸುತ್ತೇವೆ ಎಂದು ಗ್ರಾಮ ಪಂಚಾಯ್ತಿ ಸದಸ್ಯ ಬಸವರಾಜ್ ತಿಳಿಸಿದರು.

ಶ್ರೀ ಚನ್ನಕಿರಣ ಪ್ರಶಸ್ತಿ ಪ್ರದಾನ

ಹೊನ್ನಾಳಿ: ಹಿರೇಕಲ್ಮಠಕ್ಕೆ ಧಾರ್ಮಿಕ, ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಗಣನೀಯ ಸೇವೆ ಸಲ್ಲಿಸಿದ್ದ ಕೆಪಿಸಿಸಿ ರಾಜ್ಯ ಹಿಂದುಳಿದ ವರ್ಗಗಳ ಉಪಾಧ್ಯಕ್ಷರು ಮತ್ತು ಖ್ಯಾತ ಉದ್ಯಮಿಗಳಾದ ಎಚ್.ಎ. ಉಮಾಪತಿ ಮತ್ತು ಚನ್ನಪ್ಪಸ್ವಾಮಿ ವಿದ್ಯಾಪೀಠದ ಹಾಲಿ ನಿರ್ದೇಶಕರಾದ ಕೋರಿ ಮಲ್ಲಿಕಾರ್ಜುನಪ್ಪ ಅವರಿಗೆ ಒಡೆಯರ್ ಡಾ. ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿಗಳು ಮತ್ತು ಗಣ್ಯ ಮಾನ್ಯರು ಶ್ರೀಮಠದಿಂದ ಕೊಡಲ್ಪಡುವ 'ಶ್ರೀ ಚನ್ನಕಿರಣ ಪ್ರಶಸ್ತಿ ಪ್ರದಾನ ಮಾಡಿದರು. ಈ ಸಂದರ್ಭದಲ್ಲಿ ಜಕ್ಕಲಿ,ಬಿದರಗಡ್ಡೆ ಮಠದ ವಿಶ್ವಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಚನ್ನಪ್ಪ ಸ್ವಾಮಿ ವಿದ್ಯಾಪೀಠದ ಕಾರ್ಯದರ್ಶಿ ಚನ್ನಯ್ಯ ಬೆನ್ನೂರು ಮಠ, ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತರು ಮತ್ತು ಕನ್ನಡ ಮೀಡಿಯಂ ಚಾನಲ್ ಪ್ರದಾನ ಸಂಪಾದಕರಾದ ಹೊನ್ನಾಳಿ ಚಂದ್ರಶೇಖರ್, ಶ್ರೀ ಮಠದ ಭಕ್ತವರ್ಗದ ಸುರೇಶ್ ಕುಂಬಾರ್, ಪಿ.ವೀರಣ್ಣ, ಕೋರಿ ಗಣೇಶ್, ಎಚ್.ಎಂ.ರುದ್ರೇಶ್, ಪೂಜಾ ಮರಿ ಹಾಲಸ್ವಾಮಿ ಮತ್ತು ಶ್ರೀ ಚನ್ನಕಿರಣ ಪ್ರಶಸ್ತಿ ಪಡೆದ ಪುರಸ್ಕೃತರ ಕುಟುಂಬವರ್ಗದವರು ಉಪಸ್ಥಿತರಿದ್ದರು.

ಕೆರೆ ವೀಕ್ಷಣೆ ಕಾರ್ಯಕ್ರಮ | ಬಾಗಿನ ಅರ್ಪಿಸಿದ ತರಳಬಾಳು ಮಠದ ಡಾ.ಶಿವಮೂರ್ತಿ ಶಿವಾಚಾರ್ಯ ಶ್ರೀಗಳು

ಜಗಳೂರು ಶಾಶ್ವತ ಬಂಗಾರದ ನಾಡಾಗಲಿದೆ...

ಜಗಳೂರು: ಶಾಶ್ವತ ಬರದ ನಾಡೆಂದು ಹಣೆ ಪಟ್ಟಿ ಹೊಂದಿದ ಜಗಳೂರು ಭವಿಷ್ಯದಲ್ಲಿ ಬರದ'ನಾಡಾಗಿ ಉಳಿಯದೆ ಶಾಶ್ವತ ಬಂಗಾರದ ನಾಡಾಗುವುದು ನಿಶ್ಚಿತ ಎಂದು ಸಿರಿಗೆರೆ ತರಳಬಾಳು ಜಗದ್ಗುರು ಬೃಹನ್ಮಠದ ಡಾ.ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಆಶೀರ್ವಚನ ನೀಡಿದರು.

ಪಟ್ಟಣದ ಕೆರೆ ಕೋಡಿಬಳಿ ಆಯೋಜಿಸಲಾಗಿದ್ದ ಕೆರೆ ವೀಕ್ಷಣೆ ಹಾಗೂ ಬಾಗೀನ ಅರ್ಪಣಾ ಕಾರ್ಯಕ್ರಮದಲ್ಲಿ ಬಾಗೀನ ಅರ್ಪಿಸಿ,ನಂತರ ದಿವ್ಯ ಸಾನಿಧ್ಯವಹಿಸಿ ಅವರು ಮಾತನಾಡಿದರು.

ಯಂತ್ರೋಪಕರಣಗಳಿಲ್ಲದ ಸಾವಿರಾರು ವರ್ಷಗಳ ಹಿಂದಿನ ಕಾಲಘಟ್ಟದಲ್ಲಿ ತಿಮ್ಮಪ್ಪನಾಯಕರಂತಹ ರಾಜಮಹಾರಾಜರುಗಳು ಜನಪರ ಕಾಳಜಿಯ ದೂರದೃಷ್ಠಿಯಿಂದ ನಿರ್ಮಿಸಿದ ಕೆರೆಗಳು ಮಧ್ಯಕರ್ನಾಟಕದಲ್ಲಿ ಜಾಲದಂತಿದ್ದು ಒಂದು ಕೆರೆ ಮತ್ತೊಂದು ಕೆರೆಯನ್ನು ಸಂಪರ್ಕ ಹೊಂದುವಂತೆ ಶ್ರಮಿಸಿದ ಪೂರ್ವಜರ ಸತ್ಕಾರ್ಯದ ಫಲವಾಗಿ ನೀರಾವರಿ ಸಂಪನ್ಮೂಲ ಬಳಕೆಯ ಕ್ಷಮತೆ ನಮ್ಮದಾಗಿದೆ'ಎಂದು ಸ್ಮರಿಸಿದರು.

ತರಳಬಾಳು ಹುಣ್ಣಿಮೆಯಲ್ಲಿನ ಸಂಕಲ್ಪದಂತೆ 2019ರಲ್ಲಿ ಎಚ್.ಪಿ.ರಾಜೇಶ್ ಸಹಕಾರದಿಂದ ಹಾಲಿ ಮುಖ್ಯಮಂತ್ರಿಯೂ ಆಗಿರುವ ಸಿದ್ದರಾಮಯ್ಯ ಜಗಳೂರು-ಭರಮಸಾಗರ ನೀರಾವರಿ ಯೋಜನೆಗಳಿಗೆ ?500 ಕೋಟಿ ಬಜೆಟ್ ನಲ್ಲಿ ಘೋಷಿಸಿದ್ದರು. ನಂತರ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರ ಆಡಳಿತಾವಧಿಯಲ್ಲಿ ಮಾಜಿ ಶಾಸಕ ಎಸ್.ವಿ.ರಾಮಚಂದ್ರಗೆ ರಾಜಿನಾಮೆ ಸಲ್ಲಿಸಲು ಸೂಚಿಸಿ, 5 ಜನ ಸಚಿವರುಗಳಿಗೆ ಅಸಂತೃಷ್ಟಿಯಿಂದ ವಿರೋಧ ವ್ಯಕ್ತಪಡಿಸಿದ ವೇಳೆ ಬೇಡಿಕೆಯಂತೆ ವಾರದಲ್ಲಿಯೇ ?1200ಕೋಟಿ ಅನುದಾನದ ಐತಿಹಾಸಿಕ ಮರು ಆದೇಶದ ಫಲವಾಗಿ ಕೆರೆಕೋಡಿಬೀಳುತ್ತಿವೆ.ಧರ್ಮ ಮತ್ತು ಕಾನೂನು ಒಗ್ಗೂಡಿದಾಗ ಯಶಸ್ವಿ ಸಾಧ್ಯ. ಧರ್ಮಗುರುಗಳ ಸಲಹೆಗಳನ್ನು ಪಕ್ಷಾತೀತವಾಗಿ ಸ್ವೀಕರಿಸಿದ ರಾಜಕಾರಣಿ,ರೈತರು,ಅಧಿಕಾರಿಗಳಿಗೆ ಅಬಿನಂದನೆಗಳು' ಎಂದರು.

ಪಟ್ಟಣದ ಕೆರೆ ಕೋಡಿಬಳಿ ಆಯೋಜಿಸಲಾಗಿದ್ದ ಕೆರೆ ವೀಕ್ಷಣೆ ಹಾಗೂ ಬಾಗೀನ ಅರ್ಪಣಾ ಕಾರ್ಯಕ್ರಮದಲ್ಲಿ ಬಾಗೀನ ಅರ್ಪಿಸಲಾಯಿತು.

ಒಂದು ತಿಂಗಳೊಳಗಾಗಿ ಬಾಕಿ ಇರುವ 11 ಕೆರೆಗಳ ಪೈಪ್ ಲೈನ್ ಕಾಮಗಾರಿ ಪೂರ್ಣಗೊಳಿಸಿ,ದೀಟೂರು ಬಳಿ 8 ಪಂಪ್ ಗಳೂ ಚಾಲನೆ ಕಾರ್ಯರೂಪಗೊಳ್ಳಲು ಶಾಸಕರು ಅಧಿಕಾರಿಗಳು ಕ್ರಮಕ್ಕೈಗೊಳ್ಳಬೇಕು.ಏತನೀರಾವರಿ ಸಾಮಾಜಿಕ ಜಾಲತಾಣ ಗ್ರೂಪ್ ರಚಿಸಿಲಾಗಿದ್ದು. ರೈತರಿಂದ ಪ್ರತಿನಿತ್ಯ ಕೆರೆಗಳ ಸ್ಥಿತಿಗತಿಗಳನ್ನು ಮಾಹಿತಿ ಪಡೆಯಲಾಗುತ್ತಿದೆ'.ಎಂದು ಮಾಹಿತಿ ನೀಡಿದರು.

ಜಗಳೂರು ಕೆರೆ ಕೋಡಿ ಬೀಳುವುದಕ್ಕೆ 50 ವರ್ಷಗಳು ಕಾಯುವ ಪರಿಸ್ಥಿತಿ ನಿರ್ಮಾಣವಾಗಿದೆ ಆದರೆ ಇಂದಿನಿಂದ ಪ್ರತಿ ವರ್ಷವು ಕೋಡಿ ಬಿಳುತ್ತಿದ್ದು ಈಗಿನ ಯುವಕರು 50 ವರ್ಷಗಟ್ಟಲೆ ಕಾಯುವ ಪರಿಸ್ಥಿತಿ ನಿರ್ಮಾಣವಾಗುವುದಿಲ್ಲ ಆದ್ದರಿಂದ ಶಾಸಕರು ಇಂತಹ ಅಭೂತಪೂರ್ವ ಕ್ಷಣಗಳನ್ನು ಇತಿಹಾಸದಲ್ಲಿ ದೃಢಪಡಿಸಲು ಇತಿಹಾಸಕಾರರಿಗೆ, ದರ್ಶನಿಕರಿಗೆ ಸಂಶೋಧನಾರ್ಥಿಗಳಿಂದ ಮಾಡಿ ಎಂದು ತಿಳಿಸಿದರು.

ಶಾಸಕ ಬಿ.ದೇವೇಂದ್ರಪ್ಪ ಮಾತನಾಡಿ,ಸರಕಾರದ ನೀರಾವರಿ ಸೌಲಭ್ಯದೊಂದಿಗೆ ಸಿರಿಗೆರೆ ಶ್ರೀಗಳು ಕಲಿಯುಗದ ಶ್ರೀಕೃಷ್ಣರಾಗಿ ಕ್ಷೇತ್ರದ ಜನತೆಗೆ ಜಲಾಮೃತ ಉಣಬಡಿಸುತ್ತಿದ್ದಾರೆ.5ದಶಕಗಳ ನಂತರ ಜಗಳೂರು ಕೆರೆಕೋಡಿ ಬಿದ್ದಿರುವ ಸಂತಸಕ್ಕೆ ಶ್ರೀಗಳ ಸಲಹೆಪಡೆದು ಅದ್ದೂರಿಯಾಗಿ ಪಕ್ಷಾತೀತವಾಗಿ ಜಗಳೂರು ಉತ್ಸವ ಆಚರಿಸಲಾಗುವುದು. ಗಂಡನಮನೆಯಲ್ಲಿರುವ ಮಹಿಳೆಯರು ಉತ್ಸವಕ್ಕೆ ಆಗಮಿಸಿ ತವರಿನ ಜಲಸಿರಿಯನ್ನು ವೀಕ್ಷಿಸಬೇಕೆಂದು ಮನವಿಮಾಡಿದರಲ್ಲದೆ ಸಿರಿಗೆರೆ ಶ್ರೀಗಳ ಜತೆ ಮಾಜಿ ಶಾಸಕ ರಾಜೇಶ್, ರಾಮಚಂದ್ರಪ್ಪನವರ ಶ್ರಮವು ಈ ಯೋಜನೆಗಳಿಗೆ ಹೆಚ್ಚಿದೆ ಎಂದು ಹೇಳಿದರು.

ನೀರಾವರಿ ಇಲಾಖೆ ನಿವೃತ್ತ ವ್ಯವಸ್ಥಾಪಕ ನಿರ್ದೇಶಕ ಮಲ್ಲಿಕಾರ್ಜುನ ಗುಂಗೆ ಮಾತನಾಡಿ, 'ಸರಕಾರಿ ನೌಕರರು ಸಂಬಳಕ್ಕಾಗಿ ಸೇವೆಗೈಯದೆ ತಮ್ಮದೇ ಛಾಪು ಮೂಡಿಸುವ ಹೆಜ್ಜೆ ಗುರುತು ನಿಮ್ಮದಾಗಬೇಕು.ಇದಕ್ಕೆ ಕೆರೆಗಳಿಗೆ ನೀರು ಹರಿದಿರುವುದೇ ಸಾಕ್ಷಿ. ಶ್ರೀಗಳ ಸಂಕಲ್ಪಕ್ಕೆ ಮಣಿದು ಮಠದ ಅನುಯಾಯಿಯಾಗಿ ಆಗಮಿಸಿರುವೆ. ನೀರಾವರಿ ಯೋಜನೆ ರೈತರಿಗೆ ಆರ್ಥಿಕ,ಸಾಮಾಜಿಕ ಬದಲಾವಣೆಗೆ ಕಾರಣವಾಗುತ್ತವೆ.ಕೆರೆಗಳಲ್ಲಿನ ಜಾಲಿಗಿಡಗಳನ್ನು ತೆರವುಗೊಳಿಸಲು ರೈತರು ಕೈಜೋಡಿಸಬೇಕು ಎಂದು ತಿಳಿಸಿದರು.

> ಸಿರಿಗೆರೆ ಶ್ರೀಗಳ ಆಶೀರ್ವಾದದಿಂದ ನನ್ನ ಆಡಳಿತಾವಧಿಯಲ್ಲಿ ರೂಪುಗೊಂಡ 57 ಕೆರೆತುಂಬಿಸುವ ಯೋಜನೆ ಸರ್ವರ ಸಹಕಾರದಿಂದ ಯಶಸ್ವಿಯಾಗಿ ಕೆರೆಕೋಡಿಬಿದ್ದಿವೆ. ಬಹುಗ್ರಾಮ ಕುಡಿಯುವ ನೀರು,ಭದ್ರಾಮೇಲ್ದಂಡೆ ಯೋಜನೆ 57 ಕೆರೆ ನೀರು ತುಂಬಿಸುವ ಯೋಜನೆಗಳು ಬರದ ನಾಡಾಗಿರುವ ಜಗಳೂರಿಗೆ ಅಮೃತವಿದ್ದಂತೆ ಮೂರು ಯೋಜನೆಗಳಿಂದ ಸಾಮಾಜಿಕವಾಗಿ ಆರ್ಥಿಕವಾಗಿ ರೈತರು ಬದಲಾವಣೆ ಹೊಂದಲು ಸಾಧ್ಯವಾಗುತ್ತದೆ ಅಲ್ಲದೆ ಆಡಳಿತರೂಡ ಶಾಸಕರು ಬರದನಾಡನ್ನು ಅಭಿವೃದ್ದಿ ನಾಡನ್ನಾಗಿಸಲು ಕಾಳಜಿವಹಿಸಬೇಕು'.
> -ಎಚ್.ಪಿ.ರಾಜೇಶ್, ಮಾಜಿ ಶಾಸಕ

ಯೋಜನೆ ಸಾಕಾರಕ್ಕೆ ರಾಜೀನಾಮೆಗೂ ಸಿದ್ಧ

ನನ್ನ ಆಡಳಿತಾವಧಿಯಲ್ಲಿ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ, ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ್ ಅವರ ಸಹಕಾರದಿಂದ ಎರಡೂ ನೀರಾವರಿ ಯೋಜನೆಗಳಿಗೆ ಚಾಲನೆ ಸಿಕ್ಕಿತ್ತು. ಯೋಜನೆ ಸಾಕಾರಗೊಳ್ಳಲು ನಾನು ರಾಜೀನಾಮೆಗೂ ಸಿದ್ದನಾಗಿದ್ದೆ. ಇಂದು ಕೆರೆಗಳು ಕೋಡಿಬಿದ್ದಿವೆ.ಸಿರಿಗೆರೆ ಶ್ರೀಗಳು ಗುಡುಗಿದರೆ ವಿಧಾನಸೌಧವೂ ನಡುಗಲು ಜೀವಂತ ಸಾಕ್ಷಿಯಾಗಿದ್ದು, ಅಂದಿನ ಮುಖ್ಯಮಂತ್ರಿ ಯಡಿಯೂರಪ್ಪ ಸಚಿವರಾದ ಗೋವಿಂದ ಕಾರಜೋಳ, ಸಿ.ಟಿ ರವಿ ಬೊಮ್ಮಾಯಿ, ಮಾಧುಸ್ವಾಮಿ ಸಿರಿಗೆರೆ ಶ್ರೀಗಳ ಒಂದೇ ಮಾತಿಗೆ 1200 ಕೋಟಿರು ಹಣವನ್ನು ಯೋಜನೆಗೆ ಅನುಧಾನವನ್ನು ಬಿಡುಗಡೆಗೊಳಿಸಿದ್ದರು ಅಲ್ಲದೆ ಭದ್ರಮೇಲ್ದಂಡೆ ಯೋಜನೆ ಮೂಲಕ 45 ಸಾವಿರ ಹೆಕ್ಟರ್ ಭೂ ಪ್ರದೇಶಕ್ಕೆ ಹನಿ ನೀರಾವರಿ ಕಲ್ಪಿಸುವ ಯೋಜನೆ ಹೀಗೆ ತಾಲೂಕು ಸಂಪೂರ್ಣ ಹಸಿರು ನಾಡಾಗಲಿದೆ ಎಂದು ಮಾಜಿ ಶಾಸಕ ಎಸ್.ವಿ.ರಾಮಚಂದ್ರ ಹೇಳಿದರು.

ಸಂದರ್ಭದಲ್ಲಿ ಕೆಪಿಸಿಸಿ ಎಸ್ ಟಿ ಘಟಕದ ರಾಜ್ಯ ಮುಖಂಡ ಕೆ.ಪಿ.ಪಾಲಯ್ಯ,ಕೆಪಿಸಿಸಿ ಎಸ್ ಟಿ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ.ಡಿ.ಕೀರ್ತಿಕುಮಾರ್,ಪ.ಪಂ.ಅಧ್ಯಕ್ಷ ನವೀನ್,ತಹಶೀಲ್ದಾರ್ ಸಯ್ಯದ್ ಕಲೀಂ ಉಲ್ಲಾ,ತಾ.ಪಂ ಇಓ ಕೆಂಚಪ್ಪ,ಮುಖಂಡರಾದ ಡಾ.ರವಿಕುಮಾರ್,ಶಶಿಪಟೇಲ್,ನಾಗರಾಜ್,ಎನ್.ಎಸ್.ರಾಜು,ಶಿವನಗೌಡ್ರು,ಸುರೇಶ್ ಗೌಡ,ಎನ್.ಎಸ್.ರಾಜು ಗುತ್ತಿಗೆದಾರ ಶಂಕರ್,ಸೇರಿದಂತೆ ಇದ್ದರು.

ವೈಭವದ ರಂಗನಾಥಸ್ವಾಮಿ ಅಂಬಿನೋತ್ಸವ

ಹೊಸದುರ್ಗ: ತಾಲೂಕಿನ ಮಾಡದಕೆರೆ ಹೋಬಳಿ ಲಕ್ಕಿಹಳ್ಳಿ ಮಜುರೆ ಹಾರನಕಣಿವೆಯಲ್ಲಿ ಅನಾದಿ ಕಾಲದಿಂದ ನೆಲೆಸಿ, ರಾಜ್ಯದಲ್ಲಿಯೇ ಪ್ರಸಿದ್ಧಿ ಪಡೆದಿರುವ ಶ್ರೀರಂಗನಾಥಸ್ವಾಮಿ ಅಂಬಿನೋತ್ಸವ ಹಾಗೂ ಜಾತ್ರಾ ಮಹೋತ್ಸವ ಭಾನುವಾರ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ವೈಭವದಿಂದ ನಡೆಯಿತು.

ತಾಲೂಕಿನ ಗಡಿಭಾಗದಲ್ಲಿರುವ ವಾಣಿವಿಲಾಸ ಸಾಗರ ಜಲಾಶಯಕ್ಕೆ ಹೊಂದಿಕೊಂಡಿರುವ ಹಾರನಕಣಿವೆ ಶ್ರೀ ರಂಗನಾಥಸ್ವಾಮಿ ಈ ಭಾಗದ ಜನರ ಆರಾಧ್ಯದೈವ. ಕಾಡುಗೊಲ್ಲ ಸಮುದಾಯ ವಿಶೇಷವಾಗಿ ಪೂಜಿಸಿ, ಆರಾಧಿಸುತ್ತಾರೆ. ಇಲ್ಲಿ ವಿಶೇಷವಾಗಿ ಪ್ರತಿವರ್ಷ ನಡೆಯುವ ಅಂಬಿನೋತ್ಸವಕ್ಕೆ ಲಕ್ಷಾಂತರ ಭಕ್ತರು ಬಂದು ಭಾಗವಹಿಸುವುದುಂಟು. ಅದರಂತೆಯೇ ಈ ಬಾರಿಯೂ ಅಂಬಿನೋತ್ಸವ ನೆರವೇರಿತು. ಅದರಲ್ಲಿ ವಿಶೇಷವಾಗಿ ಈ ಬಾರಿ ಕಳೆದ ಒಂದು ವಾರದಿಂದ ಹದ ಮಳೆ ಸುರಿದು ವಾತಾವರಣ ತಂಪಾಗಿತ್ತು. ವಿವಿ ಸಾಗರದಲ್ಲಿ ಹೆಚ್ಚಿನ ನೀರು ಶೇಖರಣೆ ಆಗಿದ್ದು ಹಾಗೂ ರಜೆ ದಿನವಾದ ಭಾನುವಾರ ಆಗಿದ್ದರಿಂದ ಪ್ರವಾಸಕ್ಕೆಂದು ಹೆಚ್ಚಿನ ಜನರು ಈ ಬಾರಿ ಅಂಬಿನೋತ್ಸವಕ್ಕೆ ಭಾಗಿಯಾಗಿ ಸ್ವಾಮಿಯ ಕೃಪೆಗೆ ಪಾತ್ರರಾದರು.

ನಮಗೆ ಯಾವುದೇ ರೀತಿಯಲ್ಲೂ ಹಾವು ಚೇಳಿನಿಂದ ತೊಂದರೆ ಆಗಬಾರದು. ಹಾವು ಚೇಳು ಹಾಗೂ ಇನ್ನಿತರ ವಿಷ ಜಂತು ಕಡಿದಾಗ ಅಥವಾ ಮುಟ್ಟಿದಾಗ ಬೇಗನೆ ಗುಣಮುಖವಾದರೆ, ಸ್ವಾಮಿಗೆ ಚಿನ್ನ, ಬೆಳ್ಳಿ, ತಾಮ್ರ, ಹಿತ್ತಾಳೆ ಲೋಹದಿಂದ ಮಾಡಿದ ಹಾವು, ಚೇಳು ಹಾಕುತ್ತೇವೆಂದು ಹರಕೆ ಕಟ್ಟಿಕೊಂಡಿರುತ್ತಾರೆ.

ಶ್ರೀರಂಗನಾಥಸ್ವಾಮಿ ಅಂಬಿನೋತ್ಸವ ಹಾಗೂ ಜಾತ್ರಾ ಮಹೋತ್ಸವ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ವೈಭವದಿಂದ ನಡೆಯಿತು.

ಆಂಬಿನೋತ್ಸವಕ್ಕೆ ಮೊದಲಿಗೆ ಅಂಚಿಬಾರಿಹಟ್ಟಿಯಿಂದ ಶ್ರೀ ರಂಗನಾಥಸ್ವಾಮಿ ಉತ್ಸವ ಮೂರ್ತಿಯನ್ನು ಹಾರನಕಣಿವೆಯ ಮೂಲ ದೇವಸ್ಥಾನದ ಬಳಿಗೆ ಮೆರವಣಿಗೆಯ ಮೂಲಕ ಕರೆತಂದು, ಬೆಳಿಗ್ಗೆ ಹಾರನಕಣಿವೆ ಮೂಲ ದೇವಾಲಯದ ಬಳಿಗೆ ಕರೆತರಲಾಯಿತು. ಬನ್ನಿ ಮುಡಿದು ಅಂಬು ನಡೆದ ನಂತರ ಸಂಜೆ ಉತ್ಸವಮೂರ್ತಿಯನ್ನು ಮತ್ತೆ ಗ್ರಾಮಕ್ಕೆ ಕರೆತರಲಾಯಿತು. ಶಾಸಕರಾದ ಬಿ.ಜಿ.ಗೋವಿಂದಪ್ಪ, ಧರ್ಮಪತ್ನಿ ಪ್ರೇಮಲತಾ ಗೋವಿಂದಪ್ಪ ಅವರು ಕ್ಷೇತ್ರಕ್ಕೆ ಭೇಟಿ ನೀಡಿ, ವಿಶೇಷ ಪೂಜೆ ಸಲ್ಲಿಸುವ ಮೂಲಕ ದರ್ಶನ ಆಶೀರ್ವಾದ ಬೇಡಿದರು. ಪೊಲೀಸ್ ಬಿಗಿ ಬಂದೋಬಸ್ತ್ ಒದಗಿಸಲಾಯಿತು.

ರಾಜ ಮದಕರಿ ನಾಯಕ ಜಾತಿಗೆ ಸೀಮಿತವಲ್ಲ

ಚಿತ್ರದುರ್ಗ: ರಾಜವೀರ ಮದಕರಿ ನಾಯಕ ಯಾವೊಂದು ಜಾತಿಗೆ ಸೀಮಿತವಾಗದೆ, ಜಾತ್ಯಾತೀತ ನಾಯಕನಾಗಿದ್ದ ಎಂದು ವಾಲ್ಮೀಕಿ ಗುರಪೀಠದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಶ್ರೀಗಳು ತಿಳಿಸಿದರು.

ನಗರದ ರಾಜವೀರ ಮದಕರಿ ನಾಯಕನ ಪ್ರತಿಮೆ ಬಳಿ ಭಾನುವಾರ ನಡೆದ ರಾಜ ವೀರ ಮದಕರಿ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮದಕರಿ ಪ್ರತಿಮೆ ಪುಷ್ಪಾರ್ಚಣೆ ಸಲ್ಲಿಸಿ ಮಾತನಾಡಿದ ಶ್ರೀಗಳು,

ನಾಡಿನಾದ್ಯಂತ ಚಿತ್ರದುರ್ಗವನ್ನು ಆಳಿದ ನಾಡದೊರೆ ರಾಜ ವೀರ ಮದಕರಿನಾಯಕನ ಜಂಯತೋತ್ಸವವನ್ನು ಅತಂತ್ಯ ಸಡಗರ ಸಂಭ್ರಮದಿಂದ ಆಚರಣೆ ಮಾಡಲಾಗುತ್ತಿದೆ. ಬಹುತೇಕ ದಕ್ಷಿಣ ಭಾರತದಲ್ಲಿ ಮೊಗಲರ ದಾಳಿಯನ್ನು ಸಮರ್ಥವಾಗಿ ಎದುರಿಸಿ ತನ್ನ ಸುತ್ತಾ-ಮುತ್ತಲ್ಲಿನ ವೈರಿಗಳನ್ನು ಹಿಮೆಟ್ಟಿಸಿ ಚಿತ್ರದುರ್ಗವನ್ನು ಮದಕರಿ ನಾಯಕ 25 ವರ್ಷಗಳ ಆಳ್ವಿಕೆಯನ್ನು ನಡೆಸಿದ್ದಾರೆ. ಜಾತ್ಯಾತೀತ ನಾಯಕ ಮದಕರಿ ನಾಯಕ ಈ ಸಮಯದಲ್ಲಿ ಯಾವುದೇ ರೀತಿಯ ತಾರತಮ್ಯ ಮಾಡದೆ ಎಲ್ಲಾ ಜಾತಿಯವರನ್ನು ಸಮಾನಾಗಿ ಕಾಣುವುದರ ಮೂಲಕ ರಾಜ್ಯಭಾರವನ್ನು ನಡೆಸಿದ್ದಾನೆ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ನಾಯಕ ಸಮಾಜದ ಅಧ್ಯಕ್ಷರಾದ ಎಚ್.ಜೆ.ಕೃಷ್ಣಮೂರ್ತಿ, ಮದಕರಿ ನಾಯಕ ವಿದ್ಯಾ ಸಂಸ್ಥೆಯ ಅಧ್ಯಕ್ಷರಾದ ಸಂದೀಪ್, ಜೆಡಿಎಸ್‌ನ ಜಿಲ್ಲಾ ಮಹಾ ಪ್ರಧಾನ ಕಾರ್ಯದರ್ಶಿ ಗೋಪಾಲಸ್ವಾಮಿ ನಾಯಕ್, ಬಿಜೆಪಿ ಮುಖಂಡರಾದ ರತ್ನಮ್ಮ, ಸೋಮು, ಪತ್ರಕರ್ತರ ಸಂಘದ ಅಧ್ಯಕ್ಷರಾದ ದಿನೇಶ್ ಗೌಡಗೆರೆ, ಕಾಟೇಹಳ್ಳಿ ಕರಿಯಣ್ಣ, ಜಿ.ಟಿ,ರಾಜೇಶ್, ನಗರಸಭಾ ಮಾಜಿ ಸದಸ್ಯರಾದ ತಿಪ್ಪೇಸ್ವಾಮಿ, ಅಹೋಬಳ ಕಂಪನಿಯ ಅರುಣ್, ಅಜೇಯ ಮದಕರಿ, ದರ್ಶನ್, ತಿಪ್ಪೇಸ್ವಾಮಿ, ರಾಜ ಮದಕರಿ ನಾಯಕ, ಕಿರಣ್, ಶಿರುವಾಲಪ್ಪ ಸೇರಿದಂತೆ ಇತರರು ಭಾಗವಹಿಸಿದ್ದರು.

ನಗರದ ರಾಜವೀರ ಮದಕರಿ ನಾಯಕನ ಪ್ರತಿಮೆ ಬಳಿ ಭಾನುವಾರ ನಡೆದ ರಾಜ ವೀರ ಮದಕರಿ ಜಯಂತಿ ಆಚರಿಸಲಾಯಿತು.

> ಈ ವ್ಯಕ್ತಿಯ ಜಯಂತಿಯನ್ನು ಪ್ರತಿ ವರ್ಷ ಚಿತ್ರದುರ್ಗದಲ್ಲಿ ಅದ್ದೂರಿಯಿಂದ ಆಚರಣೆ ಮಾಡಲಾಗುತ್ತಿದೆ. ಈ ವರ್ಷ ಸಾಂಕೇತಿಕವಾಗಿ ಆಚರಣೆ ಮಾಡಲಾಗುತ್ತಿದೆ. ಮುಂದಿನ ವರ್ಷ ಮದಕರಿ ನಾಯಕ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲಾಗುವುದು ಈಗ ದಸರಾ ಶರಣ ಸಂಸ್ಕೃತಿ ಉತ್ಸವ ನಡೆದಿದೆ. ನಿನ್ನೆ ಅದರ ಮೆರವಣಿಗೆ ಆಗಿದೆ.
> - ವಾಲ್ಮೀಕಿ ಗುರಪೀಠದ ಶ್ರೀ ವಾಲ್ಮೀಕಿ ಪ್ರಸನ್ನಾನಂದ

ಅಹಂನಿಂದ ಮನುಷ್ಯನ ಅವನತಿ

ತಾಲೂಕಿನ ಶಿವನಹಳ್ಳಿ ಗ್ರಾಮದಲ್ಲಿರುವ ವೈರಾಗ್ಯ ಧಾಮ (ದಕ್ಷಿಣ ಕೇದಾರ) ದಲ್ಲಿ ಶನಿವಾರ ಡಾ.ನಾಲ್ವಡಿ ಶಾಂತಲಿಂಗ ಶ್ರೀಗಳು ಶಮೀಪೂಜೆ ಮಾಡಿದರು.

ಹರಿಹರ: ಮನುಷ್ಯನಲ್ಲಿ ಅಹಂಕಾರ ಎಂಬುದು ಆರಂಭವಾದರೆ ಅದು ಅವನ ಅವನತಿಗೆ ನಾಂದಿ ಹಾಡಿದಂತೆ ಎಂದು ಡಾ. ನಾಲ್ವಡಿ ಶಾಂತಲಿಂಗ ಶ್ರೀಗಳು ಹೇಳಿದರು.

ತಾಲೂಕಿನ ಶಿವನಹಳ್ಳಿ ಗ್ರಾಮದಲ್ಲಿರುವ ವೈರಾಗ್ಯ ಧಾಮದಲ್ಲಿ ಶನಿವಾರ ಶಮೀ ಪೂಜೆ ಮಾಡಿ ಬನ್ನಿ ವಿತರಣೆ ಮಾಡಿದ ನಂತರ ಆಶೀರ್ವಚನ ನೀಡಿದರು.

ದುಷ್ಟರನ್ನು ಶಿಕ್ಷಿಸಿ ಶಿಷ್ಠರನ್ನು ರಕ್ಷಿಸುವುದೇ ವಿಜಯ ದಶಮಿಯ ಆಚರಣೆಯ ಮೂಲ ಉದ್ದೇಶವಾಗಿದೆ ಆದ್ದರಿಂದ ನಾವು ನಮ್ಮಲ್ಲಿರುವ ಆಸೂಯೆ, ಕೋಪ, ಮೋಸ ಮಾಡುವುದು, ಸುಳ್ಳನ್ನು ಹೇಳುವುದರಿಂದ ದೂರವಿದ್ದಾಗ ಮಾತ್ರ ಉತ್ತಮ ಜೀವನ ಸಾಗಿಸಲು ಸಾಧ್ಯ ಎಂದರು.

ಇತಿಹಾಸದ ಕೆಲ ಘಟನೆಗಳನ್ನು ಆವಲೋಕಿಸಿ ನೋಡಿದಾಗ ಯಾರಲ್ಲಿ ಆಹಂಕಾರ, ದುಷ್ಟ ಗುಣಗಳು ಹೆಚ್ಚಾಗುತ್ತವೂ ಅಂದು ಅವನ ಅಂತ್ಯವಾಗುತ್ತದೆ ಎನ್ನುವುದಕ್ಕೆ ರಾವಣ, ದುರ್ಯೋಧನ ಸೇರಿದಂತೆ ಆನೇಕ ಉದಾಹರಣೆಗಳು ನಮ್ಮ ಕಣ್ಮುಂದೆ ಬರುತ್ತವೆ ಎಂದರು.

ದುಷ್ಟ ಸಂಹಾರದ ಸಂಕೇತವಾದ ದಸರಾ ಹಾಗೂ ವಿಜಯದಶಮಿ ಹಬ್ಬ ತಮ್ಮೆಲ್ಲರಿಗೂ ಒಳ್ಳೆಯದನ್ನು ಮಾಡಲಿ ಎಂದು ಆರಸಿದರು.

ಸದ್ಯದಲ್ಲಿ ಸರಕಾರ ಪತನ: ರೇಣುಕಾಚಾರ್ಯ

ದಾವಣಗೆರೆ: ಮೈಸೂರಿನಲ್ಲಿ ಮಹಿಷಾಸುರನ ಮರ್ಧನ ಆದಂತೆ ಕಾಂಗ್ರೆಸ್ ಸರಕಾರದ ಮರ್ದನವೂ ಆಗುತ್ತೆ. ಚಾಮುಂಡೇಶ್ವರಿ ತಾಯಿಯ ಆಶೀರ್ವಾದದಿಂದ ಕಾಂಗ್ರೆಸ್ ಸರಕಾರವು ಸದ್ಯದಲ್ಲಿಯೇ ಪತನವಾಗುತ್ತದೆ ಎಂದು ಮಾಜಿ ಸಚಿವ ಎಂ. ಪಿ. ರೇಣುಕಾಚಾರ್ಯ ಭವಿಷ್ಯ ನುಡಿದರು.

ನಗರದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಸಿಎಂ ಸಿದ್ದರಾಮಯ್ಯ ಅವರು ಸ್ವಾಭಿಮಾನಿ ರಾಜಕಾರಣಿ. ಮುಡಾ ಪ್ರಕರಣದಲ್ಲಿ ಸಿಎಂ ವಿರುದ್ಧ ರಾಜ್ಯಪಾಲರು ಪ್ರಾಸಿಕ್ಯೂಷನ್ ಗೆ ನೀಡಿದ್ದರು. ಹೈಕೋರ್ಟ್, ಜನಪ್ರತಿನಿಧಿಗಳ

ವಿಶೇಷ ಕೋರ್ಟ್ ಎಫ್ ಐ ಆರ್ ದಾಖಲಿಸಿ ತನಿಖೆ ನಡೆಸುವಂತೆ ಸೂಚಿಸಿದೆ. ಸಿದ್ದರಾಮಯ್ಯರು ರಾಜೀನಾಮೆ ಕೊಟ್ಟರೆ ಏನಾಗುತ್ತದೆ ಎಂಬುದು ಎಲ್ಲರಿಗೂ ಗೊತ್ತು. ಈಗಾಗಲೇ ಹಲವರು ಸಿಎಂ ಖುರ್ಚಿಗೆ ಟವೆಲ್ ಹಾಕಿದ್ದು, ಒಳಜಗಳ ಹೆಚ್ಚಾಗಿದೆ. ಒಳಜಗಳದಿಂದಲೇ ಸರ್ಕಾರ ಬಿದ್ದು ಹೋಗುತ್ತದೆ ಎಂದು ಹೇಳಿದರು.

ಕಾಂಗ್ರೆಸ್ ಪಕ್ಷ 135 ಸ್ಥಾನಗಳನ್ನು ಹೊಂದಿದೆ. ಬಹುಮತವೂ ಇದೆ. ಆದ್ರೆ, ಸಿದ್ದರಾಮಯ್ಯರು ರಾಜೀನಾಮೆ ನೀಡುತ್ತಾರೆಂದು ಸಚಿವರಾದ ಸತೀಶ್ ಜಾರಕಿಹೊಳಿ, ಜಿ. ಪರಮೇಶ್ವರ್ ಸಭೆ ನಡೆಸಿದ್ದಾರೆ. ಮತ್ತೊಂದೆಡೆ ಡಿಸಿಎಂ ಡಿ. ಕೆ. ಶಿವಕುಮಾರ್

ಕಾಂಗ್ರೆಸ್ ಶಾಸಕರೇ ಅಳಲು ತೋಡಿಕೊಳ್ಳುತ್ತಿದ್ದಾರೆ. ಸರಕಾರದ ವಿರುದ್ಧ ಬಹಿರಂಗವಾಗಿಯೇ ಮಾತನಾಡುತ್ತಿದ್ದಾರೆ. ನಮ್ಮ ಕ್ಷೇತ್ರಗಳ ಅಭಿವೃದ್ಧಿಗೆ ಹಣ ನೀಡುತ್ತಿಲ್ಲ, ಶಂಕುಸ್ಥಾಪನೆ ಮಾಡುತ್ತಿಲ್ಲ. ಕಾಮಗಾರಿ ಕೈಗೊಳ್ಳಲು ಹಣ ಬಿಡುಗಡೆ ಮಾಡುತ್ತಿಲ್ಲ. ಈ ಸರಕಾರದ ಸಹವಾಸವೇ ಬೇಡ, ಶಾಸಕರಾಗಿ ಮುಂದುವರಿಯುವುದಕ್ಕೆ ನಮಗೆ ಅಪಮಾನ ಆಗುತ್ತಿದೆ, ನಾಚಿಕೆಯಾಗುತ್ತದೆ ಎನ್ನುತ್ತಿದ್ದಾರೆ.



ನಾಡ ಹಬ್ಬ ದಸರಾ ಪ್ರಯುಕ್ತ ಚಾಮುಂಡಿದೇವಿಗೆ ಪೂಜೆ ಸಲ್ಲಿಸಲಾಯಿತು.

ಚಾಮುಂಡೇಶ್ವರಿ ಪ್ರಾಧಿಕಾರ ರಚಿಸಿ, ಈಗಾಗಲೇ ಸಿಎಂ ಸಭೆ ಮಾಡಿದ್ದಾರೆ. ತಾಯಿ ಚಾಮುಂಡೇಶ್ವರಿಗೆ ಅಪಮಾನ ಮಾಡಿ ಜಾಹೀರಾತು ನೀಡುತ್ತಾರೆ. ಬಹಳ ದಿನ ಸರಕಾರ ಉಳಿಯಲ್ಲ. ಪತನವಾಗುತ್ತದೆ ಎಂದು ಗುಡುಗಿದರು.

ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ರಾಜಶೇಖರ್ ನಾಗಪ್ಪ, ಬಿಜೆಪಿ ಮುಖಂಡರಾದ ಅಜಯ್ ಕುಮಾರ್, ಮಾಡಾಳ್ ಮಲ್ಲಿಕಾರ್ಜುನ್, ಚಂದ್ರಶೇಖರ್ ಪೂಜಾರ್, ಧನಂಜಯ ಕಡ್ಲೇಬಾಳು, ಬಿಜೆಪಿ ಜಿಲ್ಲೆಯ ಮುಖಂಡರು, ಕಾರ್ಯಕರ್ತರು ಹಾಜರಿದ್ದರು.

ಸಾರ್ವಜನಿಕರ ಕೆಲಸ ವಿಳಂಬ ಧೋರಣೆಗೆ ಸೂಕ್ತ ಕ್ರಮ

ದಾವಣಗೆರೆ: ಮಹಾನಗರ ಪಾಲಿಕೆಯಲ್ಲಿ ಸಾರ್ವಜನಿಕರ ಕೆಲಸ, ಕಾರ್ಯಕ್ಕೆ ವಿಳಂಬ ಧೋರಣೆ ಅನುಸರಿಸುವ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ಮೇಯರ್ ಮತ್ತು ಆಯುಕ್ತರಿಗೆ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ ಕಟ್ಟುನಿಟ್ಟಿನ ಸೂಚನೆ ನೀಡಿದರು. ನಗರದ ಪಾಲಿಕೆಯಲ್ಲಿ ನೂತನ ಮೇಯರ್ ಕೆ.ಚಮನ್ ಸಾಬ್ ಅವರ ಕಚೇರಿ ಉದ್ಘಾಟಿಸಿ ಮಾತನಾಡಿದರು. ಸಾರ್ವಜನಿಕರು ಪಾಲಿಕೆಯಲ್ಲಿ ಇ-ಸ್ವತ್ತು ಸೇರಿ ವಿವಿಧ ಕೆಲಸ, ಕಾರ್ಯ ಮಾಡಿಕೊಡಲು ಅಧಿಕಾರಿ, ಸಿಬ್ಬಂದಿಗಳು ಅಲೆದಾಡಿಸುತ್ತಿದ್ದಾರೆ ಎಂದು ದೂರುಗಳಿವೆ. ಈ ಧೋರಣೆಯನ್ನು ಸಹಿಸುವ ಪ್ರಶ್ನೆಯೇ ಇಲ್ಲ. ಈ ಬಗ್ಗೆ ಮೇಯರ್, ಆಯುಕ್ತರು ಗಮನ ಹರಿಸಬೇಕು ಎಂದರು. ಪಾಲಿಕೆಯಲ್ಲಿ ಒಂದೇ ವಿಭಾಗದಲ್ಲಿ, ಒಂದೇ ಕಡೆ ಬಹಳ ದಿನಗಳಿಂದ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ, ಸಿಬ್ಬಂದಿಯನ್ನು ತಕ್ಷಣ ಬದಲಾವಣೆ ಮಾಡಬೇಕು.ಯಾವುದೇ ಅಧಿಕಾರಿ, ಸಿಬ್ಬಂದಿ ಬಗ್ಗೆ ಪಾಲಿಕೆಯಲ್ಲಿ ಭ್ರಷ್ಟಾಚಾರದ ಬಗ್ಗೆ ದೂರು ಬಂದರೆ ಅಂತಹವರ ವಿರುದ್ಧ ಸೂಕ್ತ ಶಿಸ್ತು ಕ್ರಮ ಕೈಗೊಳ್ಳಬೇಕು. ವಿನಾಕಾರಣ ಸಾರ್ವಜನಿಕರಿಗೆ ತೊಂದರೆ ಆಗುತ್ತಿರುವುದನ್ನು ತಪ್ಪಿಸಬೇಕು. ತ್ವರಿತವಾಗಿ ಜನರ ಕೆಲಸ, ಕಾರ್ಯಗಳು ಪಾಲಿಕೆಯಲ್ಲಿ ಆಗಬೇಕು ಎಂದು ಸೂಚಿಸಿದರು. ಈ ಸಂದರ್ಭದಲ್ಲಿ ಮೇಯರ್ ಕೆ.ಚಮನ್ ಸಾಬ್, ದೂಡಾ ಅಧ್ಯಕ್ಷ ದಿನೇಶ ಕೆ.ಶೆಟ್ಟಿ, ಉಪ ಮೇಯರ್ ಶಾಂತಕುಮಾರ ಸೋಗಿ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಿ. ಬಸವರಾಜ, ಮಾಜಿ ಮೇಯರ್ ಬಿ.ಎಚ್. ವಿನಾಯಕ ಪೈಲ್ವಾನ್, ಪಾಲಿಕೆ ಸದಸ್ಯರಾದ ಜಿ.ಎಸ್.ಮಂಜುನಾಥ ಗಡಿಗುಡಾಳ, ಎ.ನಾಗರಾಜ, ನಾಗರಾಜ, ಸವಿತಾ ಹುಲ್ಮನಿ ಗಣೇಶ, ನಗರಸಭೆ ಮಾಜಿ ಅಧ್ಯಕ್ಷ ಆರ್. ಎಚ್. ನಾಗಭೂಷಣ್, ಪಾಲಿಕೆ ಅಧಿಕಾರಿ, ಸಿಬ್ಬಂದಿಗಳು ಇದ್ದರು.

ಮಾನ್ಯ ಹೆಚ್ಚುವರಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ಸೊರಬ
ಸಿ.ಮಿಸ್ ಸಂಖ್ಯೆ–282/2024
ಅರ್ಜಿದಾರರು: ಹರೀಶ ಬಿನ್ ಶಿವಪ್ಪ.
ವಿರುದ್ಧ
ಎದುರುದಾರರು:– ತಹಶೀಲ್ದಾರ್‌ರವು ತಾಲ್ಲೂಕು ಕಛೇರಿ ಸೊರಬ.

ಪತ್ರಿಕಾ ಪ್ರಕಟಣೆ

ಮೇಲ್ಕಂಡ ಅರ್ಜಿದಾರರು ಎದುರುದಾರರ ವಿರುದ್ಧ ಕೆಳಗೆ ನಮೂದಿಸಿದ ವ್ಯಕ್ತಿಯು ಮರಣ ಹೊಂದಿರುವುದರಿಂದ ಮರಣ ದಾಖಲೆಯನ್ನು ಪಡೆದುಕೊಳ್ಳುವ ಸಲುವಾಗಿ ಈ ಕೇಸನ್ನು ದಾಖಲಿಸಿದ್ದು ಇದರ ವಿಚಾರಣೆಯು ದಿನಾಂಕ 14/10/2024 ರಂದು ಬೆಳಗ್ಗೆ 11 ಗಂಟೆಗೆ ಇರುವುದರಿಂದ ಈ ವಿಷಯದಲ್ಲಿ ಹಿತಾಸಕ್ತಿ ಇರುವುವವರು ಅರ್ಜಿದಾರರಾಗಿ ಅಥವಾ ಎದುರುದಾರರಾಗಿ ಅಂದು ಮಾನ್ಯ ನ್ಯಾಯಾಲಯದಲ್ಲಿ ಹಾಜರಾಗಬಹುದು.

ಮರಣ ಹೊಂದಿದ ವ್ಯಕ್ತಿಯ ಹೆಸರು, ದಿನಾಂಕ ಮತ್ತು ಸ್ಥಳ

1 ಅರ್ಜಿದಾರರ ತಾಯಿ, ಹಾಗೂ 2ನೇ ಅರ್ಜಿದಾರರ ಅತ್ತೆ, 3 ಮತ್ತು 4 ನೇ ಅರ್ಜಿದಾರರ ಅಜ್ಜಿಯಾದ ಮಾಳಮ್ಮ ಕೋಂ ಬಸಪ್ಪ ಆದ ಇವರು ಸೊರಬ ತಾಲ್ಲೂಕು, ಜಡೆ ಹೋಬಳಿ, ಜಡೆ–ಸಾಲಿಗೆ ಗ್ರಾಮದಲ್ಲಿರುವ ಅರ್ಜಿದಾರರುಗಳ ಮನೆಯಲ್ಲಿ ದಿನಾಂಕ:28–09–2020 ರಂದು ಮರಣ ಹೊಂದಿರುತ್ತಾರೆ. ಆ ಸಂಬಂಧ ಅರ್ಜಿದಾರರು ಮರಣ ದಾಖಲೆ ಪಡೆಯುವ ಸಂಬಂಧ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ನ್ಯಾಯಾಲಯದ ಅಪ್ಪಣೆಯ ಮೇರೆಗೆ
ಶಿರಸ್ತೆದಾರರು
ವ್ಯವಹಾರ, ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸೊರಬ.
ಅರ್ಜಿದಾರರ ಪರ ವಕೀಲರು
ಪ್ರಶಾಂತ ಜಿ. ಬಿ.ಎ.ಎಲ್.ಎಲ್.ಬಿ
ವಕೀಲರು, ಸೊರಬ
ರೋಲ್ ನಂ ಕೆ.ಎ.ಆರ್ .4183/2006

ಬರದ ಹಣೆ ಪಟ್ಟಿಯಿಂದ ಜಿಗಿಯುವ ಮುನ್ಸೂಚನೆ

ಜಗಳೂರು: ಸದಾ ನೀರಿನ ಬವಣೆಯಲ್ಲಿ ಬಳಲುತ್ತಾ ಸಂಕಷ್ಟಕ್ಕೆ ಸಿಲುಕಿತ್ತಿದ್ದ ಜಗಳೂರು ಈ ಬಾರಿ ಬರದ ಹಣೆಪಟ್ಟಿಯಿಂದ ಹೊರ ಜಿಗಿಯುವ ಎಲ್ಲಾ ಲಕ್ಷಣಗಳು ಕಾಣುತ್ತಿವೆ ಅಲ್ಲದೆ ವಾಡಿಕೆಗಿಂತ ಹೆಚ್ಚು ಮಳೆ ಸುರಿಯದ್ದಿದರು ಈ ಬಾರಿಯ 57 ಕೆರೆ ನೀರು ತುಂಬಿಸುವ ಯೋಜನೆಯಲ್ಲಿ ತುಂಗಭದ್ರಾ ನದಿ ನೀರು ಪೈಪ್ ಲೈನ್ ಮೂಲಕ ಜಗಳೂರು ತಾಲೂಕಿನ ಕೆರೆಗಳಿಗೆ ಆಗಮಿಸಿತ್ತಿದ್ದು ಅರ್ಧ ಶತಮಾನದ ಹಿಂದೆ ಕೋಡಿ ಬಿದ್ದ ಕೆರೆಗೆಳು ನದಿ ನೀರು ಹಾಗೂ ಮಳೆಯ ನೀರಿಗೆ ಇಂದು ಕೋಡಿ ಬೀಳುವುದಕ್ಕೆ ಸಾಕ್ಷಿಯಾಗಿದೆ.

ದಾವಣಗೆರೆ ಜಿಲ್ಲೆಯಲ್ಲಿಯೇ ಉಳಿದ ತಾಲೂಕುಗಳಿಗೆ ಹೋಲಿಸಿದರೆ ಜಗಳೂರು ಅತಿ ಕಡಿಮೆ ಮಳೆ ಬೀಳುವ ಪ್ರದೇಶ. ಇದರ ಜೊತೆಯಲ್ಲಿ ಇಷ್ಟು ದಿನ ಎಲ್ಲಾ ತಾಲೂಕುಗಳಿಗೂ ತುಂಗಣದ್ರಾ ನದಿಯ ನಂಟೊಂದಿತ್ತು ಆದರೆ ಜಗಳೂರು ಮಾತ್ರ ಬರದ ಭೀಕರತೆಯಿಂದ ಕುಡಿಯುವ ನೀರಿಗೂ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿತ್ತು ಆದರೆ ಇದೀಗಾ ತುಂಗಭದ್ರ ಜಲಾಶಯದ ನಂಟು ಜಗಳೂರಿಗೆ ತರಳಬಾಳ ಹುಣ್ಣಿಮೆಯಂದ ದೊರೆತ್ತಿದೆ. 57 ಕೆರೆ ತುಂಬಿಸುವ ಮಾರ್ಗವಾಗಿ ಒಂದು ಮಾರ್ಗದಲ್ಲಿ ಒಂದು ಸ್ಥಳದಲ್ಲಿ ಐದಾರು ಬೃಹತ್ ಗಾತ್ರದ ಇಟಾಚಿಗಳು ಹೀಗೆ ನೂರಾರು ಯಂತ್ರಗಳ ಮೂಲಕ ಕಾಮಗಾರಿಗೆ ವೇಗ ನೀಡಿ 40 ಕೆರೆಗಳಿಗೆ ನೀರು ಲಭಿಸಿದ ಕೀರ್ತಿ ದೇವೇಂದ್ರಪ್ಪಗೆ ಸಲ್ಲುತ್ತದೆ ಅಲ್ಲದೆ ಎಲ್ಲಾ ಕೆರೆಗಳು ತುಂಗಭದ್ರೆ ನೀರಿನ ಜತೆ ಮಳೆಯೂ ಕೈ ಜೋಡಿಸಿದ್ದು ಕೆರೆಗಳು ಭರ್ತಿಯಾಗಿದ್ದು ರೈತ ಸಮೂಹ ಸಮೃದ್ಧಿಯ ನಿಟ್ಟಿಸಿರು ಬಿಟ್ಟಿದ್ದಾರೆ.

ಹಳ್ಳಿಗೆ ತೆರಳಿ ಸದಸ್ಯತ್ವ ನೋಂದಣಿಗೆ ಶ್ರಮಿಸಿ

ಹೊಳಲ್ಕೆರೆ: ಹಳ್ಳಿ ಹಳ್ಳಿಗೆ ತೆರಳಿ ಸದಸ್ಯತ್ವ ನೊಂದಣಿಯಲ್ಲಿ ಪ್ರಾಮಾಣಿಕವಾಗಿ ಶ್ರಮಿಸಿ ಪಕ್ಷಕ್ಕೆ ಗೌರವ ತರುವಂತೆ ಶಾಸಕ ಡಾ.ಎಂ. ಚಂದ್ರಪ್ಪ ಕಾರ್ಯಕರ್ತರಲ್ಲಿ ವಿನಂತಿಸಿದರು.

ಸದಸ್ಯತ್ವ ನೊಂದಣಿ ಅಭಿಯಾನಕ್ಕೆ ಸಂಬಂಧಿಸಿದಂತೆ ಪಕ್ಷದ ಕಚೇರಿಯಲ್ಲಿ ಭಾನುವಾರ ನಡೆದ ಕಾರ್ಯಕರ್ತರ ಸಭೆ ಉದ್ಘಾಟಿಸಿ ನಂತರ ರಾಜಾವೀರ ಮದಕರಿನಾಯಕ ಜಯಂತಿ ಅಂಗವಾಗಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿದರು.

ಶತ್ರುಗಳನ್ನು ಸದೆಬಡಿದು ಗಂಡುಮೆಟ್ಟಿನ ನಾಡು ಐತಿಹಾಸಿಕ ಚಿತ್ರದುರ್ಗದ ಕೋಟೆಯನ್ನು ರಕ್ಷಿಸಿ ಎಲ್ಲರ ಪ್ರಾಣ ಮಾನ ಕಾಪಾಡಿದ ರಾಜಾವೀರ ಮದಕರಿನಾಯಕನನ್ನು ಪ್ರತಿಯೊಬ್ಬರು ಸ್ಮರಿಸಿಕೊಳ್ಳಬೇಕು ಎಂದರು.

ಒಂದೊಂದು ಜಿಲ್ಲಾ ಪಂಚಾಯಿತಿ ಕ್ಷೇತ್ರದಿಂದ ಐದೈದು ಸದಸ್ಯರುಗಳನ್ನು ಕಳಿಸುತ್ತೇನೆ. ಕಾರ್ಯಕರ್ತರು ಮುಖಂಡರು ಮನಸ್ಸು ಮಾಡಿದರೆ ಕನಿಷ್ಠ ಒಂದು ಲಕ್ಷ ಸದಸ್ಯತ್ವ ನೊಂದಾಯಿಸಬಹುದು. ಐದು ನೂರು ಸದಸ್ಯತ್ವ ನೊಂದಣಿ ಮಾಡಿಸಿದವರಿಗೆ ಐದು ಸಾವಿರ ರೂ. ಹಾಗೂ ಒಂದು ಸಾವಿರ ಸದಸ್ಯತ್ವ ನೊಂದಾಯಿಸಿದವರಿಗೆ ಹತ್ತು ಸಾವಿರ ರು.ಗಳ ಬಹುಮಾನ ನೀಡಲಾಗುವುದು. ಇದರಿಂದ ಕಾರ್ಯಕರ್ತರಲ್ಲಿ ಹುಮ್ಮಸ್ಸು ಮೂಡುತ್ತದೆ ಎಂದು ಹೇಳಿದರು.

ವಿಧಾನಸಭೆ ಚುನಾವಣೆಯಲ್ಲಿ ನಲವತ್ತು ಸಾವಿರ ಮತಗಳ ಅಂತರದಿಂದ ನನ್ನನ್ನು ಗೆಲ್ಲಿಸಿದ್ದೀರ, ಅದೇ ರೀತಿ ಪಾರ್ಲಿಮೆಂಟ್ ಚುನಾವಣೆಯಲ್ಲಿಯೂ ಬಿಜೆಪಿ ಅಭ್ಯರ್ಥಿ ಗೋವಿಂದ ಕಾರಜೋಳರವರಿಗೆ ಜಯ ಸಿಕ್ಕಿತ್ತು. ನರೇಂದ್ರಮೋದಿ ಮೂರನೆ ಬಾರಿಗೆ ದೇಶದ ಪ್ರಧಾನಿಯಾಗಿರುವುದರಿಂದ ಪಕ್ಷ ಗಟ್ಟಿಯಾಗಿದೆ. ಚುನಾವಣೆಗೂ ಮುನ್ನ ಐದು ಗ್ಯಾರೆಂಟಿಗಳನ್ನು ಘೋಷಿಸಿ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಒಂದು ವರ್ಷ ನಾಲ್ಕು ತಿಂಗಳು ಕಳೆದರೂ ಯಾವ ವಿಧಾನಸಭಾ ಕ್ಷೇತ್ರಕ್ಕೂ ಅಭಿವೃದ್ದಿಗಾಗಿ ನಯಾ ಪೈಸೆಯನ್ನು ನೀಡಿಲ್ಲ.



ಸದಸ್ಯತ್ವ ನೊಂದಣಿ ಅಭಿಯಾನಕ್ಕೆ ಸಂಬಂಧಿಸಿದಂತೆ ಪಕ್ಷದ ಕಚೇರಿಯಲ್ಲಿ ಭಾನುವಾರ ನಡೆದ ಕಾರ್ಯಕರ್ತರ ಸಭೆ ನಡೆಸಲಾಯಿತು.

> ಹರಿಯಾಣದಲ್ಲಿ ಕಾಂಗ್ರೆಸ್ ಗೆಲ್ಲುತ್ತದೆಂದು ಎಲ್ಲಾ ಮಾಧ್ಯಮಗಳು ಹೇಳಿದ್ದವು. ಆದರೆ ಸಮೀಕ್ಷೆಗಳು ಹುಸಿಯಾಗಿ ಬಿಜೆಪಿ ಅಧಿಕಾರಕ್ಕೆ ಬಂದಿದೆ. ಹಿಮಾಚಲ ಪ್ರದೇಶ ವಿಧಾನಸಭೆಯಲ್ಲಿ ಕರೆಂಟ್ ಬಿಲ್ ಕಟ್ಟಲು ಹಣವಿಲ್ಲದಂತಾಗಿದೆ. ನೌಕರರಿಗೆ ವೇತನ ಕೊಡಲು ಆಗುತ್ತಿಲ್ಲ.
> - ಡಾ.ಎಂ.ಚಂದ್ರಪ, ಶಾಸಕ

ಮಂಡಲ ಅಧ್ಯಕ್ಷ ಎಂ.ಬಿ.ಸಿದ್ದೇಶ್, ಬಿಜೆಪಿ ರೈತ ಮೋರ್ಚಾ ರಾಜ್ಯ ಕಾರ್ಯದರ್ಶಿ ಮಲ್ಲಿಕಾರ್ಜುನ್, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ತಿಪ್ಪೇಸ್ವಾಮಿ, ಪುರಸಭೆ ಸದಸ್ಯರುಗಳಾದ ಮುರುಗೇಶ್, ಸುಧಾ ಬಸವರಾಜ್, ಪ್ರಧಾನ ಕಾರ್ಯದರ್ಶಿ ರೂಪಸುರೇಶ್, ತಾಲೂಕಿನ ವಿವಿಧ ಮೋರ್ಚಾಗಳ ಪದಾಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.

ಬನ್ನಿ ಮುಡಿದು ದಸರಾ ಆಚರಣೆ

ಹರಿಹರ: ವೀರಶೈವ ಸಮಾಜ ಸಮಿತಿ ಹರ್ಲಾಪುರ ವತಿಯಿಂದ ಶನಿವಾರ ಶ್ರೀ ಬಸವೇಶ್ವರ ದೇವಸ್ಥಾನ ಸಮೀಪ ಬನ್ನಿ ಮೂಡಿಯುವ ಮೂಲಕ ದಸರಾ ಹಬ್ಬವನ್ನು ಆಚರಣೆ ಮಾಡಿದರು. ಹರ್ಲಾಪುರ ಬಡಾವಣೆಯಲ್ಲಿರುವ ಸೊಲ್ಲಾಪುರದ ಶ್ರೀ ಲಕ್ಷ್ಮೀ ದೇವಸ್ಥಾನ ದಿಂದ ವಿವಿಧ ವಾದ್ಯಗಳೊಂದಿಗೆ ಆರಂಭವಾದ ಲಕ್ಷ್ಮೀ ದೇವಿಯ ಮೆರವಣಿಗೆ ಬಡಾವಣೆಯ ಪ್ರಮೂಖ ಬೀದಿಗಳಲ್ಲಿ ಸಾಗಿ ಬಸವೇಶ್ವರ ದೇವಸ್ಥಾನಕ್ಕೆ ಬಂದು ತಲುಪಿತು. ಮೆರವಣಿಗೆ ಸಾಗುವ ಮಾರ್ಗದಲ್ಲಿ ಮಹಿಳೆಯರು ರಂಗೋಲಿಯನ್ನು ಹಾಕಿ ದೇವಿಯನ್ನು ಸ್ವಾಗತಿಸಿದರು. ಬಸವೇಶ್ವರ ದೇವಸ್ಥಾನ ಅವರಣದಲ್ಲಿರುವ ಬನ್ನಿ ಮರಕ್ಕೆ ಪುರೋಹಿತರು ಶಾಸ್ತ್ರೋಕ್ತವಾಗಿ ಪೂಜೆಯನ್ನು ನೇರವೇರಿಸಿದ ನಂತರ ಬನ್ನಿ ಮುಡಿಯುವ ಮೂಲಕ ಕಳೆದ ಹತ್ತು ದಿನಗಳಿಂದ ಆಚರಣೆ ಮಾಡಿದ್ದ ನವರಾತ್ರಿ ಉತ್ಸವಕ್ಕೆ ತೆರೆ ಎಳೆಯಲಾಯಿತು. ನೂರಾರು ಭಕ್ತರು ಪರಸ್ಪರ ಬನ್ನಿಯನ್ನು ಹಂಚುವ ಮೂಲಕ ಶುಭಾಶಯ ಕೋರಿಕೊಂಡರು. ವೀರಶೈವ ಸಮಾಜ ಸಮಿತಿ ಹರ್ಲಾಪುರ ವತಿಯಿಂದ ಶನಿವಾರ ಬನ್ನಿ ಮೂಡಿಯುವ ಮೂಲಕ ದಸರಾ ಹಬ್ಬವನ್ನು ಆಚರಣೆ ಮಾಡಿದರು. ಈ ವೇಳೆ ದೇವಸ್ಥಾನ ಸಮಿತಿಯ ಗಂಗಾದರ, ನಿಜಲಿಂಗಪ್ಪ, ರಮೇಶ್, ಬಸವಂತ್, ಸಮಾಳದ ಚಂದ್ರಶೇಖರ್, ಸತೀಶ್ ಬಾಬು, ರವಿಕುಮಾರ್, ಶಿವಕುಮಾರ್, ಮಂಜುನಾಥ, ಶಿವು,ಸೀದ್ದೇಶ್,ಯಲ್ಲಪ್ಪ, ಹಾಲಸ್ವಾಮಿ,ಅಮೀತ್, ಹರೀಶ್,ರಮೇಶ್, ಚಂದ್ರಶೇಖರ್, ಸೇರಿದಂತೆ ನೂರಾರು ಭಕ್ತರು ಉಪಸ್ಥಿತರಿದ್ದರು.

ಸಮಾಚಾರ ಸಣ್ಣದಲ್ಲ

ಸಂಘದ ಚುನಾವಣೆ ಪಾರದರ್ಶಕ ಇರಲಿ

ಚಿಕ್ಕಮಗಳೂರು: ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದ ಮೂಡಿಗೆರೆ ಶಾಖೆ ಸಮಿತಿಯ 2024–29ರ ಅವಧಿಯ ಚುನಾವಣೆ ಪ್ರಕಿಯೆ ಚಾಲ್ತಿಯಲ್ಲಿದ್ದು, ಇಲ್ಲಿನ ಹಿಂದಿನ ಆಡಳಿತ ಮಂಡಳಿ ಅಧ್ಯಕ್ಷರು ಹಾಗೂ ಕೆಲ ನಿರ್ದೇಶಕರು ಸೇರಿಕೊಂಡು ವಾಮಾ ಮಾರ್ಗದ ಮೂಲಕ ಚುನಾವಣೆಗೆ ಸಜ್ಜಾಗಲು ಸಂಚು ರೂಪಿಸಿದ್ದಾರೆಂದು ಪ್ರಗತಿಪರ ಹೋರಾಟಗಾರ ಬಿ. ರುದ್ರಯ್ಯ ಆರೋಪಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ತಾಲೂಕಿನಲ್ಲಿ ಸರಕಾರಿ ನೌಕರರ ಸಂಘದ ಚುನಾವಣೆ ನಡೆಸುವ ಸಲುವಾಗಿ ಈ ಹಿಂದೆಯೇ ಮೂಡಿಗೆರೆ ತಾಲೂಕು ಶಾಖೆಯಿಂದ ವಿವಿಧ ಇಲಾಖೆಯಿಂದ ನಿರ್ದೇಶಕರು ಹಾಗೂ ಮತಕ್ಷೇತ್ರಗಳ ಪಟ್ಟಿಯ ವರದಿಯನ್ನು ರಾಜ್ಯ ಸಂಘಕ್ಕೆ ಸಲ್ಲಿಸಲಾಗುತ್ತದೆ. ಆ ಆಧಾರದ ಮೇಲೆ ಈಗ ತಾಲೂಕಿನಲ್ಲಿ 34 ನಿರ್ದೇಶಕರಿಗೆ 24 ಮತ ಕ್ಷೇತ್ರಗಳಿಗೆ ಚುನಾವಣೆ ನಡೆಸಲು ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದಿಂದ ಅಧಿಸೂಚನೆ ಹೊರಡಿಸಲಾಗಿದೆ. ಆದರೆ ಇಲ್ಲಿ ನಿರ್ದೇಶಕರು ಹಾಗೂ ಮತಕ್ಷೇತ್ರಗಳ ಪಟ್ಟಿ ತಯಾರು ಮಾಡುವಾಗ ಯಾವ ನಿರ್ದೇಶಕರ ಗಮನಕ್ಕೆ ತಾರದೇ ಸಭಾ ನಡವಳಿ ನಡೆಸದೇ ಕೆಲ ಇಲಾಖೆಗಳನ್ನು ಹೊರಗಿಟ್ಟು ಪಕ್ಷಪಾತ, ತಾರತಮ್ಯ ಧೋರಣೆ ನಡೆಸಿ ಅಕ್ರಮವಾಗಿ ಚುನಾವಣೆ ನಡೆಸಲು ತಂತ್ರ ರೂಪಿಸಲಾಗಿದೆ ಎಂದು ದೂರಿದರು.

ಕಸದ ತೊಟ್ಟಿಯಾಗಿ ಮಾರ್ಪಟ್ಟ ನಗರ

ಚಿಕ್ಕಮಗಳೂರು: ನವರಾತ್ರಿ ಹಿನ್ನೆಲೆಯಲ್ಲಿ ಆಯುಧ ಪೂಜೆಯ ವ್ಯಾಪಾರ ವಹಿವಾಟಿನ ಬಳಿಕ ನಗರ ಕಸದ ತೊಟ್ಟಿಯಾಗಿ ಮಾರ್ಪಟ್ಟಿದೆ. ಆಯುಧ ಪೂಜೆಯ ಹಿನ್ನೆಲೆಯಲ್ಲಿ ಗುರುವಾರ ಹಾಗೂ ಶುಕ್ರವಾರ ನಗರದೆಲ್ಲೆಡೆ ವ್ಯಾಪಾರ ವಹಿವಾಟು ಜೋರಾಗಿತ್ತು. ಜನನಿಬಿಡ ಪ್ರದೇಶಗಳಲ್ಲಿ ವ್ಯಾಪಾರಸ್ಥರು ಹೂವು, ಬಾಳೆದಿಂಡು, ಕುಂಬಳಕಾಯಿ, ಮಾವಿನಸೊಪ್ಪ ಮಾರಾಟ ಮಾಡಿದ್ದರು. ಆದರೆ, ಆ ಬಳಿಕ ಹನುಮಂತಪ್ಪ ವೃತ್ತ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಸೇರಿದಂತೆ ನಗರದ ಬಹುತೇಕ ಕಡೆ ಕಸದ ರಾಶಿ ಬಿದ್ದಿರುವುದರಿಂದ ನಗರದ ಸೌಂದರ್ಯ ಅದಗೆಟ್ಟಿದೆ.

ಚಾಲಕನ ನಿಯಂತ್ರಣ ತಪ್ಪಿ ಕಾರು ಪಲ್ಟಿ

ಚಿಕ್ಕಮಗಳೂರು: ತಾಲೂಕಿನ ಪ್ರಸಿದ್ಧ ಪ್ರವಾಸಿತಾಣ ಮುಳ್ಳಯ್ಯನಗಿರಿ ಸಮೀಪ ಕಾರೊಂದು 250 ಅಡಿ ಪ್ರಪಾತಕ್ಕೆ ಬಿದ್ದಿದ್ದು, ಕಾರಿನಲ್ಲಿದ್ದ ಐದು ಜನರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಹೈದ್ರಾಬಾದ್ ಮೂಲದ ಐದು ಜನ ಪ್ರವಾಸಕ್ಕೆ ಗಿರಿಭಾಗಕ್ಕೆ ಶುಕ್ರವಾರ ತೆರಳಿದ್ದು ಚಾಲಕನ ನಿಯಂತ್ರಣ ತಪ್ಪಿ ಕಾರು ಪಲ್ಟಿಯಾಗಿದೆ. ಕಾರಿನಲ್ಲಿ ಮಗು ಸೇರಿ ಐದು ಜನರಿದ್ದು ಎಲ್ಲರಿಗೂ ಗಂಭೀರ ಗಾಯಗಳಾಗಿದ್ದು, ಖಾಸಗಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಸ್ಥಳಕ್ಕೆ ಗ್ರಾಮಾಂತರ ಪೊಲೀಸರು ತೆರಳಿ ಪರಿಶೀಲನೆ ನಡೆಸಿದ್ದಾರೆ.

ಶ್ರೀರೇಣುಕಾಂಬ ದೇವಿ ಬನ್ನಿ ಉತ್ಸವ

ಚಂದ್ರಗುತ್ತಿ: ಇಲ್ಲಿನ ಪುರಾಣ ಹಾಗೂ ಇತಿಹಾಸ ಪ್ರಸಿದ್ಧ ಶ್ರೀ ರೇಣುಕಾಂಬ ದೇವಿಯ ಬನ್ನಿ ಉತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ವೈಭವೋಪೇತವಾಗಿ ಜರುಗಿತು. ದೇವಸ್ಥಾನದಿಂದ ಆರಂಭವಾದ ಶ್ರೀ ದೇವಿಯ ಪಲ್ಲಕ್ಕಿ ಮೆರವಣಿಗೆ ಸಕಲ ವಾದ್ಯ ಮೇಳ ಗಳೊಂದಿಗೆ ನ್ಯಾರ್ಶಿಯ ಬನ್ನಿ ಮಂಟಪಕ್ಕೆ ತೆರಳಿ ತು. ಪಲ್ಲಕ್ಕಿಯನ್ನು ಬನ್ನಿ ಮಂಟಪದಲ್ಲಿ ಇರಿಸಿಲಾಯಿತು. ಶ್ರೀರೇಣುಕಾಂಬ ದೇವಿಯ ಬನ್ನಿ ಮುಡಿಯುವ ಆಚರಣೆ ನಿಮಿತ್ತ ವಿಶೇಷ ಪೂಜೆ ಸಲ್ಲಿಸಿ ವಿವಿಧಧಾರ್ಮಿಕ ಆಚರಣೆಗಳನ್ನು ನಡೆಸಲಾಯಿತು. ಸಾಂಪ್ರದಾಯಿಕ ಪದ್ಧತಿಯಂತೆ ಮಾರಿಕೊಪ್ಪದ ಭಕ್ತರು ಶ್ರೀದೇವಿಗೆ ಬನ್ನಿ ಅರ್ಪಿಸಿದರು.

ಉನ್ನತ ವಿದ್ಯಾಭ್ಯಾಸ: ವಿದೇಶಕ್ಕೆ ಪಯಣ

ಚಿಕ್ಕಮಗಳೂರು: ದಸಂಸ ಜಿಲ್ಲಾ ಪ್ರಧಾನ ಸಂಚಾಲಕ ಮರ್ಲೆ ಅಣ್ಣಯ್ಯ ಪುತ್ರಿ ಅನ್ವಿತ ಅವರು ಇಂಗ್ಲೇಡ್‌ನ ಯುನಿವರ್ಸಿಟಿಯಲ್ಲಿ ಮಾಲಿಕ್ಯೂಲರ್ ಬಯೋಲಾಜಿ ಇನ್ ಬಯೋಟೆಕ್ ವಿಷಯದಲ್ಲಿ ವ್ಯಾಸಂಗಕ್ಕೆ ತೆರಳುತ್ತಿರುವ ಅವರಿಗೆ ಜಿಲ್ಲಾ ಗೌತಮ ಬುದ್ಧ ಸಹಕಾರ ಸಂಘದ ಪದಾಧಿಕಾರಿಗಳು ಸ್ವಗೃಹದಲ್ಲಿ ಶುಭಹಾರೈಸಿ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಜಿ.ಕೆ.ಬಸವರಾಜ್, ಕಾರ್ಯದರ್ಶಿ ಹಂಪಯ್ಯ, ಗಂಗಾಧರ, ಪರ ಮೇಶ್, ಜವರಯ್ಯ, ಶಾಂತಕುಮಾರ್ ಉಪಸ್ಥಿತರಿದ್ದರು.

{ ಬಿ.ವೈ.ರಾಘವೇಂದ್ರ, } ಸಂಸದರು

ಮೊಬೈಲನ್ನು ಮಕ್ಕಳು ಓದಿಗೆ ಮಾತ್ರ ಬಳಕೆ ಮಾಡಿಕೊಳ್ಳದೆ ಇತರೆ ಉದ್ದೇಶಕ್ಕೂ ಬಳಕೆ ಮಾಡಿಕೊಳ್ಳುವ ಮೂಲಕ ಮೊಬೈಲ್ ಗೀಳಿಗೆ ಒಳಗಾಗುತ್ತಿದ್ದಾರೆ. ಅವರಿಗೆ ಆಟ-ಪಾಠ, ಸಹಪಾಠಿಗಳು ಬೇಕಿಲ್ಲ. ಸಾರ್ವಜನಿಕ ಸಭೆ, ಸಮಾರಂಭಗಳಲ್ಲಿ ಪಾಲ್ಗೊಳ್ಳುವ ಮನಸ್ಥಿತಿ ಕಡಿಮೆ ಆಗುತ್ತಿದೆ. ಇದರಿಂದ ಹೊರ ಬರಲು ಪೋಷಕರು ಮಕ್ಕಳಿಗೆ ತಿಳಿಸಬೇಕಿದೆ.

ಮಣ್ಣು ಮಿಶ್ರಿತ ನೀರು, ಆಕ್ರೋಶ

ಭಾರೀ ಮಳೆಗೆ ಕೆಂಪು ಬಣ್ಣಕ್ಕೆ ತಿರುಗಿದ ತುಂಗಾ ಡ್ಯಾಮಿನ ನೀರು

ಶಿವಮೊಗ್ಗ : ನಗರದಲ್ಲಿ ಕಳೆದ ಕೆಲ ದಿನಗಳಿಂದ, ಮಣ್ಣು ಮಿಶ್ರಿತ ಕೆಂಪು ಬಣ್ಣದ ಕಲುಷಿತ ಕುಡಿಯುವ ನೀರು ಪೂರೈಕೆಯಾಗುತ್ತಿದೆ. ಇದು ನಾಗರೀಕ ವಲಯದಲ್ಲಿ ವ್ಯಾಪಕ ಆಕ್ರೋಶಕ್ಕೆ ಕಾರಣವಾಗಿದೆ.

ಈ ನಡುವೆ ಭಾನುವಾರ ಬೆಳಿಗ್ಗೆ ಶಾಸಕ ಚನ್ನಬಸಪ್ಪ ಅವರು ಮಹಾನಗರ ಪಾಲಿಕೆ ಹಾಗೂ ಜಲ ಮಂಡಳಿ ಅಧಿಕಾರಿಗಳೊಂದಿಗೆ, ನಗರದ ಹೊರವಲಯ ಮಂಡ್ಲಿಯಲ್ಲಿರುವ ನೀರು ಶುದ್ದೀಕರಣ ಘಟಕ ಹಾಗೂ ಗಾಜನೂರಿನ ತುಂಗಾ ಜಲಾಶಯಕ್ಕೆ ಭೇಟಿಯಿತ್ತು ಪರಿಶೀಲನೆ ನಡೆಸಿದ್ದಾರೆ.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಆಯುಕ್ತೆ ಕವಿತಾ ಯೋಗಪ್ಪನವರ್, ಜಲ ಮಂಡಳಿ ಎಂಜಿನಿಯರ್‌ಗಳಾದ ಎಇಇ ಮಿಥುನ್ ಕುಮಾರ್, ಎಇ ತೇಜಸ್ವಿನಿ, ಸಿಬ್ಬಂದಿಗಳಾದ ಮೋಹನ್, ಪಾಲಿಕೆ ಎಂಜಿನಿಯರ್ ಪ್ರಿಯಾ ಸೇರಿದಂತೆ ಮೊದಲಾದವರು ಉಪಸ್ಥಿತರಿದ್ದರು.

ಭಾರೀ ಮಳೆ ಕಾರಣದಿಂದ ತುಂಗಾ ಜಲಾಶಯದಲ್ಲಿ ಅಪಾರ ಪ್ರಮಾಣದ ಮಣ್ಣು ಮಿಶ್ರಿತ ನೀರು ಸಂಗ್ರಹವಾಗಿದೆ. ನೀರಿನಲ್ಲಿ ಟಬಿರ್‌ಡಿಟಿ ಪ್ರಮಾಣ ಹೆಚ್ಚಾಗಿದೆ. ಶುದ್ಧೀಕರಣದ ಹೊರತಾಗಿಯೂ ಪ್ರಮಾಣ ಕಡಿಮೆಯಾಗುತ್ತಿಲ್ಲ. ಇದರಿಂದ ಕೆಂಪು ಬಣ್ಣದ ನೀರು ಪೂರೈಕೆಯಾಗುತ್ತಿದೆ ಎಂಬ ವಿವರವನ್ನು ಅಧಿಕಾರಿಗಳ ತಂಡ ಶಾಸಕರಿಗೆ ತಿಳಿಸಿದೆ ಎಂದು ತಿಳಿದುಬಂದಿದೆ.

ಕಲುಷಿತ ನೀರು ಪೂರೈಕೆಯಾಗುತ್ತಿರುವ ಬಗ್ಗೆ ನಾಗರೀಕ ವಲಯದಲ್ಲಿ ವ್ಯಾಪಕ ದೂರುಗಳು ಬರುತ್ತಿವೆ. ತಕ್ಷಣವೇ ಶುದ್ಧ ಕುಡಿಯುವ ನೀರು ಪೂರೈಕೆಗೆ ಗಮನಹರಿಸುವ ನಿಟ್ಟಿನಲ್ಲಿ ಕ್ರಮಕ್ಕೆಗೊಳ್ಳಬೇಕು ಎಂದು ಶಾಸಕರು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ ಎಂದು ಎನ್ನಲಾಗಿದೆ.

ಕುಡಿಯಲು ಯೋಗ್ಯವಾದ ನೀರಿನ ಮಾನದಂಡಗಳ ಪ್ರಕಾರ, ನೀರಿನಲ್ಲಿನ ಟರ್ಬಿಡಿಟಿ ಪ್ರಮಾಣ 1 ಎನ್.ಟಿ.ಯು ಇರಬೇಕು. ಆದರೆ ಪ್ರಸ್ತುತ ತುಂಗಾ ನದಿ ನೀರಿನಲ್ಲಿ ನಿಗದಿತ ಮಾನದಂಡಗಳಿಗಿಂತ ಹೆಚ್ಚಿದೆ ಎಂದ ದೂರುಗಳು ಕೇಳಿಬಂದಿದ್ದವು.

ಏನಿದು ಸಮಸ್ಯೆ?

ಗಾಜನೂರಿನ ತುಂಗಾ ಜಲಾಶಯದಿಂದ, ಶಿವಮೊಗ್ಗ ನಗರಕ್ಕೆ ಕುಡಿಯುವ ನೀರು ಪೂರೈಕೆಯಾಗುತ್ತದೆ. ಆದರೆ ಕಳೆದ ಅಕ್ಟೋಬರ್ 8 ರ ರಾತ್ರಿ ಬಿದ್ದ ಭಾರೀ ಮಳೆಗೆ ತುಂಗಾ ಡ್ಯಾಂ ನೀರಿನ ಬಣ್ಣ, ಏಕಾಏಕಿ ಕೆಂಪು ಬಣ್ಣಕ್ಕೆ ತಿರುಗಿತ್ತು. ನೀರಿನಲ್ಲಿ ಟಬಿಆರ್‌ಡಿಟಿ ಪ್ರಮಾಣ ಹೆಚ್ಚಾಗಿತ್ತು. ನೀರಿನ ಶುದ್ದೀಕರಣದ ಹೊರತಾಗಿಯೂ ನಿಯಂತ್ರಣಕ್ಕೆ ಬಂದಿರಲಿಲ್ಲ. ಆರೋಗ್ಯದ ಹಿತದೃಷ್ಟಿಯಿಂದ ನೀರನ್ನು ಕುದಿಸಿ- ಆರಿಸಿ ಕುಡಿಯುವಂತೆ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಇತ್ತೀಚೆಗೆ ಪ್ರಕಟಣೆ ಹೊರಡಿಸಿತ್ತು.

ರತನ್ ಟಾಟಾ ಆದರ್ಶ ಜೀವನ ಪ್ರೇರಣೆ ಆಗಲಿ

ಸೊರಬ: ದೇಶದಲ್ಲಿ ಉದ್ಯಮ ಕ್ಷೇತ್ರದಲ್ಲಿ ಸಾಧನೆ ಮಾಡಿ ಲಕ್ಷಾಂತರ ಜನರಿಗೆ ಉದ್ಯೋಗ ನೀಡಿದ ರತನ್ ಟಾಟಾರ ಆದರ್ಶಮಯ ತತ್ವವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಜಡೆ ಸಂಸ್ಥಾನ ಮಠದ ಡಾ.ಮಹಾಂತ ಸ್ವಾಮೀಜಿ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಹಮ್ಮಿಕೊಂಡಿದ್ದ ರತನ್ ಟಾಟಾ ರವರ ಶ್ರದ್ಧಾಂಜಲಿ ಸಭೆಯಲ್ಲಿ ಮಾತನಾಡಿ, ದೇಶದ ಕೈಗಾರಿಕಾ ಕ್ಷೇತ್ರದಲ್ಲಿ ಅಪರಿಮಿತ ಕೊಡುಗೆ ನೀಡುವ ಮೂಲಕ ಶಿಕ್ಷಣ, ಸಾಮಾಜಿಕ , ಆರೋಗ್ಯ ಕ್ಷೇತ್ರದಲ್ಲಿ ಗಣನೀಯವಾಗಿ ಸೇವೆ ಸಲ್ಲಿಸಿದ್ದಾರೆ . ಇವರ ಸರಳ ವ್ಯಕ್ತಿತ್ವ ಜಗತ್ತಿಗೆ ಮಾದರಿ ಯಾಗಿದೆ ಎಂದರು. ಡಾ| ಜ್ಞಾನೇಶ್ ಹೆಚ್.ಈ.ಮಾತನಾಡಿ, ಕೇವಲ 1 ಲಕ್ಷಕ್ಕೆ ಟಾಟಾ ನ್ಯಾನೋ ಕಾರನ್ನು ಜಗತ್ತಿಗೆ ಪರಿಚಯಿಸಿದ ಏಕೈಕ ಕಂಪೆನಿ ಅಂದರೆ ಅದು ಟಾಟಾ ಮೋಟ ರ್ಸ್. ಇದರ ಜೊತೆಗೆ ಟಾಟಾ ಕಮ್ಯುನಿಕೇಷನ್ಸ್ ಪ್ರಾರಂಭಿಸಿ ವ್ಯಾಪಾರ ಮತ್ತು ಸಮಾಜಕ್ಕೆ ನೀಡಿದ ಕೊಡುಗೆ ಗಳಿಗಾಗಿ ಅವರಿಗೆ ಪದ್ಮಭೂಷಣ ಮತ್ತು ಪದ್ಮವಿಭೂಷಣದಂಥ ಅತ್ಯುನ್ನತ ನಾಗರಿಕ ಗೌರವಗಳು, ಹಲವಾರು ಪ್ರಶಸ್ತಿಗಳನ್ನು ಪಡೆದಿದ್ದಾರೆ ಎಂದರು.

ರೋಟರಿ ಕ್ಲಬ್ ಅಧ್ಯಕ್ಷ ನಿರಂಜನ್, ನಿಕಟ ಪೂರ್ವ ಅಧ್ಯಕ್ಷ ನಾಗರಾಜ್ ಗುತ್ತಿ, ಡಾ.ನಾಗರಾಜ್, ಸಂತೋಷ್ ಕುಮಾರ್ , ಕೃಷ್ಣಪ್ಪ ಓಟೂರು,ಜಿಪಂ ಮಾಜಿ ಉಪಾಧ್ಯಕ್ಷ ಪಾಣಿ ರಾಜಪ್ಪ, ಡಿ, ಶಿವಯೋಗಿ, ಹರೀಶ್ ,ಕಾಳಿಂಗರಾಜ್, ಗುರುಮೂರ್ತಿ, ಶಿವಾನಂದಪ್ಪ ಕೆ.ಅರ್, ಪುರುಷೋತ್ತಮ್, ಚಂದ್ರಪ್ರ, ಯಶೋಧರ, ದೇವರಾಯ, ವೇಣುಗೋ ಪಾಲ್ , ಪುನೀತ್ ಇದ್ದರು.

ಪೋಷಕರು ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಲಿ

ಸೊರಬ: ಮಕ್ಕಳಿಗೆ ಉತ್ತಮ ಸಂಸ್ಕಾರವನ್ನು ನೀಡುವ ಜವಾಬ್ದಾರಿ ಪೋಷಕರ ಮೇಲಿದೆ ಎಂದು ರಾಷ್ಟ್ರಪತಿ ಪದಕ ಪುರಸ್ಕೃತ ಯೋಧ ಜಿ. ಚಂದ್ರಶೇಖರ್ ಹೇಳಿದರು.

ಪಟ್ಟಣದ ಶ್ರೀರಂಗನಾಥ ದೇವಸ್ಥಾನದ ಆವರಣದಲ್ಲಿ ದಸರಾ ಉತ್ಸವ ಸಮಿತಿಯಿಂದ ತಾಲೂಕು ಆಡಳಿತ, ಪುರಸಭೆ ಸಹಯೋಗದಲ್ಲಿ ಹಮ್ಮಿಕೊಂಡ 16ನೇ ವರ್ಷದ ಸಾರ್ವಜನಿಕ ದಸರಾ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಪ್ರಸ್ತುತ ದಿನಮಾನಗಳಲ್ಲಿ ಮಕ್ಕಳಲ್ಲಿ ಸಂಸ್ಕಾರದ ಕೊರತೆ ಎದ್ದುಕಾಣುತ್ತಿದೆ. ಮಕ್ಕಳಿಗೆ ಬಾಲ್ಯದಲ್ಲಿಯೇ ದೇಶ ಪ್ರೇಮ ಬೆಳೆಸಬೇಕು. ಸೈನ್ಯದಲ್ಲಿ ಅನೇಕ ಸವಾಲುಗಳನ್ನು ಎದುರಿಸಬೇಕಾಗುತ್ತದೆ. ಬಾಹ್ಯ ಶತ್ರುಗಳ ಜೊತೆ ಹೋರಾಡಿ ಜಯ ಸಾಧಿಸಬಹುದು. ಆದರೆ, ಆಂತರಿಕ ಶತ್ರುಗಳು ದೇಶಕ್ಕೆ ದೊಡ್ಡ ಅಪಾಯವಾಗಿದ್ದಾರೆ. ಅವರಿಂದ ಸದಾ ಜಾಗರೂಕರಾಗಿರಬೇಕು ಎಂದರು.

ಕರ್ತವ್ಯದಲ್ಲಿ ನಿಷ್ಠೆ ಮತ್ತು ಪ್ರಾಮಾಣಿಕತೆ ಇದ್ದಾಗ ಗೌರವಾಧಾರಗಳು ಹುಡುಕಿಕೊಂಡು ಬರುತ್ತವೆ. ತಮಗೆ ದೊರೆತ ರಾಷ್ಟ್ರಪತಿ ಪದಕವನ್ನು ಭಾರತಾಂಬೆಯ ಮಡಿಲಿಗೆ ಅರ್ಪಿಸುತ್ತೇನೆ. ತಾಲೂಕಿನಲ್ಲಿ ಅನೇಕ ನಿವೃತ್ತ ಸೈನಿಕರಿದ್ದಾರೆ. ಅವರಿಗೆ ಸರ್ಕಾರದಿಂದ ದೊರೆಯುವ ಸೌಲಭ್ಯಗಳನ್ನು ತಲುಪಿಸಲು ತಾಲೂಕು ಆಡಳಿತ ಮುಂದಾಗಬೇಕು ಎಂದು ಮನವಿ ಮಾಡಿದರು.

ಸನ್ಮಾನ ಸ್ವೀಕರಿಸಿದ ಅಂತರಾಷ್ಟ್ರೀಯ ನ್ಯಾಚುರಲ್ ಬಾಡಿ ಬಿಲ್ಡರ್ ರಘು ರಾಮಪ್ಪ ಮಾತನಾಡಿ, ಯುವ ಜನತೆ ದುಶ್ಚಟಗಳಿಗೆ ಮಾರು ಹೋಗದೇ, ಉತ್ತಮ ಆರೋಗ್ಯವನ್ನು ಸಂಪಾದಿಸಿಕೊಳ್ಳಬೇಕು. ದೈನಂದಿನ ಚಟುವಟಿಕೆಗಳ ನಡುವೆ ನಿತ್ಯ ವ್ಯಾಯಾಮ ಮಾಡುವುದನ್ನು ಮೈಗೂಡಿಸಿಕೊಳ್ಳಬೇಕು ಎಂದರು.

ದಸರಾ ಸಮಿತಿ ಅಧ್ಯಕ್ಷ ಜಿ. ಪ್ರಶಾಂತ ಮೇಸ್ತ್ರಿ ಅಧ್ಯಕ್ಷತೆ ವಹಿಸಿದ್ದರು. ಕುವೆಂಪು ವಿವಿ ನಿವೃತ್ತ ಹಣಕಾಸು ಅಧಿಕಾರಿ ಬಂಗಾರಪ್ಪ ಜಡೇಕರ್, ಉದ್ಯಮಿ ಹೇಮರಾಜ ಪಾಟೀಲ್, ಕ್ರಷರ್ ಮಾಲೀಕ ಇಂದೂಧರ ಹೊಳೆಲಿಂಗಪ್ಪ, ಗಂಗಾಮತ ಸಮಾಜದ ಅಧ್ಯಕ್ಷ ನಾಗರಾಜ ಎಲೆ, ಸಮಿತಿಯ ಪ್ರಧಾನ ಕಾರ್ಯದರ್ಶಿ ಪರಶುರಾಮ ಸಣ್ಣಬೈಲ್, ಖಜಾಂಚಿ ಬಸವರಾಜ ಶೇಟ್, ಮಾಲತೇಶ್ ಮಾಸ್ತರ್, ಸುರೇಶ್ ಭಂಡಾರಿ ಇದ್ದರು.

ಸೊರಬ ಪಟ್ಟಣದಲ್ಲಿ ದಸರಾ ಉತ್ಸವ ಸಮಿತಿ ವತಿಯಿಂದ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ಪುರಸ್ಕೃತ ಯೋಧ ಜಿ. ಚಂದ್ರಶೇಖರ್, ಬಾಡಿ ಬಿಲ್ಡರ್ ರಘು ರಾಮಪ್ಪ ಅವರನ್ನು ಸನ್ಮಾನಿಸಲಾಯಿತು.

ಅಭಿವೃದ್ಧಿಗೆ ಶ್ರಮಿಸಿದ ಪ್ರಸನ್ನ ಕುಮಾರ್

ಶಿಕಾರಿಪುರ : ತಾಲೂಕಿನ ಅಭಿವೃದ್ದಿಗೆ ಅನುದಾನದ ಮೂಲಕ ಶ್ರಮಿಸಿದ ಮಾಜಿ ವಿಧಾನ ಪರಿಷತ್ ಸದಸ್ಯ ಹಾಗೂ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಪ್ರಸನ್ನಕುಮಾರ್ ಅವರ ಕೊಡುಗೆ ತಾಲೂಕಿನ ಜನತೆ ಮರೆಯಲು ಸಾಧ್ಯವಿಲ್ಲ ಎಂದು ಪುರಸಭಾ ಸದಸ್ಯ ಹಾಗೂ ಉಳ್ಳಿ ಫೌಂಡೇಶನ್ ಅಧ್ಯಕ್ಷ ಮಯೂರ್ ದರ್ಶನ್ ಉಳ್ಳಿ ಹೇಳಿದರು.

ಪಟ್ಟಣದ ಸಾಂಸ್ಕೃತಿಕ ಭವನ ಮುಂಭಾಗ ಆರ್.ಪ್ರಸನ್ನಕುಮಾರ್ ರ ಹುಟ್ಟು ಹಬ್ಬ ನಿಮಿತ್ತ 35 ಮಹಿಳಾ ಪೌರಕಾರ್ಮಿಕರಿಗೆ ಸೀರೆ ಹಾಗು ಸಿಹಿ ವಿತರಿಸಿ ಮಾತನಾಡಿದರು.

ಪ್ರತಿನಿತ್ಯ ಪಟ್ಟಣವನ್ನು ಸ್ವಚ್ಛವಾಗಿರಿಸುವ ಹಾಗು ಕೊರೋನಾ ವೇಳೆ ಜೀವದ ಹಂಗು ತೊರೆದು ಕೆಲಸ ಮಾಡಿದ ಪೌರಕಾರ್ಮಿಕರ ಕಾರ್ಯ ಶ್ಲಾಘನೀಯ. ಪ್ರಸನ್ನಕುಮಾರ್ ರವರ ಹುಟ್ಟು ಹಬ್ಬವನ್ನು ಹೆಚ್ಚು ಅರ್ಥಪೂರ್ಣವಾಗಿಸಲು ಉಳ್ಳಿ ಫೌಂಡೇಷನ್ ವತಿಯಿಂದ ಉಡುಗೊರೆ ನೀಡುವ ಮೂಲಕ ಆಚರಿಸಲಾಗುತ್ತಿದೆ ಎಂದು ತಿಳಿಸಿದರು.

ಕೆಪಿಸಿಸಿ ಸದಸ್ಯರಾದ ಪಕ್ಷದ ಮುಖಂಡ ಗೋಣಿ ಮಾಲತೇಶ್ ಮಾತನಾಡಿ, ಆರ್.ಪ್ರಸನ್ನಕುಮಾರ್ ಶಿವಮೊಗ್ಗ ನಗರಸಭಾ ಅಧ್ಯಕ್ಷರಾಗಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿ, ವಿಧಾನಪರಿಷತ್ ಸದಸ್ಯರಾದರೂ ಕೂಡ ಕಿಂಚಿತ್ತು ಅಹಂ ತೋರಿಸದೇ ಸಾಮಾನ್ಯ ಕಾರ್ಯಕರ್ತರಿಗೂ ಸ್ಪಂದಿಸುವ ವ್ಯಕ್ತಿತ್ವ ಅವರದು. ಅವರಿಗೆ ದೇವರು ಇನ್ನೂ ಹೆಚ್ಚಿನ ಅಧಿಕಾರ,ಆರೋಗ್ಯ ನೀಡಲಿ ಎಂದರು.

ಈ ಸಂದರ್ಭದಲ್ಲಿ ತಾಂಡಾ ಅಭಿವೃದ್ದಿ ನಿಗಮದ ಮಾಜಿ ಸದಸ್ಯ ಶಿವು ನಾಯ್ಕ, ಮುಖಂಡ ಬುಡೇನ್ ಸಾಬ್, ಸ.ನಾ. ಮಂಜಪ್ಪ,ನಗರದ ಮಾಲತೇಶ್,ಗುಡ್ಡಳ್ಳಿ ಸಂತೋಷ್,ಶಶಾಂಕ್,ಸಂತೋಷ್ ಮಡಿವಾಳ್,ಪ್ರದೀಪ್, ಪುರಸಭೆ ಅಧಿಕಾರಿ ರಾಜಕುಮಾರ್,ನವೀನ್ ಇದ್ದರು.

ವಿಪ ಮಾಜಿ ಸದಸ್ಯ ಪ್ರಸನ್ನಕುಮಾರ್ ಹುಟ್ಟುಹಬ್ಬ ಸಮಾರಂಭ ಶಿಕಾರಿಪುರದ ಉಳ್ಳಿ ಫೌಂಡೇಶನ್ ವತಿಯಿಂದ ಪೌರಕಾರ್ಮಿಕರ ಸಮ್ಮುಖ ನಡೆಯಿತು.

ವಿಜಯ ದಶಮಿ ಅಂಗವಾಗಿ ಶಿಕಾರಿಪುರ ಪಟ್ಟಣದ ಪ್ರಮುಖ ಬೀದಿಯಲ್ಲಿ ಭಾನುವಾರ ಸ್ಥಳೀಯ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸ್ವಯಂ ಸೇವಕರಿಂದ ಸಂಪೂರ್ಣ ಗಣವೇಷದ ಆಕರ್ಷಕ ಪಥ ಸಂಚಲನ ನಡೆಯಿತು. ತಾ.ಕಾರ್ಯವಾಹ ಮುರುಳಿ,ವೀರಣ್ಣ,ವಿಶ್ವನಾಥ್, ರಾಮಣ್ಣ ಅಂಗಡಿ, ಉಮೇಶ, ಪ್ರದೀಪ, ವಸಿಷ್ಠ, ಸತೀಶ್, ರೋಹನ್ ಇತರರು ಹಾಜರಿದ್ದರು.

ಕ್ಯಾಂಪ್‌ನಲ್ಲಿ ಶ್ರೀನಿವಾಸ ಸ್ವಾಮಿ ರಥೋತ್ಸವ

ಭದ್ರಾವತಿ: ನಗರದ ಮಿಲ್ಟ್ರಿ ಕ್ಯಾಂಪ್ ಶ್ರೀನಿವಾಸ ದೇವಸ್ಥಾನದಲ್ಲಿ ಪ್ರತಿ ವರ್ಷದಂತೆ ಈ ಬಾರಿ ಸಹ ಸ್ವಾಮಿಯ ರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆ ಯಿಂದ ಜರುಗಿತು.

ರಥೋತ್ಸವ ಅಂಗವಾಗಿ ಬೆಳಿಗ್ಗೆ ಕಲಾ ಹೋಮ, ಮೂಲ ವಿಗ್ರಹಕ್ಕೆ ವಿಶೇಷ ಅಲಂಕಾರ ಕೈಗೊಳ್ಳಲಾಗಿತ್ತು. ಉತ್ಸವ ಮೂರ್ತಿ ಮೆರವಣಿಗೆ ನಡೆಯಿತು. ನಂತರ ರಥೋತ್ಸವ ನೆರವೇರಿತು. ವಿಶೇಷ ಪೂಜೆ, ಮಹಾಮಂಗಳಾರತಿ ಸೇರಿದಂತೆ ಇನ್ನಿತರ ಧಾರ್ಮಿಕ ಆಚರಣೆಗಳು ಜರುಗಿದವು. ಮಧ್ಯಾಹ್ನ ಮಹಾಪ್ರಸಾದ ವ್ಯವಸ್ಥೆ ಕೈಗೊಳ್ಳಲಾಗಿತ್ತು.

ರಥೋತ್ಸವಕ್ಕೆ ನಗರ ವೃತ್ತ ನಿರೀಕ್ಷಕ ಶ್ರೀಶೈಲ ಕುಮಾರ್ ಚಾಲನೆ ನೀಡಿದರು. ದೇವಸ್ಥಾನದ ಪ್ರಧಾನ ಅರ್ಚಕ ಪ್ರಮೋದ್ ಕುಮಾರ್ ನೇತೃತ್ವದಲ್ಲಿ ಧಾರ್ಮಿಕ ಆಚರಣೆಗಳು ಜರುಗಿ ದವು. ಶ್ರೀಕಾಂತ್, ಅಭಿರಾಮ್, ಕೌಶಿಕ್, ಸುಬ್ರಮಣ್ಯ, ಕೃಷ್ಣಪ್ಪ, ಪ್ರದೀಪ್, ಮಲ್ಲಿಕಾರ್ಜುನ್, ಸಂತೋಷ್, ರಮಾಕಾಂತ್, ನರಸಿಂಹಚಾರ್ ಸೇರಿದಂತೆ ಇನ್ನಿತರರನ್ನೊಳಗೊಂಡ ತಂಡ ಧಾರ್ಮಿಕ ಕಾರ್ಯಗಳಲ್ಲಿ ಪಾಲ್ಗೊಂಡಿತ್ತು. ಉಪತಹಸೀಲ್ದಾರ್ ಮಂಜಾನಾಯ್ಕ, ಕಂದಾಯ ನಿರೀಕ್ಷಕ ಪ್ರಶಾಂತ್ ಸೇರಿದಂತೆ ವಿವಿಧ ನಗರದ ವಿವಿಧೆಡೆಗಳಿಂದ ಸಾವಿರಾರರು ಭಕ್ತಾಧಿಗಳು ರಥೋತ್ಸವ ಕಣ್ಣುಂಬಿಕೊಳ್ಳುವ ಮೂಲಕ ಸ್ವಾಮಿಯ ಕೃಪೆಗೆ ಪಾತ್ರರಾದರು.



ಉದ್ಯೋಗಾಧಾರಿತ ಕೌಶಲದಿಂದ ಉತ್ತಮ ಭವಿಷ್ಯ

ಶಿವಮೊಗ್ಗ: ಉದ್ಯೋಗಾಧಾರಿತ ಕೌಶಲ ಹೊಂದುವುದ ರಿಂದ ಉತ್ತಮ ಭವಿಷ್ಯ ರೂಪಿಸಿಕೊಳ್ಳಬಹುದಾಗಿದೆ ಎಂದು ಲೋಕಸಭಾ ಸದಸ್ಯ ಬಿ.ವೈ.ರಾಘವೇಂದ್ರ ಹೇಳಿದರು.

ನೊಳಂಬ ಲಿಂಗಾಯತ ಸಮಾಜದ ನಂದಿ ವಿದ್ಯಾಸಂಸ್ಥೆಯಿಂದ ನಗರದ ಸರಕಾರಿ ನೌಕರರ ಭವನದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಓದಿನಲ್ಲಿ ಹೆಚ್ಚಿನ ಅಂಕಗಳಿಸಿಕೊಳ್ಳುವುದು ಒಂದು ಭಾಗವಾದರೆ ಅದಕ್ಕಿಂತಮುಖ್ಯವಾದದ್ದು ಕೌಶಲ. ಇಂದು ಸ್ಪರ್ಧಾತ್ಮಕ ಯುಕಗದಲ್ಲಿ ಕೌಶಲವಿದ್ದರೆ ಯಾವ ಹಂತಕ್ಕೆ ಬೇಕಾದರೂ ಬೆಳೆಯಬಹುದಾಗಿದೆ. ಇಂದಿನ ಯುವ ಪೀಳಿಗೆಗೆ ಉದ್ಯೋಗಕ್ಕೆ ಅವಕಾಶಗಳಿವೆ. ಆದರೆ ಅವುಗಳನ್ನು ಬಳಕೆ ಮಾಡಿಕೊಳ್ಳುವಲ್ಲಿ ವಿಲರಾಗುತ್ತಿದ್ದಾರೆ ಎಂದರು.

ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ಬರುವವರಲ್ಲಿಯೂ ಕೌಶಲದ ಕೊರತೆ ಇದೆ ಎಂದ ಅವರು,ತಮ್ಮ ವಿದ್ಯಾಸಂಸ್ಥೆಯಲ್ಲಿಯೇ 18 ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿತ್ತು. 500ಕ್ಕೂ ಅರ್ಜಿಗಳು ಬಂದಿದ್ದವು. ಕೆಲವರು ಐಟಿ ಕಂಪನಿಗಳನ್ನೂ ತೊರೆದು ಬರುವುದಕ್ಕೆ ಸಿದ್ಧರಾಗಿದ್ದರು. ಆದರೆ ವೃತ್ತಿಗೆ ಬೇಕಾದ ಕೌಶಲ ಅವರಲ್ಲಿ ಇರಲಿಲ್ಲ ಎಂದರು.

ದೇಶದಲ್ಲಿ ಶೇ.75ಕ್ಕಿಂತ ಮೇಲ್ಪಟ್ಟು ಕೃಷಿ ಆಧಾರಿತ ಉದ್ಯೋಗಾವಕಾಶಗಳಿವೆ. ಹಣ ಇದ್ದವರು ಶಕ್ತಿವಂತರು ಎಂಬ ಕಾಲವೊಂದಿತ್ತು. ಈಗ ಅದು ಜ್ಞಾನ ಇದ್ದವರು ಶಕ್ತಿವಂತರು ಎಂಬಂತಾಗಿದೆ. ಶಿವಮೊಗ್ಗ ಜಿಲ್ಲೆಯು ಮಧ್ಯ ಕರ್ನಾಟಕ ಭಾಗದಲ್ಲಿ ಅತಿ ವೇಗವಾಗಿ ಬೆಳೆಯುತ್ತಿದ್ದು ಈಗಾಗಲೇ ವೈದ್ಯಕೀಯ ಕಾಲೇಜು, ಆಯುರ್ವೇದ ಕಾಲೇಜು, ಪಶು ಮಹಾವಿದ್ಯಾಲಯ, ರಾಷ್ಟ್ರೀಯ ರಕ್ಷಾ ವಿವಿ ಒಳಗೊಂಡಂತೆ ಶೈಕ್ಷಣಿಕ ಹಬ್ ಆಗಿ ಬದಲಾಗಿದೆ. ಈ ಮೂಲಕ ಉದ್ಯೋಗಕ್ಕೂ ಅವಕಾಶಗಳು ಹೆಚ್ಚಾಗಿವೆ ಎಂದರು.

ದಾವಣಗೆರೆ ಜಿಲ್ಲೆಯ ಬೃಹನ್ಮಠ ನಂದಿಗುಡಿ ಮಠದ ಸಿದ್ದರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ನಂದಿ ವಿದ್ಯಾಸಂಸ್ಥೆ ಅಧ್ಯಕ್ಷ ಡಿ.ಬಿ.ಶಂಕರಪ್ಪ ಅಧ್ಯಕ್ಷತೆ ವಹಿಸಿದ್ದರು. ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ರುದ್ರಮುನಿ ಸಜ್ಜನ್, ಕಸಾಪ ದಾವಣಗೆರೆ ತಾಲೂಕು ಅಧ್ಯಕ್ಷೆ ಜೆ.ಸುಮತಿ ಮತ್ತಿತರರು ಇದ್ದರು.

ಮೊಬೈಲ್ ಗೀಳಿಗೆ ಒಳಗಾಗುತ್ತಿರುವ ಮಕ್ಕಳು

ಮೊಬೈಲನ್ನು ಮಕ್ಕಳು ಓದಿಗೆ ಮಾತ್ರ ಬಳಕೆ ಮಾಡಿಕೊಳ್ಳದೆ ಇತರೆ ಉದ್ದೇಶಕ್ಕೂ ಬಳಕೆ ಮಾಡಿಕೊಳ್ಳುವ ಮೂಲಕ ಮೊಬೈಲ್ ಗೀಳಿಗೆ ಒಳಗಾಗುತ್ತಿದ್ದಾರೆ. ಅವರಿಗೆ ಆಟ-ಪಾಠ, ಸಹಪಾಠಿಗಳು ಬೇಕಿಲ್ಲ. ಸಾರ್ವಜನಿಕ ಸಭೆ, ಧಾರ್ಮಿಕ ಸಮಾರಂಭಗಳಲ್ಲಿ ಪಾಲ್ಗೊಳ್ಳುವ ಮನಸ್ಥಿತಿ ಕಡಿಮೆ ಆಗುತ್ತಿದೆ. ಇದರಿಂದ ಹೊರ ಬರಲು ಪೋಷಕರು ಮಕ್ಕಳಿಗೆ ಇತರೆ ಚಟುವಡಿಕೆಗಳ ಬಗ್ಗೆಯೂ ತಿಳಿಸಬೇಕಿದೆ ಎಂದು ಸಂಸದ ರಾಘವೇಂದ್ರ ಹೇಳಿದರು.

ಬೇಗೂರು ತಾಂಡಾ: ಬನ್ನಿ ಕಾರ್ಯಕ್ರಮ

ಶಿಕಾರಿಪುರ: ದೇವಿ ಕೃಪೆಯಿಂದ ಮಳೆ ಸಮೃದ್ದಿಯಾಗಿದ್ದು ಇದರಿಂದ ಎಲ್ಲೆಡೆ ಹಸಿರು ಕಂಗೊಳಿಸುತ್ತಾ ಬೆಳೆ ಫಸಲು ಸಹ ಸಮೃದ್ಧವಾಗಿ ರೈತರ ಮುಖದಲ್ಲಿ ಮಂದಹಾಸ ಮೂಡಿದೆ ನಾಡಿನಾದ್ಯಂತ ಮಳೆ ಬೆಳೆ ಮೂಲಕ ಸಕಲರ ನೆಮ್ಮದಿಗೆ ನಾಡದೇವತೆಯ ಕೃಪಾ ಕಟಾಕ್ಷದಿಂದ ಮಾತ್ರ ಸುಭಿಕ್ಷೆಯಿಂದಿರಲು ಸಾಧ್ಯ ಎಂದು ಕ್ಷೇತ್ರದ ಶಾಸಕ ಬಿ.ವೈ.ವಿಜಯೇಂದ್ರ ತಿಳಿಸಿದರು. ಶನಿವಾರ ತಾಲೂಕಿನ ಬೇಗೂರು ಗ್ರಾಮದ ಮರಡಿ ತಾಂಡಾ ಬಳಿಯ ಬನ್ನಿಮಂಟಪದಲ್ಲಿ ತಾಲೂಕು ಆಡಳಿತ,ಮತ್ತು ಬೇಗೂರು ಗ್ರಾ.ಪಂ,ವಿವಿಧ ದೇವಸ್ಥಾನಗಳ ಉಸ್ತುವಾರಿ ಸಮಿತಿ ವತಿಯಿಂದ ದಸರಾ ಮಹೋತ್ಸವದ ಅಂಗವಾಗಿ ನಡೆದ ಸಾಂಪ್ರದಾಯಿಕ ಬನ್ನಿ ಮುಡಿಯುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಎಲ್ಲೆಡೆ ಹಸಿರು ಕಂಗೊಳಿಸುತ್ತಿದ್ದು ಮಳೆ ಬೆಳೆಯಿಂದ ನಾಡು ಸಮೃದ್ದತೆಯ ಲಕ್ಷಣದಿಂದ ಸಕಲರಲ್ಲಿ ನೆಮ್ಮದಿ ವಾತಾವರಣ ನಿರ್ಮಾಣವಾಗಿದೆ ಎಂದು ಸಂತಸ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಶಿಕಾರಿಪುರದ ಪ್ರಸಿದ್ಧ ಶ್ರೀಹುಚ್ಚುರಾಯಸ್ವಾಮಿ, ಗಿಡ್ಡಯ್ಯಸ್ವಾಮಿ, ಹುಲಿಕಂಠಪ್ಪದೇವರು, ಮಾರಮ್ಮ ದೇವಿ, ಬೇಗೂರಿನ ಆಂಜನೇಯಸ್ವಾಮಿ, ಮಾರಮ್ಮದೇವಿ, ದುರ್ಗಮ್ಮ ದೇವಿ, ಬೆಂಡೆಕಟ್ಟೆಯ ಶ್ರೀಬಸವೇಶ್ವರ ದೇವರು, ಅಪಿನಕಟ್ಟೆಯ ಬಸವಣ್ಣ, ಬಾಳೆಕೊಪ್ಪದ ಹನುಮಂತ ದೇವರು ಅಲಂಕೃತ ಪಲ್ಲಕ್ಕಿಯಲ್ಲಿ ನೂರಾರು ಭಕ್ತರ ಜಯಘೋಷದೊಂದಿಗೆ ಆಗಮಿಸಿ ಕಾರ್ಯಕ್ರಮಕ್ಕೆ ಸಾಕ್ಷಿಯಾಗಿತ್ತು.

ಆರ್‌ಎಸ್‌ಎಸ್‌ಗೆ ಶತಮಾನ, ಪಥ ಸಂಚಲನ

ಸೊರಬ: ವಿಜಯದಶಮಿ ಅಂಗವಾಗಿ ಹಾಗೂ ಆರ್‌ಎಸ್‌ಎಸ್ ಸ್ಥಾಪನೆಯಾಗಿ ಶತಮಾನ ಪೂರೈಸಿದ ಹಿನ್ನೆಲೆ ಪಟ್ಟಣದಲ್ಲಿ ಶನಿವಾರ ಸಂಘದ ಸ್ವಯಂ ಸೇವಕರಿಂದ ಪಥ ಸಂಚಲನ ನಡೆಸಲಾಯಿತು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಸೇವಕರು ಆಕರ್ಷಕ ಹಾಗೂ ಶಿಸ್ತುಬದ್ಧವಾಗಿ ಪಥಸಂಚಲನ ನಡೆ ಸುವ ಮೂಲಕ ಸಂಚಲನ ಮೂಡಿಸಿದರು.

ಜನರಲ್ಲಿ ರಾಷ್ಟ್ರಪ್ರೇಮ ಮೂಡಿಸುವ ಉದ್ದೇಶದಿಂದ ನಡೆಸಲಾದ ಪಥಸಂಚಲನದಲ್ಲಿ ಸುಮಾರು 200ಕ್ಕೂ ಅಧಿಕ ಸ್ವಯಂ ಸೇವಕರು ಭಾಗಿಯಾಗಿದ್ದರು. ಚಿಕ್ಕ ಮಕ್ಕಳು ಸಹ ಪಾಲ್ಗೊಂಡಿದ್ದು ವಿಶೇಷವಾಗಿತ್ತು. ಚಾಮರಾಜಪೇಟೆಯ ಕಾನುಕೇರಿ ಮಠದಿಂದ ಆರಂಭವಾದ ಪಥ ಸಂಚಲನ ಶ್ರೀರಂಗನಾಥ ದೇವಸ್ಥಾನ, ಚಿಕ್ಕಪೇಟೆ, ನಾಮದೇವ ಗಲ್ಲಿ, ಮುಖ್ಯರಸ್ತೆ ಮಾರ್ಗವಾಗಿ ಖಾಸಗಿ ಬಸ್ ನಿಲ್ದಾಣ ವೃತ್ತ ಪುನಃ ಚಾಮರಾಜಪೇಟೆ ಮಾರ್ಗವಾಗಿ ಕಾನುಕೇರಿ ಮಠದ ವರೆಗೆ ನಡೆಯಿತು. ಪಥಸಂಚನ ಸಾಗುವ ಮಾರ್ಗದಲ್ಲಿ ಸಾರ್ವಜನಿಕರು ಭಾರತಮಾತೆ ಮತ್ತು ಭಗವದ್ಧ್ವಜಕ್ಕೆ ಪುಷ್ಪಾರ್ಚನೆ ಸಲ್ಲಿಸಿದರು.

ಶಿವಮೊಗ್ಗ ವಿಭಾಗ ಪ್ರಚಾರಕರಾದ ನವೀನ್ ಸುಬ್ರಹ್ಮಣ್ಯ ಬೌದ್ಧಿಕ್ ನೀಡಿ ಮಾತನಾಡಿ, ವ್ಯಕ್ತಿ ನಿರ್ಮಾಣದ ಮೂಲಕ ರಾಷ್ಟ್ರ ನಿರ್ಮಾಣ ಸಾಧ್ಯ ಎನ್ನುವ ಧ್ಯೇಯದೊಂದಿಗೆ ಆರ್‌ಎಸ್‌ಎಸ್ ಕಳೆದ ನೂರು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದೆ. ಆಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣವಾಗಿರುವುದು ದೇಶದ ಅಸ್ಮಿತೆಯ ಭಾಗವಾಗಿ ಮಾರ್ಪಟ್ಟಿದೆ ಎಂದರು.

ವಿಶ್ವವಿದ್ಯಾಲಯಗಳ ಕ್ಯಾಪಸ್‌ನಲ್ಲಿ ವಿದ್ಯಾರ್ಥಿಗಳಲ್ಲಿ ರಾಷ್ಟ್ರಪ್ರೇಮ ಮೂಡಿಸುವ ವಿದ್ಯಾರ್ಥಿ ಸಂಘಟನೆ ಎಬಿವಿಪಿಯು ಶ್ರಮಿಸುತ್ತಿದೆ ಎಂದರು. ಸಂಘ ಚಾಲಕ ನಾಗರಾಜ ಗುತ್ತಿ, ತಾಲೂಕು ಕಾರ್ಯವಾಹ ಸೋಮಣ್ಣ ಕಾರೆಕೊಪ್ಪ, ಜಿಲ್ಲಾ ಕಾರ್ಯವಾಹ ಶ್ರೀಧರ ನಿಸರಾಣಿ, ಪ್ರಮುಖರಾದ ಅಚ್ಯುತ್ ರಾವ್, ಸುಧಾಕರ್ ಭಾವೆ, ಮಹೇಶ್ ಗೋಖಲೆ, ರವಿ ಶೇಟ್, ಎಂ.ಎಸ್. ಕಾಳಿಂಗರಾಜ್, ಯೋಗೇಶ್, ರಂಗನಾಥ ಮೊಗವೀರ್, ಡಾ.ಎಚ್.ಇ. ಜ್ಞಾನೇಶ್, ಪ್ರಕಾಶ್ ತಲಕಾಲಕೊಪ್ಪ, ವೀರೇಶ್ ಮೇಸ್ತ್ರಿ, ಜಾನಕಪ್ಪ ಒಡೆಯರ್, ಲೋಕೇಶ್ ಕಕ್ಕರಸಿ, ಈಶ್ವರಪ್ಪ ಚನ್ನಪಟ್ಟಣ ಇದ್ದರು.

ಸೊರಬ ಪಟ್ಟಣದಲ್ಲಿ ವಿಜಯದಶಮಿ ಹಾಗೂ ಆರ್‌ಎಸ್‌ಎಸ್ ಸ್ಥಾಪನೆಯ ಶತಮಾನದ ಹಿನ್ನೆಲೆ ಸಂಘದ ಸ್ವಯಂಸೇವಕರು ಪಥ ಸಂಚಲನ ನಡೆಸಿದರು.

ಕುಸಿತಕ್ಕೆ ಅವೈಜ್ಞಾನಿಕ ಕಾಮಗಾರಿ ಕಾರಣ

ಚಿಕ್ಕಮಗಳೂರು: ಗುಡ್ಡ ಭೂಕುಸಿತಕ್ಕೆ ಅವೈಜ್ಞಾನಿಕ ಕಾಮಗಾರಿ, ಅಧಿಕ ಸಂಚಾರದ ಒತ್ತಡ ಕಾರಣ ಎಂದು ಜಿಯೋಲಾಜಿಕಲ್ ಸರ್ವೇ ತಂಡ ಚಿಕ್ಕಮಗಳೂರು ಜಿಲ್ಲಾಡಳಿತಕ್ಕೆ ವರದಿ ಸಲ್ಲಿಸಿ ಹಲವು ನಿಯಮ, ಕಟ್ಟುಪಾಡು ಅನುಸರಿಸಲು ಸೂಚಿಸಿದೆ. ಕೇರಳದ ವಯನಾಡಿನಲ್ಲಿ ಸಂಭವಿಸಿದ ಗುಡ್ಡ ಕುಸಿತದ ಬಳಿಕ ಎಚ್ಚೆತ್ತ ರಾಜ್ಯ ಸರಕಾರ (Karnataka Government)ಭಾಗದ ಅಪಾಯಕಾರಿ ಸ್ಥಳಗಳ ಪಟ್ಟಿ ನೀಡುವಂತೆ ಕೇಳಿತ್ತು. ಆಗಸ್ಟನಲ್ಲಿ ಚಂದ್ರದ್ರೋಣ ಪರ್ವತಗಳ ಸಾಲಿನ ಕವಿಕಲ್ ಗಂಡಿ, ಮುಳ್ಳಯ್ಯನಗಿರಿ ಮಾರ್ಗ, ಬಾಬಾ ಬುಡನ್ ಗಿರಿ ಸೇರಿದಂತೆ ಅನೇಕ ಕಡೆಗಳಲ್ಲಿ ಜಿಯೋಲಾಜಿಕಲ್ ಸರ್ವೇ ಆಫ್ ಇಂಡಿಯಾ ತಂಡ (Geological Survey Team) ಭೇಟಿ ನೀಡಿ ಪರಿಶೀಲನೆ ನಡೆಸಿತ್ತು. ಅವೈಜ್ಞಾನಿಕ ಕಾಮಗಾರಿ, ವಾಹನಗಳ ದಟ್ಟಣೆ, ಅತಿಹೆಚ್ಚು ಮಳೆ ಗುಡ್ಡ, ಭೂ ಕುಸಿತಕ್ಕೆ ಕಾರಣವಾದ ಅಂಶಗಳು ಎಂದು ಉಲ್ಲೇಖಿಸಲಾಗಿದೆ. ಮುಳ್ಳಯ್ಯನಗಿರಿ, ಚಂದ್ರದ್ರೋಣ ಪರ್ವತದ ಸಾಲು, ಚಾರ್ಮಾಡಿ ಘಾಟ್ ಅಪಾಯಕಾರಿ ವಲಯ ಆಗಿದ್ದು ಮುಳ್ಳಯ್ಯನಗಿರಿ ಚಂದ್ರದ್ರೋಣ ಪರ್ವತದ ಸಾಲುಗಳಲ್ಲಿ ವಾಹನ ದಟ್ಟನೆ,ಗುಡ್ಡ, ಭೂ ಕುಸಿತಕ್ಕೆ ಅವೈಜ್ಞಾನಿಕ ಕಾಮಗಾರಿ. ಪರ್ವತದ ಸಾಲುಗಳಲ್ಲಿ ವಾಹನ ದಟ್ಟನೆ ನಿಲ್ಲಿಸುವಂತೆ ಜಿಲ್ಲಾಡಳಿತಕ್ಕೆ ಸೂಚನೆ ನೀಡಿದೆ.

ಸಮಾಚಾರ ಸಣ್ಣದಲ್ಲ

ಐದು ವರ್ಷ ಪೂರ್ಣ ಸಿದ್ದರಾಮಯ್ಯ ಸಿಎಂ

ವಿಜಯಪುರ: ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದರು. ಮುಖ್ಯಮಂತ್ರಿಯಾಗಿದ್ದಾರೆ, ಮುಖ್ಯಮಂತ್ರಿ ಆಗಿ ಮುಂದುವರಿಯುತ್ತಾರೆ. 5 ವರ್ಷ ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿ ಎಂದು ಸಚಿವ ಡಾ. ಎಂ ಬಿ. ಪಾಟೀಲ ವಿಶ್ವಾಸ ವ್ಯಕ್ತಪಡಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಕೆಲ ನಾಯಕರ ಅಭಿಮಾನಿಗಳು ಅವರ ನಾಯಕರು ಸಿಎಂ ಆಗಲಿ ಎಂದು ಘೋಷಣೆ ಕೂಗುತ್ತಾರೆ. ಹಾಗೇ ಘೋಷಣೆ ಕೂಗುವುದರಲ್ಲಿ ತಪ್ಪೆನಿಲ್ಲ ಎಂದರು. ಬಿಜೆಪಿ ಪಕ್ಷದಿಂದ ಮತ್ತೊಂದು ಸುತ್ತಿನ ಹೋರಾಟ ವಿಚಾರವಾಗಿ ಸಚಿವರು ಪ್ರತಿಕ್ರಿಯಿಸಿ, ಬಿಜೆಪಿಯವರಿಗೆ ತಮ್ಮಲ್ಲೆ ನೆಲೆ ಇಲ್ಲ. ಬಿಜೆಪಿಯಲ್ಲಿ 20 ಗುಂಪುಗಳಿವೆ. ಮೊದಲು ತಮ್ಮ ಮನೆ ಸರಿಪಡಿಸಿಕೊಳ್ಳಲಿ ಬೇರೆಯವರದ್ದೇನು ನೋಡುತ್ತಾರೆ. 40% ಭ್ರಷ್ಟಾಚಾರದಿಂದ ಜನರು ಅವರನ್ನು ಕಿತ್ತೆಸೆದಿದ್ದಾರೆ. ಬಿಜೆಪಿಯಲ್ಲಿ ಹೊಂದಾಣಿಕೆ ಇಲ್ಲ ಎಂದು ಕಿಡಿಕಾರಿದರು.

ಎತ್ತಿನಗಾಡಿ ಓಡಿಸುವ ಸ್ಪರ್ಧೆ: ಇಬ್ಬರಿಗೆ ಗಾಯ

ವಿಜಯನಗರ: ವಿಜಯದಶಮಿ ನಿಮಿತ್ತ ವಿಜಯನಗರ ಜಿಲ್ಲೆಯಲ್ಲಿ ಹಮ್ಮಿಕೊಂಡಿದ್ದ ಬೆಲ್ಲದ ಬಂಡಿ ಉತ್ಸವದ ವೇಳೆ ನಡೆದ ಎತ್ತಿನಬಂಡಿ ಓಡಿಸುವ ಸ್ಪರ್ಧೆಯಲ್ಲಿ ಇಬ್ಬರು ಗಾಯಗೊಂಡಿದ್ದಾರೆ. ಹರಪನಹಳ್ಳಿ ತಾಲೂಕಿನ ಅರಸೀಕೆರೆ ಗ್ರಾಮದ ಬೆಲ್ಲದ ಬಂಡಿ ಉತ್ಸವದಲ್ಲಿ ಎತ್ತಿನಬಂಡಿನ ಓಡಿಸುವ ಸ್ಪರ್ಧೆಯೇ ಪ್ರಮುಖ ಆಕರ್ಷಣೆ. ರಭಸದಿಂದ ಓಡುವ ಎತ್ತಿನಬಂಡಿಯೊಂದಿಗೆ ಊರಿನ ಜನರೂ ಓಡುವುದು ಸಾಮಾನ್ಯ. ಇದೇ ರೀತಿ ಶನಿವಾರ ಬಂಡಿಯಿಂದ ಕೆಳಕ್ಕೆ ಬಿದ್ದು ಒಬ್ಬರು ಗಾಯಗೊಂಡಿದ್ದು, ಅಪಾಯದಿಂದ ಪಾರಾಗಿದ್ದಾರೆ ಎಂಬ ಮಾಹಿತಿಯಿದೆ. ಇದೇ ಸ್ಪರ್ಧೆಯಲ್ಲಿ ಇನ್ನೊಬ್ಬ ಯುವಕ ಕೂಡಾ ಬಿದ್ದಿದ್ದು ಹೆಚ್ಚಿನ ಪ್ರಮಾಣದ ಗಾಯಗಳಾಗಿವೆ. ಬಂಡಿಯ ಎದುರಿನಿಂದ ಓಡುತ್ತಿದ್ದಾಗ ಹಿಂದಿನಿಂದ ಎತ್ತಿನಬಂಡಿಯಲ್ಲಿದ್ದ ಕಂಬ ಗುದ್ದಿದೆ. ಪರಿಣಾಮ ಹಾರಿಬಿದ್ದ ಆತನ ಮೈ ಮೇಲೆಯೇ ಎತ್ತು ಹಾರಿಹೋಗಿದೆ. ಗಾಯಾಳು ಅಪಾಯದಿಂದ ಪಾರಾಗಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ.

ಯುವಕನ ಮೇಲೆ ಗುಂಡು ಹಾರಿಸಿ ಹತ್ಯೆಗೆ ಯತ್ನ

ಮಂಡ್ಯ: ಪಾಂಡವಪುರ ತಾಲೂಕಿನ ಶಂಭೂವಿನಹಳ್ಳಿ ಗ್ರಾಮದಲ್ಲಿ ಭಾನುವಾರ ಬೆಳ್ಳಂಬೆಳಗ್ಗೆ ಗುಂಡಿನ ಸದ್ದು ಕೇಳಿಸಿದೆ. ಪತ್ನಿ ಜೊತೆ ಅಕ್ರಮ ಸಂಬಂಧ ಆರೋಪದ ಮೇಲೆ ಯುವಕನ ಮೇಲೆ ಗನ್ ನಿಂದ ಗುಂಡು ಹಾರಿಸಿ ಹತ್ಯೆಗೆ ಯತ್ನಿಸಿರುವ ಘಟನೆ ನಡೆದಿದೆ. ಮಂಜು(29) ಗುಂಡೇಟು ದಾಳಿಯಿಂದ ಗಾಯಗೊಂಡ ಯುವಕ. ಶಿವರಾಜು(37) ಗುಂಡು ಹಾರಿಸಿದ ಆರೋಪಿಯಾಗಿದೆ. ಶಿವರಾಜು ಭಾನುವಾರ ಬೆಳಗ್ಗೆ 9 ಗಂಟೆ ಸುಮಾರಿಗೆ ಮನೆಯ ಮುಂದೆ ಸ್ನೇಹಿತರೊಂದಿಗೆ ಕುಳಿತಿದ್ದ ಮಂಜು ಮೇಲೆ ಏಕಾಏಕಿ ಪಿಸ್ತೂಲ್ನಿಂದ ಎರಡು ಬಾರಿ ಗುಂಡು ಹಾರಿಸಿದ್ದು, ಎರಡನೇ ಗುಂಡು ಹಣೆ ಭಾಗಕ್ಕೆ ತಗುಲಿದೆ. ಈ ವೇಳೆ ಮಂಜು ಸ್ನೇಹಿತರು ಹಾಗೂ ಸ್ಥಳೀಯರು ಶಿವರಾಜುನನ್ನು ಕಟ್ಟಿಹಾಕಿದ್ದಾರೆ. ಗಾಯಗೊಂಡಿದ್ದ ಮಂಜುನನ್ನು ಮೈಸೂರಿನ ಕೆ.ಆರ್. ಆಸ್ಪತ್ರೆಗೆ ದಾಖಲು ಮಾಡಲಾಗಿದೆ ಪೊಲೀಸರು ತಿಳಿಸಿದ್ದಾರೆ.

ರೈಲ್ವೆ ದುರಂತ: ದುಷ್ಕೃತ್ಯದ ಶಂಕೆ

← ಮೊದಲಪುಟದಿಂದ

ಉತ್ತರಾಖಂಡ: ಹಳಿಯಲ್ಲಿ ಸಿಲಿಂಡರ್: ಕಳೆದ ಕೆಲ ದಿನಗಳಿಂದ ಉತ್ತರ ಪ್ರದೇಶ, ಮಧ್ಯಪ್ರದೇಶ, ರಾಜಸ್ಥಾನ ಮೊದಲಾದ ರಾಜ್ಯಗಳಲ್ಲಿ ಹಳಿಗಳ ಮೇಲೆ ಅನಿಲ ಸಿಲಿಂಡರ್ ಇಟ್ಟು ರೈಲು ಸ್ಫೋಟಿಸಲು ದುಷ್ಕರ್ಮಿಗಳು ಸಂಚು ನಡೆಸಿದಂತೆ ಉತ್ತರಾಖಂಡದಲ್ಲೂ ಇಂತಹದೇ ಘಟನೆ ನಡೆದಿದೆ. ಉತ್ತರಾಖಂಡದ ಧಂಧೇರಾ ಬಳಿಯ ರೈಲ್ವೆ ಹಳಿಯಲ್ಲಿ ಭಾನುವಾರ ಬೆಳಗ್ಗೆ ಖಾಲಿ ಸಿಲಿಂಡರ್ ಪತ್ತೆಯಾಗಿದೆ. ರೈಲಿನ ಹಳಿ ತಪ್ಪಿಸಿ ಭಾರಿ ಅಪಘಾತ ನಡೆಸಲು ನಡೆದ ಷಡ್ಯಂತ್ರ ಇದೆಂದು ಅಧಿಕಾರಿಗಳು ಶಂಕಿಸಿದ್ದಾರೆ

{ಬಸವರಾಜ ಬೊಮ್ಮಾಯಿ} ಸಂಸದ

ರಾಜ್ಯ ಸರಕಾರ ತಮ್ಮ ರಕ್ಷಣೆ ಮಾಡಿಕೊಳ್ಳದಂತಹ ಪರಿಸ್ಥಿತಿಗೆ ಬಂದಿದೆ. ನನ್ನ ಪ್ರಕಾರ ಕಾನೂನು ಸುವ್ಯವಸ್ಥೆ ಕಿತ್ತು ಹೋಗಿದೆ. ಈ ಥರ ಒಂದು ಕಾನೂನಾತ್ಮಕ ಚಿಂತನೆಯನ್ನೂ ರಾಜ್ಯ ಸರಕಾರ ಕಳೆದುಕೊಂಡಿದೆಯಲ್ಲ ಎಂದು ವಿಷಾದವೆನಿಸುತ್ತಿದೆ. ತಮ್ಮ ತಪ್ಪು ಹಾಗೂ ಹಗರಣ ಮುಚ್ಚಿಕೊಳ್ಳಲು ಈ ರೀತಿಯ ಆತುರದ ತೀರ್ಮಾನ ತೆಗೆದುಕೊಂಡಿದ್ದಾರೆ.

ಹತ್ತಾರು ವೇದಿಕೆ | ನೂರಾರು ಕಾರ್ಯಕ್ರಮ | ಸಾವಿರಾರು ಕಲಾವಿದರ ಸಮಾಗಮ | ಪ್ರೇಕ್ಷಕರ ಸಂಭ್ರಮ

2024ರ ದಸರಾ ಸುಖಾಂತ್ಯ

ಕೆ.ಜೆ.ಲೋಕೇಶ್ ಬಾಬು, ಮೈಸೂರು

ಕಳೆದ ಒಂದೂವರೆ ತಿಂಗಳ ಹಿಂದೆ ಆರಂಭಗೊಂಡ ದಸರಾ ಮಹೋತ್ಸವ ಕುರಿತಾದ ಭರದ ಸಿದ್ಧತೆ, ಅ.13ರ ಶನಿವಾರ ನಡೆದ ಯಶಸ್ವಿ ಜಂಬೂಸವಾರಿಯೊಂದಿಗೆ ಸಾರ್ಥಕತೆ ಕಂಡಿದೆ. ಈ ಮೂಲಕ 2024ನೇ ಸಾಲಿನ ದಸರಾ ಮಹೋತ್ಸವ ಸುಖಾಂತ್ಯವಾಯಿತು.

ಅ.3ರ ಗುರುವಾರ ಬೆಳಗ್ಗೆ ನಾಡಿನ ಆದಿದೇವತೆ ತಾಯಿ ಚಾಮುಂಡೇಶ್ವರಿಯ ಸನ್ನಿಧಿಯಲ್ಲಿ ವಿಧ್ಯುಕ್ತ ಚಾಲನೆ ದೊರೆಯಿತು.ಅದಕ್ಕಾಗಿ ಇಡೀ ಮೈಸೂರು ನಗರ ನವವಧುವಿನಂತೆ ಸಿಂಗಾರಗೊಂಡಿತ್ತು. ಮಾತ್ರವಲ್ಲ, 19 ಉಪಸಮಿತಿಗಳು ತಮ್ಮ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಿದ್ದವು.

ಅಕ್ಟೋಬರ್ 3ರಂದು ಬೆಳಗ್ಗೆ 9.15 ರಿಂದ 9:45ರ ವರೆಗಿನ ವೃಶ್ಚಿಕ ಲಗ್ನದಲ್ಲಿ ನಾಡಿನ ಹಿರಿಯ ಸಾಹಿತಿ, ನಾಡೋಜ ಡಾ. ಹಂಪಾ ನಾಗರಾಜಯ್ಯ ಅವರು ಚಾಮುಂಡಿ ಬೆಟ್ಟದಲ್ಲಿ ಬೆಳ್ಳಿರಥದಲ್ಲಿ ವಿರಾಜಮಾನಳಾಗಿದ್ದ ತಾಯಿ ಚಾಮುಂಡೇಶ್ವರಿಗೆ ಪುಷ್ಪಾರ್ಚನೆ ಮಾಡುವ ಮುಖೇನ 2024ರ ದಸರಾ ಮಹೋತ್ಸವಕ್ಕೆ ನಾಂದಿ ಹಾಡಿದ್ದರು.

ವ್ಯಾಪಕ ಬಂದೋಬಸ್ತ್: ಅ.3ರಿಂದ 9ರವರೆಗೆ ಮೊದಲ ಹಂತದ ಬಂದೋಬಸ್ತ್ ನಲ್ಲಿ 16 ಎಸ್ಪಿ, 599 ಇತರೆ ಅಧಿಕಾರಿಗಳು, 2391 ಸಿಬ್ಬಂದಿ ಸೇರಿ ಒಟ್ಟು 2996 ಸಿಬ್ಬಂದಿಯನ್ನು ಭದ್ರತಾ ಕರ್ತವ್ಯ ನಿರ್ವಹಿಸಿದರು.

ಜಾವಾ ಬೈಕ್ ಸವಾರಿ: ರಂಗಚಾರ್ಲು ಪುರಭವನ ಆವರಣದಲ್ಲಿ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಹಾಗೂ ಪ್ರವಾಸೋದ್ಯಮ ಇಲಾಖೆ ವತಿಯಿಂದ ಪಾರಂಪರಿಕ ಜಾವಾ ಮೋಟಾರ್ ಬೈಕ್ ಸವಾರಿಗೆ ಚಾಲನೆ ನೀಡಲಾಯಿತು.

ರೈತ ದಸರಾ

ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ ಆವರಣದಿಂದ ರೈತ ದಸರಾ ಮೆರವಣಿಗೆಗೆ ಚಾಲನೆ ನೀಡಲಾಯಿತು. ಮೆರವಣಿಗೆಯಲ್ಲಿ ಹೊಸ ಹೊಸ ಕೃಷಿತಂತ್ರಜ್ಞಾನಗಳಾದ ಡ್ರೋನ್-2 (ಕೃಷಿ ಔಷದ ಸಿಂಪಡಣಾ ಡ್ರೋನ್), ಕಬ್ಬು ಕಟಾವು ಯಂತ್ರ, ಕಬ್ಬು ನಾಟಿಯಂತ್ರ, ಬೂಮ್ ಸ್ಪ್ರೇರ್, ಕಂಬೈಂಡ್, ಹಾರ್ವೆಸ್ಟರ್, ಮಿನಿ ಕಾರ್ಟ್, ಬಯೋಜಾರ್ ಯಂತ್ರ, ಅರಣ್ಯ ಇಲಾಖೆಯ ಸ್ತಬ್ಧಚಿತ್ರ, ತೋಟಗಾರಿಕೆ ಇಲಾಖೆಯ ಹೊಸಹೊಸ ತಂತ್ರಜ್ಞಾನಗಳನ್ನೊಳಗೊಂಡ ಸ್ತಬ್ಧಚಿತ್ರಗಳನ್ನು ಪ್ರದರ್ಶಿಸಲಾಯಿತು.

ಸಿನಿ ಛಾಯಾಚಿತ್ರ ಪ್ರದರ್ಶನ: ದಸರಾ ಚಲನಚಿತ್ರೋತ್ಸವ ಸಂಬಂಧ ಮಾಲ್ ಆಫ್ ಮೈಸೂರಿನ ಐನಾಕ್ಸ್ ಚಿತ್ರಮಂದಿರದ ಹೊರ ಆವರಣದಲ್ಲಿ ಕನ್ನಡ ಸಿನಿಮಾ ಬೆಳೆದು ಬಂದ ಹಾದಿ ಸಿನಿ ಛಾಯಾಚಿತ್ರ ಪ್ರದರ್ಶನ ನಡೆಯಿತು.

ಆಕರ್ಷಕ ಕುಸ್ತಿ ಪಂದ್ಯ

ಈ ಸಾಲಿನ ದಸರಾ ಕುಸ್ತಿ ಪಂದ್ಯಾವಳಿಯಲ್ಲಿ ಪೈ. ಗಿರೀಶ್ ಗೆ 'ದಸರಾ ಕುಮಾರ', ಶಿವಯ್ಯ ಪೂಜಾರಿ ದಸರಾ ಕಂಠೀರವ, ಪೈ.ಸದಾಶಿವಗೆ 'ದಸರಾ ಕೇಸರಿ', ಕೊರವರ ಸಂಜೀವ್ ಗೆ 'ದಸರಾ ಕಿಶೋರ' ಹಾಗೂ ಪೈ.ಶಾಲಿನಾ ಸಿದ್ದಿಗೆ ದಸರಾ ಕಿಶೋರಿ ಪ್ರಶಸ್ತಿ ಒಲಿಯಿತು.

ಯುವ ದಸರಾ: ಯುವವರ್ಗವನ್ನು ರಂಜಿಸುವ ಯುವ ದಸರಾ ಮೈಸೂರು ಹೊರವಲಯದ ಉತ್ತನಹಳ್ಳಿ ಬಳಿ ನಡೆಯಿತು. ಕಾರ್ಯಕ್ರಮದ ಭದ್ರತೆಗಾಗಿ 1239 ಸಿಬ್ಬಂದಿ ಕಾರ್ಯ ನಿರ್ವಹಿಸಿದರು. ಶ್ರೇಯಾ ಘೋಷಾಲ್, ರವಿ ಬಸ್ರೂರು, ಎ.ಆರ್.ರೆಹಮಾನ್, ಬಾದ್ ಷಾ, ಇಳಯರಾಜಾ ಸೇರಿದಂತೆ ಪ್ರಮುಖ ಕಲಾವಿದರು ಪ್ರದರ್ಶನ ನೀಡಿದರು.

ಕೃಷಿ ವಸ್ತು ಪ್ರದರ್ಶನ: ದಸರಾ ಪ್ರಯುಕ್ತ ನಗರದ ಜೆ.ಕೆ. ಮೈದಾನದಲ್ಲಿ ಆಯೋಜಿಸಲಾಗಿದ್ದ ಕೃಷಿ ವಸ್ತು ಪ್ರದರ್ಶನದಲ್ಲಿ ಸಮಗ್ರ ಕೃಷಿ ಪದ್ಧತಿ, ಆಧುನಿಕ ರೆಂಬೆ ಪದ್ಧತಿ, ರೇಷ್ಮೆ ನೂಲು ಬಿಚ್ಚಾಣಿಕೆ, ರೇಷ್ಮೆಗೂಡಿನಿಂದ ಕರಕುಶಲ ವಸ್ತುಗಳು, ರೇಷ್ಮೆ ಕೃಷಿ ಉಪಕರಣಗಳು, ಕಬ್ಬಿನ ಗಾಣ, ಸಾವಯವ ಗೊಬ್ಬರ, ಕೃಷಿ ಅರಣ್ಯೀಕರಣ, ಕೃಷಿ ಯಂತ್ರೋಪಕರಣ, ನ್ಯಾನೋ ರಸ ಗೊಬ್ಬರಗಳು,ವಿವಿಧ ದೇಸಿ ತಳಿ ಜಾನುವಾರುಗಳು ಸೇರಿದಂತೆ ಇನ್ನೂ ಅನೇಕ ಕೃಷಿ ಸಂಬಂಧಿತ ಉತ್ಪನ್ನಗಳ ಮಳಿಗಳನ್ನು ಸ್ಥಾಪಿಸಲಾಗಿತ್ತು.

ದಸರಾ ಯೋಗಾಸನ ಸ್ಪರ್ಧೆ: ದಸರಾ ವಸ್ತು ಪ್ರದರ್ಶನ ಆವರಣದಲ್ಲಿನ ಪಿ. ಕಾಳಿಂಗರಾವ್ ಸಭಾಂಗಣದಲ್ಲಿ ರಾಜ್ಯಮಟ್ಟದ ದಸರಾ ಯೋಗಾಸನ ಸ್ಪರ್ಧೆ ನಡೆಯಿತು. ಯೋಗಾಸನ ಸ್ಪರ್ಧೆಯಲ್ಲಿ 2000 ಸಾವಿರಕ್ಕೂ ಅಧಿಕ ಯೋಗಪಟುಗಳು ಭಾಗವಹಿಸಿದ್ದರು. ವಿಶೇಷ ಚೇತನ ಮಕ್ಕಳು, ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಆಸನಗಳನ್ನು ಪ್ರದರ್ಶಿಸಿ ಮೆಚ್ಚುಗೆ ಗಳಿಸಿದರು.

ಪಾರಂಪರಿಕ ಟಾಂಗಾ ಸವಾರಿ: ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ವತಿಯಿಂದ ರಂಗಚಾರ್ಲು ಪುರಭವನದ ಆವರಣದಲ್ಲಿ ನಡೆದ ಪಾರಂಪರಿಕ ಉಡುಗೆಯಲ್ಲಿ ದಂಪತಿಗಳಿಗೆ ಟಾಂಗಾ ಸವಾರಿಯನ್ನು ಜೋಡಿಗಳಿಗೆ ಭಾಗಿನ ಕೊಡುವ ಮೂಲಕ ಪ್ರಾರಂಭಿಸಲಾಯಿತು. ಪಾರಂಪಾರಿಕ ಉಡುಗೆ ತೊಟ್ಟ ದಂಪತಿಗಳು, ಮೈಸೂರು ಪೇಟ, ರೇಷ್ಮೆ ಸೀರೆ ತೊಟ್ಟ ದಂಪತಿಗಳು ಹಾಗೂ ಕಿರಿಯ ವಯಸ್ಸಿನಿಂದ ಹಿರಿಯ ವಯಸ್ಸಿನ ಜೋಡಿಗಳು ಭಾಗಿಯಾಗಿ ಜನರ ಗಮನ ಸೆಳೆದರು.

45 ತಳಿಯ ಶ್ವಾನ ಪ್ರದರ್ಶನ: ನಾಡಹಬ್ಬದ ಹಿನ್ನೆಲೆಯಲ್ಲಿ ಜೆ.ಕೆ.ಮೈದಾನದಲ್ಲಿ ಮುದ್ದು ಪ್ರಾಣಿಗಳ ಪ್ರದರ್ಶನ ಸ್ಪರ್ಧೆಯಲ್ಲಿ ದೇಶ-ವಿದೇಶದ ಶ್ವಾನಗಳು ತಮ್ಮ ತುಂಟಾಟ, ಓಡಾಟದ ಮೂಲಕ ನೂರಾರು ಮಂದಿಯನ್ನು ಆಕರ್ಷಿಸಿದವು.

ದಸರಾ ಕವಿಗೋಷ್ಠಿ: ಈ ಬಾರಿ ದಸರಾ ಕವಿಗೋಷ್ಠಿಯಲ್ಲಿ ಪಂಚ ಕಾವ್ಯೋತ್ಸವವನ್ನು ಅ. 5 ರಿಂದ 9ರವರೆಗೆ 5 ದಿನಗಳ ಕಾಲ ಜಗನ್ಮೋಹನ ಅರಮನೆಯಲ್ಲಿ ಆಯೋಜಿಸಲಾಗಿತ್ತು. ಸಮರಸ ಕವಿಗೋಷ್ಠಿ, ಸಮಾನತಾ ಕವಿಗೋಷ್ಠಿ, ಸಂತಸ ಕವಿಗೋಷ್ಠಿ, ಸಮಷ್ಠಿ ಕವಿಗೋಷ್ಠಿ ಹಾಗೂ ಸಮೃದ್ಧ ಕವಿಗೋಷ್ಠಿ ಎಂಬ ಪರಿಕಲ್ಪನೆಯ ಸ್ವರೂಪಗಳು ಯುವ ಹಾಗೂ ಹಿರಿಯ ಕವಿಗಳ ಸಮ್ಮುಖದಲ್ಲಿ ನಡೆದವು.

ವಜ್ರಮುಷ್ಟಿ ಕಾಳಗ: ವಿಜಯದಶಮಿ ಪ್ರಯುಕ್ತ ಅರಮನೆಯ ಕರಿಕಲ್ಲು ತೊಟ್ಟಿಯಲ್ಲಿ ವಜ್ರಮುಷ್ಟಿ ಕಾಳಗ ನಡೆಯಿತು. ಅರಮನೆ ಆವರಣದಲ್ಲಿರುವ ವರಹಾಸ್ವಾಮಿ ದೇವಸ್ಥಾನದ ಬಳಿ ಜಟ್ಟಿಗಳ ಮೈಗೆ ಕೆಮ್ಮಣ್ಣು ಮೆತ್ತಿ, ಕೈಗೆ ಬಟ್ಟೆಗಳನ್ನು ಕಟ್ಟುವ ಮೂಲಕ ಅಖಾಡಕ್ಕೆ ಇಳಿಸಲಾಯಿತು.

ಯದುವೀರ ವಿಜಯಯಾತ್ರೆ: ಶರನ್ನವರಾತ್ರಿ ಅಂಗವಾಗಿ ಅರಮನೆಯಲ್ಲಿ ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ವಿಜಯಯಾತ್ರೆ ನಡೆಸಿ ಬನ್ನಿ ಪೂಜೆ ನೆರವೇರಿಸಿದ ಬಳಿಕ ಕಂಕಣ ವಿಸರ್ಜನೆ ಮಾಡಿದರು.

ಅಭಿಮನ್ಯು ಸಾರಥ್ಯದಲ್ಲಿ ಯಶಸ್ವಿಯಾಗಿ ನಡೆದ ಜಂಬೂಸವಾರಿ.

ಚಿತ್ತಾರ ಬಿಡಿಸಿದ ಡ್ರೋನ್‌ಗಳು

ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ನಡೆದ ಡ್ರೋನ್ ಪ್ರದರ್ಶನ ಸಾಂಸ್ಕೃತಿಕ ನಗರಿ ಮೈಸೂರಿನ ಬಾನಂಗಳದಲ್ಲಿ ಚಿತ್ತಾರ ಬಿಡಿಸುವ ಮೂಲಕ ಕಣ್ಮನ ಸೆಳೆಯಿತು. ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ(ಸೆಸ್ಕ್)ದ ವತಿಯಿಂದ ದಸರಾ ಹಿನ್ನೆಲೆಯಲ್ಲಿ ಇದೇ ಮೊದಲ ಬಾರಿಗೆ ಡ್ರೋನ್ ಪ್ರದರ್ಶನ ಆಯೋಜಿಸಲಾಗಿತ್ತು. 1500 ಡ್ರೋನ್‌ಗಳು ಏಕಕಾಲದಲ್ಲಿ ಆಗಸದ ಎತ್ತರಕ್ಕೆ ಹಾರಿ ಹಲವು ಬಗೆಯ ಕಲಾಕೃತಿಗಳನ್ನು ರಚಿಸಿದವು. ಬಾಟ್ ಲ್ಯಾಬ್ ಡೈನಮಿಕ್ಸ್ ಸಂಸ್ಥೆ ಸಹಯೋಗದೊಂದಿಗೆ ಈ ಡ್ರೋನ್ ಪ್ರದರ್ಶನ ನಡೆಯಿತು. ರಾಷ್ಟ್ರಧ್ವಜ, ಚಂದ್ರಯಾನ, ವಿಶ್ವಭೂಪಟ, ಸೈನಿಕ, ಕರ್ನಾಟಕ ಭೂಪಟ, ಅಂಬಾರಿ, ಸುವರ್ಣ ಕರ್ನಾಟಕ ಸಂಭ್ರಮ, ಅರಳಿಮರ, ತಿಮಿಂಗಿಲ, ಚಾಮುಂಡೇಶ್ವರಿ ಸೇರಿದಂತೆ 15ಕ್ಕೂ ಹೆಚ್ಚು ವಿನ್ಯಾಸಗಳನ್ನು ರಚಿಸುವ ಮೂಲಕ ನೆರೆದಿದ್ದ ಜನರಿಗೆ ನಿರೀಕ್ಷೆಗೂ ಮೀರಿದ ಅನುಭವ ನೀಡಿತು.

ಜಂಬೂಸವಾರಿ ಸಂಪನ್ನ

ಶರನ್ನವರಾತ್ರಿ ಕಳೆದು ಅಂತಿಮವಾಗಿ ವಿಜಯಪತಾಕೆ ಹಾರಿಸುವ ವಿಜಯದಶಮಿಯ ಅನುಷ್ಠಾನ ಅ.12 ರಂದು ನಿರ್ವಿಘ್ನವಾಗಿ ನೆರವೇರಿತು. ಶನಿವಾರ ಮಧ್ಯಾಹ್ನ 1.55ಕ್ಕೆ ನಂದಿಧ್ವಜ ಪೂಜೆ ಹಾಗೂ ಸಂಜೆ 5.02ಕ್ಕೆ ಚಿನ್ನದ ಅಂಬಾರಿಯೊಳಗೆ ಸರ್ವಾಲಂಕೃತಳಾಗಿ ಕುಳಿತ ಬೆಟ್ಟದ ತಾಯಿ ಚಾಮುಂಡೇಶ್ವರಿಗೆ ಪುಷ್ಪಾರ್ಚನೆ ನೆರವೇರಿತು. ನಾಡಹಬ್ಬದ ಅಂತಿಮ ಘಟ್ಟ ವಿಜಯದಶಮಿ ಮೆರವಣಿಗೆಯಲ್ಲಿ ದೇಶದ ಬಹು ಸಂಸ್ಕೃತಿ, ಸಂಪ್ರದಾಯಗಳನ್ನೊಳಗೊಂಡ ಅಶ್ವಪಡೆ, ಸ್ತಬ್ಧಚಿತ್ರ, ಜಾನಪದ ಕಲಾತಂಡಗಳು, ಪೊಲೀಸ್ ತುಕಡಿ ಮೆರವಣಿಗೆಯಲ್ಲಿ ಸಾಗಿದವು. ಕೊನೆಯದಾಗಿ 750 ಕೆಜಿ ತೂಕದ ಚಿನ್ನದ ಅಂಬಾರಿ ಹೊತ್ತ ಅಭಿಮನ್ಯು ಕುಮ್ಕಿ ಆನೆಗಳಾದ ಲಕ್ಷ್ಮಿ ಮತ್ತು ವಿಜಯ ಅವರೊಂದಿಗೆ ರಾಜಮಾರ್ಗದಲ್ಲಿ ಗಂಭೀರವದನನಾಗಿ ಸಾಗಿದ. ಅಂಬಾರಿ ಹೊತ್ತ ಅಭಿಮನ್ಯು ಅರಮನೆಯಿಂದ ಬನ್ನಿಮಂಟಪ ಮೈದಾನ ತಲುಪಿತು.

ಅಚ್ಚುಕಟ್ಟಾದ ದಸರಾ: ಸಿಎಂ ಅಭಿನಂದನೆ

ಮೈಸೂರು: ಅದ್ದೂರಿ ಮತ್ತು ಅಚ್ಚುಕಟ್ಟಾದ ದಸರಾ ಆಯೋಜಿಸಿದ ಜಿಲ್ಲಾಡಳಿತದ ಶ್ರಮ ಮತ್ತು ಶಿಸ್ತಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿನಂದನೆ ಸಲ್ಲಿಸಿದ್ದಾರೆ. ಅಂಬಾರಿ ಏರಿದ ತಾಯಿ ಚಾಮುಂಡಿಗೆ ಮುಖ್ಯಮಂತ್ರಿಯಾಗಿ ಅತಿ ಹೆಚ್ಚು ಬಾರಿ ಪುಷ್ಪಾರ್ಚನೆ ಅರ್ಪಿಸಿದ ಭಾಗ್ಯ ತಮ್ಮ ಪಾಲಿಗೆ ಒದಗಿ ಬಂದಿದ್ದಕ್ಕಾಗಿ ರಾಜ್ಯದ ಜನತೆಗೆ ಕೃತಜ್ಞತೆ ಸಲ್ಲಿಸಿದ್ದಾರೆ.ಕಳೆದ ವರ್ಷ ಭೀಕರ ಬರಗಾಲದ ಕಾರಣದಿಂದ ಸಂಪ್ರದಾಯ ಮತ್ತು ವೈಭವಕ್ಕೆ ಕೊರತೆ ಇಲ್ಲದ ಸರಳ ದಸರಾ ಆಯೋಜಿಸಲಾಗಿತ್ತು. ಆದರೆ, ಈ ಬಾರಿ ರಾಜ್ಯಾದ್ಯಂತ ಉತ್ತಮ ಮಳೆಯಾಗಿ, ನಿರೀಕ್ಷಿತ ಮಟ್ಟಕ್ಕಿಂತ ಉತ್ತಮ ಬೆಳೆ ಆಗುವ ಲಕ್ಷಣಗಳೂ ಸ್ಪಷ್ಟವಾಗಿವೆ. ಸಾಲದ್ದಕ್ಕೆ ಈ ಬಾರಿ ಜಿಎಸ್ ಟಿ ಮತ್ತು ತೆರಿಗೆ ಸಂಗ್ರಹವೂ ನಿರಾಸೆ ಮೂಡಿಸಿಲ್ಲ. ಇದು ರಾಜ್ಯದ ಆರ್ಥಿಕತೆ ಆರೋಗ್ಯಕರವಾಗಿ ಏರುಗತಿಯಲ್ಲಿ ಇರುವುದಕ್ಕೆ ಸಾಕ್ಷಿಯಾಗಿದೆ. ಎಲ್ಲವೂ ಒಟ್ಟಾಗಿ ದಸರಾ ಸಂಭ್ರಮವನ್ನು ಹೆಚ್ಚಿಸಿದೆ ಎನ್ನುವ ಸಂತೋಷವನ್ನೂ ವ್ಯಕ್ತಪಡಿಸಿದ್ದಾರೆ.

ರಿಲ್ಯಾಕ್ಸ್ ಮೂಡ್‌ನಲ್ಲಿ ಗಜಪಡೆ

ವೈಭವದ ಜಂಬೂಸವಾರಿ ಮೆರವಣಿಗೆ ಯಶಸ್ವಿಗೊಳಿಸಿದ ಆನೆಗಳು ರಿಲ್ಯಾಕ್ಸ್ ಮೂಡ್‌ನಲ್ಲಿದ್ದವು.

ಮೈಸೂರು: ಜಂಬೂಸವಾರಿ ಯಶಸ್ವಿಗೊಳಿಸಿ ಲಕ್ಷಾಂತರ ಮಂದಿಯ ಮೆಚ್ಚುಗೆ ಗಳಿಸಿದ ಗಜಪಡೆ ಭಾನುವಾರ ದಿನವಿಡೀ ಅರಮನೆ ಅಂಗಳದಲ್ಲಿ ವಿಶ್ರಾಂತಿಗೆ ಜಾರಿದ್ದವು. ಅವುಗಳೊಟ್ಟಿಗೆ ಅರಣ್ಯ ಇಲಾಖೆ ಅಧಿಕಾರಿಗಳು, ಮಾವುತ, ಕಾವಾಡಿಗರು ದಸರಾ ಯಶ್ವಸಿಗೊಳಿಸಿದ ಸಂಭ್ರಮದಲ್ಲಿದ್ದರು.

ಶನಿವಾರ ವೈಭವದ ಜಂಬೂಸವಾರಿ ಮೆರವಣಿಗೆ ಯಶಸ್ವಿಗೊಳಿಸಿದ ಆನೆಗಳು ರಿಲ್ಯಾಕ್ಸ್ ಮೂಡ್‌ನಲ್ಲಿದ್ದರೆ, ಮಾವುತ, ಕಾವಾಡಿಗಳ ಕುಟುಂಬದವರು ನಿರಾಳರಾಗಿದ್ದರು. ತಾಲೀಮಿಗೆ ಆನೆಗಳನ್ನು ಸಿದ್ಧ ಮಾಡುವ, ವಿಶೇಷ ಆಹಾರ ತಯಾರಿಸುವ ಒತ್ತಡವೂ ಇರಲಿಲ್ಲ. ಜಂಬೂಸವಾರಿಯಲ್ಲಿ ಅರಮನೆ ಯಿಂದ ಬನ್ನಿಮಂಟಪದವರೆಗೆ ನಡೆದು ದಣಿದಿದ್ದ ಆನೆಗಳಿಗೆ ಭಾನುವಾರ ಮುಂಜಾನೆಯೇ ಎಣ್ಣೆ ಹಾಕಿ, ಮಜ್ಜನ ಮಾಡಿಸಲಾಯಿತು. ಬಳಿಕ ಆಹಾರ ನೀಡಿ ವಿಶೇಷ ಆರೈಕೆ ಮಾಡಲಾಯಿತು. ಅಭಿಮನ್ಯು ಅರಮನೆ ಆವರಣದಲ್ಲಿ ತನಗಾಗಿಯೇ ನಿರ್ಮಿಸಿರುವ ಶೆಡ್‌ನಲ್ಲಿ ವಿಶ್ರಾಂತಿಗೆ ಜಾರಿದ್ದ. ಅವನ ಮುಖದಲ್ಲಿ ದಸರಾ ಯಶಸ್ವಿಗೊಳಿಸಿದ ಭಾವ ಮೂಡಿತ್ತು. ವರಲಕ್ಷ್ಮೀ, ಭೀಮ, ಗೋಪಿ, ಧನಂಜಯ, ಮಹೇಂದ್ರ, ಪ್ರಶಾಂತ್, ಕಂಜನ್, ರೋಹಿತ್, ಹಿರಣ್ಯ, ಲಕ್ಷ್ಮೀ, ಸುಗ್ರೀವ, ಏಕಲವ್ಯ, ದೊಡ್ಡ ಹರವೆ ಲಕ್ಷ್ಮೀ ಆನೆಗಳು ಸಹ ರಿಲ್ಯಾಕ್ಸ್ ಮೂಡ್‌ನಲ್ಲಿದ್ದವು.

ವಿಶೇಷ ಆರೈಕೆ: ಜಂಬೂ ಸವಾರಿ ರೂವಾರಿ, ಗಜಪಡೆಯ ಕ್ಯಾಪ್ಟನ್ ಅಭಿಮನ್ಯು ಆನೆಗೆ ಬೆಳಗ್ಗೆ ಹಾಗೂ ಮಧ್ಯಾಹ್ನ ತಣ್ಣೀರಿನ ಸ್ನಾನ ಮಾಡಿಸಿ ಆರೈಕೆ ಮಾಡಲಾಯಿತು. ಅಭಿಮನ್ಯು ಜತೆಗೆ ಕುಮ್ಕಿ ಆನೆಗಳಾದ ಲಕ್ಷ್ಮೀ, ಹಿರಣ್ಯ ಹಾಗೂ ಇತರ ಆನೆಗಳಿಗೂ ಸ್ನಾನ ಮಾಡಿಸಲಾಯಿತು. ಅಭಿಮನ್ಯು ಹೆಚ್ಚೇನು ಆಯಾಸವಿಲ್ಲದೆ ಎಂದಿನಂತೆಯೇ ಲವಲವಿಕೆಯಿಂದ ಇದ್ದ. ಮಾವುತ ವಸಂತ ಹಾಗೂ ಕಾವಾಡಿ ರಾಜು ಆನೆಯ ಜೊತೆಯಲ್ಲಿಯೇ ಇದ್ದರು.

ಅರಮನೆಗೆ ಆಭರಣ: ಮೆರವಣಿಗೆಯಲ್ಲಿ ಬಳಸಲಾಗಿದ್ದ ಆನೆ ದಂತಗಳಿಗೆ ಹಾಕುವ ಸಿಂಗೋಟಿ, ಮುಂದಲೆಪಟ್ಟಿ, ಸೊಂಡಿಲು, ಕಾಲು, ಕಿವಿಗಳಿಗೆ ಹಾಕುವ ಆಭರಣ ಹಾಗೂ ಬೆನ್ನಿನ ಮೇಲೆ ಹೊದಿಸುವ ಬಟ್ಟೆ ಜೂಲಾ ಮೊದಲಾದ ಉಡುಪುಗಳನ್ನು ಮಾವುತ, ಕಾವಾಡಿಗ ಕುಟುಂಬದವರು ಜೋಡಿಸಿಟ್ಟು ಅರಮನೆಗೆ ಹಿಂದಿರುಗಿಸಿದರು. ಎರಡು ತಿಂಗಳಿಂದ ಅರಮನೆ ಆವರಣದಲ್ಲಿ ಬೀಡು ಬಿಟ್ಟಿದ್ದ ಮಾವುತರು, ಕಾವಾಡಿಗಳ ಕುಟುಂಬ ಮರಳಿ ತಮ್ಮ ಊರಿನತ್ತ ತೆರಳಲಿವೆ. ಅದಕ್ಕಾಗಿ ಭಾನುವಾರ ಬಟ್ಟೆಬರೆ ಜೋಡಿಸಿಕೊಳ್ಳುತ್ತಿದ್ದರು.

ಜಂಬೂ ಸವಾರಿ ಯಶಸ್ವಿಯಾಗಿರುವುದು ಸಂತಸ ತಂದಿದೆ. ಅಭಿಮನ್ಯು ಸತತ 5ನೇ ಬಾರಿ ಅಂಬಾರಿ ಹೊತ್ತು ಜಂಬೂ ಸವಾರಿ ಯಶಸ್ವಿಗೊಳಿಸಿದ್ದಾನೆ. ಚಾಮುಂಡೇಶ್ವರಿಯ ಅಂಬಾರಿ ಹೊರುವುದೇ ಒಂದು ಅದೃಷ್ಟ. ಅಭಿಮನ್ಯು ಮುನ್ನಡೆಸುವ ಭಾಗ್ಯ ನನಗೆ ಸಿಕ್ಕಿರುವುದು ಪುಣ್ಯ. ಈ ಬಾರಿ ಜಂಬೂ ಸವಾರಿಗೆ ಹೆಚ್ಚು ಜನ ಸೇರಿದ್ದರು. ದೀಪಾಲಂಕಾರದ ನಡುವೆ ಸಾಗಿದ ಅಂಬಾರಿ ಅಂದ ಇನ್ನೂ ಹೆಚ್ಚಾಗಿತ್ತು. ಲಕ್ಷಾಂತರ ಜನ ಚಾಮುಂಡೇಶ್ವರಿ ದೇವಿಯನ್ನು ಕಣ್ತುಂಬಿಕೊಂಡರು.

-ವಸಂತ, ಅಭಿಮನ್ಯು ಆನೆಯ ಮಾವುತ

ಅರಮನೆ ವೀಕ್ಷಿಸಲು ಆಗಮಿಸಿದ್ದ ಪ್ರವಾಸಿಗರು ಅಭಿಮನ್ಯು ಸೇರಿದಂತೆ ದಸರಾ ಆನೆಗಳನ್ನು ವೀಕ್ಷಿಸಲು ಮುಗಿಬಿದ್ದರು.

ಇಂದು ಸ್ವಸ್ಥಾನಕ್ಕೆ ಗಜಪಡೆ: ದಸರಾ ಮಹೋತ್ಸವಕ್ಕೆ ಕಾಡಿನಿಂದ ನಾಡಿಗೆ ಬಂದು ಕಳೆದ ಎರಡು ತಿಂಗಳಿನಿಂದ ಅರಮನೆ ಆವರಣದಲ್ಲಿ ಬೀಡು ಬಿಟ್ಟಿದ್ದ ಗಜಪಡೆ ಸೋಮವಾರ ನಾಡಿನಿಂದ ಸ್ವಸ್ಥಾನಕ್ಕೆ ತೆರಳಲಿವೆ. ಸೋಮವಾರ ತನ್ನ ಶಿಬಿರಗಳತ್ತ ಕ್ಯಾಪ್ಟನ್ ಅಭಿಮನ್ಯು ಮತ್ತು ತಂಡ ಪ್ರಯಾಣ ಬೆಳೆಸಲಿದೆ. ಅರಮನೆ ಆವರಣದಲ್ಲಿ ದಸರಾ ಆನೆಗಳಿಗೆ ವಿಶೇಷ ಪೂಜೆ ಸಲ್ಲಿಸಿ ಅರಮನೆ ಆಡಳಿತ ಮಂಡಳಿ ಹಾಗೂ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳಿಂದ ಬೀಳ್ಕೊಡುಗೆ ನೀಡಲಾಗುತ್ತದೆ.

ಎಲೆಚುಕ್ಕಿ ರೋಗದಿಂದ ಮೊದಲೇ ಹೈರಾಣಾದ ಕೃಷಿಕರು | ಹೊಸದಾಗಿ ಬಂದ ರೋಗಕ್ಕೆ ಔಷಧ ತಿಳಿಯದೇ ಕಂಗಾಲು

ಕೃಷಿಕರಿಗೆ ಚೈನಾ ರಿಂಗ್ ಸ್ಪಾಟ್ ವೈರಸ್ ಕಾಟ

ವಿನುತಾ ಹೆಗಡೆ ಶಿರಸಿ

ಅಡಕೆಯನ್ನೇ ವಾಣಿಜ್ಯ ಬೆಳೆಯನ್ನಾಗಿಸಿಕೊಂಡು ಬದುಕು ಕಟ್ಟಿಕೊಂಡು ಬಂದ ಮಲೆನಾಡ ತೋಟಿಗರಿಗೆ ಇನ್ನೊಂದು ಆಘಾತಕಾರಿ ರೋಗ ಅಡಕೆ ಗಿಡವನ್ನು ಆವರಿಸಿಕೊಂಡಿದೆ. ಈಗಾಗಲೇ ರೈತರನ್ನು ಹೈರಾಣಾಗಿಸಿದ ಎಲೆ ಚುಕ್ಕಿ ರೋಗದ ಭೂತದ ಬೆನ್ನಲ್ಲೇ ಚೈನಾ ರಿಂಗ್ ಸ್ಪಾಟ್ ವೈರಸ್‌ಎನ್ನುವ ರೋಗ ಅಡಕೆ ಗಿಡಕ್ಕೆ ಬಂದಿದ್ದು ಕೃಷಿಕರನ್ನು ದೆವ್ವದಂತೆ ಕಾಡಲಾರಂಬಿಸಿದೆ.

ಚೈನಾ ರಿಂಗ್ ಸ್ಪಾಟ್ ಹೆಸರೇ ಸೂಚಿಸುವಂತೆ ಇದೊಂದು ಅಡಕೆ ಗಿಡ, ಮರಗಳ ಎಲೆಯಲ್ಲಿ ರಿಂಗ್ ರಿಂಗ್ ಆಗಿ ಸುತ್ತು ಆವೃತ್ತಿ ಮೂಲಕ ಆಪೋಷನ ತೆಗೆದುಕೊಳ್ಳುವ ರೋಗವಾಗಿದೆ.ಈಗಾಗಲೇ ಎಲೆಚುಕ್ಕಿ ರೋಗದಿಂದ ಹೈರಾಣಾಗಿದ್ದ ತೋಟಿಗರಿಗೆ ಈ ಚೈನಾ ವೈರಸ್ ಮತ್ತೊಂದು ಆಘಾತವಾಗಿ ಕಾಡುತ್ತಿದೆ.

ಈ ರಿಂಗ್ ಸ್ಪಾಟ್ ಚೈನಾ ವೈರಸ್ ಎನ್ನುವ ಅಡಕೆ ಹೆಡೆಯ(ಎಲೆ)ಯ ರೋಗವು ಈಗಾಗಲೇ ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲೂಕಿನ ಬನವಾಸಿ ಭಾಗದಲ್ಲಿ ಕಾಣಿಸಿಕೊಂಡಿದೆ. ಸುಮಾರು ಮೂವತ್ತು ಎಕರೆಯಷ್ಟು ಪ್ರದೇಶದಲ್ಲಿ ಇದು ತನ್ನ ಕಬಂದ ಬಾಹು ಚಾಚಿದ್ದು, ಎಲೆ ಚುಕ್ಕಿ ರೋಗಕ್ಕಿಂತ ಅತ್ಯಂತ ವೇಗವಾಗಿ ಹರಡುತ್ತಿದೆ. ಈ ರೋಗಕ್ಕೆ ಇನ್ನೂ ಯಾವುದೇ ಔಷಧವನ್ನು ಕಂಡು ಹಿಡಿದಿಲ್ಲ. ರೋಗ ಇಂತದ್ದು ಎನ್ನುವ ಅಂಶ ಮಾತ್ರ ತಿಳಿದಿದ್ದು, ಎಲೆಚುಕ್ಕಿ ರೋಗಕ್ಕಿಂತ ಹೆಚ್ಚೇನೂ ಭಿನ್ನವಾಗಿಲ್ಲ ಎನ್ನಬಹುದು.

'ನಮಗೆ ಎಲೆಚುಕ್ಕಿ ರೋಗದ ಬಗ್ಗೆ ಮಾಹಿತಿ ಉಂಟು, ಆದ್ರೆ ಇದ್ಯಾವುದೋ ಹೊಸ ರೋಗ ಅಂದ್ರಪ ತೋಟಗಾರಿಕೆ ಇಲಾಖೆಯವ್ರು. ನಮಗೂ ಗೊತ್ತಿಲ್ಲ, ಎಲ್ಲ ಅಡಕೆ ಗಿಡದ ಬುಡದ ಹೆಡೆಗೆಲ್ಲ ಈ ರೀತಿ ರಿಂಗ್, ರಿಂಗ್ ಆಗದೆ. ನಾವ್ ಕೇಳಿರೆ ಇದು ಚೈನಾ ವೈರಸ್ ಅಂದ್ರಪ. ಏನು ಮಾಡುದು ಹೇಳೆ ಗೊತ್ತಿಲ್ಲ, ಇದು ಕೃಷಿಕ ಪ್ರಕಾಶ ಅವರ ಮಾತು.

ತೋಟಗಾರಿಕಾ ಇಲಾಖೆಯವರು ಈಗಾಗಲೇ ಈ ರೋಗದ ಕುರಿತಂತೆ ಸಂಶೊಧನೆಗಾಗಿ ಅಡಕೆ ಎಲೆಯನ್ನು ಪ್ರಯೋಗಕ್ಕೆ ಒಳಪಡಿಸಿದ್ದಾರೆಂದು ತಿಳಿದುಬಂದಿದೆ. ಆದರೆ ರೋಗಕ್ಕೆ ಔಷಧ ಕಂಡು ಹಿಡಿಯುವುದರೊಳಗಾಗಿ ಈ ರೋಗ ಎಲ್ಲೆಡೆಯು ಹರಡುವ ಸಂಭವ ಹೆಚ್ಚಾಗಿದೆ. ಮಲೆನಾಡಲ್ಲಿ ಎಲ್ಲಿಯೂ ವೃತ್ತಾಕಾರವಾಗಿ ಬಯಲಿಲ್ಲ, ರೋಗ ಹರಡುವುದಿಲ್ಲ ಎನ್ನಲಾಗದು. ಒಂದರಿಂದ ಒಂದರಂತೆ ಇದು ಹರಡುತ್ತಲೇ ಸಾಗುತ್ತಿರುವುದರಿಂದ ಎಲ್ಲ ಕೃಷಿಕರಲ್ಲಿ ಆತಂಕ ಮನೆಮಾಡಿದೆ.

ಕೃಷಿಕರ ಕಾಡುತ್ತಿರುವ ಈ ರೋಗದ ಅಧ್ಯಯನಕ್ಕಾಗಿ ಅ.19ರಂದು ಸಂಶೋಧಕ ಕೇರಳ ಕಾಸಗೋಡಿನ ಡಾ. ವಿನಾಯಕ ಹೆಗಡೆ ಯವರು ಆಗಮಿಸಲಿದ್ದಾಂದು ತೋಟಗಾರಿಕಾ ಇಲಾಖೆಯ ಸತೀಶ ಹೆಗಡೆ ತಿಳಿಸಿದ್ದಾರೆ. ಆದರೀಗ ಅಧ್ಯಯನದ, ಸಂಶೋಧನೆಯ ಮೂಲಕ ಆದಷ್ಟು ಬೇಗ ಔಷಧ ಕಂಡು ಹಿಡಿಯುವ ಭರವಸೆ ಸಿಕ್ಕಿದೆ. ಈ ಮೂಲಕವಾದರೂ ರೈತರಿಗೆ ಧೈರ್ಯ ಸಿಕ್ಕಿದರೆ ಸಾಕು ಎನ್ನುವುದು ಎಲ್ಲರ ಆಶಯ.

ಈದೀಗಾಗಲೇ ಅಡಕೆಗೆ ಬಂದಿರುವ ಎಲೆ ಚುಕ್ಕಿ ರೋಗದಿಂದ ಕೃಷಿಕರು ಕಂಗಾಲಾಗಿದ್ದು, ಇದೀಗ ಚೈನಾ ರಿಂಗ್ ಸ್ಪಾಟ್‌ರೋಗ ಕಾಣಿಸಿಕೊಂಡಿದ್ದು, ಇದು ಆತಂಕಕ್ಕೆ ಕಾರಣವಾಗಿದೆ. ಸರಕಾರ ಈ ಕೂಡಲೇ ಇದರ ಕುರಿತು ಎಚ್ಚರಿಕೆ ತೆಗೆದುಕೊಂಡು ರೋಗಕ್ಕೆ ಪರಿಹಾರವಾಗಿ ಔಷಧ ಕಂಡು ಹಿಡಿಯಬೇಕಿದೆ. ಕೃಷಿ ಸಚಿವರು ಹೆಚ್ಚಿನ ಗಮನ ಹರಿಸಬೇಕು.

-ವಿಶ್ವೇಶ್ವರ ಹೆಗಡೆ ಕಾಗೇರಿ, ಸಂಸದ



ರೋಗದ ಲಕ್ಷಣ

ಅಡಕೆಯ ಎಲೆ ಎಲ್ಲವೂ ಕಪ್ಪು ಹಸಿರಾಗಿರುವಂತೆಯೇ ವೃತ್ತಾಕಾರದಲ್ಲಿ ಹಳದಿ ರಿಂಗ್ ತರದಲ್ಲಿ ಕಾಣಿಸಿಕೊಳ್ಳುತ್ತದೆ. ಇದು ಅಡಕೆ ಎಲೆಯ ಯಾವ ಭಾಗ ತಿರುಗಿಸಿದರೂ ಒಂದೇ ರೀತಿಯಲ್ಲಿ ರಿಂಗ್ ಕಾಣಿಸುತ್ತದೆ. ಒಂದೊಂದು ಹೆಡೆಗೆ ಲೆಕ್ಕವಿಲ್ಲದಂಷ್ಟು ರಿಂಗ್‌ಗಳು ಕಾಣಿಸುತ್ತವೆ.

ಕೈ-ಕಮಲಕ್ಕೆ ಅಸ್ತ್ರ ಹುಬ್ಬಳ್ಳಿ ಪ್ರಕರಣ

← ಮೊದಲಪುಟದಿಂದ

ಬಿಜೆಪಿ ಅವಧಿಯಲ್ಲಿ ತನ್ನ ಪಕ್ಷದ ಕಾರ್ಯ ಕರ್ತರು, ಆರ್‌ಎಸ್‌ಎಸ್, ಭಜರಂಗದಳದವರ ಮೇಲಿದ್ದ ಎಷ್ಟು ಪ್ರಕರಣಗಳನ್ನು ಹಿಂಪಡೆದಿಲ್ಲ? ತನಿಖೆ ನಡೆಸಿದ್ದ ಪೊಲೀಸರು ದೋಷಾರೋಪ ಪಟ್ಟಿ ಸಲ್ಲಿಕೆ ಮಾಡಿದ್ದರು. ಪ್ರಕರಣ ದಾಖಲಾಗಿದ್ದವರದ್ದು ಯಾವುದೇ ತಪ್ಪಿಲ್ಲ ಎಂದು ಸಾಬೀತಾಗಿದೆ. ನಾವು ನ್ಯಾಯವನ್ನು ಒದಗಿಸಿಕೊಡುವ ಕೆಲಸ ಮಾಡುತ್ತಿದ್ದೇವೆ.

- ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಹಳೇ ಹುಬ್ಬಳ್ಳಿ ಗಲಭೆ ಕೇಸ್ ಹಿಂಪಡೆಯುವ ಮೂಲಕ ಸರಕಾರ ಭಾರಿ ಅಪರಾಧ ಮಾಡಿದೆ. ಕೇಸ್ ವಾಪಸ್ ಪಡೆದಿರುವುದನ್ನು ವಿರೋಧಿಸಿ ನಾವು ಮನವಿ ಸಲ್ಲಿಸಲು ಅವಕಾಶ ಕೇಳಿದ್ದೇವೆ. ಆದರೆ ನಮ್ಮ ಮನವಿಯನ್ನು ಸಿಎಂ ಸ್ವೀಕರಿಸುತ್ತಿಲ್ಲ. ಇದು ಮುಖ್ಯಮಂತ್ರಿಗಳ ದುರಹಂಕಾರ ತೋರಿಸು ತ್ತದೆ. ಈ ಮೂಲಕ ಕಾಂಗ್ರೆಸ್ ಸರಕಾರ ಭಯೋತ್ಪಾದಕರ ಬೆಂಬಲಿಗರು ಎಂಬಂತಾಗುತ್ತದೆ.

- ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

ಮುಸ್ಲಿಂ ಭಯೋತ್ಪಾದಕರಿಗೆ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಒಂದು ರೀತಿ ಹಬ್ಬ. ಹಿಂದೆಯೂ ಅನೇಕ ಗಲಭೆ ಕೇಸ್ ವಾಪಸ್ ಪಡೆದು ಅಧಿಕಾರ ಕಳೆದುಕೊಂಡರು. ಈಗಲೂ ಹುಬ್ಬಳ್ಳಿ ಗಲಭೆ ಕೇಸ್ ಗಳನ್ನು ವಾಪಸ್ ಪಡೆದಿದ್ದಾರೆ. ಈ ಬೆಳವಣಿಗೆಯಿಂದ ರಾಜ್ಯದಲ್ಲಿ ಅಭಿವೃದ್ಧಿ ಕುಂಠಿತವಾಗಲಿದೆ. ಕಾನೂನು ಸುವ್ಯವಸ್ಥೆ ಹದಗೆಡಲಿದೆ.

- ಆರ್. ಅಶೋಕ, ಪ್ರತಿಪಕ್ಷ ನಾಯಕ

ಎಣ್ಣೆ ಅಂಗಡಿಯ ಅರ್ಜಿಯಿಂದಲೇ 1800 ಕೋಟಿ

← ಮೊದಲಪುಟದಿಂದ

ಮೊದಲಿಗೆ ಟೆಂಡರ್ ಪ್ರಕಟಿಸಿದಾಗ ಅಬಕಾರಿ ಇಲಾಖೆ ಅ.1ರಿಂದ 9ರವರೆಗೂ ಅರ್ಜಿ ಸಲ್ಲಿಸುವುದಕ್ಕೆ ಅವಕಾಶ ಮಾಡಿಕೊಟ್ಟಿತ್ತು. ಆ ಬಳಿಕ ಬೇಡಿಕೆ ಹೆಚ್ಚಿದ್ದರಿಂದ ಅ.11ರ ಸಂಜೆ 7ಕ್ಕೆ ಅರ್ಜಿ ಸ್ವೀಕಾರದ ಸಮಯವನ್ನು ವಿಸ್ತರಿಸಿತು. ಅ.12-13 ರಂದು ಅರ್ಜಿಗಳ ಪರಿಶೀಲನೆ ನಡೆಸಲಾಗಿದೆ. ಚಿಲ್ಲರೆ ಮದ್ಯ ಮಾರಾಟ ಮಳಿಗೆ ಪರವಾನಗಿಗೆ ಅರ್ಹ ಅರ್ಜಿದಾರರನ್ನು ಆಯ್ಕೆ ಮಾಡಲು ಲಾಟರಿ ವಿಧಾನ ಅನುಸರಿಸಲಾಗುತ್ತಿದೆ. ಅ.15 ರಂದು ಲಾಟರಿ ಎತ್ತಲಾಗುವುದು. ಆಯ್ಕೆ ಆದ ಅರ್ಜಿದಾರರು ಅ.16ರಿಂದಲೇ ಮದ್ಯದಂಗಡಿ ತೆರೆದು ಚಿಲ್ಲರೆ ಮಾರಾಟ ಆರಂಭಿಸಬಹುದು ಎಂದು ಅಧಿಕಾರಿ ತಿಳಿಸಿದ್ದಾರೆ.

ಸಿಎಂ ಹಾದಿ ಹಿಡಿದ ಖರ್ಗೆ

← ಮೊದಲಪುಟದಿಂದ

ಜಮೀನು ಪಡೆದಿರುವುದನ್ನು ದೊಡ್ಡ ಹಗರಣದ ರೀತಿಯಲ್ಲಿ ಬಿಜೆಪಿಗರು ಬಿಂಬಿಸುತ್ತಿದ್ದಾರೆ. ಆದರೆ ನಾವು ಲಾಭ ಮಾಡುವ ಉದ್ದೇಶದಿಂದ ಮಾಡಿರಲಿಲ್ಲ. ಶಿಕ್ಷಣ ನೀಡುವ ಉದ್ದೇಶಕ್ಕೆ ಜಮೀನು ಮಂಜೂರಾಗಿದ್ದರೂ ಜಮೀನಿನ ಸ್ವಾಧೀನಕ್ಕೆ ಪಡೆದಿಲ್ಲ. ಈ ಕಲುಷಿತ ವಾತಾವರಣದಲ್ಲಿ ಜಮೀನನ್ನು ಇಟ್ಟುಕೊಂಡರೆ ಟ್ರಸ್ಟ್‌ನ ಉದ್ದೇಶ ವಿಷಯಾಂತರ ಆಗುತ್ತದೆ. ಅನಗತ್ಯ ವಿವಾದ, ಆರೋಪಗಳು ಬೇಡ ಎಂಬ ಕಾರಣಕ್ಕೆ ಜಮೀನು ವಾಪಸ್ ಮಾಡುವ ತೀರ್ಮಾನ ಮಾಡಿದ್ದೇವೆ ಎಂದು ಸ್ಪಷ್ಟಪಡಿಸಿದರು.

ಟ್ವೀಟೂ-ಖಾರಾ

ನಿಂಗರಾಜ ಗಾಣಿಗೇರ್, ಬೆಂಗಳೂರು

ಬಾಯಿಮಾತಲ್ಲಿ ಅಚ್ಛೇದಿನ, ಆತ್ಮನಿರ್ಭರ, ವಿಕಸಿತ ಭಾರತ ಎಂದು ಹೇಳುತ್ತಲೇ ಅವೈಜ್ಞಾನಿಕ ಆರ್ಥಿಕ ನೀತಿ, ಜಿಎಸ್‌ಟಿ ಮೂಲಕ ಎಲ್ಲ ಕ್ಷೇತ್ರಗಳಲ್ಲಿ ಭಾರತವನ್ನು ಕುಸಿಯುವಂತೆ ಮಾಡಿರುವ ಸ್ವಯಂಘೋಷಿತ ವಿಶ್ವಗುರು ಈಗ ಭಾರತೀಯ ರುಪಾಯಿ ಸಾರ್ವಕಾಲಿಕ ಕುಸಿತ ಕಾಣುವಂತೆ ಮಾಡಿದ್ದಾರೆ. 2047ಕ್ಕೆ ಇವರು ಮಾಡುವುದು ವಿಕಸಿತ ಭಾರತವೊ..? ಕಸಿವಿಸಿಯ ಭಾರತವನ್ನೋ..?

00

ತನ್ನ ಈ ಹೇಳಿಕೆ ಮೂಲಕ 2047ರವರೆಗೂ ಕೇಂದ್ರದಲ್ಲಿ ಬಿಜೆಪಿ ಸರಕಾರವೇ ಅಧಿಕಾರದಲ್ಲಿ ಇರುತ್ತದೆ ಅಂತ ಒಪ್ಪಿಕೊಂಡ ಕಾಂಗ್ರೆಸ್ ಪಕ್ಷ..?

ಸಮಾಚಾರ ಸಣ್ಣದಲ್ಲ

ಬೈಕ್, ಲಾರಿ ಡಿಕ್ಕಿ: ಇಬ್ಬರು ಸಾವು

ರಾಯಚೂರು: ಬೈಕ್ ಮತ್ತು ಲಾರಿ ಮಧ್ಯೆ ಡಿಕ್ಕಿ ಸಂಭವಿಸಿದ ಪರಿಣಾಮ ಇಬ್ಬರು ಮೃತಪಟ್ಟ ಘಟನೆ ರಾಯಚೂರಿನ ವೈಟಿಪಿಎಸ್ ವಿದ್ಯುತ್ ಕೇಂದ್ರದ ಬಳಿ ಭಾನುವಾರ ನಡೆದಿದೆ. ಜನಾರ್ದನ (27), ಸಿ.ಬಿ. ಪಾಟೀಲ್(27) ಮೃತಪಟ್ಟವರೆಂದು ಗುರುತಿಸಲಾಗಿದೆ. ರಾಯಚೂರು-ಹೈದರಾಬಾದ್ ರಾಷ್ಟ್ರೀಯ ಹೆದ್ದಾರಿಯಲ್ಲಿ ಈ ಅಪಘಾತ ಸಂಭವಿಸಿದೆ. ಮೃತಪಟ್ಟವರಿಬ್ಬರು ಖಾಸಗಿ ಕಂಪನಿ ಉದ್ಯೋಗಿಗಳಾಗಿದ್ದಾರೆ. ರಾಯಚೂರು ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಾಪತ್ತೆಯಾಗಿದ್ದ ವ್ಯಕ್ತಿ ನದಿಯಲ್ಲಿ ಪತ್ತೆ

ಮಲ್ಪೆ: ನಾಪತ್ತೆಯಾಗಿದ್ದ ಮಲ್ಪೆ ಬಾಪು ತೋಟದ ನಿವಾಸಿ ಜಲೀಲ್ (49) ಎಂಬವರ ಮೃತದೇಹವು ಪಡುಕರೆ ಮಟ್ಟು ಸಮೀಪ ಪಾಪನಾಶಿನಿ ನದಿಯಲ್ಲಿ ಭಾನುವಾರ ಬೆಳಗ್ಗೆ ಪತ್ತೆಯಾಗಿದೆ. ಜಲೀಲ್ ಅ.12ರ ಶನಿವಾರ ಬೆಳಿಗ್ಗೆ 5 ಗಂಟೆಗೆ ಮನೆಯಿಂದ ನಾಪತ್ತೆಯಾಗಿದ್ದು, ಅವರ ಬೈಕ್, ಮೊಬೈಲ್ ಹಾಗೂ ಚಪ್ಪಲಿ ಮಲ್ಪೆ ಪಡುಕರೆ ಸೇತುವೆ ಬಳಿ ಪತ್ತೆಯಾಗಿತ್ತು. ಈಶ್ವರ್ ಮಲ್ಪೆ ಮತ್ತು ತಂಡವು ಜಲೀಲ್ ನಾಪತ್ತೆಯಾಗಿರುವ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಸಂದೇಶವನ್ನು ಬಿತ್ತರಿಸಿತ್ತು. ಬೆಳಗ್ಗೆ ಸುಮಾರು 7 ಗಂಟೆಗೆ ಪಡುಕರೆ ಬಾಪುತೋಟ ಸಮೀಪದ ಪಾಪನಾಶಿನಿ ನದಿಯಲ್ಲಿ ಮೃತದೇಹ ಪತ್ತೆಯಾಗಿದೆ. ಸ್ಥಳೀಯ ಮೀನುಗಾರರು ಮೃತ ದೇಹದ ಹುಡುಕಾಟಕ್ಕೆ ಈಶ್ವರ್ ಮಲ್ಪೆ ಮತ್ತು ತಂಡದ ಜೊತೆಗೆ ಸಹಕಾರ ನೀಡಿದ್ದರು. ಈಶ್ವರ್ ಮಲ್ಪೆ ಮತ್ತು ತಂಡ ತಮ್ಮ ಆಂಬ್ಯುಲೆನ್ಸ್ ಮೂಲಕ ಮೃತದೇಹವನ್ನು ಉಡುಪಿ ಜಿಲ್ಲಾಸ್ಪತ್ರೆಗೆ ಸಾಗಿಸಿದರು.

ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಬಲಿಷ್ಠ

ಕೋಲಾರ: ಬಿಜೆಪಿಯವರು ಹಗಲು ಕನಸು ಕಾಣುತ್ತಿದ್ದಾರೆ. ಕಾಂಗ್ರೆಸ್ ಸರಕಾರ ರಾಜ್ಯದಲ್ಲಿ ಬಲಿಷ್ಠವಾಗಿದೆ ಎಂದು ಶಾಸಕ ಕೆ.ವೈ. ನಂಜೇಗೌಡ ಎಚ್ಚರಿಕೆ ಕೊಟ್ಟಿದ್ದಾರೆ. ಸಿಎಂ ಬದಲಾವಣೆ ಕುರಿತು ಬಿಜೆಪಿ ಹೇಳಿಕೆ ಬಗ್ಗೆ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ಪಕ್ಷಕ್ಕೆ ಭವಿಷ್ಯ ಇಲ್ಲ ಅನ್ನೋದು ಬಿಜೆಪಿಯ ವರಿಗೆ ಗೊತ್ತಾಗಿದೆ. ಕೇಂದ್ರ ಸರ್ಕಾರ, ರಾಜ್ಯಪಾಲರು ಹಾಗೂ ಇ.ಡಿ.ಯನ್ನು ಬಳಸಿಕೊಳ್ಳುತ್ತಿದ್ದಾರೆ. ಸಿಎಂ ಸಿದ್ದರಾಮಯ್ಯ ಅವರನ್ನು ಇಳಿಸಲು ತೊಂದರೆ ಕೊಡುತ್ತಿದ್ದಾರೆ. ಬಿಜೆಪಿಯ ತಿರುಕನ ಕನಸು ನನಸಾ ಗದು ಎಂದು ತಿರುಗೇಟು ನೀಡಿದರು. ಬಿಜೆಪಿಯವರು ಮೊದಲು ತಮ್ಮ ಹುಳುಕು ಸರಿಮಾಡಿಕೊಳ್ಳಲಿ. ಬಿಜೆಪಿ ಅಧ್ಯಕ್ಷ ವಿಜಯೇಂದ್ರ ವಿರುದ್ಧವೇ ಅವರ ಪಕ್ಷದವರು ತಿರುಗಿ ಬಿದ್ದಿದ್ದಾರೆ. ನಮ್ಮ ಸಿಎಂ ವಿರುದ್ಧ ಯಾರೂ ಇಲ್ಲ. ಸಿದ್ದರಾಮಯ್ಯನವರೇ ಅಧಿಕಾರದಲ್ಲಿ ಮುಂದುವರಿಯುತ್ತಾರೆ. ಆರ್.ಅಶೋಕ್ ಹಾಗೂ ವಿಜಯೇಂದ್ರಗೂ ನಮ್ಮ ಪಕ್ಷಕ್ಕೂ ಸಂಬಂಧವಿಲ್ಲ. ಡಿಕೆಶಿ ಹಾಗೂ ಸಿದ್ದರಾಮಯ್ಯ ಇಬ್ಬರೂ ಜೋಡೆತ್ತುಗಳು ಎಂದು ನಂಜೇಗೌಡ ಹೇಳಿದರು.

ರಾಜ್ಯದ ಜನರ ಆಶೀರ್ವಾದ ಇರುವವರೆಗೂ ನನ್ನ ಅಲ್ಲಾಡಿಸಲು ಸಾಧ್ಯವಿಲ್ಲ: ಸಿಎಂ

ಜನಶಕ್ತಿಯ ಮುಂದೆ ಯಾವ ಶಕ್ತಿಯೂ ಇಲ್ಲ

ಸವದತ್ತಿ: ನಮ್ಮ ಸರಕಾರ ಬಡವರ ಪರವಾಗಿ ಕೆಲಸ ಮಾಡುತ್ತಿರುವುದಕ್ಕೆ ಬಿಜೆಪಿ ನನ್ನನ್ನು ಕೆಳಗಿಳಿಸುವ ಪ್ರಯತ್ನ ನಡೆಸಿದೆ. ಆದರೆ ಜನಶಕ್ತಿಯ ಮುಂದೆ ಯಾವ ಶಕ್ತಿಯೂ ಇಲ್ಲ. ರಾಜ್ಯದ ಜನರ ಆಶೀರ್ವಾದ ಇರುವವರೆಗೂ ನನ್ನ ಯಾರೂ ಅಲ್ಲಾಡಿಸಲು ಸಾಧ್ಯವಿಲ್ಲ ಎಂದು ಸಿಎಂ ಸಿದ್ದರಾಮಯ್ಯ ಬಿಜೆಪಿ ವಿರುದ್ಧ ಹರಿಹಾಯ್ದರು.

ಭಾನುವಾರ ಜಿಲ್ಲೆಯ ಸವದತ್ತಿ ಯಲ್ಲಮ್ಮ ಗುಡ್ಡದಲ್ಲಿ ನಡೆದ ಅಭಿವೃದ್ಧಿ ಕಾಮಗಾರಿ ಉದ್ಘಾಟನಾ ಸಮಾರಂಭ ಉದ್ದೇಶಿಸಿ ಮಾತನಾಡಿ, ನಮ್ಮ ಆಡಳಿತಾವಧಿಯಲ್ಲಿ ಸವದತ್ತಿ ಯಲ್ಲಮ್ಮ ಕ್ಷೇತ್ರದ ಸಮಗ್ರ ಅಭಿವೃದ್ಧಿ ಕಾಮಗಾರಿ ಪೂರ್ಣಗೊಳಿಸುವ ಭರವಸೆ ನೀಡುತ್ತಿದ್ದೇವೆ. ನಮ್ಮ ಸರಕಾರದ ಗ್ಯಾರಂಟಿ ಯೋಜನೆಗಳಿಂದ ಬಡವರ ಆರ್ಥಿಕ ಮಟ್ಟ ಸುಧಾರಿಸಿದೆ. ಬಿಜೆಪಿ ಹಿಂದೂ ಧರ್ಮದ ಹೆಸರಿನಲ್ಲಿ ಜನರನ್ನು ಒಡೆದು ರಾಜಕಾರಣ ಮಾಡುತ್ತಿದ್ದು ಅವರನ್ನು ಅಧಿಕಾರದಿಂದ ದೂರ ಇಡಬೇಕೆಂದು ಸಿಎಂ ಮನವಿ ಮಾಡಿದರು.

ಸವದತ್ತಿ ಯಲ್ಲಮ್ಮನ ಗುಡ್ಡದಲ್ಲಿ ಪ್ರವಾಸೋದ್ಯಮ ಇಲಾಖೆಯ ವತಿಯಿಂದ 22.45 ಕೋಟಿ ರು.ವೆಚ್ಚದಲ್ಲಿ ಪ್ರವಾಸಿಗರಿಗೆ ನಿರ್ಮಿಸಲಾಗಿರುವ ಕೊಠಡಿಗಳು, ಡಾರ್ಮಿಟರಿ, ಪಾರ್ಕಿಂಗ್, ಉದ್ಯಾನ ಮತ್ತಿತರ ಮೂಲಸೌಕರ್ಯಗಳು ಮತ್ತು ಮಹಿಳಾ ಅಭಿವೃದ್ಧಿ ನಿಗಮದಿಂದ 10 ಕೋಟಿ ರು.ವೆಚ್ಚದಲ್ಲಿ ನಿರ್ಮಿಸಲಾಗಿರುವ ವಾಣಿಜ್ಯ ಮಳಿಗಳು ಮತ್ತು ಅತಿಥಿಗೃಹವನ್ನು ಸಿಎಂ ಲೋಕಾರ್ಪಣೆಗೊಳಿಸಿದರು.

ಪ್ರವಾಸೋದ್ಯಮ ಇಲಾಖೆ ಸಚಿವ ಸಚಿವ ಡಾ.ಎಚ್.ಕೆ.ಪಾಟೀಲ ಮಾತನಾಡಿ, ಕ್ಷೇತ್ರದಲ್ಲಿ ಲೋಕೋಪಯೋಗಿ ಇಲಾಖೆ ವತಿಯಿಂದ ರಸ್ತೆ, ಕೋಣೆಗಳ ನಿರ್ಮಾಣಕ್ಕೆ ಮನವಿ ಮಾಡಲಾಗಿದೆ. ದೇವಿ ದರ್ಶನಕ್ಕೆ ಅನುಕೂಲವಾಗುವಂತೆ ಭಕ್ತರಿಗೆ ಶೀಘ್ರ ದರ್ಶನ ದೊರಕಿಸುವ ವ್ಯವಸ್ಥೆಗಳ ಕುರಿತು ಚರ್ಚಿಸಲಾಗಿದೆ. ಯಲ್ಲಮ್ಮನ ಗುಡ್ಡಕ್ಕೆ ಚಕ್ಕಡಿಗಳ ಮೂಲಕ ಆಗಮಿಸುವ ಜಾನುವಾರುಗಳಿಗೂ ದಾಸೋಹದ ವ್ಯವಸ್ಥೆ ಮಾಡುವ ನಿರ್ಣಯಗಳನ್ನು ಇಂದಿನ ಸಭೆಯಲ್ಲಿ ಕೈಗೊಳ್ಳಲಾಗಿದೆ. ಭಕ್ತಾದಿಗಳಿಗೆ ಊಟ ಮಾಡಲು ಅನುಕೂಲವಾಗಲು ಒಂದು ಭವ್ಯ ದಾಸೋಹ ಭವನವನ್ನು ಸರಕಾರದಿಂದ ಸ್ಥಾಪಿಸಲು ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿದರು.

ಜಿಲ್ಲಾ ಉಸ್ತುವಾರಿ ಸಚಿವರಾದ ಸತೀಶ ಜಾರಕಿಹೊಳಿ ಅವರು ಮಾತನಾಡಿ, ಇಂದು ಸುಮಾರು 31 ಕೋಟಿ ರು.ಗಳ ವಿವಿಧ ಅಭಿವೃದ್ಧಿ ಕಾಮಗಾರಿಗಳ ಲೋಕಾರ್ಪಣೆ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಕ್ಷೇತ್ರಕ್ಕೆ ಬರುವಂತಹ ಭಕ್ತಾದಿಗಳಿಗೆ ಎಲ್ಲ ರೀತಿಯ ಸೌಲಭ್ಯಗಳನ್ನು ಒದಗಿಸುವ ರೂಪು ರೇಷೆಗಳ ಕುರಿತು ಇಂದಿನ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಬರುವಂತಹ ದಿನಗಳಲ್ಲಿ ದೇವಸ್ಥಾನಗಳಿಗೆ ಮೂಲ ಸೌಲಭ್ಯಗಳನ್ನು ಒದಗಿಸಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಸಾರಿಗೆ ಮತ್ತು ಮುಜರಾಯಿ ಇಲಾಖೆ ಸಚಿವ ರಾಮಲಿಂಗಾ ರೆಡ್ಡಿ, ದೆಹಲಿ ವಿಶೇಷ ಪ್ರತಿನಿಧಿ ಪ್ರಕಾಶ ಹುಕ್ಕೇರಿ, ವಾಯುವ್ಯ ಸಾರಿಗೆ ನಿಗಮದ ಅಧ್ಯಕ್ಷ ಭರಮಗೌಡ ಕಾಗೆ, ಸವದತ್ತಿ ಶಾಸಕ ವಿಶ್ವಾಸ ವೈದ್ಯ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಭಾನುವಾರ ಜಿಲ್ಲೆಯ ಸವದತ್ತಿಯಲ್ಲಿ ನಡೆದ ಅಭಿವೃದ್ಧಿ ಕಾಮಗಾರಿ ಉದ್ಘಾಟನಾ ಸಮಾರಂಭವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಈ ವೇಳೆ ಉಪಮುಖ್ಯಮಂತ್ರಿ, ಡಿ.ಕೆ.ಶಿವಕುಮಾರ್, ಸಚಿವರಾದ ಡಾ.ಎಚ್.ಕೆ.ಪಾಟೀಲ, ಸತೀಶ ಜಾರಕಿಹೊಳಿ , ಲಕ್ಷ್ಮೀ ಹೆಬ್ಬಾಳ್ಕರ್, ರಾಮಲಿಂಗಾರೆಡ್ಡಿ, ದೆಹಲಿ ವಿಶೇಷ ಪ್ರತಿನಿಧಿ ಪ್ರಕಾಶ ಹುಕ್ಕೇರಿ, ವಾಯುವ್ಯ ಸಾರಿಗೆ ನಿಗಮದ ಅಧ್ಯಕ್ಷ ಭರಮಗೌಡ ಕಾಗೆ, ಸವದತ್ತಿ ಶಾಸಕ ವಿಶ್ವಾಸ ವೈದ್ಯ ಇದ್ದರು.

> ಲೋಕಸಭಾ ಚುನಾವಣೆಯಲ್ಲಿ ಜನ ಬಿಜೆಪಿಯ 17 ಜನ ಸಂಸದರನ್ನು ಆಯ್ಕೆ ಮಾಡಿದ್ದರು. ಆದರೆ ಅವರು ರಾಜ್ಯದ ಜನರಿಗೆ ಒಂದೂ ಒಳ್ಳೆಯ ಕೆಲಸ ಮಾಡಲಿಲ್ಲ. ನಮ್ಮ ಸರಕಾರ ಅಧಿಕಾರಕ್ಕೆ ಬಂದಾಗಿನಿಂದ ಗ್ಯಾರಂಟಿ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಕ್ಕೆ ತಂದಿದ್ದು ಇದರಿಂದ ಜನರಿಗೆ ತುಂಬಾ ಅನುಕೂಲವಾಗಿದೆ. ಗೃಹಲಕ್ಷ್ಮಿ ಯೋಜನೆ ಲಾಭ ಪಡೆದ ಖುಷಿಯಲ್ಲಿ ರಾಯಭಾಗದ ಮಹಿಳೆ ಇಡೀ ಊರಿಗೆ ಹೋಳಿಗೆ ಊಟ ಹಾಕಿದ್ದು ನಮ್ಮ ಯೋಜನೆಯಿಂದ ಸಾಧ್ಯವಾಗಿದೆ. ಜನ ಕಾಂಗ್ರೆಸ್ ಸರಕಾರದ ಬೆನ್ನಿಗೆ ಸದಾಕಾಲವೂ ನಿಲ್ಲಬೇಕು.
>
> -**ಸಿದ್ದರಾಮಯ್ಯ**, ಮುಖ್ಯಮಂತ್ರಿ

> ಯಲ್ಲಮ್ಮನ ದೇವಸ್ಥಾನಕ್ಕೆ ಒಂದು ಸ್ವರೂಪ ನೀಡುವ ಉದ್ದೇಶದೊಂದಿಗೆ ಅಭಿವೃದ್ಧಿ ಪ್ರಾಧಿಕಾರ ರಚಿಸಲಾಗಿದೆ. ಇಲ್ಲಿ ಬರುವಂತಹ ಭಕ್ತಾದಿಗಳಿಗೆ ಸೌಲಭ್ಯಗಳನ್ನು ಒದಗಿಸುವ ಹಾಗೂ ಧಾರ್ಮಿಕ ಕ್ಷೇತ್ರ ದರ್ಶನದ ಜೊತೆಗೆ ಪ್ರವಾಸಿ ಕ್ಷೇತ್ರವನ್ನಾಗಿ ಮಾಡುವ ಉದ್ದೇಶದೊಂದಿಗೆ ಅನೇಕ ಯೋಜನೆಗಳನ್ನು ಹಾಕಿಕೊಳ್ಳಲಾಗಿದೆ.
>
> -**ಡಿ.ಕೆ.ಶಿವಕುಮಾರ್**, ಉಪ ಮುಖ್ಯಮಂತ್ರಿ

- ಸವದತ್ತಿಯಲ್ಲಿ ನಾನಾ ಅಭಿವೃದ್ಧಿ ಕಾಮಗಾರಿ ಉದ್ಘಾಟನೆ
- ಬಿಜೆಪಿ ವಿರುದ್ಧ ಮುಖ್ಯಮಂತ್ರಿ ಸಿದ್ದರಾಮಯ್ಯ ಗುಡುಗು

> ಬಸವಣ್ಣನವರ ಚಿಂತನೆಗಳನ್ನು ನಮ್ಮ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು ಅಳವಡಿಸಿಕೊಂಡು ರಾಜ್ಯದ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದಾರೆ. ನಮ್ಮ ಸರಕಾರ ನುಡಿದಂತೆ ನಡೆಯುವ ಸರಕಾರವಾಗಿದೆ. ಈ ಕ್ಷೇತ್ರದ ಅಭಿವೃದ್ಧಿಗಾಗಿ ಪ್ರಾಧಿಕಾರದ ಸಭೆಯನ್ನು ಜರುಗಿಸಿ ಈ ಕ್ಷೇತ್ರದ ಅಭಿವೃದ್ಧಿಗಾಗಿ ಹಂತ ಹಂತವಾಗಿ ಯೋಜನೆಗಳನ್ನು ರೂಪಿಸಲಾಗಿದೆ.
>
> - **ಲಕ್ಷ್ಮೀ ಹೆಬ್ಬಾಳ್ಕರ್**, ಸಚಿವೆ

ಸಿಎಂ ನೇತೃತ್ವದಲ್ಲಿ ನಡೆದ ಮೊದಲ ಪ್ರಾಧಿಕಾರದ ಸಭೆ

ತಿರುಪತಿ ಮಾದರಿಯಲ್ಲಿ ಯಲ್ಲಮ್ಮ ಕ್ಷೇತ್ರ ಅಭಿವೃದ್ಧಿ



ಶ್ರೀರೇಣುಕಾ ಯಲ್ಲಮ್ಮ ಅಭಿವೃದ್ಧಿ ಪ್ರಾಧಿಕಾರದ ಪ್ರಥಮ ಸಭೆಯಲ್ಲಿ ಸಿಎಂ ಸಿದ್ದರಾಮಯ್ಯ ಮಾತನಾಡಿದರು.

ಸವದತ್ತಿ: ಲಕ್ಷಾಂತರ ಭಕ್ತರು ಭೇಟಿ ನೀಡುವ ಸವದತ್ತಿ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಅಧಿಕಾರಿಗಳು ಸೂಕ್ತ ಯೋಜನೆ ರೂಪಿಸಬೇಕು. ತಿರುಪತಿ ಮಾದರಿಯನ್ನು ಅಧ್ಯಯನ ಮಾಡಿಕೊಂಡು ಅದೇ ಮಾದರಿಯಲ್ಲಿ ಮೂಲಸೌಕರ್ಯ ಕಲ್ಪಿಸಬೇಕು ಎಂದು ಸಿಎಂ ಸಿದ್ದರಾಮಯ್ಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಭಾನುವಾರ ಸವದತ್ತಿ ಯಲ್ಲಮ್ಮ ಕ್ಷೇತ್ರದಲ್ಲಿ ನಡೆದ ಶ್ರೀರೇಣುಕಾ ಯಲ್ಲಮ್ಮ ಅಭಿವೃದ್ಧಿ ಪ್ರಾಧಿಕಾರ ಹಾಗೂ ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿ ಪ್ರಥಮ ಸಭೆಯಲ್ಲಿ ಮಾತನಾಡಿ, ಸವದತ್ತಿ ಯಲ್ಲಮ್ಮ ದೇವಸ್ಥಾನಕ್ಕೆ ಪ್ರತಿವರ್ಷ ಕೋಟ್ಯಂತರ ಭಕ್ತಾಧಿಗಳು ಭೇಟಿ ನೀಡುವುದ ರಿಂದ ಉತ್ತಮ ವಸತಿ ಹಾಗೂ ಸುಗಮ ದರ್ಶನಕ್ಕೆ ವ್ಯವಸ್ಥೆ ಕಲ್ಪಿಸಲಾಗುತ್ತದೆ. ಜನರಿಗೆ ಅನುಕೂಲ ಆಗುವಂತೆ ತಿರುಪತಿ ಮಾದರಿಯಲ್ಲಿ ಅಭಿವೃದ್ಧಿ ಕಾಮಗಾರಿ ಹಮ್ಮಿಕೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶ ಮತ್ತು ಗೋವಾ ರಾಜ್ಯಗಳಿಂದ ಆಗಮಿಸುವ ಭಕ್ತಾಧಿಗಳಿಗೆ ಉತ್ತಮ ವಸತಿ ಹಾಗೂ ದರ್ಶನಕ್ಕೆ ಅನುಕೂಲ ಕಲ್ಪಿಸಬೇಕು. ದೇವಸ್ಥಾನ ಹಾಗೂ ಸುತ್ತಮುಲಿನಲ್ಲಿರುವ ಸರಕಾರದ ಜಮೀನು ಒತ್ತುವರಿ ಆಗದಂತೆ ತಡೆಯಲು ಕಂಪೌಂಡ್ ಹಾಕಬೇಕು. 45 ಕೋಟಿ ಬ್ಯಾಂಕಿನಲ್ಲಿದ್ದು, ವಾರ್ಷಿಕ ಅಂದಾಜು 25 ಕೋಟಿ ಆದಾಯ ಬರುತ್ತಿದೆ. ಉತ್ತಮ ಸೌಲಭ್ಯ ಒದಗಿಸುವ ಮೂಲಕ ಭಕ್ತರ ಭೇಟಿಯ ಪ್ರಮಾಣವನ್ನು ಹೆಚ್ಚಿಸಬೇಕು ಎಂದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಮಾತನಾಡಿ, ಭಕ್ತಾಧಿಗಳು ಪಡ್ಡಲಗಿ ತುಂಬಿಸಿ ಜೋಗತಿಯರಿಗೆ ನೈವೇದ್ಯ ಸಮರ್ಪಿಸುತ್ತಾರೆ. ಜನಸಂದಣಿ ಹೆಚ್ಚಾಗಿರುವಾಗ ದರ್ಶನ ಸಾಧ್ಯವಾಗುತ್ತಿಲ್ಲ ಆದ್ದರಿಂದ ಎಲ್ಲರಿಗೂ ಸೂಕ್ತ ವ್ಯವಸ್ಥೆ ಕಲ್ಪಿಸಬೇಕು ಎಂದರು. ಕ್ಷೇತ್ರದ ಒಟ್ಟಾರೆ ಅಭಿವೃದ್ಧಿಗೆ ಸರಕಾರದ ವತಿಯಿಂದ 25 ಕೋಟಿ ರೂಪಾಯಿ ನೀಡುವಂತೆ ಮನವಿ ಮಾಡಿಕೊಂಡರು.

> ಸುಕ್ಷೇತ್ರಗಳಿಗೆ ಭೇಟಿ ನೀಡುವವರು ಬಡವರೇ ಆಗಿದ್ದರೂ ಸಂಪ್ರದಾಯ ಮತ್ತು ಖರ್ಚು ವೆಚ್ಚಕ್ಕೆ ಯೋಚನೆ ಮಾಡುವುದಿಲ್ಲ. ಆದ್ದರಿಂದ ಉತ್ತಮ ಸೌಲಭ್ಯ ಒದಗಿಸಬೇಕು. ಹುಣ್ಣಿಮೆ ಸಂದರ್ಭದಲ್ಲಿ ಚಕ್ಕಡಿಗಳಲ್ಲಿ ಜನರು ಬರುತ್ತಾರೆ. ಅಂತಹ ವೇಳೆ ಜಾನುವಾರುಗಳಿಗೆ ಮೇವು ಬ್ಯಾಂಕ್ ಸ್ಥಾಪಿಸುವಂತೆ ಸೂಚನೆ ನೀಡಿದ್ದೇನೆ.
>
> **ಸಿದ್ದರಾಮಯ್ಯ**, ಮುಖ್ಯಮಂತ್ರಿ

ದಾನಿಗಳಿಗೆ, ಸಂಸ್ಥೆಗಳಿಗೆ ಅವಕಾಶ ಕಲ್ಪಿಸಿ

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, ಸಾಕಷ್ಟು ಜಮೀನು ಲಭ್ಯವಿರುವುದರಿಂದ ವಸತಿ ಮತ್ತಿತರ ಸೌಲಭ್ಯ ಒದಗಿಸಲು ಮುಂದಾಗುವ ದಾನಿಗಳು ಮತ್ತು ಸಂಸ್ಥೆಗಳಿಗೆ ಅವಕಾಶ ಕಲ್ಪಿಸಬೇಕು. ಸೋಲಾರ್ ಪಾರ್ಕ್, ರೋಪ್ ವೇ ಮತ್ತಿತರ ಯೋಜನೆಗಳನ್ನು ಜಾರಿಗೊಳಿಸಬೇಕು. ಪಿಪಿಪಿ ಮಾದರಿ ಯೋಜನೆಗಳಡಿ ಬಂಡವಾಳ ಹೂಡಿಕೆಗೆ ಮುಂದಾಗುವವರಿಗೆ ಕನಿಷ್ಠ 60 ವರ್ಷ ಗುತ್ತಿಗೆ ನೀಡಬೇಕು ಎಂದರು.

ಗಲಭೆ ಕೇಸ್ ವಾಪಸ್ ಪಡೆದಿದಕ್ಕೆ ಪ್ರಹ್ಲಾದ್ ಜೋಶಿ ವಾಗ್ದಾಳಿ

ಸಿಎಂ ಭಯೋತ್ಪಾದಕರ ಬೆಂಬಲಿಗ

ಹುಬ್ಬಳ್ಳಿ: ಹುಬ್ಬಳ್ಳಿ ಗಲಭೆ ಪ್ರಕರಣದಲ್ಲಿ ಕೇಸ್ ವಾಪಸ್ ಪಡೆದು ಸಿಎಂ ಭಯೋತ್ಪಾದಕರ ಬೆಂಬಲಿಗರಾಗಿದ್ದಾರೆ ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಳೇ ಹುಬ್ಬಳ್ಳಿ ಗಲಭೆ ಕೇಸ್ ವಾಪಸ್ ಪಡೆದು ಕಾಂಗ್ರೆಸ್ ಸರಕಾರ ಘನಘೋರ ಅಪರಾಧ ಮಾಡಿದೆ. ಕೇಸ್ ವಾಪಸ್ ಪಡೆದಿರುವುದನ್ನು ನಾವು ವಿರೋಧ ಮಾಡಿ ಮನವಿ ಸಲ್ಲಿಸಲು ಅವಕಾಶ ಕೇಳಿದ್ದೇವೆ. ಆದರೆ ನಮ್ಮ ಮನವಿಯನ್ನು ಸಿಎಂ ಸ್ವೀಕಾರ ಮಾಡುತ್ತಿಲ್ಲ. ಇದು ಮುಖ್ಯಮಂತ್ರಿಗಳ ದುರಹಂಕಾರ ತೋರಿಸುತ್ತದೆ. ಈ ಮೂಲಕ ಸಿದ್ದರಾಮಯ್ಯ ಭಯೋತ್ಪಾದಕರ ಬೆಂಬಲಿಗರು ಎಂಬತಾಗುತ್ತದೆ. ನಾವು ಮನವಿ ಕೊಡೋದು ತಪ್ಪಾ? ಇದು ಎಂತಹ ಅಪಹ್ಯಾಸ ಎಂದು ಕಿಡಿಕಾರಿದ್ದಾರೆ.

ಮಾನಸಿಕ ಸಮತೋಲನ ಕಳೆದುಕೊಂಡಿದ್ದಾರೆ

ಹಳೇ ಹುಬ್ಬಳ್ಳಿ ಗಲಭೆ ಕೇಸ್ ವಾಪಸು ಪಡೆದಿದ್ದು, ತಪ್ಪು ಎಂದು ಗೊತ್ತಾಗಿದೆ. ಅಧಿಕಾರ ಹೋಗುತ್ತದೆ ಎನ್ನುವ ಚಿಂತೆಯಲ್ಲಿ ಮಾನಸಿಕ ಸಮತೋಲನ ಕಳೆದುಕೊಂಡಿದ್ದಾರೆ. ನಾನು ಸಾಕಷ್ಟು ವರ್ಷಗಳಿಂದ ಸಿದ್ದರಾಮಯ್ಯ ಅವರನ್ನು ನೋಡಿದ್ದೇನೆ. ಆದರೆ ಈ ಮಟ್ಟಕ್ಕೆ ಮಾನಸಿಕ ಸಮತೋಲನ ಕಳೆದುಕೊಳ್ಳುವ ಹಂತಕ್ಕೆ ಹೋಗಿರಲಿಲ್ಲ. ಹೀಗಾಗಿ ಏನೇನೋ ಮಾತನಾಡುತ್ತಿದ್ದಾರೆ. ಇಂತಹ ಹೇಳಿಕೆ ಅವರ ಸ್ಥಾನಕ್ಕೆ ಶೋಭೆ ತರುವುದಿಲ್ಲ. ಇದು ಸಣ್ಣ ಆಲೋಚನೆಯಾಗಿದೆ. ಹಿಂದೂಪರ ಸಂಘಟನೆಗಳ ಕೇಸ್ ವಾಪಸ್ ಪಡೆದಿದ್ದಾರೆ ಎಂದಿದ್ದಾರೆ. ಆದರೆ ಭಜರಂಗದಳ, ವಿಶ್ವ ಹಿಂದೂ ಪರಿಷತ್ತು. ಲಷ್ಕರ್ ತೊಯ್ಬಾ ಜೊತೆಗೆ ಲಿಂಕ್ ಇಲ್ಲ. ಆದರೆ ಇಲ್ಲಿ ಕೆಲವರು ಲಿಂಕ್ ಇದ್ದಾರೆ ಎಂದರು.

ಧಾರವಾಡದ ರೆಡ್ಡಿ ಸಹಕಾರ ಬ್ಯಾಂಕ್ ಶತಮಾನೋತ್ಸವ ಪ್ರಯುಕ್ತ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬ್ಯಾಂಕಿನ ಸಂಸ್ಥಾಪಕರಾದ ಎಫ್.ಟಿ.ನಲವಡಿ ಹಾಗೂ ಸಹಕಾರ ರಂಗದ ಭೀಷ್ಮ ಕೆ.ಎಚ್.ಪಾಟೀಲರ ಪುತ್ಥಳಿಗಳನ್ನು ಅನಾವರಣಗೊಳಿಸಿದರು.

ಹುಬ್ಬಳ್ಳಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟನೆ

ಕೋರ್ಟ್ ಅನುಮತಿ ನೀಡಿದರೆ ಗಲಭೆ ಪ್ರಕರಣ ವಾಪಸ್

ಹುಬ್ಬಳ್ಳಿ: ಸುಳ್ಳು ಕೇಸ್ ದಾಖಲಿಸಲಾಗಿದೆ ಎಂದು ಹಳೇಹುಬ್ಬಳ್ಳಿ ಗಲಭೆ ಪ್ರಕರಣವನ್ನು ಹಿಂಪಡೆಯಲು ಸಚಿವ ಸಂಪುಟ ನಿರ್ಧರಿಸಿದೆ. ಆದರೆ, ಅದಕ್ಕೆ ಕೋರ್ಟ್ ಅನುಮತಿ ಅಗತ್ಯ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟವಾಗಿ ಹೇಳಿದ್ದಾರೆ.

ಸುದ್ದಿಗಾರರರೊಂದಿಗೆ ಮಾತನಾಡಿದ ಅವರು, ಕೋರ್ಟ್ ಅನುಮತಿ ನೀಡಿದರೆ ಮಾತ್ರ ಪ್ರಕರಣ ಹಿಂಪಡೆಯಲು ಆಗುತ್ತದೆ. ಇಲ್ಲದಿದ್ದರೆ ಸಾಧ್ಯವಿಲ್ಲ ಎಂದರು.

ಸುಳ್ಳು ಪ್ರಕರಣಗಳು ದಾಖಲಾಗಿದ್ದರೆ, ಉದ್ದೇಶಪೂರ್ವಕವಾಗಿ ಕೇಸ್ ದಾಖಲಿಸಿದ್ದರೆ ಅಥವಾ ಹೋರಾಟಗಳಿಗೆ ಸಂಬಂಧಿಸಿ ಪ್ರಕರಣ ದಾಖಲಿಸಿದ್ದರೆ, ಅವುಗಳನ್ನು ಪರಿಶೀಲಿಸಲು ಸಂಪುಟ ಉಪಸಮಿತಿ ರಚಿಸಲಾಗುತ್ತದೆ. ಇದು ಎಲ್ಲ ಸರಕಾರದಲ್ಲೂ ಅಸ್ತಿತ್ವದಲ್ಲಿರುತ್ತದೆ. ಹಳೇಹುಬ್ಬಳ್ಳಿ ಗಲಭೆ ಪ್ರಕರಣವನ್ನು ಪರಿಶೀಲಿಸಿದ ಸಮಿತಿ, ಅದು ಸುಳ್ಳು ಪ್ರಕರಣ ಎಂದು ತಿಳಿಸಿತ್ತು. ಆ ವರದಿ ಸಚಿವ ಸಂಪುಟಕ್ಕೆ ಬಂದಿದ್ದು, ನಾವು ಒಪ್ಪಿಕೊಂಡಿದ್ದೇವೆ. ಬಿಜೆಪಿ ಆಡಳಿತವಿದ್ದಾಗಲೂ ಅನೇಕ ಅಪರೂಪದ ಪ್ರಕರಣಗಳನ್ನು ಹಿಂಪಡೆದಿತ್ತು ಎಂದು ಸಿಎಂ ಸಮರ್ಥಿಸಿಕೊಂಡರು.

ರಾಜಕೀಯ ಪ್ರೇರಿತ ಪ್ರಕರಣ: ಡಿಸಿಎಂ

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, ರಾಜಕೀಯ ಪ್ರೇರಿತವಾಗಿ ಹಳೇಹುಬ್ಬಳ್ಳಿ ಗಲಭೆ ಪ್ರಕರಣವನ್ನು ದಾಖಲಿಸಲಾಗಿದೆ. ಪ್ರಕರಣದಲ್ಲಿ ಹೆಸರಿದ್ದವರ್ಯಾರೂ ಯಾವುದರಲ್ಲೂ ಭಾಗಿಯಾಗಿಲ್ಲ ಎಂದು ಸಾಬೀತಾಗಿದೆ ಎಂದು ಹೇಳಿದರು. ಇದು ರಾಜಕಾರಣ, ಪ್ರತಿಯೊಂದು ಹಂತದಲ್ಲೂ ಬಿಜೆಪಿ ರಾಜಕೀಯ ಮಾಡುತ್ತಿದೆ. ಅವರು ಅಧಿಕಾರದಲ್ಲಿ ಇದ್ದಾಗ ಎಷ್ಟೋ ಪ್ರಕರಣಗಳನ್ನು ವಾಪಸ್ ಪಡೆದಿದ್ದಾರೆ. ಆರ್‌ಎಸ್‌ಎಸ್ ಮೇಲೆ, ಬಜರಂಗದಳದ ಮೇಲೆ ಹಾಗೂ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಿದವರ ಮೇಲೆ ದಾಖಲಾಗಿದ್ದ ಪ್ರಕರಣಗಳನ್ನು ಸಹ ವಾಪಸ್ ಪಡೆದಿದ್ದಾರೆ. ಅದರ ಪಟ್ಟಿಯನ್ನೇ ಕೊಡುತ್ತೇವೆ' ಎಂದರು.

ಜೋಶಿ ನಿಜವಾದ ಭಯೋತ್ಪಾದಕ

ಸಿಎಂ ಭಯೋತ್ಪಾದಕರ ಬೆಂಬಲಿಗರು ಎಂದು ಹೇಳಿರುವ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಹೇಳಿಕೆಗೆ ಸಿಎಂ ಪ್ರತಿಕ್ರಿಯಿಸಿ, ಪ್ರಹ್ಲಾದ್ ಜೋಶಿಯೇ ಭಯೋತ್ಪಾದಕ. ಬಿಜೆಪಿಯವರು ಎಲ್ಲ ಸುಳ್ಳು ವಿಚಾರಗಳ ಮೇಲೆಯೇ ಪ್ರತಿಭಟನೆ ಮಾಡುವುದು. ಅವರು ಸಹ ಅನೇಕ ಪ್ರಕರಣಗಳನ್ನು ಹಿಂತೆಗೆದುಕೊಂಡಿದ್ದಾರೆ ಎಂದು ಸಿಎಂ ಸಿದ್ದರಾಮಯ್ಯ ಟೀಕಿಸಿದರು.

> ಯಾವುದೇ ಪ್ರಕರಣದಲ್ಲಿ ಮುಸ್ಲಿಮರ ಹೆಸರು ಕೇಳಿಬಂದಾಗ ಮಾತ್ರ ಬಿಜೆಪಿಯವರು ಹೋರಾಟಕ್ಕೆ ಬರುತ್ತಾರೆ. ಬಿಜೆಪಿ ಅಧಿಕಾರದಲ್ಲಿದ್ದಾಗ ರಾಜ್ಯದಲ್ಲಿ ಹಿಂದೂಪರ ಸಂಘಟನೆಗಳಿಂದ ಇಂತಹ ಎಷ್ಟೋ ಘಟನೆಗಳಾಗಿವೆ. ಆದರೆ ಅವರು ಅವುಗಳ ಬಗ್ಗೆ ಚಕಾರ ಎತ್ತುತ್ತಿಲ್ಲ ಏಕೆ.
>
> **ಸಂತೋಷ್ ಲಾಡ್**, ಸಚಿವ

ಚನ್ನಪಟ್ಟಣ ಉಪಚುನಾವಣೆ ಘೋಷಣೆ ಬಾಕಿ | ಕೇಂದ್ರ ಹಾಗೂ ರಾಜ್ಯ ಸಚಿವರ ಗುದ್ದಾಟದ ನಡುವೆ ಮಾಜಿ ಸಚಿವರ ಕಾದಾಟ | ಯೋಗಿ ನಡೆ ನಿರ್ಣಾಯಕ

ಬೊಂಬೆನಾಡಿನ ಶಾಸಕ ಸ್ಥಾನಕ್ಕೆ ಸಚಿವರ ಪೈಪೋಟಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಚನ್ನಪಟ್ಟಣ ಕ್ಷೇತ್ರದ ಉಪ ಚುನಾವಣಾ ಕಣ ಕೇಂದ್ರ ಹಾಗೂ ರಾಜ್ಯ ಸಚಿವರಿಬ್ಬರ ಕಾದಾಟಕ್ಕೆ ನೇರ ವೇದಿಕೆಯಾಗಿದೆ. ಈ ಮಧ್ಯೆ ಮೈತ್ರಿಯ ಅಪಸ್ವರದ ನಡುವೆಯೂ ಸ್ಥಳೀಯರಾದ ಮಾಜಿ ಸಚಿವರ ನಡೆಯೂ ನಿಗೂಢವಾಗಿದೆ. ಬೊಂಬೆ ಪಟ್ಟಣದ ವಶಕ್ಕಾಗಿ ಮೂವರು ಘಟಾನುಘಟಿಗಳು ಹೋರಾಟ ಮಾಡಬೇಕಾದ ಅನಿವಾರ್ಯತೆ ಎದುರಾಗಿದೆ.

ಕಾಂಗ್ರೆಸ್ ಅಭ್ಯರ್ಥಿ ನಾನೇ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಈ ಹಿಂದೆಯೇ ಘೋಷಣೆ ಮಾಡಿದ್ದರಲ್ಲದೆ, ಭಾನುವಾರ ಇದನ್ನು ಖಚಿತಗೊಳಿಸಿದ್ದಾರೆ. ಇತ್ತ ಪುತ್ರ ನಿಖಿಲ್ ರ ಹೆಸರನ್ನು ತೇಲಿ ಬಿಟ್ಟು ನಾನೇ ಅಭ್ಯರ್ಥಿ ಎಂದು ಕೇಂದ್ರ ಸಚಿವ ಕುಮಾರಸ್ವಾಮಿ ಘೋಷಿಸಿಕೊಂಡಿದ್ದು ವಾಕ್ ಸಮರ ತಾರಕಕ್ಕೇರಿದೆ. ಮೈತ್ರಿಯಲ್ಲಿ ಮೂಡದ ಒಮ್ಮತದಿಂದಾಗಿ ಸಿ.ಪಿ.ಯೋಗೇಶ್ವರ್ ತಮ್ಮ ತವರು ಕ್ಷೇತ್ರ ಉಳಿಸಿಕೊಳ್ಳಲು ಹೊಸ ದಾಳ ಉರುಳಿಸುವ ಯೋಜನೆ ಇದೆ.

ಕಾಂಗ್ರೆಸ್‌ನಿಂದ ಡಿ.ಕೆ.ಶಿವಕುಮಾರ್ ಸ್ಪರ್ಧಿಸುತ್ತಿದ್ದು, ಈಗಾಗಲೇ ಒಂದು ಹಂತದ ಸಂಘಟನೆ ಹಾಗೂ ತಂತ್ರ ಕೂಡ ಮಾಡಿ ಬೂತ್‌ಗಳಲ್ಲಿ ಪಕ್ಷ ಕಾರ್ಯಕರ್ತರಿಗೆ ಹುರುಪು ತುಂಬಿದ್ದಾರೆ. ಕಳೆದ ವಾರ ಪಕ್ಷ ಸಂಘಟನೆ ಉದ್ದೇಶದಿಂದ ಚನ್ನಪಟ್ಟಣ ಕ್ಷೇತ್ರಕ್ಕೆ ಭೇಟಿ ನೀಡಿದ್ದ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಕಾರ್ಯಕರ್ತರ ಸಭೆ ಕರೆದಿದ್ದಲ್ಲದೆ , ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಪ್ರಚಾರ ಮಾಡಿದ್ದಾರೆ.

20ಕ್ಕೂ ಹೆಚ್ಚು ಬಾರಿ ಡಿಸಿಎಂ ಪ್ರದಕ್ಷಿಣೆ

ಉಪ'ಚು'ನಾವ'ಣೆ' ಘೋಷಣೆ ಮುನ್ನವೇ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕಳೆದ ನಾಲ್ಕೈದು ತಿಂಗಳಿಂದ 20ಕ್ಕೂ ಹೆಚ್ಚು ಬಾರಿ ಕ್ಷೇತ್ರಕ್ಕೆ ಆಗಮಿಸಿ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿದ್ದಾರೆ. ಕ್ಷೇತ್ರದ ಕೋಡಂಬಳ್ಳಿ, ಇಗ್ಗಲೂರು, ಮಳೂರು, ಬೇವೂರು ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಜೆಡಿಎಸ್ ಕಾರ್ಯಕರ್ತರ ಸಭೆ ನಡೆಸಿರುವ ಕುಮಾರಸ್ವಾಮಿ, ಪ್ರತಿತಂತ್ರ ಹೂಡಿದ್ದು ಮಗನ ಗೆಲುವಿಗಾಗಿ ಶ್ರಮಿಸಬೇಕಿದೆ.

ಸಿ.ಪಿ.ಯೋಗೀಶ್ವರ್ ಚಕ್ಕೆರೆ ಗ್ರಾಮದ ಸ್ಥಳೀಯರು. ಅಲ್ಲದೆ ಈ ಹಿಂದೆ ಶಾಸಕರಾಗಿದ್ದರು. ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಕುಮಾರಸ್ವಾಮಿ ವಿರುದ್ಧ ಸೋಲಬೇಕಾಯಿತು. ಆದರೆ, ಈಗಿನ ಬಿಜೆಪಿ ಜೆಡಿಎಸ್ ಮೈತ್ರಿಯಲ್ಲಿ ಇನ್ನೂ ಒಮ್ಮತ ಮೂಡಿಬಂದಿಲ್ಲ. ಕ್ಷೇತ್ರದ ಶಾಸಕರಾಗಿದ್ದ ಕುಮಾರಸ್ವಾಮಿ ಲೋಕಸಭೆ ಚುನಾವಣೆಯಲ್ಲಿ ರಾಮನಗರ ಕ್ಷೇತ್ರದಿಂದ ಗೆದ್ದು ಎನ್‌ಡಿಎ ಮೈತ್ರಿಕೂಟದಲ್ಲಿ ಸಚಿವರಾಗಿದ್ದಾರೆ. ಹೀಗಾಗಿ ಜೆಡಿಎಸ್‌ಗೆ ಈ ಕ್ಷೇತ್ರ ಎಂದು ಹೇಳಲಾಗುತ್ತಿದ್ದರೂ, 2013ರ ಚುನಾವಣೆಯಲ್ಲಿ ಸಮಾಜವಾದಿ ಪಾರ್ಟಿಯಿಂದ ಟಿಕೆಟ್ ಪಡೆದು ಕುಮಾರಸ್ವಾಮಿ ಅವರ ಪತ್ನಿ ಅನಿತಾ ಕುಮಾರಸ್ವಾಮಿ ಅವರ ವಿರುದ್ಧ ಜಯಗಳಿಸಿದ್ದ ಸಿ.ಪಿ.ಯೋಗೀಶ್ವರ್ ಅವರ ನಡೆ ಇನ್ನು ತಿಳಿಯಬೇಕಿದೆ.

ಮೈತ್ರಿ ಧರ್ಮದಂತೆ ಕುಮಾರಸ್ವಾಮಿಯ ಗೆಲುವಿಗೆ ಯೋಗೇಶ್ವರ್ ಕೂಡ ಶ್ರಮಿಸಿದ್ದರಲ್ಲದೆ, ಚನ್ನಪಟ್ಟಣ ಕ್ಷೇತ್ರದ ಟಿಕೆಟ್ ತಮಗೆ ಸಿಗಲಿದೆ ಎಂದುಕೊಂಡಿದ್ದರು. ಆದರೆ ಕಳೆದ ಒಂದು ತಿಂಗಳಿನಿಂದ ಟಿಕೆಟ್‌ಗಾಗಿ ಪರದಾಡುವಂತಾಗಿದೆ. ಹಲವು ಬಾರಿ ಯೋಗೇಶ್ವರ್ ದೆಹಲಿಗೆ ದಂಡಯಾತ್ರೆ ನಡೆಸಿದರೂ ಬಿಜೆಪಿ ವರಿಷ್ಠರು ಇನ್ನೂ ಅಂತಿಮವಾಗಿ ಮೈತ್ರಿ ಅಭ್ಯರ್ಥಿ ಪ್ರಕಟಿಸಿಲ್ಲ. ಹೀಗಿದ್ದರೂ ಕುಮಾರಸ್ವಾಮಿ ಈಗ ತಾವೇ ಅಭ್ಯರ್ಥಿ ಎಂದಿರುವುದು ಯೋಗೇಶ್ವರ ನಡೆಯ ಮೇಲೆ ಈ ಕ್ಷೇತ್ರದ ಕಣ್ಣು ನೆಟ್ಟಿದೆ.

> ಬಾಲಕೃಷ್ಣ ಬಗ್ಗೆ ಸಿದ್ದರಾಮಯ್ಯ ಹಾಗೂ ಮಹಾದೇವಪ್ಪ 600 ಕೋಟಿ ರು. ಕಾಮಗಾರಿ ಮಾಡದೇ ಬಿಲ್ ಮಾಡಿಕೊಂಡಿದ್ದಾರೆ ಎಂದು ವಿಧಾನಸಭೆಯಲ್ಲಿ ಆರೋಪ ಮಾಡಿದ್ದರು. ಅಂತಹವರನ್ನೆ ಸಿಎಂ ಜೊತೆಗಿಟ್ಟು ಕೊಂಡಿದ್ದಾರೆ. ಇವರು ನಾನು ಸಿಎಂ ಆಗಿದ್ದಾಗಲೂ ನನ್ನ ಜೊತೆಗೆ ಇದ್ದಾರೆ. ಆಗ ಚೂರಿಹಾಕಿ ಬಿಟ್ಟುಹೋಗಿದ್ದರು. ತೆವಲು ತೀರಿಸಿಕೊಳ್ಳಲು ಹೇಳಿಕೆ ಕೊಟ್ಟರೆ ನಾನು ಉತ್ತರ ಕೊಡಬೇಕಾ. ಏನೇ ಆಗಲಿ ಚನ್ನಪಟ್ಟಣದಲ್ಲಿ ಎನ್‌ಡಿಎ ಅಭ್ಯರ್ಥಿ ನಾನೇ.
>
> **ಎಚ್.ಡಿ.ಕುಮಾರಸ್ವಾಮಿ**, ಕೇಂದ್ರ ಸಚಿವ

> ಚನ್ನಪಟ್ಟಣ ಉಪ ಚುನಾವಣೆಯಲ್ಲಿ ನನ್ನ ಕುಟುಂಬದ ವರಲ್ಲ ನಾನೇ ಅಭ್ಯರ್ಥಿ. ಚನ್ನಪಟ್ಟಣದಲ್ಲಿ ನಮ್ಮ ಕುಟುಂಬದವರ ಸ್ಪರ್ಧೆಯಿರುವುದಿಲ್ಲ. ನಾನೇ ಅಭ್ಯರ್ಥಿ ಎಂದು ಮತ ಕೇಳುತ್ತೇನೆ. ಚುನಾವಣೆಗೆ ನಾವು ವೇದಿಕೆ ಸಿದ್ದ ಮಾಡಿಕೊಳ್ಳುತ್ತಿದ್ದೇವೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ನಮಗೆ ಎದುರಾಳಿ ವಿರುದ್ಧ ಕಡಿಮೆ ಅಂತರದ ಮತಗಳು ಚನ್ನಪಟ್ಟಣದಲ್ಲಿ ಬಂದಿವೆ. ನನ್ನ ಮೇಲೆ ಜನರಿಗೆ ಭರವಸೆಯಿದೆ.
>
> -**ಡಿ.ಕೆ.ಶಿವಕುಮಾರ್**, ಉಪಮುಖ್ಯಮಂತ್ರಿ

ವಿಶ್ವವಾಣಿ

ಸಂಪಾದಕೀಯ

ಒಂದು ಕಣ್ಣಿಗೆ ಬೆಣ್ಣೆ, ಮತ್ತೊಂದಕ್ಕೆ ಸುಣ್ಣವೇ?

ಜನ್ಮ ತಳೆದಾರಭ್ಯ ಏನಾದರೊಂದು ವಿವಾದಕ್ಕೆ, ಆರೋಪಕ್ಕೆ ಗುರಿಯಾಗುತ್ತಲೇ ಬಂದಿರುವಂಥದ್ದು 'ಜಿಎಸ್‌ಟಿ' ಎಂಬ ತೆರಿಗೆ ವ್ಯವಸ್ಥೆ. ಇದರ ಸ್ವರೂಪ ಮತ್ತು ಆಶಯದಲ್ಲಿ ನ್ಯೂನತೆ ಇಲ್ಲದಿದ್ದರೂ ಅನುಷ್ಠಾನದಲ್ಲಿ ಮಾತ್ರ 'ರಾಜಕೀಯ' ಇಣುಕು ಹಾಕುತ್ತಿರುವುದರಿಂದಾಗಿ ಸಹಜ ಫಲಾನುಭವಿಗಳಿಂದ ಆಗಿಂದಾಗ್ಗೆ ಅಸಮಾಧಾನದ ದನಿಗಳು ಏಳುತ್ತಲೇ ಇವೆ. 28 ರಾಜ್ಯಗಳಿಗೆ ಕೇಂದ್ರವು ಅನುದಾನ ಬಿಡುಗಡೆ ಮಾಡಿದ ಸಂದರ್ಭದಲ್ಲಿ ಸ್ಪಷ್ಟವಾಗಿ ಕಂಡುಬಂದಿರುವ ತಾರತಮ್ಯವು ಈ ದನಿಗೆ ಮತ್ತಷ್ಟು ಬಲ ತುಂಬಿದೆ ಎನ್ನಬೇಕು. ಇದಕ್ಕೊಂದು ಉದಾಹರಣೆ ನೀಡುವುದಾದರೆ, ರಾಜ್ಯಗಳಿಂದ ಸಂಗ್ರಹಿಸುವ ತೆರಿಗೆ ಹಣದಲ್ಲಿ ಮಧ್ಯಪ್ರದೇಶ ಮತ್ತು ರಾಜಸ್ಥಾನ ರಾಜ್ಯಗಳಿಗೆ ಕ್ರಮವಾಗಿ ಶೇ.7.5 ಹಾಗೂ ಶೇ.6.02ರಷ್ಟು ಪಾಲು ದಕ್ಕಿದ್ದರೆ, ಕರ್ನಾಟಕಕ್ಕೆ ಸಿಕ್ಕಿರುವುದು ಶೇ.3.64ರ ಪಾಲಷ್ಟೇ. ಮಾತ್ರವಲ್ಲ, ತುಲನಾತ್ಮಕವಾಗಿ ಹೆಚ್ಚು ಜಿಎಸ್‌ಟಿಯನ್ನು ಪಾವತಿಸುತ್ತಿರುವ ಕರ್ನಾಟಕವನ್ನು ಬದಿಗೆ ಸರಿಸಿ, ಆಂಧ್ರಪ್ರದೇಶಕ್ಕೆ ಹೆಚ್ಚು ಹಣ ನೀಡಿರುವ ಕೇಂದ್ರದ ನಡೆಯನ್ನು ಒಪ್ಪಲಾದೀತೇ? ಹೀಗಾಗಿ, 'ಅಭಿವೃದ್ಧಿಶೀಲ ರಾಜ್ಯಕ್ಕೆ ಹೀಗೆ ವಿನಾಕಾರಣ ನೀಡಲಾಗುತ್ತಿರುವ ಪೆಟ್ಟನ್ನು ಸಹಿಸಲಾಗದು' ಎಂದಿರುವ ರಾಜ್ಯದ ಆಳುಗ ವ್ಯವಸ್ಥೆಯು 'ತೆರಿಗೆ ಹಂಚಿಕೆಗಿರುವ ಮಾನದಂಡವನ್ನೇ ಬದಲಾಯಿಸಬೇಕು' ಎಂದು ಆಗ್ರಹಿಸಿರುವುದು ಸಹಜವಾಗೇ ಇದೆ. ಏಕೆಂದರೆ, ಹೇಳಿಕೇಳಿ ನಮ್ಮದು ಒಕ್ಕೂಟ ವ್ಯವಸ್ಥೆ. ಇದರ ಒಂದೊಂದು ಸಹಭಾಗಿ ರಾಜ್ಯವನ್ನೂ ಸಮಾನ ದೃಷ್ಟಿಕೋನದಿಂದ ನೋಡಬೇಕು; ಅದನ್ನು ಬಿಟ್ಟು ಅನುದಾನದಲ್ಲಿ ಹೀಗೆ ತಾರತಮ್ಯ ಮಾಡಿದರೆ 'ಒಂದು ಕಣ್ಣಿಗೆ ಬೆಣ್ಣೆ, ಮತ್ತೊಂದಕ್ಕೆ ಸುಣ್ಣ' ಎಂಬ ಆಕ್ಷೇಪಣೆಗೆ ಅದು ಪುಷ್ಟಿ ನೀಡುವುದಿಲ್ಲವೇ? ಕೇಂದ್ರ ಮತ್ತು ರಾಜ್ಯದಲ್ಲಿರುವ ಆಳುಗ ವ್ಯವಸ್ಥೆಗಳನ್ನು ನಿರ್ವಹಿಸುತ್ತಿರುವವರು ಬೇರೆ ಬೇರೆ ರಾಜಕೀಯ ಪಕ್ಷ ಅಥವಾ ಮೈತ್ರಿಕೂಟಕ್ಕೆ ಸೇರಿದವರೇ ಇರಬಹುದು; ಅವುಗಳ ನೇಪಥ್ಯದಲ್ಲಿ ರಾಜಕೀಯದ ಇಷ್ಟಾನಿಷ್ಟಗಳು ಗುಪ್ತಗಾಮಿನಿಯಾಗಿ ಹರಿಯುತ್ತಿರಬಹುದು. ಹಾಗೆಂದ ಮಾತ್ರಕ್ಕೆ 'ಜನಹಿತ'ದ ವಿಷಯದಲ್ಲೂ ರಾಜಕೀಯ ಮಾಡಿದರೆ ಹೇಗೆ? ಕೇಂದ್ರದ ಇಂಥ ಅನಪೇಕ್ಷಿತ ನಡೆಯಿಂದಾಗಿಯೇ 'ನಮ್ಮ ತೆರಿಗೆ-ನಮ್ಮ ಹಕ್ಕು' ಎಂದು ರಾಜ್ಯದವರು ಆಗ್ರಹಿಸುವಂತಾಗುತ್ತದೆ. ಈ ಅಪ್ರಿಯ ಸತ್ಯವನ್ನು ಕೇಂದ್ರ ಸರಕಾರ ಮರೆಯಬಾರದು.

ಸೊಂಪಾದಕೀಯ

ಜಾಬ್‌ಲೆಸ್ ಜನ

ಭಾರತದ ಸಾಮಾಜಿಕ ಜಾಲತಾಣಗಳಲ್ಲಿ ಅತಿಹೆಚ್ಚು ಜನಪ್ರಿಯ ಅಂದ್ರೆ ಅದು ಫೇಸ್‌ಬುಕ್ (ಎಫ್‌ಬಿ). ಇಲ್ಲಿ ಜನರು ತಮ್ಮ ವೈಯಕ್ತಿಕ ಜೀವನದಿಂದ ಹಿಡಿದು ದೇಶದಲ್ಲಿ ಆಗೋ ಎಲ್ಲ ಬೆಳವಣಿಗೆಗಳ ಬಗ್ಗೆಯೂ ತಮ್ಮ ಒಪೀನಿಯನ್ ಹಾಕಿ ಖುಷಿ ಪಟ್ಟುಕೊಳ್ಳುತ್ತಾರೆ. ಕೆಲವರಂತೂ ಈ ಫೇಸ್‌ಬುಕ್‌ಗೆ ಎಷ್ಟು ಅಡಿಕ್ಟ್ ಆಗಿರ್ತಾರೆ ಅಂದ್ರೆ, 'ನೀವೆಲ್ಲಿ ಕೆಲಸ ಮಾಡ್ತೀರಾ?' ಅಂತ ಕೇಳಿದ್ರೆ 'ಫೇಸ್‌ಬುಕ್‌ನಲ್ಲಿ' ಅಂತ ಹೇಳುವಷ್ಟು. ಆದರೆ ಈಗ ಫೇಸ್‌ಬುಕ್ ಸಂಸ್ಥೆಯಿಂದ ಒಂದು ಸುದ್ದಿ ಬಂದಿದೆ. ಅದೇನಪ್ಪಾ ಅಂದ್ರೆ 'ಎಫ್‌ಬಿ'ಯಲ್ಲಿ ಈಗ ಅನೇಕರನ್ನು ಕೆಲಸದಿಂದ ಕಿತ್ತುಹಾಕುತ್ತಿದ್ದಾರಂತೆ. ಹಾಗಂತ, ಇದು ಮಾಡೋಕೆ ಬೇರೆ ಕೆಲಸ ಇಲ್ಲದೆ ಫೇಸ್‌ಬುಕ್‌ನಲ್ಲಿ ಕಾಲ ಕಳೆಯುವವರಿಗೆ ಸಂಬಂಧಪಟ್ಟಿದ್ದು ಅಂದ್ಕೊಬೇಡಿ. ಇದು ಫೇಸ್‌ಬುಕ್ ಆಫೀಸಿನಲ್ಲಿ ಕೆಲಸ ಮಾಡುವ ಉದ್ಯೋಗಿಗಳಿಗೆ ಸಂಬಂಧಪಟ್ಟ ವಿಷಯ. ಹಾಗಾಗಿ 'ಫೇಸ್‌ಬುಕ್‌ನಲ್ಲಿ ಕೆಲಸ ಮಾಡುವ' ನಮ್ಮ ಕೆಲವು ಯುವಕ-ಯುವತಿಯರು ಇದರಿಂದ ಗಾಬರಿ ಪಡಬೇಕಾಗಿಲ್ಲ. ಪ್ರಪಂಚದಾದ್ಯಂತ ಕೋಟ್ಯಂತರ ಗ್ರಾಹಕರನ್ನು ಹೊಂದಿರುವ ಫೇಸ್‌ಬುಕ್‌ಗೆ ಕೆಲಸಗಾರರನ್ನು ಕಿತ್ತುಹಾಕುವ ಗತಿ ಯಾಕೆ ಬಂತು ಅನ್ನೋದು ಗೊತ್ತಿಲ್ಲ. ಆದರೆ ಬಳಕೆದಾರರು ಆಕ್ಷೇಪಾರ್ಹ ಬರವಣಿಗೆಗಳನ್ನು ಹಾಕಿದಾಗ ಅವುಗಳನ್ನು ಕಿತ್ತುಹಾಕುವಷ್ಟೇ ಸಲೀಸಾಗಿ ಈಗ ಫೇಸ್‌ಬುಕ್ ತನ್ನ ನೌಕರರನ್ನು ಕಿತ್ತುಹಾಕಲಿದೆ. ಆದರೆ ಈಗ ನೌಕರರು ಕಡಿಮೆ ಆಗಿರೋದ್ರಿಂದ ನಮ್ಮ ಪೋಸ್ಟ್‌ಗಳನ್ನು ಪರಿಶೀಲನೆ ಮಾಡುವವರು ಕಮ್ಮಿ ಆಗುತ್ತಾರೆ. ಹಾಗಾಗಿ ಕುಂಟುನೆಪ ಹೇಳಿ, ಸುಖಾಸುಮ್ಮನೆ ತಮಾಷೆಗೆ ಹಾಕಿದ ಪೋಸ್ಟ್‌ಗಳನ್ನೂ ರಿಪೋರ್ಟ್ ಮಾಡಿ ಪೋಸ್ಟ್ ಡಿಲೀಟ್ ಮಾಡೋದು, ಅಕೌಂಟ್ ರಿಸ್ಟ್ರಿಕ್ಟ್ ಮಾಡೋದು ಇಂಥದ್ದೆಲ್ಲ ಇನ್ನು ಮುಂದೆ ಆದ್ರೂ ಕಮ್ಮಿ ಆಗುತ್ತೇನೋ ನೋಡ್ಬೇಕು ಅಂತ ಫೇಸ್‌ಬುಕ್ ಬಳಕೆದಾರರಂತೂ ಕೊಂಚ ನಿರಾಳವಾಗಿ ದ್ದಾರೆ. ಆದರೆ ಫೇಸ್‌ಬುಕ್ ತನ್ನ ಯಾವ ಡಿಪಾರ್ಟ್‌ಮೆಂಟ್‌ನ ಕೆಲಸಗಾರ ರನ್ನು ಕಿತ್ತುಹಾಕಲಿದೆ ಅನ್ನೋದು ಇನ್ನೂ ಸ್ಪಷ್ಟವಾಗಿಲ್ಲ. ಆ ನೌಕರರು ಮಾಡಿದ ತಪ್ಪು ಏನು ಅಂತಾನೂ ಗೊತ್ತಿಲ್ಲ. ಆದರೆ, ಫೇಸ್‌ಬುಕ್ ಆಫೀಸಿ ನಲ್ಲಂತೂ, 'ಮಾಡೋ ಕೆಲಸ ಬಿಟ್ಟು ಯಾವಾಗ್ಲೂ ಫೇಸ್‌ಬುಕ್ ನೋಡ್ತಾ ಕೂತಿದ್ದ' ಅಂತ ಕಾರಣ ಕೊಟ್ಟು ಯಾರನ್ನೂ ಕೆಲಸದಿಂದ ತೆಗೆಯೋಕಾಗಲ್ಲ ಬಿಡಿ!!

ಸಂಪಾದಕರ ಸದ್ಯಶೋಧನೆ

ಎರಡು ಭಾರತಗಳ ಮತದಾರರು

ಭಾರತದ ಮತದಾರನ ಮನಸ್ಸನ್ನು ಅರಿಯುವುದು ಸುಲಭವಲ್ಲ. ಮತ ಎಣಿಕೆ ಆರಂಭವಾಗುವ ತನಕ ಮತದಾರನ ಒಲವು ಯಾವ ಕಡೆಗಿದೆ ಎಂಬುದನ್ನು ಲೆಕ್ಕ ಹಾಕುವುದು ಸಾಧ್ಯವಿಲ್ಲ. ಇಡೀ ದೇಶಕ್ಕೆ ಅನ್ವಯವಾಗುವ ಏಕಸ್ವರೂಪದ ಜನಾದೇಶ ಬಂದಿರುವ ನಿದರ್ಶನಗಳು ಕಮ್ಮಿ. ತುರ್ತುಪರಿಸ್ಥಿತಿಯ ನಂತರ 1977ರಲ್ಲಿ ಉತ್ತರ ಭಾರತದ ಮತದಾರ ಕಾಂಗ್ರೆಸ್ ಪಕ್ಷವನ್ನು ತಿರಸ್ಕರಿಸಿದರೆ, ದಕ್ಷಿಣ ಭಾರತದ ಮತದಾರ ಆ ಪಕ್ಷವನ್ನು ಬೆಂಬಲಿಸಿದ್ದನ್ನು ಮರೆಯುವಂತಿಲ್ಲ. ಅಂದರೆ ಉತ್ತರ ಭಾರತ-ದಕ್ಷಿಣ ಭಾರತದ ಮತದಾರರ ಮಧ್ಯೆ ವ್ಯತಿರಿಕ್ತ ತೀರ್ಪು ವ್ಯಕ್ತವಾಗಿತ್ತು. ಆ ಚುನಾವಣೆಯಲ್ಲಿ ಕಾಂಗ್ರೆಸ್ 154 ಕ್ಷೇತ್ರಗಳಲ್ಲಿ ಜಯ ಗಳಿಸಿತ್ತು. ಆ ಪೈಕಿ ಕೇವಲ ಇಬ್ಬರು ಹಿಂದಿ ಬೆಲ್ಟ್ ಅಥವಾ ಉತ್ತರ ಭಾರತದಿಂದ ಆಯ್ಕೆಯಾಗಿದ್ದರು. ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು ಮತ್ತು ಕೇರಳದಿಂದ 92 ಸದಸ್ಯರು ಆಯ್ಕೆಯಾಗಿದ್ದರು. ಉತ್ತರ ಭಾರತ ಕಾಂಗ್ರೆಸ್ಸನ್ನು ಸಾರಾಸಗಟಾಗಿ ತಿರಸ್ಕರಿಸಿದ್ದರೆ, ದಕ್ಷಿಣ ಭಾರತ ಇಂದಿರಾ ಗಾಂಧಿಯವರನ್ನು ಬೆಂಬಲಿಸಿತ್ತು. ನರ್ಮದಾ ನದಿಯ ಉತ್ತರದ ದಿಕ್ಕಿಗೆ ಸಂಪೂರ್ಣ ಜನತಾ ಅಲೆ, ಆದರೆ ದಕ್ಷಿಣದಲ್ಲಿ ಮಾತ್ರ ಆ ಅಲೆಯೇ ಕಣ್ಮರೆ. ದಕ್ಷಿಣ ಭಾರತದಲ್ಲಿ ತುರ್ತುಪರಿಸ್ಥಿತಿಯ ಬಿಸಿ ಅಷ್ಟೇನೂ ತಟ್ಟದಿರುವುದೇ ಇದಕ್ಕೆ ಕಾರಣ ಎಂದು ಕೆಲವರು ಹೇಳುವುದುಂಟು. ಆದರೆ ಇದು ಸಂಪೂರ್ಣ ನಿಜವಲ್ಲ. ತುರ್ತುಪರಿಸ್ಥಿತಿಯ ಕೇಂದ್ರಸ್ಥಾನ ದಿಲ್ಲಿಯಾಗಿತ್ತು ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ತುರ್ತುಪರಿಸ್ಥಿತಿಯ ಅತಿರೇಕಗಳು ದಕ್ಷಿಣ ಭಾರತದಲ್ಲೂ ಅನುಭವಕ್ಕೆ ಬಂದಿತ್ತು. ದಕ್ಷಿಣ ಭಾರತದ ಎಲ್ಲ ರಾಜ್ಯಗಳಲ್ಲೂ ರಾಜಕೀಯ ನಾಯಕರು, ಇಂದಿರಾ ವಿರೋಧಿಗಳು ಮತ್ತು ಪತ್ರಕರ್ತರನ್ನು ಸಾಕಷ್ಟು ಸಂಖ್ಯೆಯಲ್ಲಿ ಜೈಲಿಗೆ ಹಾಕಲಾಗಿತ್ತು. ಕೇರಳದಲ್ಲಿ ರಾಜನ್ ಕೊಲೆ ರಾಜಕೀಯ ಬಿರುಗಾಳಿಯನ್ನೇ ಎಬ್ಬಿಸಿತು. ತುರ್ತುಪರಿಸ್ಥಿತಿ ಮತ್ತು ಇಂದಿರಾ ಗಾಂಧಿಯವರನ್ನು ವಿರೋಧಿಸಿದವರೆಲ್ಲ ಸೆರೆವಾಸ ಅನುಭವಿಸಿದ್ದರು. ಬಲವಂತವಾಗಿ ಕುಟುಂಬ ಯೋಜನೆಯ ಕಾರ್ಯಕ್ರಮದ ಅಡಿಯಲ್ಲಿ ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆ ಮಾಡಿದ ಪ್ರಕರಣಗಳು ದಕ್ಷಿಣ ಭಾರತದಲ್ಲಿ ಕಮ್ಮಿಯಿತ್ತು. ಅದೇ ಉತ್ತರ ಭಾರತದಲ್ಲಿ ಇದಕ್ಕೆ ಭಾರಿ ವಿರೋಧ ವ್ಯಕ್ತವಾಯಿತು. ಆದರೆ ಇದೊಂದೇ ಮುಖ್ಯ ಕಾರಣವಾಗಲು ಸಾಧ್ಯವಿಲ್ಲ. ತುರ್ತುಪರಿಸ್ಥಿತಿಯ ಬಿಸಿ ಇಡೀ ದೇಶಕ್ಕೆ ತಟ್ಟಿದರೂ, ದಕ್ಷಿಣ ಭಾರತದ ಮತದಾರರೇಕೆ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿದರು ಎಂಬುದು ಇಂದಿಗೂ ರಹಸ್ಯವಾಗಿಯೇ ಉಳಿದಿದೆ. ಇದಕ್ಕೆ ಅಂದು ಅಧಿಕಾರದಲ್ಲಿದ್ದ ಕರ್ನಾಟಕ, ಆಂಧ್ರ, ಕೇರಳ ಮತ್ತು ತಮಿಳುನಾಡು ರಾಜ್ಯಗಳ ಮುಖ್ಯಮಂತ್ರಿಗಳ ಆಡಳಿತ ವೈಖರಿ ಮತ್ತು ಕಾರ್ಯಕ್ರಮಗಳು ಕಾರಣವಾ ಎಂಬುದು ಸಹ ಚರ್ಚಾಸ್ಪದ. ಕರ್ನಾಟಕದಲ್ಲಿ 28 ಕ್ಷೇತ್ರಗಳ ಪೈಕಿ 26ರಲ್ಲಿ ಕಾಂಗ್ರೆಸ್ ಭಾರಿ ವಿಜಯ ಸಾಧಿಸಿತ್ತು. ಬೆಂಗಳೂರು ದಕ್ಷಿಣದಲ್ಲಿ ಭಾರತೀಯ ಲೋಕದಳದ ಕೆ.ಎಸ್.ಹೆಗಡೆ ಮತ್ತು ಹಾಸನದಲ್ಲಿ ಅದೇ ಪಕ್ಷದಿಂದ ಎಸ್ .ನಂಜೇಶ ಗೌಡ ಆರಿಸಿ ಬಂದಿದ್ದರು. ಕಾಂಗ್ರೆಸ್ ಶೇ.56.8ರಷ್ಟು ಮತಗಳನ್ನು ಗಳಿಸಿತ್ತು. ಕೆನರಾ ಕ್ಷೇತ್ರದಲ್ಲಿ ರಾಮಕೃಷ್ಣ ಹೆಗಡೆಯವರಂಥ ನಾಯಕರ ವಿರುದ್ಧ ಅಷ್ಟಾಗಿ ಯಾರಿಗೂ ಗೊತ್ತಿಲ್ಲದ ಬಾಳು ಪುರ್ಸು ಕದಂ ಎಂಬ ಅಭ್ಯರ್ಥಿ ಗೆದ್ದು ಬಂದರು. ತುರ್ತುಪರಿಸ್ಥಿತಿ ಹೇರಿಕೆ ಇಂದಿರಾ ವರ್ಚಸ್ಸಿಗೆ ಕಳಂಕವನ್ನುಂಟು ಮಾಡಿದರೂ, ಅವರ ನೇತೃತ್ವದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವುದಾಗಿ ಇಂದಿರಾ ನಿಷ್ಠರು ನಂಬಿದ್ದರು. ಚುನಾವಣಾ ಪ್ರಚಾರ ನಿಮಿತ್ತ ದಕ್ಷಿಣ ಭಾರತದಲ್ಲಿ ಇಂದಿರಾ ಎಲ್ಲಿ ಹೋದರೂ ಜನ ಹೆಚ್ಚಿನ ಸಂಖ್ಯೆಯಲ್ಲಿ ಸೇರುತ್ತಿದ್ದರು. 340 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲ್ಲಬಹುದು ಎಂದು ಇಂದಿರಾ ನಿರೀಕ್ಷಿಸಿದ್ದರು. ದಕ್ಷಿಣ ಭಾರತದಂತೆ ಉತ್ತರ ಭಾರತವೂ ತಮ್ಮ ಪರವಾಗಿ ಮತ ಹಾಕಬಹುದು ಎಂಬುದು ಅವರ ಲೆಕ್ಕಾಚಾರವಾಗಿತ್ತು. ಆದರೆ ಉತ್ತರ ಭಾರತದ ಮತದಾರರು ಕಾಂಗ್ರೆಸ್ ಪಕ್ಷವನ್ನು ತಿರಸ್ಕರಿಸಿದ್ದರು. ದಕ್ಷಿಣ ಭಾರತದ ಮತದಾರರು ಇಂದಿರಾ ಕೈ ಹಿಡಿದಿದ್ದರು.

ಬೈ-ಎಲೆಕ್ಷನ್ ಸುತ್ತ ಪೈಪೋಟಿಯ ಹುತ್ತ



ಮೂರ್ತಿಪೂಜೆ

ಆರ್.ಟಿ.ವಿಠ್ಠಲಮೂರ್ತಿ
vveditoped@gmail.com

ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷ ಜಗತ್ ಪ್ರಕಾಶ್ ನಡ್ಡಾ ಅವರಿಗೆ ಮೊನ್ನೆ ಒಂದು ಮಹತ್ವದ ವರದಿ ರವಾನೆಯಾಗಿದೆ. ಈ ವರದಿಯನ್ನು ರವಾನಿಸಿದವರು ಕರ್ನಾಟಕದ ಬಿಜೆಪಿ ಉಸ್ತುವಾರಿ ರಾಧಾಮೋಹನದಾಸ್ ಅಗರ್ವಾಲ್. ವಸ್ತುಸ್ಥಿತಿ ಎಂದರೆ ಇಂಥದೊಂದು ವರದಿಯನ್ನು ರವಾನಿಸಲು ಸ್ವತಃ ನಡ್ಡಾ ಅವರೇ ರಾಧಾಮೋಹನದಾಸ್ ಅಗರ್ವಾಲ್ ಅವರಿಗೆ ಸೂಚಿಸಿದ್ದರಂತೆ.

''ರಾಜ್ಯ ಬಿಜೆಪಿಯ ಹಲವು ನಾಯಕರು ದಿಲ್ಲಿಗೆ ಬಂದು 'ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಬೈ-ಎಲೆಕ್ಷನ್ ಟಿಕೆಟ್ಟನ್ನು ನಮ್ಮ ಪಕ್ಷದವರಿಗೇ ಕೊಡಬೇಕು. ಯಾಕೆಂದರೆ ಅಲ್ಲಿ ಮೈತ್ರಿಕೂಟದ ಅಭ್ಯರ್ಥಿಯಾಗಿ ಗೆಲ್ಲುವ ಚಾನ್ಸಿರುವುದು ನಮಗೆ ಮಾತ್ರ' ಎಂದಿದ್ದಾರೆ. ಅವರ ಪ್ರಕಾರ, ಈ ಕ್ಷೇತ್ರದ ಟಿಕೆಟ್ ಬಿಜೆಪಿಗೆ ದಕ್ಕದಿದ್ದರೆ ಹಳೆ ಮೈಸೂರಿನ ಜಿಲ್ಲೆಗಳಲ್ಲಿ ಜೆಡಿಎಸ್‌ನದ್ದೇ ಏಕಸ್ವಾಮ್ಯವಾಗಿ ಬಿಜೆಪಿಯ ಶಕ್ತಿ ಕುಸಿದು ಹೋಗುತ್ತದೆ. ಇದನ್ನು ತಡೆಯುವ ಸಲುವಾಗಿಯಾದರೂ ಚನ್ನಪಟ್ಟಣದ ಟಿಕೆಟ್ಟನ್ನು ಬಿಜೆಪಿ ಅಭ್ಯರ್ಥಿಗೆ ಕೊಡಬೇಕು. ಅಂದ ಹಾಗೆ, ಬಿಜೆಪಿಗೆ ಟಿಕೆಟ್ ದಕ್ಕಿದರೆ ಜೆಡಿಎಸ್ ಕಳೆದುಕೊಳ್ಳುವುದೇನೂ ಇಲ್ಲ. ಇನ್‌ಫ್ಯಾಕ್ಟ್, ಚನ್ನಪಟ್ಟಣದಲ್ಲಿ ಈ ಸಲ ಮೈತ್ರಿಕೂಟದ ಟಿಕೆಟ್ ಜೆಡಿಎಸ್‌ಗೆ ದಕ್ಕಿದರೆ ಅದರ ಕ್ಯಾಂಡಿಡೇಟ್ ಗೆಲ್ಲುವುದಿಲ್ಲ. ಹಾಗೇನಾದರೂ ಆದರೆ ಅದು ಕುಮಾರಸ್ವಾಮಿ ಅವರಿಗೆ ಡ್ರಾಬ್ಯಾಕು. ಈ ಎಲ್ಲಕ್ಕಿಂತ ಮುಖ್ಯವಾಗಿ ಬಿಜೆಪಿಗೆ ಟಿಕೆಟ್ ಸಿಗದಿದ್ದರೆ ಬಿಜೆಪಿ-ಜೆಡಿಎಸ್ ಮೈತ್ರಿಕೂಟದಲ್ಲಿ ಒಡಕುಂಟಾಗುವುದು ಗ್ಯಾರಂಟಿ. ಆದ್ದರಿಂದ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕು ಎಂಬುದು ರಾಜ್ಯ ಬಿಜೆಪಿಯ ಹಲವು ನಾಯಕರ ಆತಂಕ. ಹೀಗಾಗಿ ಈ ಕುರಿತ ವಸ್ತುಸ್ಥಿತಿಯ ವಿವರವನ್ನು ಹೈಕಮಾಂಡ್ ನಿಮ್ಮಿಂದ ಬಯಸುತ್ತದೆ'' ಅಂತ ನಡ್ಡಾ ಅವರು ರಾಧಾಮೋಹನದಾಸ್ ಅಗರ್ವಾಲ್ ಅವರಿಗೆ ಸೂಚಿಸಿದ್ದರಂತೆ.

ಯಾವಾಗ ಪಕ್ಷದ ರಾಷ್ಟ್ರೀಯ ಅಧ್ಯಕ್ಷರು ಈ ಸೂಚನೆ ನೀಡಿದರೋ, ರಾಧಾಮೋಹನದಾಸ್ ಅಗರ್ವಾಲ್ ವಿವರವಾದ ವರದಿಯೊಂದನ್ನು ಮೊನ್ನೆ ದಿಲ್ಲಿಗೆ ರವಾನಿಸಿದ್ದಾರೆ. ಮೂಲಗಳ ಪ್ರಕಾರ ಈ ವರದಿಯಲ್ಲಿ ಹಲವು ಅಂಶಗಳನ್ನು ಉಲ್ಲೇಖಿಸಿರುವ ಅಗರ್ವಾಲ್, ಚನ್ನಪಟ್ಟಣದ ಟಿಕೆಟ್ ಜೆಡಿಎಸ್‌ಗೆ ಹೋದರೆ ಮೈತ್ರಿಕೂಟಕ್ಕೇನೂ ಹಾನಿಯಿಲ್ಲ. ಆದರೆ ಅದು ಜೆಡಿಎಸ್ ಪಕ್ಷದ ಕೈ ತಪ್ಪಿದರೆ ಮೈತ್ರಿಕೂಟಕ್ಕೆ ಘಾಸಿಯಾಗುವುದು ನಿಶ್ಚಿತ ಎಂದಿದ್ದಾರೆ. ಕಾರಣ? ಕರ್ನಾಟಕದ ನೆಲೆಯಲ್ಲಿ ದಿನದಿಂದ ದಿನಕ್ಕೆ ಜೆಡಿಎಸ್ ಜತೆಗಿನ ಮೈತ್ರಿ ಬಿಜೆಪಿಗೇ ಹೆಚ್ಚು ಅನಿವಾರ್ಯವಾಗುತ್ತಿದೆ. ಯಾಕೆಂದರೆ ಇತ್ತೀಚಿನ ಬೆಳವಣಿಗೆಗಳು ಕರ್ನಾಟಕದಲ್ಲಿ ಬಿಜೆಪಿಯ ಶಕ್ತಿಯನ್ನು ಕುಗ್ಗಿಸುತ್ತಿವೆಯೇ ವಿನಾ ಜೆಡಿಎಸ್‌ನ ಶಕ್ತಿಯನ್ನಲ್ಲ.

ಇವತ್ತಿನ ಸ್ಥಿತಿಯಲ್ಲಿ ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿಕೆಶಿ ನೇತೃತ್ವದ ಕಾಂಗ್ರೆಸ್ ಅನ್ನು ಬಿಜೆಪಿಯ ಫ್ರಂಟ್‌ಲೈನ್ ಲೀಡರುಗಳಿಗಿಂತ ಪರಿಣಾಮಕಾರಿಯಾಗಿ ಎದುರಿಸುತ್ತಿರುವವರು ಎಚ್.ಡಿ.ಕುಮಾರಸ್ವಾಮಿ ಮಾತ್ರ. ಒಂದು ಕಡೆಯಿಂದ ಸಿದ್ದರಾಮಯ್ಯ ಮತ್ತು ಡಿಕೆಶಿ ಪ್ರಯೋಗಿಸುತ್ತಿರುವ ಅಸ್ತ್ರಗಳಿಂದ ಬಿಜೆಪಿಯ ಬಹುತೇಕ ನಾಯಕರು ಅಸಹಾಯಕರಾಗಿದ್ದಾರೆ. ಆದರೆ ಕಾಂಗ್ರೆಸ್ ಅದೆಷ್ಟೇ ದಾಳಿ ಮಾಡಿದರೂ ಕುಮಾರಸ್ವಾಮಿ ಮಾತ್ರ ಜಗ್ಗುತ್ತಿಲ್ಲ. ಅರ್ಥಾತ್ ಮೈತ್ರಿಕೂಟದ ಮುಂಚೂಣಿಯಲ್ಲಿ ನಿಂತು ಕಾಂಗ್ರೆಸ್ ವಿರುದ್ಧ ಹೋರಾಡುವ ವಿಷಯದಲ್ಲಿ ಕುಮಾರಸ್ವಾಮಿ ಅವರೇ ಪವರ್‌ಫುಲ್ ಲೀಡರು. ಹೀಗಾಗಿ ಮುಂದಿನ ದಿನಗಳಲ್ಲಿ ಕಾಂಗ್ರೆಸ್ ವಿರುದ್ಧ ಮೈತ್ರಿಕೂಟವನ್ನು ಮುನ್ನಡೆಸಲು ಕುಮಾರಸ್ವಾಮಿ ಅವರ ಶಕ್ತಿ ಅನಿವಾರ್ಯ. ಹೀಗಿರುವಾಗ ಚನ್ನಪಟ್ಟಣ ಕ್ಷೇತ್ರದ ಬೈ-ಎಲೆಕ್ಷನ್ ಟಿಕೆಟ್ಟು ಬಿಜೆಪಿಯ ಕೈ ತಪ್ಪಿದರೆ ಮೈತ್ರಿಕೂಟದಲ್ಲಿ ಬಿರುಕುಂಟಾಗುತ್ತದೆ ಎಂಬುದು ಸುಳ್ಳು.

ಇದೇ ರೀತಿ ಚನ್ನಪಟ್ಟಣ ಕ್ಷೇತ್ರದಲ್ಲಿ ಕಳೆದ ಬಾರಿ ಗೆದ್ದಿರುವುದು ಜೆಡಿಎಸ್. ಹೀಗಾಗಿ ಅದು ಜೆಡಿಎಸ್‌ನ ಕ್ಷೇತ್ರ. ನಮ್ಮ ಪವರ್ ಬೆಳೆಸಿಕೊಳ್ಳಲು ಆ ಕ್ಷೇತ್ರವನ್ನು ನಮಗೆ ಬಿಟ್ಟುಕೊಡಿ ಎಂದು ಹೇಳುವುದು ಮೈತ್ರಿಧರ್ಮಕ್ಕೆ ವಿರುದ್ಧವಾದುದು. ವಸ್ತುಸ್ಥಿತಿ ಎಂದರೆ ಬಿಜೆಪಿ ಜತೆಗಿನ ಹೊಂದಾಣಿಕೆಯ ನಂತರ ಜೆಡಿಎಸ್ ಪಕ್ಷ ಮೈತ್ರಿಧರ್ಮವನ್ನು ಉಲ್ಲಂಘಿಸಿಲ್ಲ. ಲೋಕಸಭಾ ಚುನಾವಣೆಯಲ್ಲಿ ಅದು ಮೈತ್ರಿಧರ್ಮವನ್ನು ಉಲ್ಲಂಘಿಸಿದ್ದರೆ ಮೈತ್ರಿಕೂಟಕ್ಕೆ 19 ಸೀಟು ದಕ್ಕಲು ಸಾಧ್ಯವೇ ಇರಲಿಲ್ಲ. ನಮ್ಮ ಶಕ್ತಿ ಹೆಚ್ಚಿರುವ ಉತ್ತರ ಕರ್ನಾಟಕದ



ಕ್ಷೇತ್ರಗಳಲ್ಲಿ ನಾವು ಕಳೆದುಕೊಂಡಿದ್ದೇ ಹೆಚ್ಚು. ಆದರೆ ಜೆಡಿಎಸ್ ಪ್ರಾಬಲ್ಯ ಹೆಚ್ಚಿರುವ ಹಳೆ ಮೈಸೂರಿನ ಕ್ಷೇತ್ರಗಳಲ್ಲಿ ನಾವು ಪಡೆದುಕೊಂಡಿದ್ದು ಹೆಚ್ಚು. ಹೀಗಾಗಿ ಚನ್ನಪಟ್ಟಣದ ಟಿಕೆಟನ್ನು ನಿಮ್ಮಿಷ್ಟೆ ಬಂದವರಿಗೆ ಕೊಡಿ ಅಂತ ಜೆಡಿಎಸ್‌ಗೆ ಹೇಳುವುದೇ ಮೈತ್ರಿಧರ್ಮ ಅಂತ ರಾಧಾಮೋಹನದಾಸ್ ಅಗರ್ವಾಲ್ ಅವರು ನಡ್ಡಾ ಅವರಿಗೆ ವಿವರಿಸಿದ್ದಾರೆ.

ಇ.ಡಿ ಮಾಡುವ ಪವಾಡ ಏನು?

ಈ ಮಧ್ಯೆ, ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ತನಿಖೆ ಆರಂಭವಾಗಿದ್ದರೂ ಬಿಜೆಪಿ-ಜೆಡಿಎಸ್ ಮೈತ್ರಿಕೂಟದ ನಾಯಕರು ಜಾರಿ ನಿರ್ದೇಶನಾಲಯ (ಇ.ಡಿ) ಬಂದು ಪವಾಡ ಮಾಡಲಿದೆ ಎಂದು ನಿರೀಕ್ಷಿಸುತ್ತಿದ್ದಾರೆ. ಸದ್ಯದ ಸ್ಥಿತಿಯಲ್ಲಿ ಲೋಕಾಯುಕ್ತ ತನಿಖೆಯ ಪ್ರೊಸೀಜರು, ಸಿಎಂ ಸಿದ್ದರಾಮಯ್ಯ ಅವರನ್ನು ಮುಜುಗರಕ್ಕೆ ಸಿಲುಕಿಸುವುದು ಅನುಮಾನ. ಹೀಗಾಗಿ ಈ ಪ್ರಕರಣದಲ್ಲಿ ಇ.ಡಿ ಮಾತ್ರ ಈಟಿ ಪ್ರಯೋಗಿಸಬಹುದು ಎಂಬುದು ಮೈತ್ರಿಕೂಟದ ಹಲವು ನಾಯಕರ ಲೆಕ್ಕಾಚಾರ. ಆದರೆ ಇ.ಡಿ ಬಂದು ಮಾಡುವುದೇನು? ಎಂಬ ವಿಷಯದಲ್ಲಿ ಯಾರಿಗೂ ಸ್ಪಷ್ಟತೆ ಇಲ್ಲ. ಒಂದು ವೇಳೆ, ಮುಡಾದಿಂದ ಪಡೆದ 14 ನಿವೇಶನಗಳನ್ನು ಸಿದ್ದರಾಮಯ್ಯ ಅವರ ಪತ್ನಿ ಹಿಂದಿರುಗಿಸದೆ ಇದ್ದಿದ್ದರೆ, ಪ್ರಕರಣಕ್ಕೆ ಎಂಟ್ರಿ ಪಡೆದಿರುವ ಇ.ಡಿ ನಿಶ್ಚಿತವಾಗಿ ಆ ನಿವೇಶನಗಳನ್ನು ಸೀಝ್ ಮಾಡಿಕೊಳ್ಳುತ್ತಿತ್ತು. ಹೀಗೆ ಇ.ಡಿ ಇಂಥ ಕೆಲಸ ಮಾಡಿದ್ದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮುಜುಗರಕ್ಕೆ ಸಿಲುಕುತ್ತಿದ್ದರು. ಇಲ್ಲ, ತಮ್ಮ ಪತ್ನಿಯ ಹೆಸರಿನಲ್ಲಿದ್ದ ಭೂಮಿಯನ್ನು ಸ್ವಾಧೀನಪಡಿಸಿಕೊಂಡ ಕಾರಣಕ್ಕಾಗಿ ಮುಡಾ ಈ ನಿವೇಶನಗಳನ್ನು ನೀಡಿದೆ. ಅದೂ ಬಿಜೆಪಿ ಸರಕಾರ ಇದ್ದ ಅವಧಿಯಲ್ಲಿ ನೀಡಿದೆ ಅಂತ ಸಿದ್ದರಾಮಯ್ಯ ಹೇಳಿಕೊಂಡರೂ ಜಾರಿ ನಿರ್ದೇಶನಾಲಯದ ಕ್ರಮ ಅವರನ್ನು ಮುಜುಗರಕ್ಕೆ ಸಿಲುಕಿಸುತ್ತಿತ್ತು.

ಹೀಗಾಗಿಯೇ ಈ ಅಂಶವನ್ನು ಬೊಟ್ಟು ಮಾಡಿ ತೋರಿಸಿದ್ದ ಖ್ಯಾತ ನ್ಯಾಯವಾದಿ ಕಪಿಲ್ ಸಿಬಲ್ ಅವರು, 'ನ್ಯಾಯ ಸಿಎಂ ಪತ್ನಿಯ ಪರವಾಗಿದೆ ಎಂಬುದು ಬೇರೆ ಮಾತು. ಅದೇ ರೀತಿ ಮುಂದಿನ ದಿನಗಳಲ್ಲಿ ಮುಡಾದಿಂದ ಪರಿಹಾರ ಕೋರಿ ಸಿದ್ದರಾಮಯ್ಯ ಅವರ ಪತ್ನಿ ನ್ಯಾಯಾಲಯದ ಮೊರೆಹೋಗಬಹುದು. ಆದರೆ ಈಗ ತಕ್ಷಣದ ದೃಷ್ಟಿಯಿಂದ, ಇ.ಡಿ ಹೆಚ್ಚಿನದನ್ನೇನೂ ಮಾಡಬಾರದು ಎಂಬ ಕಾರಣಕ್ಕಾಗಿ ನಿವೇಶನಗಳನ್ನು ಮುಡಾಗೆ ಹಿಂದಿರುಗಿಸುವುದು ಒಳ್ಳೆಯದು. ಆ ಮೂಲಕ ಸಿದ್ದರಾಮಯ್ಯ ಅವರನ್ನು ಮುಜುಗರದಿಂದ ಪಾರು ಮಾಡಬಹುದು' ಎಂಬ ಸಂದೇಶ ರವಾನಿಸಿದ್ದರಂತೆ. ಹೀಗಾಗಿ ಸಿದ್ದರಾಮಯ್ಯ ಅವರ ಪತ್ನಿ ನಿವೇಶನಗಳನ್ನು ಮುಡಾಗೆ ಹಿಂದಿರುಗಿಸಿದರು ಎಂಬುದು ಕೈ ಪಾಳಯದ ಮಾತು. ಅಷ್ಟೇ ಅಲ್ಲ, ಈಗ ಮುಡಾ ಪ್ರಕರಣದಲ್ಲಿ ಇ.ಡಿ

ಬಂದು ಮಾಡುವುದೇನು? ಎಂಬುದು ಅದರ ಪ್ರಶ್ನೆ. ಅದರ ಪ್ರಕಾರ, ಮುಡಾ ಪ್ರಕರಣದ ಕಾವು ಕಡಿಮೆಯಾಗಿದೆಯಷ್ಟೇ ಅಲ್ಲ, ಸಿದ್ದರಾಮಯ್ಯ ಅವರ ಕುರ್ಚಿಯೂ ಗಟ್ಟಿಯಾಗಿದೆ.

ಕೈ ಪಾಳಯಕ್ಕೆ ಬಿಜೆಪಿ ಸಂದೇಶ?

ಇನ್ನು ದಿಲ್ಲಿಯ ಬಿಜೆಪಿ ನಾಯಕರೊಬ್ಬರು ಸಿಎಂ ಸಿದ್ದರಾಮಯ್ಯ ಅವರಿಗೆ ಫೋನು ಮಾಡಿದ್ದರಂತೆ. ಸಿದ್ದರಾಮಯ್ಯ ಅವರ ವಿರುದ್ಧ ಮೈತ್ರಿಕೂಟ ನಡೆಸಿದ ದಾಳಿಯಿಂದ ಕೆಂಡಾಮಂಡಲಗೊಂಡ ಕೈ ಪಡೆಯು ಬಿಜೆಪಿ ಕಾಲದ ಹಗರಣಗಳನ್ನು ಕೆದಕುತ್ತಿದೆಯಲ್ಲ? ಇದರ ಭಾಗವಾಗಿ ಕೊರೋನಾ ಕಾಲಘಟ್ಟದ ವ್ಯವಹಾರಗಳ ಬಗ್ಗೆ ತನಿಖೆ ನಡೆಸಲು ಎಸ್.ಐ.ಟಿ.ಯನ್ನು ರಚಿಸಲಾಗಿದೆ. ಇದೇ ರೀತಿ ಇನ್ನೂ ಹಲವು ಪ್ರಕರಣಗಳನ್ನು ಕೆದಕುತ್ತಿರುವ ಅದು ಒಬ್ಬೊಬ್ಬರಾಗಿ ಬಿಜೆಪಿಯ ಹಲವು ನಾಯಕರ ಸುತ್ತ ಚಕ್ರವ್ಯೂಹ ರಚಿಸುತ್ತಿದೆ. ಹೀಗಾಗಿ ಸರಕಾರವನ್ನು ಟೀಕಿಸುವ ವಿಷಯದಲ್ಲಿ ಬಿಜೆಪಿ ನಾಯಕರಿಗೆ ಒಂದು ತಿಂಗಳ ಹಿಂದಿದ್ದ ಖದರ್ ಈಗ ಉಳಿದಿಲ್ಲ.

ಸಾಲದು ಎಂಬಂತೆ ಬಿಜೆಪಿ ಸರಕಾರದ ಅವಧಿಯಲ್ಲಿ ನಡೆದ ಹಗರಣಗಳನ್ನು ಕೆದಕಲು ಎಲ್ಲ ಬಗೆಯ ಮಾರ್ಗಗಳನ್ನು ಓಪನ್ ಮಾಡಿಕೊಳ್ಳುತ್ತಿರುವ ಸಿದ್ದು-ಡಿಕೆಶಿ, ಇನ್ನು ಸ್ವಲ್ಪ ದಿನಗಳಲ್ಲಿ ರಾಜ್ಯ ಬಿಜೆಪಿಯನ್ನು ಅಸಹಾಯಕಗೊಳಿಸಲು ಸಜ್ಜಾಗಿದ್ದಾರೆ. ಈ ಹಿನ್ನೆಲೆಯಲ್ಲೇ ಮೊನ್ನೆ ಸಿಎಂ ಸಿದ್ದರಾಮಯ್ಯ ಅವರಿಗೆ ಫೋನು ಮಾಡಿದ ದಿಲ್ಲಿ ಬಿಜೆಪಿಯ ಟಾಪ್ ಲೀಡರ್ ಒಬ್ಬರು, 'ನೀವೇನೇ ಮಾಡಿ. ಆದರೆ ನಮ್ಮ ಸೀನಿಯರ್ ಲೀಡರ್ ವಿಷಯದಲ್ಲಿ ಟಫ್ ಆಗಬೇಡಿ. ಯಾಕೆಂದರೆ ಅವರಿಗಾದರೂ ನಿಮ್ಮ ವಿರುದ್ಧ ಹೋರಾಡುವ ಆಸಕ್ತಿ ಇಲ್ಲ.ಹೀಗಾಗಿ ಅವರಿಗೇ ಆಗಲಿ, ನಮಗೇ ಆಗಲಿ ಮುಜುಗರ ಮಾಡಬೇಡಿ' ಎಂದಿದ್ದಾರಂತೆ.

ಚೌಟ-ಕಟೀಲ್ ಕದನ

ಅಂದ ಹಾಗೆ, 'ಹಿಂದುತ್ವದ ಪ್ರಯೋಗಶಾಲೆ' ಅನ್ನಿಸಿಕೊಂಡ ಮಂಗಳೂರಿನಲ್ಲಿ ಹಾಲಿ ಸಂಸದ ಬ್ರಿಜೇಶ್ ಚೌಟ ಮತ್ತು ಬಿಜೆಪಿಯ ಮಾಜಿ ರಾಜ್ಯಾಧ್ಯಕ್ಷ ನಳೀನ್ ಕುಮಾರ್ ಕಟೀಲ್ ನಡುವಣ ಶೀತಲ ಸಮರಕ್ಕೆ ಸಂಘ ಪರಿವಾರ ಸುಸ್ತಾಗಿದೆ. ಹಿಂದೆಲ್ಲ ಸ್ಥಳೀಯ ನಾಯಕರನ್ನು ನಿಯಂತ್ರಿಸುತ್ತಿದ್ದ ಜಿಲ್ಲೆಯ ಆರೆಸ್ಸೆಸ್ ಘಟಕ ಈಗ ಎರಡು ಬಣಗಳಾಗಿ ನಿಂತಿದೆ. ಈ ಪೈಕಿ ಒಂದು ಬಣ ಬ್ರಿಜೇಶ್ ಚೌಟಾ ಜತೆಗಿದ್ದರೆ, ಮತ್ತೊಂದು ಬಣ ನಳೀನ್ ಕುಮಾರ್ ಕಟೀಲ್ ಬೆನ್ನಿಗಿದೆ.

ಮೂಲಗಳ ಪ್ರಕಾರ, ನಳೀನ್ ಕುಮಾರ್ ಕಟೀಲ್ ಸಂಸದರಾಗಿದ್ದಾಗ ಜಿಲ್ಲೆಯ ಬಿಜೆಪಿ ಕಾರ್ಯಚಟುವಟಿಕೆಗಳಲ್ಲಿ ಚೌಟ ಅವರನ್ನು ನಿರ್ಲಕ್ಷಿಸಿದ್ದರು. ಆ ನೋವನ್ನು ಮನಸ್ಸಿನಲ್ಲಿಟ್ಟುಕೊಂಡಿರುವ ಬ್ರಿಜೇಶ್ ಚೌಟ-ಈಗ ನಳೀನ್ ಕುಮಾರ್ ಕಟೀಲ್ ಅವರನ್ನು ಪಕ್ಷದ ಚಟುವಟಿಕೆಗಳಿಂದ ದೂರವಿಡುತ್ತಿದ್ದಾರೆ. ಇಷ್ಟಾದರೂ ಸಂಘ ಪರಿವಾರದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಅವರ ಕಟಾಕ್ಷವಿರುವ ಕಾರಣಕ್ಕಾಗಿ ಸ್ಥಳೀಯ ಆರೆಸ್ಸೆಸ್‌ನ ಒಂದು ಬಣ ಕಟೀಲರ ಹಿಂದೆ ನಿಂತಿದೆ. ಉಳಿದಂತೆ ವಿಜಯೇಂದ್ರ ಪ್ಲಸ್ ಕಲ್ಲಡ್ಕ ಪ್ರಭಾಕರ ಭಟ್ಟರ ಕಟಾಕ್ಷ ಇರುವ ಕಾರಣಕ್ಕಾಗಿ ಚೌಟ ಅವರ ಬೆನ್ನಿಗೆ ಪಕ್ಷ ಮತ್ತು ಸಂಘ ಪರಿವಾರದ ಒಂದು ಬಣ ನಿಂತಿದೆ.

ಹೀಗೆ ಚೌಟ ಮತ್ತು ಕಟೀಲರ ನಡುವೆ ಪ್ರಾರಂಭವಾಗಿರುವ ಶೀತಲ ಸಮರದಲ್ಲಿ ಕಟೀಲ್ ಒಂದಷ್ಟು ಪ್ರತಿರೋಧ ತೋರುತ್ತಿದ್ದಾರಾದರೂ ಅದು ಎಷ್ಟು ದಿನ ನಡೆಯುತ್ತದೋ ಗೊತ್ತಿಲ್ಲ. ಕಾರಣ? ಸಂತೋಷ್ ಇವತ್ತು ರಾಷ್ಟ್ರ ಮಟ್ಟದಲ್ಲಿ ಪ್ರಬಲರಾಗಿರುವುದರಿಂದ ಕಟೀಲ್ ಅವರಿಗೆ ಸ್ವಲ್ಪ ಶಕ್ತಿ ಇದೆ. ಆದರೆ ಸಂತೋಷ್ ಅವರ ಪವರ್ ಕಡಿಮೆಯಾದರೆ ನೋ ಡೌಟ್, ಹಾಲಿ ಸಂಸದ ಬ್ರಿಜೇಶ್ ಚೌಟ ಪವರ್ ಹೆಚ್ಚಾಗುತ್ತದೆ. ಹಾಗೇನಾದರೂ ಆದರೆ ಕಟೀಲರು ಅಜ್ಞಾತವಾಸಕ್ಕೆ ತೆರಳಬಹುದು ಎಂಬುದು ಲೋಕಲ್ ಬಿಜೆಪಿಗರ ಮಾತು. ಮುಂದೇನಾಗುತ್ತದೋ?

ಲಾಸ್ಟ್‌ಸಿಪ್: ಇಂಟರೆಸ್ಟಿಂಗ್ ಸಂಗತಿ ಎಂದರೆ ಮಂಗಳೂರಿನ ರಾಜಕಾರಣ ಬಿಜೆಪಿಯನ್ನು ಹೋಳು ಮಾಡಿದ್ದು ಒಂದು ಕಡೆಯಾದರೆ, ಮತ್ತೊಂದು ಕಡೆ ಆಡಳಿತಾರೂಢ ಕಾಂಗ್ರೆಸ್‌ನ ಕತೆಯೂ ಹಾಗೇ ಆಗಿದೆ. ಅರ್ಥಾತ್, ವಿಧಾನಸಭೆಯ ಸ್ಪೀಕರ್ ಯು.ಟಿ.ಖಾದರ್ ನೇತೃತ್ವದ ಬಣ ಒಂದು ಕಡೆ ಇದ್ದರೆ, ಮಿಥುನ್ ರೈ, ರಮಾನಾಥ ರೈ, ಮಂಜುನಾಥ ಭಂಡಾರಿ ಸೇರಿದಂತೆ ಹಲವು ಪ್ರಮುಖರ ಬಣ ಮತ್ತೊಂದು ಕಡೆ ನಿಂತಿದೆ. ಈ ಎರಡು ಬಣಗಳ ನಡುವಣ ಹಾಲಿ ಕಾದಾಟಕ್ಕೆ ಮುಖ್ಯ ಕಾರಣ ಸರಕಾರಿ ನೌಕರರ ವರ್ಗಾವಣೆ ಮತ್ತು ಆಡಳಿತಾತ್ಮಕ ವಿಷಯ. ಈ ವಿಷಯದಲ್ಲಿ ಯು.ಟಿ.ಖಾದರ್ ಮೇಲುಗೈ ಸಾಧಿಸಿರುವುದು ಸಹಜವಾಗಿಯೇ ಮತ್ತೊಂದು ಬಣದವರನ್ನು ಕೆರಳಿಸಿದೆ. ಹೀಗಾಗಿ ಜಿಲ್ಲೆಯ ರಾಜಕಾರಣದಲ್ಲಿ ಶುರುವಾಗಿರುವ ಉಭಯ ಬಣಗಳ ಕಚ್ಚಾಟ ಸದ್ಯದಲ್ಲೇ ಕೈ ಪಾಳಯಕ್ಕೆ ತಲೆನೋವಾಗುವುದು ನಿಶ್ಚಿತವಾಗಿದೆ.

ಇದು ವೀರಶೈವದ ವಿಪ್ಲವಕ್ಕೆ ಬರೆದ ಮುನ್ನುಡಿಯೇ?

ಬಸವ ಮಂಟಪ

ರವಿ ಹಂಜ್
vveditoped@gmail.com

ಲಿಂಗಾಯತ ಪ್ರತ್ಯೇಕ ಧರ್ಮ'ದ ಕೂಗಿನವರ ಹಿಂದಿನ ಧೀಶಕ್ತಿ ಎಂಥ ಬಾಲಿಶ ಎಂದು ಈ ಹಿಂದೆ ತೋರಿದ್ದೇನಷ್ಟೇ. ಅವರ ಬಾಲಿಶ ಅಂಶಗಳನ್ನು ಇನ್ನಷ್ಟು ಆಳವಾಗಿ ತೋರುವ ಮುನ್ನ ಇತಿಹಾಸದ ವಾಸ್ತವಾಂಶವನ್ನು ತೆರೆದಿಡಬೇಕಾದ್ದು ಅತ್ಯಗತ್ಯ. ಒಂದು ಧರ್ಮದ ಪರಿಗಣನೆಯನ್ನು ಇಂದಿನ 21ನೇ ಶತಮಾನದ ನ್ಯಾಯಾಂಗವು ಒಪ್ಪುವಂಥ ವಾದವನ್ನು ದಾಖಲೆಯುಕ್ತ ಸಾಮಾನ್ಯಜ್ಞಾನದ ಪರಿಧಿಯಲ್ಲಿ ಮಂಡಿಸಬೇಕು. 'ನಮ್ಮ ಪರವಾಗಿ ಬುದ್ಧಿಜೀವಿಗಳಿದ್ದಾರೆ, ಸಂಶೋಧಕರಿದ್ದಾರೆ, ಸರಕಾರಿ ಯಂತ್ರದ ನಿವೃತ್ತ ನಿಯಂತ್ರಕರಿದ್ದಾರೆ, ರಾಜಕಾರಣಿಗಳಿದ್ದಾರೆ, ಅವರಿದ್ದಾರೆ ಇವರಿದ್ದಾರೆ' ಎನ್ನುವ ಹುಂಬತನದ ಕೂಪದಾಚೆ ಆಲೋಚಿಸಬೇಕು. ಅಂಥ ಒಂದು ಕಣ್ಣು ತೆರೆಸುವ ಮತ್ತು ಸಮಾಜವನ್ನು ಒಂದುಗೂಡಿಸುವ ಪ್ರಯತ್ನ 'ವಿಶ್ವವಾಣಿ'ಯದು. ಆ ಘನ ಉದ್ದೇಶವನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ವೀರಶೈವದ ಎಲ್ಲಾ ಆಕರಮೂಲಗಳನ್ನು ತೆರೆದಿಟ್ಟು ತಾರ್ಕಿಕವಾಗಿ ವಿಶ್ಲೇಷಿಸುವ ಪ್ರಯತ್ನವಿದು.

12ನೇ ಶತಮಾನದಲ್ಲಿ ರಚಿಸಲಾಗಿದೆ ಎನ್ನುವ ವೀರಶೈವ ವಚನ ಸಾಹಿತ್ಯದ ಸಂಗ್ರಹಕಾರ್ಯ 15ನೇ ಶತಮಾನದ ಪ್ರೌಢದೇವರಾಯನ ಕಾಲದಲ್ಲಿ ಆರಂಭವಾಯಿತು ಎಂದು ಇತಿಹಾಸ ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಹಾಗೆಯೇ, 'ಇವುಗಳನ್ನು 12ನೇ ಶತಮಾನದಲ್ಲಿಯೇ ಶರಣರು ರಚಿಸಿದ್ದರು ಎಂಬುದು ಪ್ರಶ್ನಾರ್ಹ' ಎಂದು ಸಾಕಷ್ಟು ಸಂಶೋಧಕರು ಅನುಮಾನ ವ್ಯಕ್ತಪಡಿಸಿದ್ದಾರೆ. ಅದೇ ರೀತಿ 'ಸಿದ್ಧಾಂತ ಶಿಖಾಮಣಿ'ಯನ್ನು ಒಂದನೇ ಅಥವಾ ಏಳನೇ ಶತಮಾನದಲ್ಲಿ ರಚಿಸಿದ್ದಾರೆ ಎನ್ನುವುದು ಸಹ. ಆಗಲೇ ಇದ್ದ ವಚನಗಳ ಆಧಾರವಾಗಿ 'ಶೂನ್ಯ ಸಂಪಾದನೆ'ಯ ಮೊದಲ ಸಂಕಥನವನ್ನು ಶಿವಗಣಪ್ರಸಾದಿ ಮಹದೇವಯ್ಯ 15ನೇ ಶತಮಾನದ ಆರಂಭದಲ್ಲಿ ರಚಿಸಿದ್ದರೆ, ಆಗಲೇ ಸಂಸ್ಕೃತದಲ್ಲಿದ್ದ 'ಸಿದ್ಧಾಂತ ಶಿಖಾಮಣಿ'ಗೆ ಇದೇ 15ನೇ ಶತಮಾನದಲ್ಲಿದ್ದ ಗೊರಕೋಡು ಉಜ್ಜನೀಶನು ಕರ್ನಾಟ ಭಾಷಾ ಟೀಕಾವನ್ನು ರಚಿಸಿದ್ದಾನೆ. ಅಂದರೆ ಕನ್ನಡಕ್ಕೆ ತರ್ಜುಮೆ ಮಾಡಿದ್ದಾನೆ. ಸಮಗ್ರವಾಗಿ 15ನೇ ಶತಮಾನದ ಈ ಕಾಲಘಟ್ಟವು ವೀರಶೈವದ ಧ್ರುವೀಕರಣದ ಸಮಯ ಎಂದು ಸ್ಪಷ್ಟವಾಗುತ್ತದೆ. ಇನ್ನು ಸಂಸ್ಕೃತದಲ್ಲಿದ್ದ 'ಶಕ್ತಿವಿಶಿಷ್ಟಾದ್ವೈತ'ಕ್ಕೆ ವೀರಶೈವ ಆಚಾರ್ಯನಾದ ಶ್ರೀಪತಿ ಪಂಡಿತಾರಾಧ್ಯನು 11ನೇ ಶತಮಾನದಲ್ಲಿ 'ಶ್ರೀಕರ ಭಾಷ್ಯ'ವನ್ನು ರಚಿಸಿದ್ದಾನೆನ್ನುವ ಊಹೆಯಿದ್ದರೂ ಶ್ರೀಪತಿ ಪಂಡಿತಾರಾಧ್ಯ 11ನೇ ಶತಮಾನದಲ್ಲಿ ಇದ್ದನೆನ್ನುವುದಕ್ಕೆ ಪುರಾವೆಗಳಿವೆ. ಹಾಗಾಗಿ ಸದ್ಯದ ಸಾಹಿತ್ಯಿಕ ಆಕರಗಳ ದೃಷ್ಟಿಯಿಂದ 'ಶಕ್ತಿವಿಶಿಷ್ಟಾದ್ವೈತ'ವು ಈ ಮೂರರಲ್ಲಿ ಪ್ರಾಚೀನ ಎನಿಸುತ್ತದೆ. ಇದಿಷ್ಟು ವೀರಶೈವ ಗ್ರಂಥೇತಿಹಾಸದ ಇತಿಹಾಸ ತಜ್ಞ-ಮಾನ್ಯ ಮಾಹಿತಿ.

ಇನ್ನುಳಿದಂತೆ ಲಿಂಗಾಯತ ಪ್ರತ್ಯೇಕ ಧರ್ಮದ ಕೂಗಿಗರು ಅಪಹರಿಸಿರುವ ಬಸವಣ್ಣನ ಕುರಿತಾಗಿ 12ನೇ ಶತಮಾನದಲ್ಲಿ ಪಾಲ್ಕುರಿಕೆ ಸೋಮನಾಥನು 'ಬಸವ'ಪುರಾಣ' ರಚಿಸಿದ್ದಾನೆ. ಹಾಗೆಯೇ ಪ್ರತ್ಯೇಕ ಕೂಗಿಗರು ತಮ್ಮ ಬದ್ಧ ಶತ್ರುಗಳು ಎಂದು ಪರಿಗಣಿಸಿರುವ ಪಂಚಾಚಾರ್ಯರ ಪಂಡಿತಾರಾಧ್ಯನ ಕುರಿತಾದ 'ಪಂಡಿತಾರಾಧ್ಯ 'ಚರಿತ್ರೆ'ಯನ್ನೂ ಸೋಮನಾಥನು ರಚಿಸಿದ್ದಾನೆ. ಅದೇ ರೀತಿ ಹರಿಹರನು ಸಹ ಪ್ರತ್ಯೇಕ ಕೂಗಿಗರ ಆದ್ಯದೈವ ಮತ್ತು ಬದ್ಧಶತ್ರುಗಳ ನಡುವೆ ಭೇದವೆಣಿಸದೆ 'ಬಸವರಾಜದೇವರ 'ರಗಳೆ', 'ರೇವಣಸಿದ್ಧ 'ರಗಳೆ', 'ಏಕಾಂತರಾಮಯ್ಯನ 'ರಗಳೆ'ಗಳನ್ನೂ ರಚಿಸಿದ್ದಾನೆ. ಒಟ್ಟಾರೆ ಪುರಾಣ, ಚರಿತ್ರೆ, ರಗಳೆ ಎಂಬ ಈ ಮೂರು ವಿಧದ ಪದಗಳು ವೀರಶೈವದ ಮುಂಬರುವ ಶತಮಾನಗಳಾಚೆಯ ವಿಪ್ಲವಕ್ಕೆ ಮುನ್ನುಡಿ ಬರೆದಂತಿವೆ.

ಇನ್ನು, ಶೂನ್ಯ ಸಂಪಾದನೆಯನ್ನು ವೀರಶೈವರ ಕೈಪಿಡಿಯಾಗಿಸಲು ಪಣತೊಟ್ಟಂತೆ ಸಂಪಾದಕರಾದ ಶಿವಗಣಪ್ರಸಾದಿ ಮಹದೇವಯ್ಯ, ನಂತರದ ಹಲಗೆಯಾರ್ಯ, ಸಿದ್ಧಲಿಂಗ ಯತಿ, ಸಿದ್ಧವೀರಣ್ಣೊಡೆಯ ಎಲ್ಲರೂ ವಚನಗಳನ್ನು ತಮ್ಮಿಷ್ಟಕ್ಕೆ ತಕ್ಕಂತೆ ತಿದ್ದಿದ್ದಾರೆ ಎಂದು ಸಂಶೋಧಕರಾದ ಎಲ್.ಬಸವರಾಜು ಆರೋಪಿಸಿದ್ದಾರೆ. ಅಂದರೆ ಪ್ರತಿಯೊಬ್ಬ ಸಂಪಾದಕನೂ ಉದ್ದೇಶಪೂರ್ವಕವಾಗಿ ಈ ಸಂಪಾದನೆಯನ್ನು ಹೆಚ್ಚು ಹೆಚ್ಚು ಆಕರ್ಷಕಗೊಳಿಸಿದ್ದಾರೆ. ಉದಾಹರಣೆಗೆ ಪ್ರಥಮ ಶೂನ್ಯಸಂಪಾದನೆಯಲ್ಲಿರುವ, ''ಮಹಾದೇವಿಯಕ್ಕಗಳು ಕಲ್ಯಾಣದ ದಾರಿಯಲ್ಲಿದ್ದಾಗ (ಆಕೆಯನ್ನು) ಕಿನ್ನರಯ್ಯನು ಹರುಷಿಸಿ (ಪರುಷಿಸಿ/ಸ್ಪರ್ಶಿಸಿ) ನೋಡಲು ಅಕ್ಕಗಳು ಅಂತರಂಗದ ಜ್ಞಾನಾಗ್ನಿಯೊಳ್ ಕಾಮನ ಭಸ್ಮಮಂ ಮಾಡಿತೋರಿದರೆಂಬ'' ಪ್ರಸಂಗವನ್ನು ಹಲಗೆಯಾರ್ಯನು ತನ್ನ ದ್ವಿತೀಯ ಸಂಪಾದನೆಯಲ್ಲಿ, ''ಯೋನಿಯೊಳ್ ಅಂಗುಲಿಪ್ರವೇಶಂ'' ಮಾಡಿ ಕಿನ್ನರಯ್ಯನು ಮಹಾದೇವಿಯನ್ನು ಪರೀಕ್ಷಿಸಿದ್ದನು ಎಂದಿದ್ದಾನೆ. ಇದನ್ನು ಬಸವರಾಜುರವರು ಹಲಗೆಯಾರ್ಯನನ್ನು 'ತೆವಲನ್ನು ತೀರಿಸಿಕೊಂಡ ಪಾಠಪೀಡಕನು' ಎಂದು ಖಂಡಿಸಿದ್ದಾರೆ. ಇಲ್ಲಿ ಹಲಗೆಯಾರ್ಯನು ಸೂಚ್ಯ ರೂಪಕ ಮೂಲಪಾಠವಾಗಿದ್ದುದನ್ನು ವಾಚ್ಯವಾಸ್ತವವಾಗಿ ವಿಸ್ತರಿಸಿ ಹೇಳಿದ್ದಾನೋ ಅಥವಾ ಬಸವರಾಜು ಅವರ ಮಡಿವಂತಿಕೆಯ ಚಿಂತನೆ ಅವರಿಗೆ ಹೀಗೆನ್ನಿಸುವಂತೆ ಮಾಡಿತೋ ಎಂಬ ಸಂಶೋಧಕ ಜಿಜ್ಞಾಸೆ ಕಾಡುತ್ತದೆ. ಹಾಗಾಗಿ ಇದನ್ನು ಸಂಶೋಧಿಸಿದಾಗ ಅಂದಿನ ಕಾಲಘಟ್ಟದಲ್ಲಿ ಕನ್ಯತ್ವವನ್ನು ಪರೀಕ್ಷಿಸುವವರು ಸಹ ಇಂಥ ''ಯೋನಿಯೊಳ್ ಅಂಗುಲಿಪ್ರವೇಶಂ'' ಮಾಡಿ ಪರೀಕ್ಷಿಸುತ್ತಿದ್ದದ್ದು ಸಾಮಾನ್ಯ ಸಂಗತಿ ಎಂದು ಇತಿಹಾಸ ತಿಳಿಸುತ್ತದೆ. ಆ ಕಾಲಮಾನದ ಕ್ರಿಶ್ಚಿಯನ್ ಸನ್ಯಾಸಿಗಳು ತಮ್ಮ ಸನ್ಯಾಸಿನಿಯರ ಆತ್ಮಶುದ್ಧಿಯ ಪಾವಿತ್ರ್ಯವನ್ನು ಇಂಥ ದೈಹಿಕ ಪರೀಕ್ಷೆಗೊಳಗಾಗಿಸುತ್ತಿದ್ದ ಅನೇಕ ಕತೆಗಳು ಇವೆ. ಕ್ರಿಸ್ತಶಕ 13ನೇ ಶತಮಾನದ ಜೇಕಬಸ್ ಡಿ.ವೊರೇಗನ್ ಸಂಗ್ರಹಿಸಿರುವ 'ಗೋಲ್ಡನ್ ಲೆಜೆಂಡ್' ಕೃತಿಯಲ್ಲಿ ಬರುವ 'ಅಂಟಿಯಾಕ್ ಕನ್ಯೆ' ಎಂದು ಖ್ಯಾತವಾಗಿರುವ ಕತೆಯ ಅತ್ಯಂತ ಸುಂದರ ಸನ್ಯಾಸಿನಿಗೆ ಚರ್ಚಿನ ಸಹ ಸನ್ಯಾಸಿಗಳು, ''ಆಕೆ ತನ್ನ ಆತ್ಮಶುದ್ಧಿಯ ಪಾವಿತ್ರ್ಯವನ್ನು ಸಾಬೀತುಪಡಿಸಲು ಒಂದು ವೇಶ್ಯಾಗೃಹದಲ್ಲಿ ಎಲ್ಲಾ ರೀತಿಯ ಲೈಂಗಿಕ ಅನುಭವಗಳಿಗೊಳಗಾಗಿಯೂ ಕಾಮದ ಹಂಗನ್ನು ಹೊಂದದೆ ಆತ್ಮಶುದ್ಧಿಯನ್ನು ಕಾಪಾಡಿಕೊಂಡರೆ ಆಕೆಯನ್ನು ಸೇರಿಸಬಹುದು. ಇಲ್ಲದಿದ್ದರೆ ಆಕೆ ಅನ್ಯಧರ್ಮಕ್ಕೆ ಹೋಗಲಿ'' ಎಂದು ಸವಾಲು ಹಾಕುತ್ತಾರೆ. ''ದೈಹಿಕವಾಗಿ ಹಾದರವನ್ನು ಮಾಡಿಯೇನೆ ವಿನಾ ಆತ್ಮದಲ್ಲಿ ಬೇರೆ ದೇವರ ನೆನೆಯೆನು'' ಎಂದು ಆ ಸನ್ಯಾಸಿನಿ ವೇಶ್ಯಾವಾಟಿಕೆಗೆ ಸೇರಿ ಕನ್ಯತ್ವವನ್ನು ಕಳೆದುಕೊಂಡು ತನ್ನ ಆತ್ಮಶುದ್ಧಿಯನ್ನು ಮೆರೆಯುತ್ತಾಳೆ. ಇಂಥ ಅನೇಕ ಕ್ರೈಸ್ತ ಸನ್ಯಾಸಿನಿಯರ ಕತೆಗಳಿವೆ. ಭಾರತದಲ್ಲೂ ಮಹಿಳೆ ತನ್ನ ಪಾವಿತ್ರ್ಯವನ್ನು ಸಾಬೀತುಪಡಿಸಬೇಕಾದಂಥ ಪರಿಸ್ಥಿತಿಯ ಕತೆಗಳು ಸಾಕಷ್ಟಿವೆ. ಅಗ್ನಿಪ್ರವೇಶಕ್ಕೊಳಗಾದ ರಾಮಾಯಣದ ಸೀತೆ ಅದಕ್ಕೊಂದು ಉದಾಹರಣೆ. ಇಂಥ ಸನ್ನಿವೇಶ ಮಹಾದೇವಿಗೆ ಬಂದಿತ್ತು ಎಂದು ವಚನಗಳೇ ತಿಳಿಸುತ್ತವೆ. ಮಹಿಳೆಯರಿಗೆ ಸಮಾನಹಕ್ಕು ಕೊಟ್ಟದ್ದು ಶರಣ ಚಳವಳಿ ಎನ್ನುವ ಆವೇಶದ ಭಾವನಾತ್ಮಕ ಭಾಷಣವೀರರು ಇಂಥ ಕಪ್ಪುಚುಕ್ಕೆಯನ್ನು ಸದಾ ನೆನಪಿಟ್ಟುಕೊಳ್ಳಬೇಕು.

ಭಾಗ-1

ಇಂಥ ವಾಚ್ಯವಾಸ್ತವಾಂಶಗಳು ಹಲಗೆಯಾರ್ಯನ ಸಂಪಾದನೆಯ ವಿಶೇಷ! ಒಟ್ಟಾರೆ ಶೂನ್ಯಸಂಪಾದನೆಯು ವಚನಗಳ ಆಧಾರದಲ್ಲಿ ಕಟ್ಟಿದ ಒಂದು ಕಾಲ್ಪನಿಕ ಸಂಕಥನ. ರಾಮಾಯಣವನ್ನು ಹೇಗೆ ತಮ್ಮ ತಮ್ಮ ಕಲ್ಪನೆಗೆ ಸಿದ್ಧಾಂತಕ್ಕೆ ತಕ್ಕಂತೆ ಸಾಕಷ್ಟು ಕವಿಗಳು ಕಾವ್ಯವನ್ನಾಗಿ, ಸಾಹಿತಿಗಳು, ಸಮಾಜವಾದಿಗಳು, ಬುಡಕಟ್ಟು ಜನಾಂಗದವರು, ಕಮ್ಯುನಿಸ್ಟ್ ನಾಸ್ತಿಕರು ಗದ್ಯವನ್ನಾಗಿ ಕಟ್ಟಿರುವರೋ ಅದೇ ರೀತಿಯಲ್ಲಿ ವಚನಗಳಾಧರಿತ ಶೂನ್ಯಸಂಪಾದನೆಯ ನಾಲ್ಕು ಆವೃತ್ತಿಗಳು ಎಂದುಕೊಳ್ಳಬಹುದು.

ಇನ್ನು ಈ ಶೂನ್ಯ ಸಂಪಾದನೆಗಳಲ್ಲಿ ಗಮನಿಸಬೇಕಾದ ಅಂಶವೇನೆಂದರೆ ಈ ಎಲ್ಲಾ ಸಂಪಾದಕರೂ ತಮ್ಮ ನೆಚ್ಚಿನ ಸಾಮಾಜಿಕ ನಾಯಕರನ್ನು ಕೈಲಾಸಗಣಂಗಳಾಗಿಸಿ ಪುರಾಣ ಪುರುಷರನ್ನಾಗಿಸಿರುವುದು! ಅಲ್ಲಿಗೆ ವಚನಗಳು ಮತ್ತು ವಚನಕಾರರು ಪೌರಾಣಿಕವೆನಿಸಿ ಅವರ/ಅವುಗಳ ಅಸ್ತಿತ್ವ ಅತ್ಯಂತ ಅನುಮಾನಾಸ್ಪದ ಎನಿಸಿಬಿಡುತ್ತದೆ. ಇದಕ್ಕೆ ತಕ್ಕಂತೆ ಶೂನ್ಯಸಂಪಾದನೆ ಕೃತಿಯ ಬಗ್ಗೆ ಮತ್ತು ಬಸವಣ್ಣನ ಬಗ್ಗೆ ಮಂಟೇಸ್ವಾಮಿ, ಕೊಡೇಕಲ್ ಬಸವಣ್ಣ ಮುಂತಾದ ನಂತರದ ತತ್ವಪುರುಷರು ವ್ಯಂಗ್ಯವಾಡಿದ್ದಾರಲ್ಲದೆ ಇಂದಿನ ಆಧುನಿಕ ಶರಣರು ಸಹ ಇದು 'ಸಂದೇಹ ಸಂಪಾದನೆ' ಎಂದಿದ್ದಾರೆ. ಇಷ್ಟೆಲ್ಲದರ ನಡುವೆ ಆಧುನಿಕ ಕವಿಗಳ/ಸಂಶೋಧಕರ ನವಿರು ಭಾವನೆ, ವಚನಗಳ ಕಾವ್ಯಮಯ ಮೋಹಕತೆ, ಕಮ್ಯುನಿಸ್ಟ್ ಒಲವು, ಆಧುನಿಕತೆಯ ಆಕರ್ಷಣೆಗಳು ವಚನಗಳನ್ನು ಸಿದ್ಧಾಂತಗಳನ್ನಾಗಿಸಿ ಬಸವಣ್ಣನನ್ನು ಲೆನಿನ್, ಸ್ಟಾಲಿನ್, ಐನ್‌ಸ್ಟೀನ್ ಎಂದು ಸಮೀಕರಿಸಿ ಬಸವಣ್ಣನೇ ವೀರಶೈವ ಮತಸ್ಥಾಪಕ, ವಚನಗಳ ಕಟ್ಟೇ ಧಾರ್ಮಿಕ ಗ್ರಂಥ ಎಂದು ಸಮಾಜವನ್ನು ಸಮ್ಮೋಹಿಸಿರುವುದು ಸಹ ಶೂನ್ಯಸಂಪಾದನೆಯ ಮುಂದುವರಿದ ಒಂದು ಸುಂದರ ಸಂಕಥನ ಉರ್ಫ್ ಸಂದೇಹ ಸಂಕಥನ.

ಈಗ ಅನುಭವ ಮಂಟಪದ ಚರ್ಚಾ ದಾಖಲೆಯ ವಚನಗಳ ಆಧಾರದ ಮೇಲೆ ಸೃಷ್ಟಿಸಿದ ಭಾವಾವೇಶದ ಸಂಶೋಧಕ ಪಿತಾಮಹರ ಸಂಶೋಧನಾ ಸಂಕಥನಗಳಲ್ಲಿ, ಹುಸಿ ಸಮಾಜವಾದಿಗಳ ನಿರ್ವಚನಗಳಲ್ಲಿ ಸೃಜಿಸಿದ ಲಿಂಗಾಯತ ಪ್ರತ್ಯೇಕ ಧರ್ಮದ ಕಥನವನ್ನು ಬದಿಗಿಟ್ಟು ಪ್ರಾಗೈತಿಹಾಸಿಕ, ಪ್ರಾಕ್ತನ, ಶಾಸನ, ಮಾನವಿಕ, ಸಾಮಾಜಿಕ, ಮನಸ್ವಿಕ, ವೈಜ್ಞಾನಿಕ ಅಂಶಗಳಿಂದ ಮತ್ತಷ್ಟು ಆಳವಾಗಿ ನೋಡಿದಾಗ, ವೀರಶೈವದ ಮೂಲವನ್ನು ಆರ್ಯರಿಗಿಂತ ಮೊದಲು ಭಾರತಕ್ಕೆ ವಲಸೆ ಬಂದ ಪೂರ್ವ ಆಫ್ರಿಕಾ ಜನರಿಂದ ಹರಿದುಬಂದ ಲಿಂಗಾರಾಧನೆಯೆನ್ನಬಹುದು. ಈ ಮೂಲನಿವಾಸಿಗಳ ಲಿಂಗಾರಾಧನೆಯೇ ವೇದಗಳಲ್ಲಿ ರುದ್ರಾರಾಧನೆಯಾಯಿತು ಎಂದು ಇತಿಹಾಸ ತಜ್ಞರು ಅಭಿಪ್ರಾಯ ಮಂಡಿಸಿದ್ದಾರೆ. ಈ ವಾದವನ್ನು ಪುರಸ್ಕರಿಸಲು ಪೂರಕವಾಗಿ ಬ್ರಿಟಿಷ್ ಭಾರತದ ಪುರಾತತ್ವ ಇಲಾಖೆಯ ಡೈರೆಕ್ಟರ್ ಜನರಲ್ ಆಗಿದ್ದ ಇತಿಹಾಸ ತಜ್ಞ ಸರ್ ಜಾನ್ ಮಾರ್ಷಲ್ ತಮ್ಮ 'ಮೊಹೆಂಜೋದಾರೋ ಆ್ಯಂಡ್ ದಿ ಇಂಡಸ್ ಸಿವಿಲೈಜೇಷನ್' ಸಂಶೋಧನ ಗ್ರಂಥದಲ್ಲಿ ''ಕಲ್ಲಿನಿಂದ ಮಾಡಿದ ಸಣ್ಣ ಲಿಂಗಾಕೃತಿಗಳು ಮೊಹೆಂಜೋದಾರೋ ಉತ್ಖನನದ ಸಮಯದಲ್ಲಿ ಸಿಕ್ಕಿದ್ದು, ಶೈವರಾಧನೆ ಅಥವಾ ಲಿಂಗಾರಾಧನೆಯು ಈ ಕಾಲದಲ್ಲಿಯೂ ಪ್ರಚಲಿತವಿತ್ತೆಂದು ಸಾಕ್ಷ್ಯವನ್ನು ನೀಡುತ್ತವೆ. ಇಲ್ಲಿ ದೊರೆತ ಸಣ್ಣ ಲಿಂಗಾಕೃತಿಗಳು ದಕ್ಷಿಣ ಭಾರತದಲ್ಲಿನ ಇಂದಿನ ವೀರಶೈವರು ಕೊರಳಿಗೆ ಕಟ್ಟಿಕೊಂಡಿರುವ ಕರಂಡದಲ್ಲಿ ಇಟ್ಟುಕೊಳ್ಳುವ ಲಿಂಗಗಳಷ್ಟು ಚಿಕ್ಕದಿವೆ'' ಎಂದಿದ್ದಾರೆ. ಆಸಕ್ತರು ಈ ಗ್ರಂಥವನ್ನು ಪರಿಶೀಲಿಸಬಹುದು. ಒಂದು ವೇಳೆ ಈ ಗ್ರಂಥವು ಅನುಪಲಬ್ಧವಾಗಿದ್ದರೆ ಹಂಪಿ ಕನ್ನಡ ವಿಶ್ವವಿದ್ಯಾಲಯವು ಪ್ರಕಟಿಸಿರುವ ಸಂಶೋಧಕರಾದ ಆರ್.ಸಿ.ಹಿರೇಮಠ ಅವರ 'ಮಹಾಯಾತ್ರೆ' ಕೃತಿಯನ್ನು ಪರಿಶೀಲಿಸಬಹುದು. ಅವರು ತಮ್ಮ ಈ ಕೃತಿಯಲ್ಲಿ ಸರ್ ಜಾನ್ ಮಾರ್ಷಲ್ ಅವರ ಗ್ರಂಥವನ್ನು ಉಲ್ಲೇಖಿಸುತ್ತ ತಮ್ಮ ಸಂಶೋಧನೆಯ ಇನ್ನಷ್ಟು ಪೂರಕ ವಿಷಯಗಳನ್ನು ಮಂಡಿಸಿದ್ದಾರೆ. ಇದೇ ರೀತಿ ಸಾಹಿತಿ ಜೆ.ರುದ್ರಪ್ಪನವರು 'ಶೈವಮತ' ಎಂಬ ತಮ್ಮ ಲೇಖನದಲ್ಲಿ ಸಹ ಸರ್ ಜಾನ್ ಮಾರ್ಷಲ್ ಅವರ ಗ್ರಂಥವನ್ನು ಆಕರವಾಗಿ ಉಲ್ಲೇಖಿಸಿದ್ದಾರೆ. ಇವರ ಈ ಲೇಖನವು ಅ.ನ.ಕೃಷ್ಣರಾಯರು ಸಂಪಾದಿಸಿರುವ 'ಭಾರತೀಯ ಸಂಸ್ಕೃತಿ ದರ್ಶನ' ಕೃತಿಯಲ್ಲಿ ಒಂದು ಅಧ್ಯಾಯವಾಗಿದೆ (ಪುಟ 216).

ಮೊಹೆಂಜೋದಾರೋ ಉತ್ಖನನದಲ್ಲಿ ದೊರೆತ ಈ ಲಿಂಗಗಳು ಲಿಂಗಗಳಾಗಿದ್ದರೂ ಅವುಗಳ ಕೆಳಗಿನ ಪೀಠ ಯೋನಿಪೀಠ ಎಂದು ಹೇಳಲಾಗದು ಎಂದು ಆರ್ಥರ್ ಬಾಶಂ ತಮ್ಮ ಸಂದೇಹವನ್ನು ವ್ಯಕ್ತಪಡಿಸಿದ್ದರು. ಆದರೆ ಇದಕ್ಕೆ ಬ್ರಿಟಿಷ್ ಭಾರತದ ಮತ್ತಿಬ್ಬರು ಉತ್ಖನನ ಸಂಶೋಧಕರಾದ ಜೋನ್ಸ್ ಮತ್ತು ರಾಯನ್, ಹರಪ್ಪಾ ಮತ್ತು ಮೊಹೆಂಜೋದಾರೋದಲ್ಲಿ ತಮಗೆ ಯೋನಿಪೀಠದ ಮೇಲಿರುವ ಲಿಂಗಗಳೇ ಸಿಕ್ಕಿರುವುದು ಎಂದು ಸ್ಪಷ್ಟಪಡಿಸಿದ್ದಾರೆ. ಭಾರತ ಇತಿಹಾಸ ತಜ್ಞೆ ವೆಂಡಿ ಡೋನಿಗರ್ 'ಸಿಂಧೂ ಕಣಿವೆ ನಾಗರಿಕತೆಯು ಬಳಸುತ್ತಿದ್ದ ಮೊಹರುಗಳಲ್ಲಿ ಒಂದಾದ ಪಶುಪತಿ ಮೊಹರಿನಲ್ಲಿರುವ ಲಿಂಗಾಕೃತಿಯನ್ನು ತೋರಿ ''ಇಲ್ಲಿ ಸಿಕ್ಕ ಪಳೆಯುಳಿಕೆಗಳು ಲಿಂಗಗಳೇ'' ಎಂದಿದ್ದಾರೆ. ಒಟ್ಟಾರೆ ಈ ಎಲ್ಲಾ ಉತ್ಖನನಗಳು ಮತ್ತು ಸಂಶೋಧನೆಗಳು ಲಿಂಗಾರಾಧನೆಯು ಸಿಂಧೂ ನಾಗರಿಕತೆಯ ಭಾಗವಾಗಿದೆ ಎಂದು ಪ್ರತಿಪಾದಿಸಿವೆ. ಹಾಗಾಗಿ ಲಿಂಗಾರಾಧನೆಯು ಭಾರತದಲ್ಲಿ ಆರ್ಯನ್ ವಲಸಿಗರು ಬರುವ ಮುಂಚಿನಿಂದಲೂ ಇದ್ದ ಮೂಲ ಸಂಸ್ಕೃತಿಯೆನ್ನಬಹುದು.

ಅಲ್ಲಿಗೆ, ಮೂಲನಿವಾಸಿ ಪಶುಪಾಲಕರ ಪಶುಪತಿಗೂ ಹರಪ್ಪಾ ಮೊಹೆಂಜೋದಾರೋ ಮೊಹರಿಗೂ ನೇರ ಸಂಬಂಧವಲ್ಲದೆ ಲಿಂಗ ಯಾನೆ ಶೈವಕ್ಕೆ ಸಹ ಪುರಾವೆಯನ್ನು ಸ್ಥಾಪಿಸುತ್ತದೆ. ಈ ಪಶುಪತಿಯ ಆರಾಧಕರೇ ಮುಂದೆ ಪಾಶುಪತರೆಂದು ಕರೆಯಲ್ಪಟ್ಟರು. ಸರ್ ಜಾನ್ ಮಾರ್ಷಲ್ ಅವರು ಸಣ್ಣ ಲಿಂಗಾಕೃತಿಗಳನ್ನು ಶೈವಿಗರು ತಮ್ಮ ಕೊರಳಿಗೆ ಅಥವಾ ತೋಳಿಗೆ ಕಟ್ಟಿಕೊಂಡು ತಿರುಗುವ 'ಜಂಗಮ' ಸಂಸ್ಕೃತಿಯವರು ಎಂದಿದ್ದಾರೆ. ಆ ಜಂಗಮ ಸಂಸ್ಕೃತಿಯು ಬೌದ್ಧರ ಮೇಲೆ ಸಾಕಷ್ಟು ಪ್ರಭಾವ ಬೀರಿತ್ತು. ಆ ಪ್ರಭಾವದಿಂದಲೇ ಬೌದ್ಧರು ಬುದ್ಧನ ಅಥವಾ ನಂತರದ ಬೌದ್ಧಗುರುಗಳ ಜೈವಿಕ ಪಳೆಯುಳಿಕೆಗಳಾದ ಹಲ್ಲು, ಮೂಳೆ, ಕೂದಲುಗಳನ್ನೋ ಕರಂಡಕಗಳಲ್ಲಿಟ್ಟು ಪೂಜಿಸುತ್ತಿದ್ದರು ಮತ್ತು ತಮ್ಮೊಟ್ಟಿಗೆ ದೇಶಾಂತರದಲ್ಲಿ ತೆಗೆದುಕೊಂಡು ಹೋಗುತ್ತಿದ್ದರು. ಮುಂದೆ ಸ್ತೂಪಗಳನ್ನು ಕಟ್ಟಲು ತೊಡಗಿದಾಗ ಆ ಸ್ತೂಪಗಳಲ್ಲಿ ಈ ಕರಂಡಕಗಳನ್ನು ಸ್ಥಾವರಗೊಳಿಸಲಾರಂಭಿಸಿದರು. ಆ ಕರಂಡಕಗಳ ಸಂಸ್ಕೃತಿಯಿಂದ ಪ್ರಭಾವಿತರಾಗಿ ಶೈವರು ತೋಳು, ಕೊರಳಿಗೆ ಕಟ್ಟಿಕೊಳ್ಳುತ್ತಿದ್ದ ಲಿಂಗಗಳನ್ನು ಇಂಥ ಕರಂಡಕಗಳಲ್ಲಿಟ್ಟು ಅವುಗಳನ್ನು ತೋಳು, ಕೊರಳಿಗೆ ಕಟ್ಟಿಕೊಳ್ಳಲಾರಂಭಿಸಿರಬೇಕು ಅಥವಾ ಬೌದ್ಧರೇ ಶೈವಿಗರ ಈ ಪದ್ಧತಿಯನ್ನು ಅಳವಡಿಸಿಕೊಂಡಿರಲೂಬಹುದು. ಪುನರ್ಜನ್ಮದಲ್ಲಿ ನಂಬಿಕೆಯಿರದ ಬೌದ್ಧರು ನಿರ್ವಾಣ ಹೊಂದಿದ ಜೀವಿಗಳ ಭೌತಿಕ ಪಳೆಯುಳಿಕೆಗಳಾದ ಹಲ್ಲು, ಕೂದಲು, ಮೂಳೆಗಳನ್ನು ಕರಂಡಕದಲ್ಲಿಟ್ಟು ಪೂಜಿಸಿದರೆ, ಪಾಶುಪತರು ತಮ್ಮ ಆತ್ಮವನ್ನೇ ಲಿಂಗದ ರೂಪವಾಗಿಸಿಟ್ಟು ಪೂಜಿಸುತ್ತಿದ್ದರು. ಕ್ರಿ.ಶ. 127ರಲ್ಲಿ ಕಾನಿಷ್ಕನ ಪಟ್ಟಾಭಿಷೇಕದ ಪ್ರಥಮ ವಾರ್ಷಿಕೋತ್ಸವದಲ್ಲಿ ರಚಿಸಿದ ಕರಂಡಕದ ಆಕಾರದಂತೆಯೇ ಶೈವಿಗರ ಲಿಂಗವಿಡುವ ಕರಂಡಕ ಯಾನೆ ಕರಡಿಗೆಯ ಆಕಾರವಿದೆ. ಹೀಗೆ ಪರಸ್ಪರ ಪ್ರಭಾವಿಸುವ ಹಿಂದೂ ಸಂಸ್ಕೃತಿಯಿಂದಲೇ ಬೌದ್ಧ, ಜೈನ, ಪಾಶುಪತಗಳು ಒಂದೇ ಸಂಸ್ಕೃತಿಯ ಕವಲುಗಳು ಎನಿಸುವುದು. ಕಾನಿಷ್ಕನ ಈ ಕರಂಡಕವು ಇಂದು ಪಾಕಿಸ್ತಾನದ ಪೇಶಾವರ್ ವಸ್ತುಸಂಗ್ರಹಾಲಯದಲ್ಲಿದೆ.

(ಮುಂದುವರಿಯುವುದು)

(ಲೇಖಕರು ಶಿಕಾಗೊ ನಿವಾಸಿ ಮತ್ತು ಸಾಹಿತಿ)

ಭಟ್ಟರ್ ಸ್ಕಾಚ್

- **ವಿ.ಹೇಮಂತಕುಮಾರ, ಬೆಂಗಳೂರು**
ಭಟ್ರೇ, ಮೋಸಗಾರನ ಅಂತ್ಯ ಮೋಸಗಾರನಿಂದಲೇ ಆಗುತ್ತೆ ಅಂತಾರಲ್ಲ, ನಿಜಾನಾ?
- ಒಳ್ಳೆಯದಾಯ್ತಲ್ಲ.. ಕೆಲಸ ಬಹಳ ಸುಲಭ ಆಯ್ತು!

- **ಮಹಾನಂದ ಪಾಟೀಲ, (ಇಮೇಲ್ ಮೂಲಕ)**
ಭಟ್ರೇ, ಮೊಯಿಲಿಯವರ ಮಹಾಕಾವ್ಯವನ್ನು ರಷ್ಯನ್ ಭಾಷೆಗೆ ಭಾಷಾಂತರಿಸಿದರೆ?
- ಭಾರತ-ರಷ್ಯಾ ನಡುವಿನ ಮೈತ್ರಿಯನ್ನು ಭಂಗಗೊಳಿಸುವ ಕಲ್ಪನೆಯಾದರೂ ನಿನಗೆ ಹೇಗೆ ಬಂತು?!

- **ಮಲ್ಲೇಶ ಪಾಟೀಲ, ರಟ್ಟೀಹಳ್ಳಿ**
ಭಟ್ರೇ, ಬಿಯರ್ ಮಾರಾಟದಲ್ಲಿ ಶೇ.15ರಷ್ಟು ಏರಿಕೆ ಆಗಿದೆಯಂತೆ?
- ಅದಕ್ಕೆ 'ಕುಡಿಯೋಣು ಬಾರಾ' ಕೃತಿಯೇ ಕಾರಣ ಎಂದು ಸುಳ್ಳು ಸುದ್ದಿ ಹರಡದಿದ್ದರೆ ಸಾಕು!

- **ರತ್ನಾಕರ ಹೂವಪ್ಪ, ಹುಲಿಯೂರುದುರ್ಗ**
ಭಟ್ರೇ, ಮೋದಿ ಮತ್ತು ಶಾ ಕೇಂದ್ರ ಸರಕಾರದ ಪ್ರಬಲ ಅಸ್ತ್ರ ಅಂತ ನನ್ನ ಸ್ನೇಹಿತ ಹೇಳ್ತಾನಲ್ಲ?
- ನನ್ನ ಸ್ನೇಹಿತನ ಪ್ರಕಾರ, ಐಟಿ ಮತ್ತು ಇ.ಡಿ!

- **ಚಂದ್ರಿಕಾ ಹೆಗಡೆ, ಶಿರಸಿ**
ಭಟ್ರೇ, ನೀವು 'ಬಿಗ್ ಬಾಸ್' ನೋಡ್ತೀರಾ?
- ಹಾಗಂದ್ರೆ ಏನು ಸ್ವಲ್ಪ ಬಿಡಿಸಿ ಹೇಳಬಾರದಾ?!

- **ವೇಣುಗೋಪಾಲ ಕಂಚಿತೋಟ, ಕಡೂರು**
ಭಟ್ರೇ, ನಾನು ಸಿಎಂ ಆಗ್ತೀನಿ ಅಂತ ಲಾಯರ್ ಜಗದೀಶ ಹೇಳಿದ್ದಾರಲ್ಲ?
- ಯಾರು ಬೇಕಾದರೂ ಹಾಗೆ ಹೇಳಬಹುದು, ಟಿಡಿಆರ್ ಹರಿಶ್ಚಂದ್ರ ಗೌಡರು 40 ವರ್ಷಗಳಿಂದ ಹಾಗೆ ಹೇಳುತ್ತಿದ್ದಾರೆ!

- **ಶಿವಲಿಂಗಪ್ಪ ಸಿಂಗಸೆಟ್ಟಿ, ಕಲಬುರ್ಗಿ**
ಭಟ್ರೇ, ನಿಜವಾದ ವಿರೋಧ ಪಕ್ಷ ಪತ್ರಿಕೆಗಳಾ, ನ್ಯೂಸ್ ಚಾನೆಲ್ಲುಗಳಾ?
- ಕರ್ನಾಟಕದ ಮಟ್ಟಿಗೆ ಸದ್ಯ ಆ ಪಾತ್ರವನ್ನು ರಾಜ್ಯಪಾಲರು ನಿರ್ವಹಿಸುತ್ತಿದ್ದಾರೆ!

- **ಉಜ್ಜನಿ ಜಲೇಂದ್ರ, ಮಲ್ಲುಂಗೆರೆ**
ಭಟ್ರೇ, 'ಚಿನ್ನ'ನೇ ಇಲ್ಲದಿದ್ದರೆ ಮತ್ತೆ ಏನನ್ನು ಇಷ್ಟಪಡ್ತಿದ್ರು?
- ಆಗಲಾದರೂ ಗಂಡಂದಿರನ್ನೇ ಕೊರಳಿಗೆ ನೇತು ಹಾಕಿಕೊಳ್ತಾ ಇದ್ರು, ಅಂದುಕೊಳ್ಳಬೇಡ!

- **ವೀರೇಶ ಕಮತಗಿ, ಅಡಗೂರು**
ಭಟ್ರೇ, ಎಲ್ಲಿ ಹುಡುಕಿದರೆ ನೀವು ಸಿಗುತ್ತೀರಿ?
- ಎಲ್ಲಿ ಡ್ರೋನ್ ಹಾರುತ್ತಿದೆಯೋ, ಅದರ ಕೆಳಗೆ ಹುಡುಕಿ ನೋಡಿ!

- **ಪ್ರತಾಪ ಗೌಡ, (ಇಮೇಲ್ ಮೂಲಕ)**
ಭಟ್ರೇ, ಪ್ರತಾಪ ಸಿಂಹ ಥರಾ ನಾನೂ ಹೇರ್ ಸ್ಟೈಲ್ ಬದಲಿಸಲಾ?
- ಮೊದಲು ಅಷ್ಟು ತಲೆಗೂದಲು ಇದೆಯಾ ಅಂತ ಖಾತ್ರಿಪಡಿಸಿಕೋ!

ಲೋಕೋಮೋಟಿವ್‌ಗಿಂತ ದೊಡ್ಡದು ಮೋಟಿವೇಷನ್

ಇಂದು ನಾವು ರತನ್ ಟಾಟಾ ಅವರನ್ನು ಭಾರತದ ವಾರೆನ್ ಬಫೆಟ್ ಎಂದು ಹೇಳುತ್ತೇವೆ. ತಮ್ಮ ಆದಾಯದ ಶೇ.66ರಷ್ಟನ್ನು ಅವರು ದಾನ ಮಾಡುತ್ತಾರೆ ಎಂಬ ಕಥೆ ಕೇಳುತ್ತೇವೆ, ವರದಿ ಓದುತ್ತೇವೆ. ಯಾಕಾಗಬಾರದು? ಅವರು ನಡೆದದ್ದು ಹಿರಿಯರಾದ ಜೆಆರ್‌ಡಿ ಹಾಕಿಕೊಟ್ಟ ಸ್ಫೂರ್ತಿಯ ಹಾದಿಯಲ್ಲಿ ತಾನೆ?

ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್
dhyapaa@gmail.com

ಭಾರತದ, ಅಲ್ಲ, ವಿಶ್ವದ ಅಪ್ಪಟ ರತ್ನ, ರತನ್ ಟಾಟಾ ಇನ್ನಿಲ್ಲ ಎನ್ನುವುದು ನಿಜಕ್ಕೂ ಖೇದಕರ ವಿಷಯ. ಈ ವಿಷಯ ಕೇಳಿದಾಗಿನಿಂದಲೂ ಮನದಲ್ಲಿ ಒಂದು ದ್ವಂದ್ವ. ಈ ವಾರದ ಅಂಕಣ ರತನ್ ಟಾಟಾ ಬಗ್ಗೆ ಬರೆಯುವುದೋ, ಬೇಡವೋ?

'ಟಾಟಾ' ಎಂಬ ಹೆಸರೇ ಅಂಥದ್ದು. ನಾನಷ್ಟೇ ಅಲ್ಲ, ವಿಶ್ವದಾದ್ಯಂತ ಜನರು ಒಂದಲ್ಲ ಒಂದು ರೀತಿಯಲ್ಲಿ ಅವರಿಗೆ ಅಂತಿಮ ನಮನ ಸಲ್ಲಿಸುತ್ತಿರುವಾಗ, ನಾನು ಮನಸಾರೆ ಇಷ್ಟಪಟ್ಟ ವ್ಯಕ್ತಿಗೆ ಅಂತಿಮ ನಮನ ಸಲ್ಲಿಸದಿದ್ದರೆ ಹೇಗೆ? ಅಂಕಣದ ರೂಪದಲ್ಲಿ ನಮಿಸೋಣ ಎಂದರೆ, ಅವರು ನಮ್ಮನ್ನು ಬಿಟ್ಟು ಹೋದಾಗಿನಿಂದ ಎಲ್ಲ ಮಾಧ್ಯಮಗಳಲ್ಲೂ ಅವರದ್ದೇ ಸುದ್ದಿ. ಅವರ ಜೀವನ, ಸಾಧನೆ, ದಯೆ, ದಾನ, ವ್ಯಾಪಾರ-ವ್ಯವಹಾರ, ಎಲ್ಲವೂ ವಿವರವಾಗಿ ಸುದ್ದಿಯಾಗಿದೆ. ಸುದ್ದಿಮನೆಯವರು ಹೇಳಿದ ಅಂಶಗಳನ್ನೇ ನಾನು ಆರಿಸಿಕೊಂಡು ಸಾಣಿಸಿ, ಸೂಸಿ ಬರೆಯುವುದರಲ್ಲಿ ಯಾವ ಪುರುಷಾರ್ಥವೂ ಇಲ್ಲ. ಅವರಿಗೆ ಗೊತ್ತಿಲ್ಲದ, ನನಗೆ ಮಾತ್ರ ತಿಳಿದ ವಿಷಯ ಏನಾದರೂ ಇದೆಯೇ ಎಂದರೆ ಅದೂ ಇಲ್ಲ. ರತನ್ ಟಾಟಾ ಆಪ್ತರಾದ ಪ್ರಸಿದ್ಧ ನ್ಯಾಯವಾದಿ ಹರೀಶ್ ಸಾಳ್ವೆಯವರಿಂದ ಹಿಡಿದು, ಬರಹಗಾರ-ಉದ್ಯಮಿ ಸುಹೇಲ್ ಸೇಠ್‌ವರೆಗೆ ಎಲ್ಲರೂ ಅವರ ಕುರಿತು ಮಾತನಾಡಿದ್ದಾರೆ. ಆದ್ದರಿಂದ ಈ ವಾರ ರತನ್ ಟಾಟಾ ಕುರಿತು ಅಂಕಣ ಬರೆಯುವ ನಿರ್ಧಾರವನ್ನು ಅಲ್ಲಿಗೇ ಬಿಟ್ಟಿದ್ದೆ. ಯಾರೇ ನಮನ ಸಲ್ಲಿಸಲಿ, ಬಿಡಲಿ, ಯಾರೇ ಅವರ ಬಗ್ಗೆ ಬರೆಯಲಿ, ಬಿಡಲಿ, ಆ ಮಹಾನ್ ಚೇತನದ ಹೆಸರು ಭಾರತದ ಇತಿಹಾಸದ ಪುಟಗಳಲ್ಲಿ ಚಿರಸ್ಥಾಯಿಯಾಗಿರುತ್ತದೆ ಎನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ. ವ್ಯಾಪಾರ ಹೇಗೆ ಮಾಡಬೇಕು, ಉದ್ಯಮವನ್ನು ಹೇಗೆ ಬೆಳೆಸಬೇಕು, ಸಿಬ್ಬಂದಿಗಳನ್ನು ಹೇಗೆ ನೋಡಿಕೊಳ್ಳಬೇಕು, ಸಮಾಜಕ್ಕೆ ಏನು ಕೊಡಬೇಕು, ಒಟ್ಟಿನಲ್ಲಿ ಆದರ್ಶ ವ್ಯಕ್ತಿಯಾಗಿ ಹೇಗೆ ಬದುಕಬೇಕು ಎಂದು ತೋರಿಸಿಕೊಟ್ಟವರು ರತನ್ ಟಾಟಾ, ಅಥವಾ ಅವರ ಪೂರ್ವಜರು. ಇದನ್ನು ಭಾರತೀಯನಾಗಿ ನಾನು ಹೇಳುವುದಕ್ಕಿಂತ, ಭಾರತೀಯರ ಬಾಯಿಂದ ಕೇಳುವುದಕ್ಕಿಂತ, ಬೇರೆಯವರ ಬಾಯಿಂದ ಕೇಳಿದಾಗ ಗೌರವ ನೂರ್ಮಡಿಯಾಗುತ್ತದೆ.

ಬಹ್ರೈನ್ ಉದ್ಯಮಿ ಫರೀದ್ ಬದರ್ ಅವರ ಕಚೇರಿಗೆ ನಿನ್ನೆ ಹೋಗಿದ್ದೆ. ಈ ಮೊದಲೂ ಅವರ ಕುರಿತಾಗಿ ಒಂದು ಅಂಕಣದಲ್ಲಿ ಬರೆದಿದ್ದೆ. ಅವರ ಬಳಿ ಹೋದರೆ ಬುದ್ಧಿಗೆ ಏನಾದರೂ ಆಹಾರ ಸಿಗುತ್ತದೆ. ನಿನ್ನೆ ಮಾತು ಆರಂಭಿಸುತ್ತಿದ್ದಂತೆಯೇ ಅವರು ಟಾಟಾ ಹೆಸರನ್ನು ಪ್ರಸ್ತಾಪ ಮಾಡಿದ್ದರು. 'ನಿಮ್ಮ ದೇಶದ ಹೆಸರಾಂತ ಉದ್ಯಮಿ ರತನ್ ಟಾಟಾ ತೀರಿಹೋದರಂತೆ, ನಿಮ್ಮ ದೇಶ ಒಬ್ಬ ಒಳ್ಳೆಯ ವ್ಯಕ್ತಿಯನ್ನು ಕಳೆದುಕೊಂಡಿತು' ಎಂದರು. 'ನಿಮಗೆ ಅವರ ಹೆಸರಿನ ಅರ್ಥ ಗೊತ್ತೇ?' ಎಂದು ಕೇಳಿದೆ. 'ಅಮೂಲ್ಯವಾದ ರತ್ನ ಅಂತ ತಿಳಿಯಿತು, ಆ ಹೆಸರು ಅವರಿಗೆ ಸರಿಯಾಗಿ ಹೊಂದುತ್ತದೆ' ಎಂದರು. ಹಾಗೆಯೇ ಅವರ ಮತ್ತು ಜೆಆರ್‌ಡಿ ಟಾಟಾ ಕುರಿತಾದ ಒಂದಿಷ್ಟು ಕಥೆ, ಘಟನೆಗಳನ್ನು ಹೇಳಲಾರಂಭಿಸಿದರು. ಎರಡನೆಯ ವಿಶ್ವ ಮಹಾಯುದ್ಧದ ಸಂದರ್ಭದಲ್ಲಿ ನಡೆದ ಒಂದು ಘಟನೆಯನ್ನು ಸಂಕ್ಷಿಪ್ತವಾಗಿ ಹೇಳುತ್ತ, 'ಇದರ ವಿವರವನ್ನು ನಿಮಗೆ ವಾಟ್ಸ್ ಆ್ಯಪ್‌ನಲ್ಲಿ ಕಳಿಸುತ್ತೇನೆ' ಎಂದು ಸಂದೇಶವನ್ನು ರವಾನಿಸಿದರು. ಅವರ ಮಾತು ಕೇಳುತ್ತಿದ್ದಾಗ, 'ಪರವಾಗಿಲ್ಲ, ಕೆಲವು ಭಾರತೀಯರಿಗೂ ತಿಳಿಯದ ವಿಷಯಗಳನ್ನು ಇವರು ತಿಳಿದುಕೊಂಡಿದ್ದಾರೆ' ಅನ್ನಿಸಿತು.

ಇದು ಎರಡನೆಯ ವಿಶ್ವ ಮಹಾಯುದ್ಧದ ಸಂದರ್ಭದಲ್ಲಿ ನಡೆದ ಘಟನೆ. ಆ ಮಹಾಯುದ್ಧದಲ್ಲಿ ಜರ್ಮನಿ ಸಾಕಷ್ಟು ಹಾನಿಗೊಳಗಾಗಿತ್ತು. ವಿರೋಧಿಗಳ ಸೇನೆ ಜರ್ಮನಿಯ ಎಲ್ಲ ನಗರಗಳ ಮೇಲೂ ಬಾಂಬ್ ದಾಳಿ ನಡೆಸಿತ್ತು. ಜರ್ಮನಿಯ ಬಹುತೇಕ ನಗರಗಳೆಲ್ಲ ಧ್ವಂಸಗೊಂಡಿದ್ದವು. ಅದಕ್ಕೆ ಮ್ಯೂನಿಕ್ ನಗರವೂ ಹೊರತಾಗಿರಲಿಲ್ಲ. ಜರ್ಮನಿಯ ಬವೇರಿಯನ್ ಪ್ರಾಂತ್ಯದ ಮ್ಯೂನಿಕ್ ನಗರದ ಮೇಲೆ ಬರೋಬ್ಬರಿ 74 ವೈಮಾನಿಕ ದಾಳಿ ನಡೆದಿತ್ತು. ಮ್ಯೂನಿಕ್ ನಗರದ ಅರ್ಧಕ್ಕಿಂತಲೂ ಹೆಚ್ಚು ಭಾಗ ಈ ದಾಳಿಗೆ ಛಿದ್ರವಾಗಿತ್ತು. ಆ ಕಾಲದಲ್ಲಿ ಮ್ಯೂನಿಕ್ ನಗರ ಡೀಸೆಲ್ ಎಂಜಿನ್‌ಗಳ ತಯಾರಿಕೆಗೆ ಹೆಸರುವಾಸಿಯಾಗಿತ್ತು. ಯುದ್ಧದ ಪರಿಣಾಮದಿಂದ ಅಲ್ಲಿಯ ಜನರಿಗೆ ರಾತ್ರಿ ಮಾತ್ರವಲ್ಲ, ಪ್ರತಿ ದಿನವೂ, ಮುಂಜಾನೆಯೂ ಕರಾಳವಾಗಿತ್ತು. ಆ ಕಾಲದಲ್ಲಿ ಮ್ಯೂನಿಕ್ ನಗರದಲ್ಲಿ 'ಕ್ರಾಸ್ ಮಾಫಿ' ಹೆಸರಿನ ಸಂಸ್ಥೆಯೊಂದು ಲೋಕೋಮೋಟಿವ್ ಎಂಜಿನ್ ತಯಾರಿಸುತ್ತಿತ್ತು. ಮ್ಯೂನಿಕ್ ನಗರ ಯಂತ್ರಗಳ ತಯಾರಿಕೆಗೆ ಹೆಸರಾಗುವುದರಲ್ಲಿ ಈ ಸಂಸ್ಥೆಯ ಕೊಡುಗೆಯೂ ಪ್ರಮುಖವಾಗಿತ್ತು ಎಂದರೆ ತಪ್ಪಾಗಲಿಕ್ಕಿಲ್ಲ. ಕ್ರಾಸ್ ಮಾಫಿ, 1838ರಲ್ಲಿ ಆರಂಭಗೊಂಡು, ನೂರಕ್ಕೂ ಹೆಚ್ಚು ವರ್ಷ ಪೂರೈಸಿತ್ತು. ಆದರೆ ವಿಶ್ವಯುದ್ಧದ ಸಂದರ್ಭದಲ್ಲಿ ಅತೀವ ಹಾನಿಗೊಳಗಾಗಿತ್ತು. ಕ್ರಾಸ್ ಮಾಫಿ ಕಾರ್ಖಾನೆಯಲ್ಲಿ, ಕಚೇರಿಯಲ್ಲಿ ಕೆಲಸಮಾಡುತ್ತಿದ್ದ ಅನೇಕ ಎಂಜಿನಿಯರ್‌ಗಳು, ಇತರ ನೌಕರರು ಯುದ್ಧದ ಪ್ರಭಾವಕ್ಕೆ ಒಳಗಾಗಿದ್ದರು. ಉದ್ಯೋಗ ಕಳೆದುಕೊಂಡಿದ್ದ ಜನರಿಗೆ ಸಂಸಾರ ನಡೆಸುವುದೇ ಕಷ್ಟವಾಗಿತ್ತು.

ಒಂದು ಮುಂಜಾನೆ ಕ್ರಾಸ್ ಮಾಫಿ ಸಂಸ್ಥೆಯ ನಿರ್ದೇಶಕರು ಮ್ಯೂನಿಕ್ ರೈಲು ನಿಲ್ದಾಣದಲ್ಲಿ ಭಾರತದಿಂದ ಬರಲಿರುವ ತಮ್ಮ ಅತಿಥಿಗಾಗಿ ಕಾಯುತ್ತಿದ್ದರು. ರೈಲು ಬಂದು ನಿಂತಾಗ ಅದರಿಂದ 42 ವರ್ಷದ, ಸುಂದರ, ನೀಳಕಾಯದ ಜೆಆರ್‌ಡಿ ಟಾಟಾ ಕೆಳಗೆ ಇಳಿದರು. ಜೆಆರ್‌ಡಿ ಆಗ ಟಾಟಾ ಗ್ರೂಪ್‌ನ ಅಧ್ಯಕ್ಷರಾಗಿದ್ದರು. ಅವರ ಜತೆಗೆ ಟಾಟಾದ ಅಂಗಸಂಸ್ಥೆ ಟೆಲ್ಕೊದ ಸುಮಂತ್ ಮೂಲಗಾಂವ್ಕರ್ ಇದ್ದರು. ಭಾರತದಲ್ಲಿ ಲೋಕೊಮೋಟಿವ್ ಯಂತ್ರ ತಯಾರಿಸಲು ಕ್ರಾಸ್ ಮಾಫಿ ಸಂಸ್ಥೆಯ ಸಹಾಯ ಕೇಳಲು ಅವರು ಬಂದಿದ್ದರು. ಆದರೆ ಅವರಿಗೆ ಯುದ್ಧದ ಪಳೆಯುಳಿಕೆಗಳನ್ನು ಬಿಟ್ಟರೆ ಬೇರೇನೂ ಕಾಣಲಿಲ್ಲ.

ಅಂದು ಸಹಾಯ ಕೇಳಲು ಬಂದಿದ್ದ ಟಾಟಾ ಅವರನ್ನು ಕ್ರಾಸ್ ಮಾಫಿ ಸಂಸ್ಥೆಯ ನಿರ್ದೇಶಕರೇ ತಮಗೆ ಸಹಾಯ ಮಾಡುವಂತೆ ಕೇಳಿಕೊಂಡಿದ್ದರು. 'ನಮ್ಮ ಸಂಸ್ಥೆಯಲ್ಲಿ ಕೆಲಸ ಕಳೆದುಕೊಂಡ ಎಂಜಿನಿಯರ್‌ಗಳನ್ನು ಸಂಸಾರ ಸಮೇತ ನಿಮ್ಮಲ್ಲಿ ಕರೆದುಕೊಂಡು ಹೋಗಿ. ಅವರಿಗೆ ಉದ್ಯೋಗ, ತಲೆಯ ಮೇಲೊಂದು ಸೂರು, ಮಕ್ಕಳಿಗೆ ಶಿಕ್ಷಣದ ವ್ಯವಸ್ಥೆ ಮಾಡಿಕೊಡಿ. ಅವರು ಒಳ್ಳೆಯ ಕೆಲಸಗಾರರು, ನೀವು ಹೇಳಿದ ಕೆಲಸವನ್ನು ಮಾಡುವುದಷ್ಟೇ ಅಲ್ಲ, ತಮ್ಮ ವಿದ್ಯೆಯನ್ನು ನಿಮ್ಮ ಜನರಿಗೆ ಹೇಳಿಕೊಡುತ್ತಾರೆ. ಆದರೆ ಈ ಒಪ್ಪಂದ ಯಾವುದೇ ಕರಾರುಪತ್ರ ಇಲ್ಲದೆಯೇ ಆಗಬೇಕು' ಎಂದಿದ್ದರು.

ಅದಕ್ಕೆ ಬಲವಾದ ಕಾರಣವಿತ್ತು. ಆಗ ಭಾರತದಲ್ಲಿ ಇನ್ನೂ ಬ್ರಿಟಿಷರ ಆಳ್ವಿಕೆ ಇತ್ತು. ವಿಶ್ವಯುದ್ಧದ ಸಂದರ್ಭವಾದದ್ದರಿಂದ ಜರ್ಮನಿಯೊಂದಿಗೆ ಯಾವುದೇ ರೀತಿಯ ಒಪ್ಪಂದ ಮಾಡಿಕೊಳ್ಳದಂತೆ ನಿರ್ಬಂಧ ಹೇರಲಾಗಿತ್ತು. ಹಾಗಾಗಿ ಇದನ್ನು ಕರಾರುಪತ್ರವಿಲ್ಲದೆ, ಗುಪ್ತವಾಗಿ, ಕೇವಲ ಭರವಸೆಯ ಮೇಲೆ ಮಾಡಬೇಕಿತ್ತು. ಟಾಟಾ ಸಂಸ್ಥೆಯ ಅಧ್ಯಕ್ಷರಾಗಿದ್ದ ಜೆಆರ್‌ಡಿ ಮತ್ತು ನಿರ್ದೇಶಕರಾಗಿದ್ದ ಮೂಲಗಾಂವ್ಕರ್ ಇದಕ್ಕೆ ಒಪ್ಪಿದ್ದರು. ಆ ಕಾಲದಲ್ಲಿ ಅವರು ತೆಗೆದುಕೊಂಡ ದೊಡ್ಡ ರಿಸ್ಕ್ ಅದಾಗಿತ್ತು. ರಿಸ್ಕ್ ತೆಗೆದುಕೊಂಡದ್ದಷ್ಟೇ ಅಲ್ಲ, ಜರ್ಮನ್ ಎಂಜಿನಿಯರ್‌ಗಳಿಗೆ ಒಳ್ಳೆಯ ಉದ್ಯೋಗ ನೀಡಿದ ಟಾಟಾ ಗ್ರೂಪ್ ಒಳ್ಳೆಯ ಸಂಬಳ, ಉತ್ತಮವಾದ ವಸತಿಯ ಸೌಲಭ್ಯವನ್ನು ನೀಡಿ ಚೆನ್ನಾಗಿ ನೋಡಿಕೊಂಡಿತು. ಅದು ಫಲ ನೀಡಿತು.

1945ರಲ್ಲಿ ಟಾಟಾ ಮೋಟರ್ಸ್, ಇಂಡಿಯನ್ ರೇಲ್ವೇಸ್‌ಗೆ ಉಗಿಬಂಡಿ ತಯಾರಿಸಿ ಕೊಡುವ ಒಪ್ಪಂದಕ್ಕೆ ಸಹಿಹಾಕಿತು. ರೇಲ್ವೆ ಯಂತ್ರದ ತಯಾರಿಕೆಗೆ ಟಾಟಾ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಎಂಜಿನಿಯರ್‌ಗಳು ಸಹಾಯ ಮಾಡಿದರು. ಅದರಿಂದ ಭಾರತದ ಮೊದಲ ಲೋಕೊಮೋಟಿವ್ ಎಂಜಿನ್ ತಯಾರಿಸಿದ ಸಂಸ್ಥೆ ಎಂಬ ಹೆಗ್ಗಳಿಕೆಗೆ ಟಾಟಾ ಸಂಸ್ಥೆ ಪಾತ್ರವಾಯಿತು. ಅದಾಗಿ 2 ವರ್ಷದಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿತು. 1950ರ ವೇಳೆಗೆ ಜರ್ಮನಿಯ ಡೈಮ್ಲರ್ ಬೆಂಜ್ ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಂಡು ಟಾಟಾ ಸಂಸ್ಥೆ ಭಾರತದಲ್ಲಿ ಟ್ರಕ್ ನಿರ್ಮಾಣಕ್ಕೆ ಮುಂದಾಯಿತು. ಯುದ್ಧವೂ ಸಮಾಪ್ತಿಯಾಗಿದ್ದರಿಂದ ಜರ್ಮನಿ ವೇಗವಾಗಿ ಚೇತರಿಸಿಕೊಂಡಿತು. ಆದರೆ ಕಥೆ ಅಲ್ಲಿಗೇ ನಿಲ್ಲಲಿಲ್ಲ.

ಒಂದು ದಿನ ಕ್ರಾಸ್ ಮಾಫಿ ಸಂಸ್ಥೆಯ ನಿರ್ದೇಶಕ ಮಂಡಳಿಗೆ ಒಂದು ಪತ್ರ ಬಂತು. ತೆರೆದು ನೋಡಿದರೆ ಅದು ಟಾಟಾ ನಿರ್ದೇಶಕರಾಗಿದ್ದ ಜೆಆರ್‌ಡಿ ಬರೆದ ಪತ್ರವಾಗಿತ್ತು. ಪತ್ರದಲ್ಲಿ, ಲೋಕೊಮೋಟಿವ್ ಯಂತ್ರ ತಯಾರಿಕೆಗೆ ಕ್ರಾಸ್ ಮಾಫಿ ಎಂಜಿನಿಯರ್‌ಗಳು ನೀಡಿದ ತಂತ್ರಜ್ಞಾನ ಮತ್ತು ಕೌಶಲಕ್ಕೆ ಧನ್ಯವಾದ ಸಲ್ಲಿಸಲಾಗಿತ್ತು. ಅಷ್ಟೇ ಅಲ್ಲ, ಅದಕ್ಕೆ ಗೌರವಧನ ನೀಡುವುದಾಗಿ ಪ್ರಸ್ತಾಪಿಸಲಾಗಿತ್ತು. ಇದನ್ನು ಕಂಡ ಕ್ರಾಸ್ ಮಾಫಿ ಸಂಸ್ಥೆಯವರು ಅತೀವ ಆಶ್ಚರ್ಯಕ್ಕೊಳಗಾಗಿದ್ದರು. ಕಾರಣ, ಎರಡು ಸಂಸ್ಥೆಯ ನಡುವೆ ಈ ರೀತಿಯ ಯಾವುದೇ ಒಪ್ಪಂದವಾಗಿರಲಿಲ್ಲ, ಯಾವುದೇ ಕರಾರುಪತ್ರ ಇರಲಿಲ್ಲ, ತಂತ್ರಜ್ಞಾನ ನೀಡಿದ್ದಕ್ಕೆ ಹಣ ಸಂದಾಯ ಮಾಡುವ ಯಾವ ಬದ್ಧತೆಯೂ ಟಾಟಾ ಸಂಸ್ಥೆಗೆ ಇರಲಿಲ್ಲ. ನಿಜ ಹೇಳಬೇಕು ಎಂದರೆ, ಆ ಸಂಕಷ್ಟದ ಕಾಲದಲ್ಲಿ ಯಾವುದೇ ಕರಾರು ಇಲ್ಲದೆಯೇ, ನಿರುದ್ಯೋಗಿಗಳಾಗಿದ್ದ ಜರ್ಮನ್ ಎಂಜಿನಿಯರ್‌ಗಳಿಗೆ ಟಾಟಾ ಸಂಸ್ಥೆ ಉದ್ಯೋಗ ನೀಡಿತ್ತು. ಅವರನ್ನು ಚೆನ್ನಾಗಿ ನೋಡಿಕೊಂಡು ಜರ್ಮನಿಗೆ, ಸಂಸ್ಥೆಗೆ ಉಪಕಾರ ಮಾಡಿತ್ತು. ಮೇಲಾಗಿ ಇಂಥದ್ದೊಂದು ಪತ್ರ ಬಂದಿದೆ ಎಂದರೆ ಅವರಲ್ಲಿ ಮಾತೇ ಇರಲಿಲ್ಲ. ಬಹಳ ವರ್ಷಗಳವರೆಗೆ ಗೌಪ್ಯವಾಗಿದ್ದ ಈ ವಿಷಯವನ್ನು ಸುಮಾರು 20 ವರ್ಷದ ನಂತರ ಕ್ರಾಸ್ ಮಾಫಿ ಸಂಸ್ಥೆಯ ನಿರ್ದೇಶಕರೊಬ್ಬರು ಮಲೇಷಿಯಾದಲ್ಲಿ ಬಹಿರಂಗಪಡಿಸಿದ್ದರು. 'ಅಂದು ಟಾಟಾ ಸಂಸ್ಥೆ ಗೌರವಧನ ನೀಡಿ, ಕರಾರು-ಕಾನೂನಿನ ಕಟ್ಟುಪಾಡು ಇಲ್ಲದೆಯೂ ಒಳ್ಳೆಯ ವ್ಯವಹಾರ ಮಾಡಬಹುದು ಎಂದು ತೋರಿಸಿಕೊಟ್ಟಿತು' ಎಂದಿದ್ದರು.

ಇನ್ನೊಂದು ವಿಷಯ ಗೊತ್ತೇ? 70ರ ದಶಕದಲ್ಲಿ ಜರ್ಮನಿಯ ಸಂಸ್ಥೆಗಳೊಂದಿಗೆ ವ್ಯಾಪಾರ ಮಾಡಲು ಬ್ಯಾಂಕ್ ಗ್ಯಾರಂಟಿ (ಕಾನೂನುಬದ್ಧ ಹಣಕಾಸಿನ ಖಾತರಿ) ನೀಡುವಂತೆ ಕೇಳಲಾಗಿತ್ತು. ಆ ಸಮಯದಲ್ಲಿ ಭಾರತ ಸರಕಾರದ ನಿಯಮಗಳಿಂದಾಗಿ ಇದು ಕಷ್ಟದ ಕೆಲಸವಾಗಿತ್ತು. ಇದು ಜರ್ಮನಿಯ ಬ್ಯಾಂಕ್ ಅಧಿಕಾರಿಗಳಿಗೆ ತಿಳಿದಾಗ, 'ಟಾಟಾ ಸಂಸ್ಥೆಯ ಲೆಟರ್‌ಹೆಡ್‌ನಲ್ಲಿ ಅಧ್ಯಕ್ಷರು ಸಹಿ ಮಾಡಿದ ಗ್ಯಾರಂಟಿ ಪತ್ರ, ಯಾವುದೇ ಬ್ಯಾಂಕ್ ಗ್ಯಾರಂಟಿಗಿಂತಲೂ ಹೆಚ್ಚಿನ ಮೌಲ್ಯ ಹೊಂದಿದೆ' ಎಂದು ಹೇಳಿದ್ದರು. ವ್ಯಾಪಾರದಲ್ಲಿ ಉಳಿಸಿಕೊಳ್ಳಬೇಕಾದದ್ದು ಇದೇ ಅಲ್ಲವೇ? ಆ ಕಾಲದಲ್ಲಿಯೇ ಟಾಟಾ ಸಂಸ್ಥೆ ಆ ಭರವಸೆಯನ್ನು ಬೆಳೆಸಿಕೊಂಡಿತ್ತು, ಉಳಿಸಿಕೊಂಡಿತ್ತು.

ಫರೀದ್ ಹೇಳುತ್ತಿದ್ದ ಕಥೆ ಕೇಳುತ್ತಿದ್ದಂತೆ ಟಾಟಾ ಸಂಸ್ಥೆ, ಜೆಆರ್‌ಡಿಯವರ ಕುರಿತು ಇದ್ದ ಗೌರವ ಇನ್ನಷ್ಟು ಹೆಚ್ಚಿತು. ಈ ಕಥೆಯನ್ನು ನಾನು ಈ ಮೊದಲು ಕೇಳಿರಲಿಲ್ಲ, ನಮ್ಮ ದೇಶದ ಯಶಸ್ವಿ ಉದ್ಯಮಿಯ ಕಥೆಯೊಂದು ಬಹ್ರೈನ್ ದೇಶದಲ್ಲಿ ಹುಟ್ಟಿ ಬೆಳೆದವರಿಂದ ತಿಳಿಯಿತು. ಬೇಸರಪಡಬೇಕೋ, ಸಂತೋಷಪಟ್ಟುಕೊಳ್ಳಬೇಕೋ ಗೊತ್ತಾಗಲಿಲ್ಲ. ಈ ಕಥೆಯ ಸತ್ಯಾಸತ್ಯತೆ ತಿಳಿದುಕೊಳ್ಳಬೇಕಿತ್ತು. ಗೊತ್ತಲ್ಲ, ಇತ್ತೀಚೆಗೆ ಸಾಮಾಜಿಕ ಜಾಲತಾಣದಲ್ಲಿ ಬರುವ ಯಾವ ವಿಷಯವನ್ನೂ ಸಲೀಸಾಗಿ ನಂಬುವಂತಿಲ್ಲ. ಫರೀದ್ ಬದರ್ ನನಗೆ ಕಳುಹಿಸಿದ ಲೇಖನ ಸತ್ಯವೋ, ಸುಳ್ಳೋ ಎಂದು ಒಮ್ಮೆ ನೋಡಬೇಕು ಎಂದು ಹುಡುಕಿದೆ. ಅವರು ನನಗೆ ಕಳುಹಿಸಿದ್ದು, ಮುಂಬೈ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪಡೆದ ಶಿಕ್ಷಣ ತಜ್ಞೆ, ಲೇಖಕಿ, ಪ್ರಮಿಳಾ ಕುಡ್ವ ಇಂದಿಗೆ 3 ವರ್ಷದ ಹಿಂದೆ ಬರೆದು ಪ್ರಕಟಿಸಿದ ಲೇಖನ ಎಂಬ ಮಾಹಿತಿ ದೊರಕಿತು.

ಒಂದಂತೂ ನಿಜ, ಜೆಆರ್‌ಡಿ ಟಾಟಾ ಅಂದು ದೇಶಕ್ಕೆ ಲೋಕೊಮೋಟಿವ್ ಯಂತ್ರವನ್ನು ಮಾತ್ರ ಕೊಟ್ಟಿರಲಿಲ್ಲ, ಅದಕ್ಕಿಂತಲೂ ದೊಡ್ಡದಾದ ಮೋಟಿವೇಷನ್ ಮಂತ್ರವನ್ನೂ ಕೊಟ್ಟಿದ್ದರು. ಇಂದಿಗೂ ಟಾಟಾ ಸಂಸ್ಥೆ ಆ ಭರವಸೆಯನ್ನು ಕಾಪಿಟ್ಟುಕೊಂಡಿದೆ. ಟಾಟಾ ಸಂಸ್ಥೆ ದಗಾ ಹಾಕಿದ ಕಥೆಯನ್ನಾಗಲಿ, ಅನ್ಯಾಯದ ಮಾರ್ಗದಲ್ಲಿ ಹಣ ಗಳಿಸಿದ ಆಪಾದನೆಯಾಗಲಿ ನಾನಂತೂ ಕೇಳಲಿಲ್ಲ.

ಇಂದು ನಾವು ರತನ್ ಟಾಟಾ ಅವರನ್ನು ಭಾರತದ ವಾರೆನ್ ಬಫೆಟ್ ಎಂದು ಹೇಳುತ್ತೇವೆ. ತಮ್ಮ ಆದಾಯದ ಶೇ.66ರಷ್ಟನ್ನು ಅವರು ದಾನ ಮಾಡುತ್ತಾರೆ ಎಂಬ ಕಥೆ ಕೇಳುತ್ತೇವೆ, ವರದಿ ಓದುತ್ತೇವೆ. ಯಾಕಾಗಬಾರದು? ಅವರು ನಡೆದದ್ದು ಹಿರಿಯರಾದ ಜೆಆರ್‌ಡಿ ಹಾಕಿಕೊಟ್ಟ ಸ್ಫೂರ್ತಿಯ ಹಾದಿಯಲ್ಲಿ ತಾನೆ? ರತನ್ ಟಾಟಾ ಕೂಡ ತಾವೊಬ್ಬರೇ ನಡೆಯಲಿಲ್ಲ, ತಾವು ನಡೆಯುವುದರೊಂದಿಗೆ ಪಕ್ಕದಲ್ಲಿಯೇ ಇನ್ನೊಂದು ಸ್ಫೂರ್ತಿಯ ಹಾದಿಗೂ ಕಲ್ಲು ಹಾಸಿ ಹೋಗಿದ್ದಾರೆ. ಆ ಹಾದಿಯಲ್ಲಿ ಮುಂದಿನ ತಲೆಮಾರಿನವರು ಹೂವು ಬೆಳೆಯಲು ಮಾದರಿಯಾಗಿ ಹೋಗಿದ್ದಾರೆ.

ಬದುಕಿರಲಿ, ಇಲ್ಲದಿರಲಿ, ಆನೆ ಆನೆಯೇ! ನಮಗೆ ಮಾದರಿಯೇ!

ನಾರದ ಸಂಚಾರ
ಕಲಹಪ್ರಿಯ
naadigru@gmail.com

ಒತ್ತಡಕ್ಕೆ 'ದಿವ್ಯ' ಔಷಧ!

ಮೊದಲೇ ಹೇಳಿಬಿಡುತ್ತೇನೆ, ಇದು ಪಕ್ಕದ್ಮನೆ ಸುದ್ದಿ! ಅಷ್ಟಕ್ಕೂ ಪಕ್ಕದ್ಮನೆ ಸುದ್ದಿ ಕೇಳೋಕ್ಕೆ ರುಚಿ ಕಟ್ಟಾಗಿರುತ್ತೆ, ಅಲ್ವೇ! ಇದು ನಡೆದು ಸಾಕಷ್ಟು ದಿನಗಳಾಗಿವೆ ಎನ್ನಿ. ಇದು ಕೇರಳದಲ್ಲಿ ಸಾಕಷ್ಟು ಸಂಚಲನೆ ಸೃಷ್ಟಿಸಿದ ಸುದ್ದಿಯೂ ಹೌದು. ಅಲ್ಲಿನ 'ವಿಝಿಂಜಮ್ ಇಂಟರ್‌ನ್ಯಾಷನಲ್ ಸೀಪೋರ್ಟ್ ಲಿಮಿಟೆಡ್'ನ ವ್ಯವಸ್ಥಾಪಕ ನಿರ್ದೇಶಕಿಯೂ, ಕೇರಳ ಘನತ್ಯಾಜ್ಯ ನಿರ್ವಹಣಾ ಯೋಜನೆಯ ನಿರ್ದೇಶಕಿಯೂ ಆಗಿರುವ ಐಎಎಸ್ ಅಧಿಕಾರಿ ದಿವ್ಯಾ ಎಸ್.ಅಯ್ಯರ್ ಅವರು ಈ ಸುದ್ದಿಯ ಕೇಂದ್ರ ಬಿಂದು. ದಿವ್ಯಾ ಅವರು ತಮ್ಮ ಸಹೋದ್ಯೋಗಿಗಳೊಂದಿಗೆ ಸೇರಿಕೊಂಡು ಮಾಡಿದ 'ತಿರುವ ಥಿರಕ್ಕಲಿ' ಸಾಂಪ್ರದಾಯಿಕ ನೃತ್ಯದ ವಿಡಿಯೋವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಮಾಡಿದ್ದೇ ಮಾಡಿದ್ದು ಅದು ವೈರಲ್ ಆಗಿಬಿಟ್ಟಿತಂತೆ. ಇಷ್ಟು ಮಾತ್ರವಲ್ಲದೆ, ಮಲಯಾಳಂ ಚಲನಚಿತ್ರವೊಂದರ ಗೀತೆಯನ್ನು ಅವರು ಸರಾಗವಾಗಿ ಪ್ರಸ್ತುತಪಡಿಸಿದ್ದು ಕೂಡ ಸಾಕಷ್ಟು ನೋಡುಗರ ಗಮನ ಸೆಳೆಯಿತಂತೆ. ಈ ಪಟ್ಟಿ ಇಷ್ಟಕ್ಕೇ ನಿಲ್ಲುವುದಿಲ್ಲ; ಓರ್ವ ವೈದ್ಯೆ ಮತ್ತು ಲೇಖಕಿಯೂ ಆಗಿರುವ ದಿವ್ಯಾ ಅವರು ಚಲನಚಿತ್ರವೊಂದರಲ್ಲಿ ಅಭಿನಯಿಸಿರುವುದೂ ಉಂಟಂತೆ! ಅಧಿಕಾರಿಶಾಹಿ ವಲಯದಲ್ಲಿ 'ಮೇಲಿನವರಿಂದ' ಬರುವ ಒತ್ತಡ ಹೇಗಿರುತ್ತೆ ಅನ್ನೋದನ್ನ ಬಿಡಿಸಿ ಹೇಳಬೇಕಿಲ್ಲ; ಇಷ್ಟರ ನಡುವೆಯೂ ಅವರು ಸಮಯ ಮಾಡಿಕೊಂಡು ತಮ್ಮ ಪ್ರತಿಭಾ ಪ್ರದರ್ಶನಕ್ಕೆ ಮುಂದಾಗಿರುವುದನ್ನು ಕಂಡವರು ಸದರಿ ವಿಡಿಯೋದ ಕಮೆಂಟ್ ಬಾಕ್ಸ್‌ನಲ್ಲಿ, ''ನೀವು ಇನ್ನೂ ಏನೇನು ಮಾಡಬಲ್ಲಿರಿ?'' ಎಂದು ಕೇಳುವುದಕ್ಕಿಂತ, ''ನಿಮಗೆ ಬರದೇ ಇರುವ ಕಲೆಯೇನಾದರೂ ಇದ್ದರೆ ತಿಳಿಸಿ!'' ಎಂದು ಕಮೆಂಟಿಸಿ ಶ್ಲಾಘಿಸುತ್ತಿದ್ದಾರಂತೆ!

ನಮ್ ಕರ್ನಾಟಕದಲ್ಲಿ ಕೆಲ ಪುಢಾರಿಗಳು ಮಾಡ್ತಾ ಇರೋ 'ಬಯಲಾಟ' ಈ ಕಮೆಂಟಿಗರ ಗಮನಕ್ಕೆ ಇನ್ನೂ ಬಂದಿಲ್ಲ ಅನ್ಸುತ್ತೆ!!

ಇದು ಅಭಾವ ವೈರಾಗ್ಯ!

ಮನುಷ್ಯರನ್ನು ಕಾಡುವ 'ವೈರಾಗ್ಯ'ಗಳಲ್ಲಿ ಪ್ರಸವ ವೈರಾಗ್ಯ, ಪುರಾಣ ವೈರಾಗ್ಯ, ಸ್ಮಶಾನ ವೈರಾಗ್ಯ ಹಾಗೂ ಜ್ಞಾನ ವೈರಾಗ್ಯ ಎಂಬ ಬಗೆಗಳಿರುವುದು ನಿಮಗೆ ಗೊತ್ತಿರಬಹುದು. ಈ ಸಾಲಿಗೆ ಸೇರುವ ಮತ್ತೊಂದು 'ಆಧುನಿಕ' ವೈರಾಗ್ಯವಿದೆ. ಅದುವೇ 'ಅಭಾವ ವೈರಾಗ್ಯ'. ಅಂದರೆ, ಯಾವುದಾದರೊಂದು ವಸ್ತು-ವಿಷಯ ತನಗೆ ಗಿಟ್ಟುತ್ತಿಲ್ಲ, ದಕ್ಕುತ್ತಿಲ್ಲ ಎಂಬುದು ಅರಿವಾದಾಗ, ಮನುಜನ ಮನದಲ್ಲಿ ತನ್ನಿಂತಾನೇ ಮೂಡುವ ವೈರಾಗ್ಯವಿದು! 10 ಗ್ರಾಂ ಪರಿಶುದ್ಧ ಚಿನ್ನದ ಬೆಲೆ ಸದ್ಯದಲ್ಲೇ 1 ಲಕ್ಷ ರುಪಾಯಿ ಮಟ್ಟವನ್ನು ಮುಟ್ಟಲಿದೆ ಎಂಬ ವರದಿಗಳು ಬಂದಿರುವ ಹಿನ್ನೆಲೆಯಲ್ಲಿ ಹಲವರು ಈಗಾಗಲೇ ಚಿನ್ನದ ಕುರಿತಾದ 'ಅಭಾವ ವೈರಾಗ್ಯ'ಕ್ಕೆ ಒಡ್ಡಿಕೊಳ್ಳಲು ಸಿದ್ಧತೆ ಮಾಡಿಕೊಂಡಿದ್ದಾರಂತೆ! ನಿಜವೇ?

ನಾರಾಯಣ ನಾರಾಯಣ!

ಈ ಬಾರಿಯ ಜಮ್ಮು-ಕಾಶ್ಮೀರ ಮತ್ತು ಹರಿಯಾಣ ವಿಧಾನಸಭಾ ಚುನಾವಣಾ ಫಲಿತಾಂಶಗಳು 'ದಸರೆ' ಹಬ್ಬದ ಸಂದರ್ಭದಲ್ಲೂ 'ಯುಗಾದಿ' ಹಬ್ಬದ ಅನುಭೂತಿಯನ್ನು ನೀಡಿದ್ದು ವಿಶೇಷ. ಅರ್ಥವಾ ಗಲಿಲ್ಲವೇ? ಕೆಲವರಿಗೆ 'ಬೇವು' ಸಿಕ್ಕಿತು, ಮತ್ತೆ ಕೆಲವರಿಗೆ 'ಬೆಲ್ಲ' ದಕ್ಕಿತು. ಕಣಿವೆರಾಜ್ಯ ಕಾಶ್ಮೀರದಲ್ಲಿ ಖಾತೆ ತೆರೆಯುವ ಮೂಲಕ ಆಮ್ ಆದ್ಮಿಗಳು, ಹರಿಯಾಣದಲ್ಲಿ ಹ್ಯಾಟ್ರಿಕ್ ಬಾರಿಸುವ ಮೂಲಕ ಕೇಸರಿ ಪಾಳಯದವರು, ಜಮ್ಮು-ಕಾಶ್ಮೀರದ 'ಸುಲ್ತಾನ್'ಭಾಗ್ಯ ದಕ್ಕಿಸಿಕೊಳ್ಳಲಿರುವ ಒಮರ್ ಅಬ್ದುಲ್ಲಾ ಹಾಗೂ ಕೇಂದ್ರದ ಮೋದಿ ಸರಕಾರದ ವಿರುದ್ಧ 'ಕುಸ್ತಿ'ಗೆ ಇಳಿದಿದ್ದ ವಿನೇಶ್ ಫೋಗಟ್ 'ಬೆಲ್ಲ'ದ ಸವಿಯುಂಡಿದ್ದು ಇಂಥ ಒಂದಷ್ಟು ನಿದರ್ಶನಗಳು. ಆದರೆ, 'ಮುಫ್ತಿ' ಕುಟುಂಬದ ಭದ್ರಕೋಟೆ ಎಂದೇ ಪರಿಗಣಿಸಲಾಗಿದ್ದ ಕಣಿವೆರಾಜ್ಯದ 'ಬಿಜ್ಬೆಹರಾ' ಕ್ಷೇತ್ರದಲ್ಲಿ ಮಾಜಿ ಮುಖ್ಯಮಂತ್ರಿ ಮೆಹಬೂಬಾ ಮುಫ್ತಿ ಅವರ ಮಗಳು ಇಲ್ತಿಜಾ ಮುಫ್ತಿ ಸೋಲುಂಡಿದ್ದು ಮಾತ್ರ ಅಚ್ಚರಿದಾಯಕ. ಅಷ್ಟಕ್ಕೂ, ಚುನಾವಣೆ ಎಂದರೆ 'ಬೇವು-ಬೆಲ್ಲ'ದ ಸಂಗಮವಲ್ಲವೇ?

ಅದ್ಭುತ ದೂರದೃಷ್ಟಿಯ ಅಪ್ರತಿಮ ಹೃದಯವಂತ ರತನ್ ಟಾಟಾ

ಸಂಸ್ಮರಣೆ
ಜ್ಯೋತಿರಾದಿತ್ಯ ಸಿಂಧಿಯಾ
vveditoped@gmail.com

ರತನ್ ಟಾಟಾ ಇಹಲೋಕ ತ್ಯಜಿಸಿದ್ದಾರೆ. ಅದರೊಂದಿಗೆ ಜಗತ್ತು ಒಬ್ಬ ಅದ್ಭುತ ದೂರದೃಷ್ಟಿಯ, ಅಪ್ರತಿಮ ಹೃದಯವಂತ ಹಾಗೂ ದೈತ್ಯ ಉದ್ಯಮಿಯನ್ನು ಕಳೆದುಕೊಂಡಿದೆ. ರತನ್ ಟಾಟಾ ಔದ್ಯೋಗಿಕ ಜಗತ್ತಿಗೆ ಮಾತ್ರ ಅನುಪಮ ಪರಂಪರೆಯೊಂದನ್ನು ಬಿಟ್ಟು ಹೋಗಿಲ್ಲ. ಭಾರತವನ್ನೂ, ಭಾರತೀಯರನ್ನೂ ಹೇಗೆ ಮೊದಲ ಸ್ಥಾನದಲ್ಲಿರಿಸಬೇಕು ಎಂಬುದಕ್ಕೆ ಅವರು ಅಸಾಮಾನ್ಯ ಉದಾಹರಣೆಯನ್ನು ಕೂಡ ಬಿಟ್ಟು ಹೋಗಿದ್ದಾರೆ. 'ಭಾರತ ಮೊದಲು' ಎಂಬುದು ಅವರ ಬದುಕಿನಲ್ಲಿ ಆಳವಾಗಿ ಬೇರುಬಿಟ್ಟಿದ್ದ, ಅವರ ಹೃದಯದಲ್ಲಿ ಸದಾ ಮಿಡಿಯುತ್ತಿದ್ದ ಮೌಲ್ಯವಾಗಿತ್ತು.

ನಿಮಗೆ ಟಾಟಾ ಸ್ಟೀಲ್‌ನ ಹಳೆಯ ಜಾಹೀರಾತೊಂದು ನೆನಪಿರಬಹುದು. 'ವಿ ಆಲ್ಸೋ ಮೇಕ್ ಸ್ಟೀಲ್' ಎಂದು ಹೇಳುತ್ತಿದ್ದ ಜಾಹೀರಾತು ಅದು. ರತನ್ ಟಾಟಾ ಅವರನ್ನು ಚೆನ್ನಾಗಿ ಬಲ್ಲ ಎಲ್ಲರಿಗೂ ಅದರ ಒಳಾರ್ಥವೇನು ಎಂಬುದು ಗೊತ್ತಿತ್ತು. ವಿ ಆಲ್ಸೋ ಮೇಕ್ ಸ್ಟೀಲ್ ಎಂಬುದನ್ನು ಇಂಗ್ಲಿಷ್‌ನಿಂದ ಭಾರತೀಯ ಭಾಷೆಗೆ ಅನುವಾದಿಸಿದರೆ, 'ನಾವು ಸ್ಟೀಲ್ ಕೂಡ ತಯಾರಿಸುತ್ತೇವೆ' ಎಂದೂ, 'ನಾವು ಕೂಡ ಸ್ಟೀಲ್ ತಯಾರಿಸುತ್ತೇವೆ' ಎಂದೂ, ಎರಡು ರೀತಿಯ ಅರ್ಥ ಸ್ಫುರಿಸುತ್ತದೆ. ರತನ್ ಟಾಟಾ ಹಾಸ್ಯ ಚಟಾಕಿಗಳಿಗೆ ಪ್ರಸಿದ್ಧರಾಗಿದ್ದ ಮನುಷ್ಯ. ಅವರು ಬ್ರಿಟಿಷರಿಗೆ ಟಾಂಗ್ ನೀಡಲು ಇಂಥದ್ದೊಂದು ಜಾಹೀರಾತು ಮಾಡಿಸಿದ್ದರು ಎಂಬುದರ ಜತೆಗೇ, ಭಾರತೀಯತೆ ಯೆಂಬ ಸ್ವಾಭಿಮಾನವನ್ನು ಸಮಸ್ತ ದೇಶವಾಸಿಗಳಲ್ಲೂ ಮೂಡಿಸುವ ಅಪ್ಪಟ ದೇಶಭಕ್ತನ ಪ್ರಯತ್ನ ಕೂಡ ಇದರ ಆಂತರ್ಯದಲ್ಲಿ ಇತ್ತು. ಮನಸ್ಸು ಮಾಡಿದರೆ ನಾವು ಏನು ಬೇಕಾದರೂ ಮಾಡಬಲ್ಲೆವು ಎಂಬ ಉತ್ಸಾಹವನ್ನು ಅವರು ಜನರಲ್ಲಿ ಈ ಜಾಹೀರಾತಿನ ಮೂಲಕ ತುಂಬಿದ್ದರು. ಆದ್ದರಿಂದಲೇ ಅವರು ಭಾರತೀಯರ ಪಾಲಿಗೆ ಉದಾರ ಹೃದಯದ, 'ಬದುಕಿಗಿಂತ ದೊಡ್ಡ ವ್ಯಕ್ತಿತ್ವದ ಮನುಷ್ಯ' ಆಗಿದ್ದರು. ನಿಜವಾದ ಅರ್ಥದಲ್ಲಿ ಅವರೊಬ್ಬ ಬಹುದೊಡ್ಡ ಕನಸುಗಾರ ಎಂಬುದಕ್ಕೆ ಭಾರತದ ಶಕ್ತಿಯನ್ನು ಮನಗಂಡು ಈ ದೇಶವನ್ನು ಎಷ್ಟು ಎತ್ತರಕ್ಕೆ ಕೊಂಡೊಯ್ಯಲು ಸಾಧ್ಯವೋ ಅಷ್ಟು ಎತ್ತರಕ್ಕೆ ಕೊಂಡೊಯ್ಯಲು ತಮ್ಮಿಂದಾದ ಎಲ್ಲಾ ಕೆಲಸಗಳನ್ನೂ ಮಾಡಬೇಕೆಂದು ಕಟಿಬದ್ಧರಾಗಿ ಅವರು ನಿಂತಿದ್ದೇ ಸಾಕ್ಷಿಯಾಗಿದೆ. ಔದ್ಯೋಗಿಕ ಜಗತ್ತಿನಲ್ಲಿ ಪಾಲಿಸಬೇಕಾದ ಮೌಲ್ಯಗಳ ಬಗ್ಗೆ ಅವರಿಗೆ ಸ್ಪಷ್ಟವಾದ ಕಲ್ಪನೆಯಿತ್ತು. ಅದರ ಜತೆಗೇ, ದೇಶದ ಜನಸಾಮಾನ್ಯರ ದೈನಂದಿನ ಬದುಕಿನ ವಾಸ್ತವಗಳ ಅರಿವೂ ಇತ್ತು. ಈ ಕಾರಣದಿಂದಾಗಿಯೇ ಟಾಟಾ ಗ್ರೂಪ್ ಎಂಬ ಕಂಪನಿಗಳ ಸಮೂಹವನ್ನು ಪ್ರತಿಯೊಬ್ಬ ಭಾರತೀಯನ ದಿನನಿತ್ಯದ ಬದುಕಿನ ಎಲ್ಲಾ ಸ್ತರಗಳನ್ನೂ ಒಂದಲ್ಲಾ ಒಂದು ರೀತಿಯಲ್ಲಿ ತಟ್ಟುವಂತೆ ಕಟ್ಟಿ ಬೆಳೆಸಲು ಅವರಿಂದ ಸಾಧ್ಯವಾಯಿತು. ಅದರ ಮೂಲಕ ಅವರು ಭಾರತೀಯ ಉದ್ಯಮಿಗಳು ಯೋಚಿಸುವ ರೀತಿಯನ್ನೇ ಬದಲಾಯಿಸಿದರು. ವಿಭಿನ್ನವಾಗಿ ಮತ್ತು ಜನಸಾಮಾನ್ಯರ ದೃಷ್ಟಿಯಿಂದ ಯೋಚಿಸುವ ಸಾಮರ್ಥ್ಯ ಅವರಿಗಿತ್ತು ಎಂಬುದಕ್ಕೆ ಅತ್ಯಂತ ಕಡಿಮೆ ಬೆಲೆಯ ಕುಡಿಯುವ ನೀರಿನ ಶುದ್ಧೀಕರಣ ಯಂತ್ರ 'ಸ್ವಚ್ಛ್', ಕಡಿಮೆ ಬೆಲೆಯಲ್ಲಿ ಜನಸಾಮಾನ್ಯರಿಗೆ ಕಾರಿನ ಪ್ರಯಾಣ ಒದಗಿಸಲು ಅವರ ಕಂಪನಿ ನಿರ್ಮಿಸಿದ ಟಾಟಾ ಇಂಡಿಕಾ ಮತ್ತು ನ್ಯಾನೋ ಕಾರುಗಳು, 'ಜಿಂಜರ್' ಹೆಸರಿನ ಕಡಿಮೆ ಬಜೆಟ್‌ನ ಆರಾಮದಾಯಕ ಹೋಟೆಲ್‌ಗಳು ನಮ್ಮ ಕಣ್ಣಮುಂದೆ ಇವೆ. ಇವು ರತನ್ ಟಾಟಾ ಪಾಲಿಗೆ ಕೇವಲ ಒಂದೊಂದು ಹೊಸ ಪ್ರಾಜೆಕ್ಟ್ ಆಗಿರಲಿಲ್ಲ, ಬದಲಿಗೆ ಭಾರತದ ಮಧ್ಯಮ ವರ್ಗದ ಜನರಿಗೆ ಸುಖಕರ ಪ್ರಯಾಣ, ಐಷಾರಾಮ ಹಾಗೂ ಅವಕಾಶಗಳನ್ನು ಸೃಷ್ಟಿಸುವ ಭರವಸೆದಾಯಕ ಭವಿಷ್ಯದ ಚಿಹ್ನೆಗಳಾಗಿದ್ದವು. ನ್ಯಾನೋ ಕಾರಿನ ಬಗ್ಗೆ ಒಮ್ಮೆ ಮಾತನಾಡುತ್ತಾ ಅವರು, 'ಒಂದು ದಿನ ಬಾಂಬೆಯಲ್ಲಿ ಸುರಿಯುತ್ತಿದ್ದ ಬಿರುಮಳೆಯಲ್ಲಿ ಒಂದೇ ಮೋಟರ್‌ಬೈಕ್ ಮೇಲೆ ನಾಲ್ಕು ಜನರ ಪುಟ್ಟ ಸಂಸಾರವೊಂದು ಕುಳಿತು ಪ್ರಯಾಣಿಸುತ್ತಿದ್ದುದನ್ನು ನೋಡಿದೆ. ಬೇರೆ ಆಯ್ಕೆಯಿಲ್ಲದೆ ಹೀಗೆ ತಮ್ಮ ಜೀವವನ್ನು ಅಪಾಯಕ್ಕೆ ತಳ್ಳಿ ಪ್ರಯಾಣಿಸುವ ಸಾಮಾನ್ಯ ಕುಟುಂಬಗಳ ಅನುಕೂಲಕ್ಕಾಗಿ ಏನಾದರೂ ಮಾಡಬೇಕೆಂದು ಅಂದೇ ನಿರ್ಧರಿಸಿದ್ದೆ' ಎಂದು ಹೇಳಿದ್ದರು. ಬೇರೆಯ ದೊಡ್ಡ ದೊಡ್ಡ ಉದ್ಯಮಿಗಳಿಗಿಂತ ರತನ್ ಟಾಟಾ ವಿಭಿನ್ನವಾಗಿ ನಿಲ್ಲುವುದು ಇದೇ ಕರುಣೆಯ ಕಾರಣಕ್ಕೆ.

ಎಲ್ಲಕ್ಕಿಂತ ಹೆಚ್ಚಾಗಿ ರತನ್ ಟಾಟಾ ಜನಾನುರಾಗಿಯಾಗಿದ್ದರು. ಗ್ರಾಹಕರ ತೃಪ್ತಿ ಹಾಗೂ ಸೇವೆಯೇ ಅವರ ಪರಮೋಚ್ಚ ಗುರಿಯಾಗಿತ್ತು. ತಮ್ಮ ಸುತ್ತಮುತ್ತ ಇರುವ ಪ್ರತಿಯೊಬ್ಬರನ್ನೂ ಗೌರವಿಸುತ್ತಿದ್ದರು. ಅವರನ್ನು ಸಹಾನುಭೂತಿಯಿಂದ ನೋಡುತ್ತಿದ್ದರು. ಅವರಂಥ ದೊಡ್ಡ ಹಾಗೂ ಶ್ರೀಮಂತ ವ್ಯಕ್ತಿ ಹೀಗೆ ಇರುವ ಅಗತ್ಯವಿರಲಿಲ್ಲ. ಆದರೆ ರತನ್ ಸದಾ ಜನಸಾಮಾನ್ಯರ ಜತೆಗೆ ಇರಲು ಬಯಸುತ್ತಿದ್ದರು. ಅವರ ಮನೆಗೆ ಯಾವಾಗಲೂ ನೆಂಟರಿಷ್ಟರು ಬಂದು-ಹೋಗಿ ಮಾಡಬೇಕಿತ್ತು. ಒಂದು ಮುಗ್ಧ ಮಗುವಿನಂತೆ ರತನ್ ಪ್ರತಿಯೊಂದನ್ನೂ ಕುತೂಹಲದಿಂದ ನೋಡುತ್ತಿದ್ದರು. ಸಾಮಾನ್ಯ ಜನರ ಬದುಕಿನ ಬಗ್ಗೆ ಅವರಿಗೆ ಅಪಾರ ಕುತೂಹಲವಿತ್ತು. ಅವರ ಜೀವನಶೈಲಿ, ಇಷ್ಟಾನಿಷ್ಟಗಳು, ಪ್ರಯಾಣ, ಪ್ರವಾಸ ಇತ್ಯಾದಿಗಳ ಬಗ್ಗೆ ಯಾವಾಗಲೂ ವಿಚಾರಿಸುತ್ತಿದ್ದರು. ಹೀಗಾಗಿ ರತನ್ ಟಾಟಾರನ್ನು ಯಾರು ಒಮ್ಮೆ ಭೇಟಿಯಾದರೂ ಅವರ ಹೃದಯದಲ್ಲಿ ಆ ಭೇಟಿ ಸದಾ ಹಚ್ಚಹಸುರಾಗಿರುತ್ತಿತ್ತು.

ನಾನು ಕೂಡ ಅವರನ್ನು ಅನೇಕ ಸಲ ಭೇಟಿಯಾಗಿದ್ದೇನೆ. ನನ್ನಂಥ ಕಿರಿಯನ ಜತೆಗೂ ಅಪಾರ ವಿನಯದಿಂದ ನಡೆದುಕೊಳ್ಳುತ್ತಿದ್ದರು. ಮೊದಲ ಬಾರಿ ತಂದೆಯವರ ಜತೆಗೆ ಅವರನ್ನು ಭೇಟಿಯಾದಾಗ ನನಗೆ 10 ವರ್ಷ. ಅಂದಿನಿಂದ ಆರಂಭಿಸಿ, ಕಳೆದ ನಾಲ್ಕು ದಶಕಗಳ ಕಾಲ ಅವರ ಬದುಕು ನನಗೆ ಸದಾ ಸ್ಫೂರ್ತಿದಾಯಕವಾಗಿದೆ. ರತನ್ ಟಾಟಾರಂತೆಯೇ ನಾನು ಕೂಡ ಪ್ರಾಣಿಪ್ರಿಯ. ಅವರ ಮನೆಗೆ ಯಾವಾಗಲೂ ಮನುಷ್ಯರಿಗೆ ಮತ್ತು ಪ್ರಾಣಿಗಳಿಗೆ ಮುಕ್ತ ಸ್ವಾಗತವಿರುತ್ತಿತ್ತು. ಅವರಿಗೆಲ್ಲ ರತನ್ ತುಂಬು ಹೃದಯದ ಪ್ರೀತಿ ತೋರುತ್ತಿದ್ದರು. ಅದನ್ನು ನಾನು ತುಂಬಾ ಮೆಚ್ಚಿಕೊಂಡಿದ್ದೇನೆ. ಬಾಂಬೆ ಹೌಸ್‌ನಲ್ಲಿರುವ ಟಾಟಾ ಗ್ರೂಪ್‌ನ ಹೆಡ್ ಕ್ವಾರ್ಟರ್ಸ್ ಹಾಗೂ ಮುಂಬೈನ ತಾಜ್ ಹೋಟೆಲ್‌ನಲ್ಲಿ ಬೀದಿ ಪ್ರಾಣಿಗಳಿಗೆ ಸದಾ ಆಶ್ರಯವಿರುತ್ತಿತ್ತು.



ಸಿಂಧಿಯಾ ಕುಟುಂಬ ಮತ್ತು ಟಾಟಾ ಕುಟುಂಬದ ನಡುವೆ ಬಹಳ ಹಳೆಯ ಸುಮಧುರ ಸಂಬಂಧವಿದೆ ಎಂಬುದು ನನಗೆ ಹೆಮ್ಮೆಯ ವಿಚಾರ. ಟಾಟಾ ಸ್ಟೀಲ್ ಕಂಪನಿಯಲ್ಲಿ ಕಬ್ಬಿಣ ಮತ್ತು ಉಕ್ಕು ತಯಾರಿಸಲು ಜಮ್‌ಷೆಡ್‌ಜಿ ಟಾಟಾ ಅವರು ಬಂಡವಾಳಕ್ಕಾಗಿ ಎದುರು ನೋಡುತ್ತಿದ್ದಾಗ ನನ್ನ ಮುತ್ತಾತರಾಗಿದ್ದ ಮಹಾರಾಜ ಮಾಧವರಾವ್ ಸಿಂಧಿಯಾ-1 ಅವರು ಹಣಕಾಸಿನ ಸೌಲಭ್ಯ ಒದಗಿಸಿದ್ದರು. ತನ್ಮೂಲಕ ಭಾರತದಲ್ಲಿ ಸ್ವದೇಶಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯೊಂದು ತಲೆಯೆತ್ತುವ ಕನಸು ನನಸಾಗುವುದಕ್ಕೆ ಕಾರಣರಾಗಿದ್ದರು. ಸ್ವಾತಂತ್ರ್ಯ ಲಭಿಸುವುದಕ್ಕೂ ಮೊದಲು ಜೆಆರ್‌ಡಿ ಟಾಟಾ ಅವರು ಏರ್ ಇಂಡಿಯಾ ಕಂಪನಿಯನ್ನು ಆರಂಭಿಸಿದಾಗ ಅವರು ಮತ್ತು ನನ್ನ ತಾತ ಮಹಾರಾಜ ಜೀವಾಜಿ ರಾವ್ ಸಿಂಧಿಯಾ ಒಟ್ಟಾಗಿ ಗ್ವಾಲಿಯರ್ ನಗರವನ್ನು ಜಗತ್ತಿನ ನಾಗರಿಕ ವಿಮಾನಯಾನದ ನಕಾಶೆಯಲ್ಲಿ ಸೇರಿಸುವುದಕ್ಕೆ ಕಾರಣಕರ್ತರಾಗಿದ್ದರು. ರತನ್ ಟಾಟಾಗಿಂತ ಎಂಟು ವರ್ಷ ಚಿಕ್ಕವರಾಗಿದ್ದ ನನ್ನ ತಂದೆ ಕೂಡ ಅವರೊಂದಿಗೆ ಆಪ್ತ ಒಡನಾಟ ಹೊಂದಿದ್ದರು.

ಕಳೆದ ಮೂರು ದಶಕಗಳ ವೃತ್ತಿಜೀವನದಲ್ಲಿ ಮೊದಲಿಗೆ ಇನ್ವೆಸ್ಟ್‌ಮೆಂಟ್ ಬ್ಯಾಂಕರ್ ಆಗಿ ಹಾಗೂ ನಂತರ ರಾಜಕಾರಣಿಯಾಗಿ ನಾನು ಅನೇಕ ಬಾರಿ ರತನ್ ಟಾಟಾರನ್ನು ಭೇಟಿಯಾಗಿದ್ದೇನೆ. ಪ್ರತಿ ಬಾರಿಯೂ ಅವರಿಂದ ಹೊಸ ಸ್ಫೂರ್ತಿ ಪಡೆದೇ ಮರಳಿದ್ದೇನೆ. 2016ರಲ್ಲಿ ಗ್ವಾಲಿಯರ್‌ನಲ್ಲಿರುವ ಸಿಂಧಿಯಾ ಸ್ಕೂಲ್‌ನ ವಾರ್ಷಿಕೋತ್ಸವಕ್ಕೆ ರತನ್ ಟಾಟಾ ಆಗಮಿಸಿದ್ದರು. ಅವರಿಗೆ ಅತಿಥಿ ಸತ್ಕಾರ ನೀಡುವ ಭಾಗ್ಯ ನನ್ನದಾಗಿತ್ತು. ಆಗ ಅವರಿಗೆ 80 ವರ್ಷ. ಆದರೂ ವಿದ್ಯಾರ್ಥಿಗಳ ವಲಯದಲ್ಲಿ ಅವರೊಬ್ಬ ಹೀರೋ ಆಗಿದ್ದರು. ವಿದ್ಯಾರ್ಥಿಗಳು ನೀಡಿದ ಪ್ರತಿಯೊಂದು ಪ್ರಾತ್ಯಕ್ಷಿಕೆಯನ್ನೂ ಆಸಕ್ತಿಯಿಂದ ವೀಕ್ಷಿಸಿದ ಟಾಟಾ, ಪ್ರತಿ ವಿದ್ಯಾರ್ಥಿಯ ಜತೆಗೂ ಆಪ್ತವಾಗಿ ಮಾತನಾಡಿದ್ದರು. ತಮ್ಮ ಸುದೀರ್ಘ ವೃತ್ತಿಜೀವನದಲ್ಲಿ ರತನ್ ಟಾಟಾ ಯಾವಾಗಲೂ ಯುವಕರಲ್ಲಿ ಹೊಸ ಹೊಸ ಐಡಿಯಾಗಳನ್ನು ಬಿತ್ತುತ್ತಿದ್ದರು. ನಿವೃತ್ತಿಯ ನಂತರ ಅವರು ಯುವಕರ ಸ್ಟಾರ್ಟಪ್‌ಗಳನ್ನು ಗುರುತಿಸಿ, ಪ್ರತಿಭಾವಂತರ ಹೊಸ ಉದ್ದಿಮೆಗಳಲ್ಲಿ ಬಂಡವಾಳ ತೊಡಗಿಸುವ ಮೂಲಕ ಅವರು ಬೆಳೆಯಲು ಪ್ರೋತ್ಸಾಹ ನೀಡುತ್ತಿದ್ದರು.

ಒಬ್ಬ ಸಮಾಜ ಸೇವಕನಾಗಿ ಅವರು ಭಾರತ ಹಾಗೂ ಹೊರದೇಶಗಳಲ್ಲಿ ಲಕ್ಷಾಂತರ ಜನರ ಬದುಕನ್ನು ಸುಧಾರಿಸುವಲ್ಲಿ ಬಹುದೊಡ್ಡ ಕೊಡುಗೆ ನೀಡಿದ್ದಾರೆ. ಹಾಗೆ ನೋಡಿದರೆ ಸಾಮಾಜಿಕ ಪ್ರಗತಿಗಾಗಿ ಟಾಟಾ ಕುಟುಂಬ ಆರಂಭದಿಂದಲೂ ಕೊಡುಗೆ ನೀಡುತ್ತಲೇ ಬಂದಿದೆ. ಆ ಶ್ರೀಮಂತ ಪರಂಪರೆಯನ್ನು ರತನ್ ಟಾಟಾ ಇನ್ನಷ್ಟು ಎತ್ತರಕ್ಕೆ ಏರಿಸಿದರು. ವೃತ್ತಿಜೀವನದಲ್ಲಿ ಅವರು ತಮ್ಮ ಕಂಪನಿಯ ನೌಕರರ ಹಾಗೂ ಷೇರುದಾರರ ಹಿತಾಸಕ್ತಿ ಕಾಪಾಡುವಲ್ಲಿ ಸದಾ ಮುಂಚೂಣಿಯಲ್ಲಿರುತ್ತಿದ್ದರು. ಹೀಗಾಗಿ ಟಾಟಾ ಕಂಪನಿಯ ನೌಕರರಿಗೆ ಹಾಗೂ ಷೇರುದಾರರಿಗೆ ಟಾಟಾ ಗ್ರೂಪ್ ಜತೆಗೆ ವೈಯಕ್ತಿಕ ಮಟ್ಟದಲ್ಲೂ ಒಂದು ಬಾಂಧವ್ಯವಿರುತ್ತಿತ್ತು. ಒಬ್ಬ ನಿಜವಾದ ನಾಯಕನಂತೆ ಅವರು ಯಾವತ್ತೂ ತಾವು ಪ್ರಚಾರದಲ್ಲಿರಲು ಬಯಸುತ್ತಿರಲಿಲ್ಲ. ಸದಾ ತೆರೆಯ ಹಿಂದೆಯೇ ನಿಂತು ಎಲ್ಲರನ್ನೂ ಪ್ರೋತ್ಸಾಹಿಸಲು ಬಯಸುತ್ತಿದ್ದರು. 'ಟಾಟಾ ಒಮ್ಮೆ ಭರವಸೆ ನೀಡಿದರೆಂದರೆ ಅದು ರತನ್ ಅವರಿಂದ ಸಿಕ್ಕ ಭರವಸೆ' ಎಂಬ ಮಾತು ಚಾಲ್ತಿಯಲ್ಲಿತ್ತು. ರತನ್ ಮಾತು ಕೊಟ್ಟರೆ ಯಾವತ್ತೂ ಅದು ಸುಳ್ಳಾಗುತ್ತಿರಲಿಲ್ಲ.

ನಾನಂತೂ ಅವರನ್ನು ಯಾವುದೇ ರಿಸ್ಕ್ ತೆಗೆದುಕೊಳ್ಳಲು ಹಿಂಜರಿಯದ ಗಟ್ಟಿ ನಾಯಕನಂತೆ ನೋಡಿದ್ದೇನೆ. ಏರ್ ಇಂಡಿಯಾವನ್ನು ಟಾಟಾ ಕಂಪನಿಯು ಖರೀದಿಸುವ ಪ್ರಕ್ರಿಯೆ ನಡೆಯುತ್ತಿದ್ದಾಗ ಟಾಟಾ ಗ್ರೂಪ್ ಜತೆಗೆ ಬಹಳ ಹತ್ತಿರದಿಂದ ಕೆಲಸ ಮಾಡಿದ್ದೇನೆ. ಅದನ್ನೊಂದು ಜಾಗತಿಕ ದರ್ಜೆಯ ಏರ್‌ಲೈನ್ಸ್ ಆಗಿ ರೂಪಿಸಬೇಕೆಂಬುದು ರತನ್ ಟಾಟಾ ಬಯಕೆಯಾಗಿತ್ತು. ಅದಕ್ಕಾಗಿ ಅವರು ತೋರಿದ ಧೈರ್ಯ ಹಾಗೂ ಭಾವನಾತ್ಮಕ ಬದ್ಧತೆಯನ್ನು ಹೇಗೆ ಮರೆಯಲಿ? ಸ್ವಾತಂತ್ರ್ಯಪೂರ್ವದಲ್ಲಿ ಅವರ ಕುಟುಂಬವೇ ಹುಟ್ಟುಹಾಕಿದ ಏರ್‌ಲೈನ್ಸ್ ಅದಾಗಿತ್ತು. ಅದು ಪುನಃ ಯಶಸ್ಸಿನ ಹೊಸ ಎತ್ತರಕ್ಕೇರಲಿ ಎಂದು ಟಾಟಾ ಮನಸಾರೆ ಆಶಿಸಿದ್ದರು.

ನಾವೆಲ್ಲರೂ ಅವರ ಸಾವಿನ ದುಃಖದಲ್ಲಿರುವಾಗ ಕೊನೆಯ ಬಾರಿ 2022ರಲ್ಲಿ ನಾನು ಅವರನ್ನು ಭೇಟಿಯಾದ ಗಳಿಗೆ ನೆನಪಾಗುತ್ತಿದೆ. ನನ್ನ ಪತ್ನಿ ಹಾಗೂ ಮಗನ ಜತೆಗೆ ಹೋಗಿ ಅವರೊಂದಿಗೆ ಊಟ ಮಾಡಿದ್ದೆ. ಅವರ ಡೈನಿಂಗ್ ಟೇಬಲ್ ಮೇಲೆ ಪುಸ್ತಕಗಳು ಹಾಗೂ ಬಿಸಿನೆಸ್ ಪ್ಲಾನ್‌ನ ಫೈಲ್‌ಗಳೇ ತುಂಬಿದ್ದವು. ತಮ್ಮ ಜತೆಗೆ ಕೆಲಸ ಮಾಡುತ್ತಿರುವ ಯುವ ಉದ್ಯಮಿಗಳ ಉತ್ಸಾಹ ಹಾಗೂ ಹೊಸ ಹೊಸ ಐಡಿಯಾಗಳ ಬಗ್ಗೆಯೇ ನಮ್ಮ ಜತೆಗೆ ಮಾತನಾಡಿದ್ದರು. ತಾನೂ ಉದ್ಯಮಿಯಾಗಬೇಕೆಂದು ಬಯಸಿದ್ದೇನೆಂದು ನನ್ನ ಮಗ ಹೇಳಿದಾಗ ಅವರಿಗೆ ಬಹಳ ಖುಷಿಯಾಗಿತ್ತು. ಅದಕ್ಕೆ ಬೇಕಾದ ಸಲಹೆ ಹಾಗೂ ಕಿವಿಮಾತನ್ನು ಒಬ್ಬ ಸಂತನ ಸ್ಥಾನದಲ್ಲಿ ನಿಂತು ಹೇಳಿದ್ದರು! ಅವರು ತೋರಿದ ಪ್ರೀತಿ, ಅವರ ವಿನಯ, ಅವರ ಮೃದುವಾದ ಮಾತುಗಳು ಹಾಗೂ ಕಾಳಜಿಯನ್ನು ಯಾವತ್ತೂ ಮರೆಯಲಾರೆ. ಆ ದಿನದ ನೆನಪು ಸದಾ ನನ್ನ ಹೃದಯದಲ್ಲಿ ಬೆಚ್ಚಗಿರುತ್ತದೆ.

'ಹಾಡು ಮುಗಿದಿದೆ, ಅದರ ಸಂಗೀತ ಇನ್ನೂ ಮನಸ್ಸಿನಲ್ಲಿ ಸುಳಿದಾಡುತ್ತಿದೆ' ಎಂಬ ಮಾತಿನಂತೆ ರತನ್ ಟಾಟಾ ಅವರ ನಿರ್ಗಮನ ನನಗೆ ವೈಯಕ್ತಿಕವಾಗಿಯೂ ತುಂಬಲಾರದ ನಷ್ಟವಾಗಿದೆ. ನಮ್ಮೆಲ್ಲರ ಮೇಲೆ ಅಚ್ಚಳಿಯದ ಪ್ರಭಾವ ಉಂಟುಮಾಡಿದ ಒಬ್ಬ ಅದ್ಭುತ ಮನುಷ್ಯ ಹಾಗೂ ದೂರದೃಷ್ಟಿಯ ನಾಯಕನನ್ನಾಗಿ ನಾನು ಸದಾ ಅವರನ್ನು ನೆನಪಿನಲ್ಲಿರಿಸಿಕೊಳ್ಳುತ್ತೇನೆ. ಭಾರತ ಮಾತೆಯ ನಿಜವಾದ ಪುತ್ರ ರತನ್ ಟಾಟಾಗೆ ಇಡೀ ದೇಶ ಶ್ರದ್ಧಾಂಜಲಿ ಸಲ್ಲಿಸುತ್ತಿದೆ. ಅವರಲ್ಲಿ ನಾನೂ ಒಬ್ಬ. ಉಕ್ಕಿಗಿಂತ ಗಟ್ಟಿಯಾಗಿರುವ ಅವರ ಮೌಲ್ಯಗಳು ಹಾಗೂ ಮನುಕುಲದ ಸೇವೆಗೆ ತಮ್ಮನ್ನು ಸಮರ್ಪಿಸಿಕೊಳ್ಳಬೇಕೆಂಬ ಅವರ ಬದ್ಧತೆಯೇ ಅವರನ್ನು ನಿಜವಾದ 'ಭಾರತ ರತನ್' ಆಗಿಸಿವೆ.

(ಲೇಖಕರು ಕೇಂದ್ರ ಸಚಿವರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Edited & Published by : VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6332393988/6362393942, Printed at M/s Digantha Mudhrana Ltd. NT Road, Shivamogga - 577 201
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue:294

ಸಮಾಚಾರ ಸಣ್ಣದಲ್ಲ

ಆರೆಸೆಸ್ ಶತವರ್ಷ: ಮೋದಿ ಅಭಿನಂದನೆ

ದೆಹಲಿ: ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರ್‌ಎಸ್‌ಎಸ್) ರಾಷ್ಟ್ರ ಸೇವೆಗೆ ಮುಡಿಪಾದ ಸ್ವಯಂಸೇವಕರ ಸಂಘಟನೆ. 100ನೇ ವರ್ಷಕ್ಕೆ ಸಂಘ ಕಾಲಿಡುತ್ತಿದೆ. ತಮ್ಮ ಅವಿರತ ಬದ್ಧತೆಯ ಪಯಣದ ಮೂಲಕ ಐತಿಹಾಸಿಕ ಮೈಲುಗಲ್ಲು ಸ್ಥಾಪನೆಯಾಗುತ್ತಿರುವ ಈ ಸಂದರ್ಭದಲ್ಲಿ ಎಲ್ಲಾ ಸ್ವಯಂಸೇವಕರಿಗೆ ಹೃತ್ಪೂರ್ವಕ ಅಭಿನಂದನೆಗಳು ಪ್ರಧಾನಿ ನರೇಂದ್ರ ಮೋದಿ 'ಎಕ್ಸ್' ಸಂದೇಶದಲ್ಲಿ ಬರೆದಿದ್ದಾರೆ. ಜತೆಗೆ ಆರ್ ಎಸ್‌ಎಸ್ ಸರಸಂಘಚಾಲಕ್ ಮೋಹನ್ ಭಾಗವತ್ ಅವರು ನಾಗಪುರದಲ್ಲಿನ ಆರ್‌ಎಸ್‌ಎಸ್ ಪ್ರಧಾನ ಕಚೇರಿಯಲ್ಲಿ ವಿಜಯದಶಮಿ ಅಂಗವಾಗಿ ಮಾಡಿದ ವಾರ್ಷಿಕ ಭಾಷಣದ ಲಿಂಕ್ ಕೂಡಾ ಹಂಚಿಕೊಂಡಿದ್ದು, ಈ ಭಾಷಣವನ್ನು ಎಲ್ಲರೂ ಕೇಳಿ ಎಂದೂ ಮನವಿ ಮಾಡಿದ್ದಾರೆ.

ಪ್ರತಿಭಟನೆ: ವಾಂಗ್ಚುಕ್ ಸೇರಿ 20 ಮಂದಿ ವಶಕ್ಕೆ

ದೆಹಲಿ: ದೆಹಲಿಯ ಲಡಾಕ್ ಭವನದಲ್ಲಿ ನಿರಶನ ಪ್ರತಿಭಟನೆ ಆರಂಭಿಸಿದ ಪರಿಸರ- ಹವಾಮಾನ ಹೋರಾಟಗಾರ ಲಡಾಕ್‌ನ ವಾಂಗ್ಚುಕ್ ಮತ್ತು

ಪ್ರತಿಭಟನಾ ನಿರತರು ಸೇರಿ 20 ಮಂದಿಯನ್ನು ದೆಹಲಿ ಪೊಲೀಸರು ಭಾನುವಾರ ವಶಕ್ಕೆ ಪಡೆದಿದ್ದಾರೆ. ಬಳಿಕ ಮಂದಿರ ಮಾರ್ಗ್ ಪೊಲೀಸ್ ಠಾಣೆಗೆ ಕರೆದೊಯ್ಯಲಾಗಿದೆ. ಪ್ರತಿಭಟನಾಕಾರರು ಲಡಾಖ್ ಭವನದ ಹೊರಗೆ ಪ್ರತಿಭಟನೆ ನಡೆಸುವುದಕ್ಕೆ ಅನುಮತಿ ಪಡೆದಿರಲಿಲ್ಲ. ಹಾಗಾಗಿ ಅವರನ್ನು ವಶಕ್ಕೆ ಪಡೆಯಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ವಾಂಗ್ಚುಕ್ ದೆಹಲಿಯ ಜಂತರ್ ಮಂತರ್‌ನಲ್ಲಿ ಪ್ರತಿ ಭಟನೆ ನಡೆಸಲು ಅನುಮತಿ ಕೋರಿ ಅರ್ಜಿ ಸಲ್ಲಿಸಿ ದ್ದಾರೆ. ಅವರ ಅರ್ಜಿಯಿನ್ನೂ ಪರಿಗಣನೆಯಲ್ಲಿದೆ. ಬೇರೆ ಸ್ಥಳದಲ್ಲಿ ಪ್ರತಿಭಟನೆ ನಡೆಸಲು ಅವರಿಗೆ ಅವಕಾಶವಿಲ್ಲ. ಕೆಲವರನ್ನು ವಶಕ್ಕೆ ಪಡೆದಿದ್ದು, ಶೀಘ್ರದಲ್ಲೇ ಬಿಡುಗಡೆ ಮಾಡಲಾಗುವುದು ಎಂದು ಪೊಲೀಸ್ ಅಧಿಕಾರಿ ಹೇಳಿದರು.

ಪ.ಜಾತಿಯ ದೂರು 4 ವರ್ಷಕ್ಕೆ 47,000

ದೆಹಲಿ: ದೇಶದಲ್ಲಿ ಪರಿಶಿಷ್ಟ ಜಾತಿಯವರ(ಎಸ್‌ಸಿ) ಮೇಲಿನ ದೌರ್ಜನ್ಯ ಪ್ರಕರಣಗಳಿಗೆ ಸಂಬಂಧಿಸಿ ಕಳೆದ ನಾಲ್ಕು ವರ್ಷಗಳಲ್ಲಿ ಒಟ್ಟು 47 ಸಾವಿರಕ್ಕೂ ಅಧಿಕ ದೂರುಗಳು 'ರಾಷ್ಟ್ರೀಯ ಪರಿಶಿಷ್ಟ ಜಾತಿ ಆಯೋಗ'(ಎನ್‌ಸಿಎಸ್‌ಸಿ)ಕ್ಕೆ ಸಲ್ಲಿಕೆಯಾಗಿವೆ. ಇವುಗಳಲ್ಲಿ ಅತ್ಯಧಿಕ ದೂರುಗಳು ಉತ್ತರ ಪ್ರದೇಶದಿಂದಲೇ ದಾಖಲಾಗಿವೆ. ಹೆಚ್ಚಿನ ದೂರುಗಳು ದೌರ್ಜನ್ಯ, ಭೂಮಿ ವಿವಾದ, ಸರಕಾರಿ ನೌಕರಿಗೆ ಸಂಬಂಧಿಸಿದ್ದವಾಗಿವೆ ಎಂದು ಆಯೋಗದ ಅಂಕಿ ಅಂಶಗಳಿಂದ ತಿಳಿದುಬಂದಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನರು ದೂರು ನೀಡಲು ಅನುಕೂಲವಾಗಲಿ ಎಂದು ಆಯೋಗ ಸಹಾಯವಾಣಿ ಸ್ಥಾಪಿಸಿದ್ದು, ಕಳೆದ 4 ವರ್ಷಗಳಲ್ಲಿ 6.02 ಲಕ್ಷ ಕರೆಗಳು ಬಂದಿವೆ. ಇವುಗಳಲ್ಲಿ 3.10 ಲಕ್ಷ ಕರೆಗಳು ಉತ್ತರ ಪ್ರದೇಶ ರಾಜ್ಯದಿಂದಲೇ ಬಂದಿವೆ.

ಮುಸ್ಲಿಮರು ಶಿಮ್ಲಾ ಸೇಬು ಬಹಿಷ್ಕರಿಸಿ: ಕರೆ

ಶಿಮ್ಲಾ: ಮುಸ್ಲಿಂ ವ್ಯಾಪಾರಿಗಳು ಹಿಮಾಚಲ ಪ್ರದೇಶದ ಸೇಬನ್ನು ಬಹಿಷ್ಕರಿಸಬೇಕಿದೆ. ಶಿಮ್ಲಾ ಸೇಬನ್ನು ಮುಸ್ಲಿಂ ವ್ಯಾಪಾರಿಗಳು ಮಾರಾಟ ಮಾಡಬಾರದು ಎಂದು ಎಐಎಂಐಎಂ ಮುಖಂಡ ಶೋಯೆಬ್ ಜಮಾಯಿ ವಿವಾದಾತ್ಮಕ ಕರೆ ನೀಡಿದ್ದಾರೆ. 'ಎಕ್ಸ್' ಖಾತೆ ಮೂಲಕ ಸೇಬು ಬಹಿಷ್ಕಾರದ ಹೇಳಿಕೆ ನೀಡಿ ಮತ್ತೆ ವಿವಾದಕ್ಕೆ ಕಾರಣ ವಾಗಿದ್ದಾರೆ. ಹಿಮಾಚಲ ಸೇಬನ್ನು ಮಾರುವವರಲ್ಲಿ ಶೇ.80ರಷ್ಟು ಮುಸ್ಲಿಂ ವ್ಯಾಪಾರಿಗಳೇ ಇದ್ದಾರೆ. ನಾವು ಸೇಬು ಬಹಿಷ್ಕರಿಸಿದರೆ ಹಿ.ಪ್ರದೇಶದ ಆರ್ಥಿ ಕತೆ ದೊಡ್ಡ ಪೆಟ್ಟು ಬೀಳಲಿದೆ ಎಂದೂ ಶೋಯೆಬ್ ಹೇಳಿದ್ದಾರೆ.

ವಕ್ಫ್ ಮಸೂದೆ; 2 ದಿನ ಜೆಪಿಸಿ ಸಭೆ

ದೆಹಲಿ: ಕೇಂದ್ರದ ಎನ್‌ಡಿಎ ಸರಕಾರ ಜಾರಿಗೆ ತರಲು ಉದ್ದೇಶಿಸಿರುವ ತಿದ್ದುಪಡಿ 'ವಕ್ಫ್' ಮಸೂದೆಗೆ ಸಂಬಂಧಿಸಿದಂತೆ ಅಭಿಪ್ರಾಯ ಸಂಗ್ರಹಿಸುತ್ತಿರುವ ಜಂಟಿ ಸಂಸದೀಯ ಸಮಿತಿಯ ಎದುರು ಸೋಮವಾರ ನಾಸಿಕ್ ನಗರದ ಪ್ರಧಾನ ಅರ್ಚಕರು, ಮೂವರು ಖ್ಯಾತ ವಕೀಲರು ಹಾಗೂ ಮುಸ್ಲಿಂ ಸಂಘಟನೆಗಳು ಪ್ರತಿನಿಧಿಗಳು ಹಾಜರಾಗಿ ತಮ್ಮ ಅಭಿಪ್ರಾಯಗಳನ್ನು ಮಂಡಿಸಲಿದ್ದಾರೆ ಎಂದು ತಿಳಿದುಬಂದಿದೆ. ಬಿಜೆಪಿಯ ಹಿರಿಯ ಸಂಸದ ಜಗದಾಂಬಿಕಾ ಪಾಲ್ ಅವರ ನೇತೃತ್ವದ ಜಂಟಿ ಸಂಸದೀಯ ಸಮಿತಿಯು ಸೋಮವಾರ ಮತ್ತು ಮಂಗಳವಾರ ಸಭೆ ಸೇರಲಿದ್ದು, ಅಭಿಪ್ರಾಯಗಳನ್ನು ಸಂಗ್ರಹಿಸಿಕೊಳ್ಳಲಿದೆ.

{ **ರಾಹುಲ್ ಗಾಂಧಿ** } ಪ್ರತಿಪಕ್ಷ ನಾಯಕ

ಮಹಾರಾಷ್ಟ್ರದ ಮಾಜಿ ಸಚಿವ, ಎನ್‌ಸಿಪಿ(ಅಜಿತ್ ಬಣ) ನಾಯಕ ಬಾಬಾ ಸಿದ್ದಿಕಿ ದುಷ್ಕರ್ಮಿಗಳ ಗುಂಡಿನಿಂದ ಹತರಾಗಿರುವ ಘಟನೆಯು ಬಿಜೆಪಿ-ಶಿವಸೇನೆ(ಶಿಂದೆ ಬಣ)-ಎನ್‌ಸಿಪಿ(ಅಜಿತ್ ಬಣ) ನೇತೃತ್ವದ ಸರಕಾರವಿರುವ ರಾಜ್ಯದಲ್ಲಿ ಕಾನೂನು-ಸುವ್ಯವಸ್ಥೆ ಪೂರ್ಣ ಹದಗೆಟ್ಟಿರುವುದಕ್ಕೆ ಸ್ಪಷ್ಟ ನಿದರ್ಶನವಾಗಿದೆ. ಈ ಹತ್ಯೆಗೆ ರಾಜ್ಯ ಸರಕಾರವೇ ಪೂರ್ಣ ಹೊಣೆ.



ಟ್ರ್ಯಾಕ್ ಬದಲಿಸುವ ಜಾಗದಲ್ಲಿ ನಟ್ ಕಾಣೆ | ಹಳಿ ಜೋಡಣೆ ಬೋಲ್ಟ್, ಬ್ರಾಕೆಟ್ ತೆರೆದಿವೆ | ತಿಂಗಳ ಹಿಂದಿನಿಂದಲೂ ದುಷ್ಕೃತ್ಯಕ್ಕೆ ಸಂಚು | ಉಗ್ರ ಕೃತ್ಯ ಶಂಕೆ-ಎನ್‌ಐಎ ತನಿಖೆ ಆರಂಭ | ರೈಲ್ವೆ ಪೊಲೀಸ್, ಆರ್‌ಪಿಎಫ್‌ನಿಂದಲೂ ತನಿಖೆ | 2023ರ ಬಾಲಾಸೋರ್ ರೈಲು ಅಪಘಾತದ ಹೋಲಿಕೆ

ಬಾಗ್ಮತಿ ಎಕ್ಸ್‌ಪ್ರೆಸ್ ಅಪಘಾತ ಒಂದು ಸಂಚು?

ಚೆನ್ನೈ: ತಮಿಳುನಾಡಿನ ಚೆನ್ನೈನಿಂದ 50 ಕಿಮೀ ದೂರದಲ್ಲಿರುವ ಕಾವರೈಪೆಟ್ಟೈ ರೈಲು ನಿಲ್ದಾಣದಲ್ಲಿ ಮೈಸೂರ್-ದರ್ಭಾಂಗ ಬಾಗ್ಮತಿ ಎಕ್ಸ್‌ಪ್ರೆಸ್ ರೈಲು ಶುಕ್ರವಾರ ರಾತ್ರಿ ಅಪಘಾತಕ್ಕೀಡಾಗಿದ್ದರ ಹಿಂದೆ ಉಗ್ರರ ಕೈವಾಡ, ವಿಧ್ವಂಸಕ ಕೃತ್ಯ ಶಂಕೆ ವ್ಯಕ್ತವಾಗಿದೆ.

ಏಕೆಂದರೆ, ಕಾವರೈಪೆಟ್ಟೈ ರೈಲು ನಿಲ್ದಾಣದಲ್ಲಿನ ಸಿಗ್ನಲಿಂಗ್ ಪಾಯಿಂಟ್‌ನಲ್ಲಿ ಹಳಿ ಬದಲಾಗುವ ಸ್ಥಳದಲ್ಲಿ ಹಳಿಗಳನ್ನು ಜೋಡಿಸಲು ಅಳವಡಿಸಿದ್ದ ನಟ್-ಬೋಲ್ಟ್‌ಗಳು ಕಾಣೆಯಾಗಿವೆ. ಅಲ್ಲದೇ, ಕೆಲವು ಬೋಲ್ಟ್‌ಗಳು ಮತ್ತು ಬ್ರಾಕೆಟ್‌ಗಳು ತೆರೆದುಕೊಂಡಿವೆ. ಹಾಗಾಗಿ, ಉಗ್ರ ಕೃತ್ಯದ ಶಂಕೆ ಬಲವಾಗಿ ವ್ಯಕ್ತವಾಗುತ್ತಿದೆ.

ಅಪಘಾತದಲ್ಲಿ ಉಗ್ರರ ಕೈವಾಡ, ವಿಧ್ವಂಸಕ ಕೃತ್ಯ ಶಂಕೆ ವ್ಯಕ್ತವಾದ ಹಿನ್ನೆಲೆ ಘಟನೆಯ ಸಮಗ್ರ ತನಿಖೆಗೆ ರಾಷ್ಟ್ರೀಯ ತನಿಖಾ ಸಂಸ್ಥೆ(ಎನ್‌ಐಎ) ಮುಂದಾಗಿದೆ. ಅದಾಗಲೇ ಸಾಕ್ಷ್ಯಗಳ ಸಂಗ್ರಹ, ಹೇಳಿಕೆಗಳ ದಾಖಲು ಮೂಲಕ ತನಿಖಾ ಪ್ರಕ್ರಿಯೆಯನ್ನು ಶನಿವಾರವೇ ಆರಂಭಿಸಿದೆ. ಇನ್ನೊಂದೆಡೆ ರೈಲ್ವೆ ಪೊಲೀಸ್ ಮತ್ತು ರೈಲ್ವೆ ಪ್ರೊಟೆಕ್ಷನ್ ಫೋರ್ಸ್ ಕೂಡಾ ಪ್ರತ್ಯೇಕವಾಗಿ ತನಿಖೆ ನಡೆಸುತ್ತಿವೆ. ಗಂಟೆಗೆ 109 ಕಿ.ಮೀ. ವೇಗದಲ್ಲಿ ಸಾಗಿಬಂದ ಬಾಗ್ಮತಿ ಎಕ್ಸ್‌ಪ್ರೆಸ್ ರೈಲು ಕಾವರೈಪೆಟ್ಟೈ ರೈಲು ನಿಲ್ದಾಣದಲ್ಲಿ ನಿಲುಗಡೆ ಇಲ್ಲದ ಕಾರಣ, ಸೀದಾ ಮುಖ್ಯಹಳಿಯಲ್ಲಿ ಬಂದಷ್ಟೇ ವೇಗದಲ್ಲಿ ಸಾಗಿ ಮುಂದೆ ಹೋಗಬೇಕಿತ್ತು. ಆದರೆ, ಲೋಕೊ ಪೈಲಟ್ ಹೇಳುವಂತೆ, ರೈಲಿನ ಎಂಜಿನ್ ಯಾವುದೋ ಬಲವಾದ ವಸ್ತುವಿಗೆ ಡಿಕ್ಕಿ ಹೊಡೆದಂತೆ 'ಧಡ' ಎಂಬ ಶಬ್ದ ಕೇಳಿಸಿದೆ. ಅದರ ಬೆನ್ನಲ್ಲೇ ರೈಲು ಲೂಪ್‌ಲೈನ್‌ಗೆ ಹಾದಿ ಬದಲಿಸಿದೆ. ತಕ್ಷಣವೇ ಲೋಕೊಪೈಲಟ್ 109 ಕಿಮೀ ವೇಗವನ್ನು 90 ಕಿಮೀಗಳಿಗೆ ತಗ್ಗಿಸಿದ್ದಾರೆ. ಹಾಗಿದ್ದೂ ಅದೇ ಹಳಿ ಮೇಲೆ ನಿಲುಗಡೆಯಾಗಿದ್ದ ಗೂಡ್ಸ್ ರೈಲಿಗೆ ಬಾಗ್ಮತಿ ಎಕ್ಸ್‌ಪ್ರೆಸ್ ಡಿಕ್ಕಿ ಹೊಡೆದಿದೆ. 1800 ಪ್ರಯಾಣಿಕರಿದ್ದ ರೈಲಿನ 12 ಬೋಗಿಗಳು ಹಳಿ ತಪ್ಪಿ 20 ಮಂದಿ ಗಾಯಗೊಂಡಿದ್ದಾರೆ. ಅಲ್ಲದೇ, ಪವರ್ ಕಾರ್ ಮತ್ತು ಮೊಬೈಲ್ ವ್ಯಾನ್(2) ಬೋಗಿಗಳು ಬೆಂಕಿಗೆ ತುತ್ತಾಗಿವೆ. ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ.

ತಿಂಗಳ ಹಿಂದೆಯೇ ದುಷ್ಕೃತ್ಯಕ್ಕೆ ಸಂಚು!

ತಮಿಳುನಾಡಿನಲ್ಲಿ 1 ತಿಂಗಳ ಹಿಂದೆ ರೈಲು ಹಳಿ ತಪ್ಪಿಸಲು ಆಗಂತುಕರು ಯತ್ನಿಸಿದ್ದರು ಎನ್ನುವ ಮಾಹಿತಿ ಭಾನುವಾರ ಲಭ್ಯವಾಗಿದೆ. ಒಂದು ತಿಂಗಳ ಹಿಂದೆ ಪೊನ್ನೇರಿ ಹಾಗೂ ಅನುಪಂ ಪಟ್ಟು ರೈಲು ನಿಲ್ದಾಣಗಳ ಮಧ್ಯೆ ರೈಲುಗಳನ್ನು ಹಳಿ ತಪ್ಪಿಸಲು ಸಂಚು ನಡೆದಿತ್ತು. ಅದೃಷ್ಟವ ಶಾತ್ ಮುಂಚಿತವಾಗಿಯೇ ಸುದ್ದಿ ತಿಳಿದು ಎಚ್ಚರಿಕೆ ಕ್ರಮ ಕೈಗೊಂಡಿದ್ದರಿಂದ ಯಾವುದೇ ಅನಾಹುತವಾಗಿರಲಿಲ್ಲ. ಆ ಘಟನೆಯ ಬಳಿಕ ಒಂದು ತಿಂಗಳಿಂದ ಆ ಭಾಗದ ಟ್ರ್ಯಾಕ್ ಬಳಿ ರೈಲ್ವೆ ಪೊಲೀಸರ ಗಸ್ತು ಹೆಚ್ಚಿಸಲಾಗಿತ್ತು. ಆದರೆ, ಈಗ ಕಾವರೈಪೆಟ್ಟೈ ಬಳಿ ಹಳಿಗಳಿಂದ ನಟ್, ಬೋಲ್ಟ್ ತೆಗೆದು ರೈಲು ಹಳಿ ತಪ್ಪಿಸುವ ಯತ್ನದಲ್ಲಿ ದುಷ್ಕರ್ಮಿಗಳು ಯಶ ಕಂಡಿದ್ದಾರೆ ಎನ್ನಲಾಗಿದೆ.

ಹೊಸ ಹಳಿಗಳ ಜೋಡಣೆ

ಭಾಗ್ಮತಿ ಎಕ್ಸ್‌ಪ್ರೆಸ್ ರೈಲು ಅಪಘಾತ ಸ್ಥಳದಲ್ಲಿ ಹಳಿ ತಪ್ಪಿ ಅಡ್ಡಾದಿಡ್ಡಿ ಬಿದ್ದಿದ್ದ ಬೋಗಿಗಳನ್ನು ಸ್ಥಳಾಂತರಿಸಲಾಗಿದೆ. ಹಾನಿಗೀಡಾಗಿದ್ದ ಹಳಿಗಳನ್ನು ತೆರವು ಗೊಳಿಸಿ ಹೊಸ ಹಳಿಗಳನ್ನು ಜೋಡಿ ಸಲಾಗಿದೆ. ಸತತ 18 ಘಂಟೆಗಳ ಕಾರ್ಯಾಚರಣೆ ನಡೆಸಲಾಗಿದೆ. ಈಗ ಎಂದಿನಂತೆ ರೈಲು ಸಂಚಾರಕ್ಕೆ ಅವಕಾಶವಾಗಿದೆ. ಟ್ರಯಲ್ ರನ್ ಬಳಿಕ ಎಲ್ಲಾ ರೈಲುಗಳ ಸಂಚಾರಕ್ಕೆ ಅನುಮತಿ ನೀಡಲಾಗುವುದು ಎಂದು ರೈಲ್ವೆ ಸುರಕ್ಷಾ ದಳದ ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ತೆರೆದುಕೊಂಡಿದ್ದ ಬೋಲ್ಟ್, ಬ್ರಾಕೆಟ್; ನಟ್‌ಗಳು ನಾಪತ್ತೆ!

ಕಾವರೈಪೆಟ್ಟೈ ರೈಲು ನಿಲ್ದಾಣದಲ್ಲಿ ಬಾಗ್ಮತಿ ಎಕ್ಸ್‌ಪ್ರೆಸ್ ರೈಲಿಗೆ ನಿಲುಗಡೆ ಇಲ್ಲದಿರುವುದರಿಂದ 109 ಕಿಮೀ ವೇಗದಲ್ಲಿ ಬರುತ್ತಿದ್ದ ಎಕ್ಸ್‌ಪ್ರೆಸ್ ರೈಲಿಗೆ ಮುಖ್ಯ ಹಳಿಯಲ್ಲೇ ಬಂದಷ್ಟೇ ವೇಗದಲ್ಲಿ ಮುಂದೆ ಸಾಗಲು ಹಸಿರು ನಿಶಾನೆ ತೋರಲಾಗಿತ್ತು. ವಾಸ್ತವದಲ್ಲಿ ಪಾಯಿಂಟ್‌ಮನ್‌ಗಳೂ ಹಳಿಗಳಲ್ಲಿ ಯಾವುದೇ ಬದಲಾವಣೆ ಮಾಡಿರಲಿಲ್ಲ. ಆದರೆ ಬಾಗ್ಮತಿ ಎಕ್ಸ್‌ಪ್ರೆಸ್ ಅದು ಹೇಗೆ ಲೂಪ್‌ಲೈನ್ ಹಳಿಗೆ ಪ್ರವೇಶಿಸತು ಎಂಬುದೇ ನಿಗೂಢ ಎಂದು ರೈಲ್ವೆ ಪ್ರತಿಕ್ರಿಯಿಸಿದೆ. ಟ್ರ್ಯಾಕ್‌ಗಳು, ಪಾಯಿಂಟ್‌ಗಳು, ಬ್ಲಾಕ್‌ಗಳು, ಸಿಗ್ನಲ್, ಸ್ಟೇಷನ್ ಎಲೆಕ್ಟ್ರಾನಿಕ್ ಇಂಟರ್ಲಾಕಿಂಗ್ ಸಿಸ್ಟಂ, ಕಂಟ್ರೋಲ್ ಪ್ಯಾನಲ್ ಮತ್ತಿತರ ಮಹತ್ವದ ಸುರಕ್ಷತಾ ಸಾಧನಗಳು, ಸಿಗ್ನಲಿಂಗ್ ವ್ಯವಸ್ಥೆ ಮತ್ತು ನಿಲ್ದಾಣದ ಕಾರ್ಯಾಚರಣೆಯ ಅಂಶಗಳ ಕುರಿತು ಸಮಗ್ರ ಪರಿಶೀಲನೆ ನಡೆಸಲಾಗುತ್ತಿದೆ ಎಂದು ದಕ್ಷಿಣ ವೃತ್ತದ ರೈಲ್ವೆ ಸುರಕ್ಷತಾ ಆಯುಕ್ತ ಎ.ಎಂ.ಚೌಧರಿ ಹೇಳಿದ್ದಾರೆ. ಸಿಗ್ನಲಿಂಗ್ ಪಾಯಿಂಟ್‌ನಲ್ಲಿ ನಟ್-ಬೋಲ್ಟ್ ಕಾಣೆಯಾಗಿರುವುದೇ ಅಚ್ಚರಿದಾಯಕ. ಅಲ್ಲದೇ, ಹಳಿಗೆ ಜೋಡಿಸಲಾಗಿರುವ ನಿರ್ಣಾಯಕ ಬೋಲ್ಟ್‌ಗಳು ಮತ್ತು ಬ್ರಾಕೆಟ್‌ಗಳು ತೆರೆದುಕೊಂಡಿದ್ದಾದರೂ ಹೇಗೆ? ಎಂಬುದೇ ದೊಡ್ಡ ಪ್ರಶ್ನೆಯಾಗಿದೆ ಎಂದು ರೈಲ್ವೆ ಮೂಲಗಳು ಹೇಳುತ್ತಿವೆ. ಬೆಂಗಳೂರಿನಿಂದ ಕಾವರೈಪೆಟ್ಟೈಗೆ ತೆರಳಿದ ದಕ್ಷಿಣ ರೈಲ್ವೆ ಸುರಕ್ಷತಾ ವಿಭಾಗದ ಆಯುಕ್ತ ಎ.ಎಂ.ಚೌಧರಿ ಅವರ ನೇತೃತ್ವದ ತಂಡ, ಹಳಿಗಳು, ಹಳಿ ಬದಲಾವಣೆ ಆಗುವ ಸ್ಥಳ, ಸಿಗ್ನಲಿಂಗ್ ವ್ಯವಸ್ಥೆ ಎಲ್ಲವನ್ನೂ ಸಮಗ್ರವಾಗಿ ಪರಿಶೀಲಿಸಿ ಮಾಹಿತಿ ಕಲೆಹಾಕಿದೆ.

ಬಾಲಸೋರ್ ರೀತಿ ಕೃತ್ಯ: ತಜ್ಞರು, ನಿವೃತ್ತರ ಶಂಕೆ

ಕಾವರೈಪೆಟ್ಟೈನಲ್ಲಿನ ಬಾಗ್ಮತಿ ಎಕ್ಸ್‌ಪ್ರೆಸ್ ಅಪಘಾತದ ರೀತಿ ಗಮನಿಸಿದರೆ 2023ರ ಜೂ.2ರಂದು ಒಡಿಶಾದ ಬಾಲಾಸೋರ್ ಬಳಿಯ ಬಹಾನಾಗಾ ಬಜಾರ್ ಸ್ಟೇಷನ್‌ನಲ್ಲಿ ನಡೆದಿದ್ದ ಕೋರಮಂಡಲ್ ಎಕ್ಸ್‌ಪ್ರೆಸ್ ರೈಲು ಅಪಘಾತ ನೆನಪಾಗುತ್ತದೆ. ಅಲ್ಲಿನ ಅಪಘಾತಕ್ಕೆ ರೈಲ್ವೆ ಸಿಗ್ನಲಿಂಗ್ ವಿಭಾಗದ ಸಿಬ್ಬಂದಿಯೇ ಸಂಚು ನಡೆಸಿದ್ದರು ಎಂಬುದು ಸಿಬಿಐ ತನಿಖೆಯಿಂದ ತಿಳಿದುಬಂದಿತ್ತು. ರೈಲ್ವೆಯ ಮೂವರು ಸಿಬ್ಬಂದಿಗಳನ್ನು ಬಂಧಿಸಲಾಗಿತ್ತು. ಬಜಾರ್ ಸ್ಟೇಷನ್‌ನಲ್ಲಿ ಕೋರಮಂಡಲ್ ಎಕ್ಸ್‌ಪ್ರೆಸ್ ರೈಲು ಲೂಪ್‌ಲೈನ್‌ನಲ್ಲಿ ನಿಲುಗಡೆಯಾಗಿದ್ದ ಗೂಡ್ಸ್ ರೈಲಿಗೆ ವೇಗವಾಗಿ ಡಿಕ್ಕಿ ಹೊಡೆದಿತ್ತು. 8 ಬೋಗಿಗಳು ಹಳಿ ತಪ್ಪಿ ಪಕ್ಕದ ಹಳಿಗಳ ಮೇಲೆ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಪಕ್ಕದ ಹಳಿಯಲ್ಲಿ ವೇಗವಾಗಿ ಬಂದ ಯಶವಂತಪುರ-ಹೌರಾ ಎಕ್ಸ್‌ಪ್ರೆಸ್, ಹಳಿಗಳ ಮೇಲೆ

ಹರಡಿಬಿದ್ದಿದ್ದ ಕೋರಮಂಡಲ್ ಎಕ್ಸ್‌ಪ್ರೆಸ್‌ನ ಬೋಗಿಗಳಿಗೆ ರಭಸದಿಂದ ಡಿಕ್ಕಿ ಹೊಡೆಯಿತು. ಪರಿಣಾಮ ಎರಡೂ ರೈಲುಗಳಲ್ಲಿನ ಒಟ್ಟು 293 ಪ್ರಯಾಣಿಕರು ಸಾವಿಗೀಡಾದರು. ಮೃತರಲ್ಲಿ ಹೆಚ್ಚಿನವರು ಪಶ್ಚಿಮ ಬಂಗಾಳ, ಒಡಿಶಾ ಮೂಲದವರಾಗಿದ್ದರು. ತಮಿಳುನಾಡಿನ ಕಾವರೈ ಪೆಟ್ಟೈನ ಅಪಘಾತವೂ ಅದೇ ಮಾದರಿಯಲ್ಲಿದೆ. 109 ಕಿಮೀ ವೇಗದಲ್ಲಿದ್ದ ಬಾಗ್ಮತಿ ಎಕ್ಸ್‌ಪ್ರೆಸ್ ರೈಲು ಲೂಪ್‌ಲೈನ್‌ಗೆ ಬದಲಾಗುವಂತೆ ಮಾಡಿ ನಿಲುಗಡೆಯಾಗಿದ್ದ ಗೂಡ್ಸ್ ರೈಲಿಗೆ ಡಿಕ್ಕಿಯಾಗುವಂತೆ ಮಾಡಲಾಗಿದೆ. ಬಾಲಸೋರ್ ಮತ್ತು ಕಾವರೈಪೆಟ್ಟೈ ಅಪಘಾತಗಳಲ್ಲಿ ಬಹಳ ಹೋಲಿಕೆ ಯಿದೆ. 2 ಘಟನೆಗಳಲ್ಲೂ ದೀರ್ಘ ಪಯಣದ ರೈಲುಗಳನ್ನೇ, ಅದೂ ಕರ್ನಾಟಕದಿಂದ ಪ್ರಯಾಣ ಆರಂಭಿಸಿದ ರೈಲುಗಳನ್ನೇ ಗುರಿಯಿಟ್ಟಂತೆ ಭಾಸವಾಗುತ್ತಿದೆ. ಬಾಲಸೋರ್‌ನಂತಹುದೇ ಸಂಚು ಕಾವರೈಪೆಟ್ಟೈನಲ್ಲೂ ನಡೆದಿರಬಹುದು. ರೈಲ್ವೆಯ ಒಳಗಿನವರೇ ಈ ದುಷ್ಕೃತ್ಯದಲ್ಲೂ ಭಾಗಿ ಆಗಿರಬಹುದು ಎಂದು ಭಾರತೀಯ ರೈಲ್ವೆಯ ಕೆಲವು ಮಾಜಿ ಅಧಿಕಾರಿಗಳು ಶಂಕೆ ವ್ಯಕ್ತಪಡಿಸಿದ್ದಾರೆ.

ಉತ್ತರಾಖಂಡ: ರೈಲು ಹಳಿಯಲ್ಲಿ ಸಿಲಿಂಡರ್!

ಧಂಧೇರಾ: ಉತ್ತರ ಪ್ರದೇಶ, ಮಧ್ಯಪ್ರದೇಶ, ರಾಜಸ್ಥಾನ ರಾಜ್ಯಗಳ ಬಳಿಕ ಈಗ ದುಷ್ಕರ್ಮಿಗಳ ದೃಷ್ಟಿ ಉತ್ತರಾಖಂಡದತ್ತ ಹೊರಳಿದೆ. ಉತ್ತರಾಖಂಡ ರಾಜ್ಯದ ಧಂಧೇರಾ ಬಳಿಯ ರೈಲ್ವೆ ಹಳಿಯಲ್ಲಿ ಭಾನುವಾರ ಬೆಳಗ್ಗೆ ಖಾಲಿ ಸಿಲಿಂಡರ್ ಪತ್ತೆಯಾಗಿದೆ ಎಂದು ಉತ್ತರ ರೈಲ್ವೆ ಅಧಿಕಾರಿ ಸುದ್ದಿಗಾರರಿಗೆ ತಿಳಿಸಿದ್ದಾರೆ.

ರೈಲುಗಳನ್ನು ಹಳಿ ತಪ್ಪಿಸುವ, ಸಂಚಾರಕ್ಕೆ ಅಡ್ಡಿಯುಂಟು ಮಾಡುವ ಪ್ರಕರಣಗಳು ಉತ್ತರ ಭಾರತದಲ್ಲಿ ಹೆಚ್ಚುತ್ತಿವೆ. ಬಿಜೆಪಿ ಆಡಳಿತದ ರಾಜ್ಯಗಳನ್ನೇ ಗುರಿಯಾಗಿಸಿ ರೈಲುಗಳನ್ನು ಹಳಿ ತಪ್ಪಿಸಿ ಜನರ ಸಾವಿಗೆ ಕಾರಣವಾಗಲೆಂದೇ ದುಷ್ಕರ್ಮಿಗಳು(ಉಗ್ರರು) ರೈಲು ಹಳಿಗಳ ಮೇಲೆ ಖಾಲಿ ಸಿಲಿಂಡರ್, ಕಾಂಕ್ರೀಟ್ ಕಂಬ ಇಡುವುದು, ಮಣ್ಣಿನ ರಾಶಿ ಹಾಕುವುದನ್ನು ನಡೆಸಿದ್ದರು. ಕಳೆದ ವಾರ ಉತ್ತರ ಪ್ರದೇಶದ ರಾಯ್‌ಬರೇಲಿಯ ರಘುರಾಜ್ ಸಿಂಗ್ ನಿಲ್ದಾಣದ ಬಳಿ ರೈಲು ಹಳಿಗಳ ಮೇಲೆ ಮಣ್ಣಿನ ರಾಶಿ ಪತ್ತೆಯಾಗಿತ್ತು. ಈಗ ಉತ್ತರಾಖಂಡದಲ್ಲಿ ಹಳಿಗಳ ಮಧ್ಯೆ ಸಿಲಿಂಡರ್ ಇರಿಸಿ ರೈಲು ಅಪಘಾತಕ್ಕೆ ಸಂಚು ನಡೆಸಿದ್ದಾರೆ ರೈಲ್ವೆ ಅಧಿಕಾರಿ ತಿಳಿಸಿದ್ದಾರೆ. ಲಂಡೌರಾ ಮತ್ತು ಧಂಧೇರಾ ನಡುವೆ ಹಳಿ ಮೇಲೆ ಕೆಂಪು ಬಣ್ಣದ ಗ್ಯಾಸ್ ಸಿಲಿಂಡರ್ ಬಿದ್ದಿರುವ ವಿಷಯವನ್ನು ಗೂಡ್ಸ್ ರೈಲಿನ ಲೋಕೋ ಪೈಲಟ್, ರೂರ್ಕಿಯ ಸ್ಟೇಷನ್ ಮಾಸ್ಟರ್‌ಗೆ ತಿಳಿಸಿದ್ದಾರೆ. ಧಂಧೇರಾ ನಿಲ್ದಾಣದಿಂದ 1 ಕಿ.ಮೀ. ದೂರದಲ್ಲಿದ್ದ ಸ್ಥಳಕ್ಕೆ ಪಾಯಿಂಟ್‌ಮನ್ ತಕ್ಷಣ ಧಾವಿಸಿ ಪರಿಶೀಲಿಸಿದ್ದಾರೆ. 5 ಕಿಲೊ ಸಾಮರ್ಥ್ಯದ ಅಡುಗೆ ಅನಿಲ ಸಿಲಿಂಡರ್ ಪೂರ್ಣ ಖಾಲಿಯಿತ್ತು. ಆದರೂ ಅದು ರೈಲು ಹಳಿಗೆ ಅಡ್ಡವಾಗಿ ದ್ದರಿಂದ ಹಳಿ ತಪ್ಪುವುದು ನಿಶ್ಚಿತವಾಗಿತ್ತು. ನಂತರ ಪಾಯಿಂಟ್‌ಮನ್ ಸಿಲಿಂಡರನ್ನು ಸ್ಥಳದಿಂದ ತೆಗೆದು ಧಂಧೇರಾ ಸ್ಟೇಷನ್ ಮಾಸ್ಟರ್ ವಶಕ್ಕೆ ಒಪ್ಪಿಸಿದರು. ಘಟನೆ ಬಗ್ಗೆ ಸ್ಥಳೀಯ ಪೊಲೀಸ್ ಮತ್ತು ರೈಲ್ವೆ ಪ್ರೊಟೆಕ್ಷನ್ ಫೋರ್ಸ್‌ಗೆ ಮಾಹಿತಿ ನೀಡಲಾಗಿದೆ. ರೂರ್ಕಿಯ ಸಿವಿಲ್ ಲೈನ್ಸ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ ಎಂದು ಉತ್ತರ ರೈಲ್ವೆ ಅಧಿಕಾರಿ ತಿಳಿಸಿದ್ದಾರೆ.

15 ಅಡಿ ಬಾವಿಗೆ ಬಿದ್ದ ಕಾರು, ದಂಪತಿ ಪಾರು!

ಎರ್ನಾಕುಲಂ: ಕಾರು ಬಾವಿಯ ತಡೆಗೋಡೆಗೆ ಗುದ್ದಿ ಬೀಳಿಸಿ 15 ಅಡಿ ಆಳದ ನಿರುಪಯೋಗಿ ಬಾವಿಗೆ ಬಿದ್ದರೂ ನವದಂಪತಿ ಜೀವಂತ ಪಾರಾಗಿ ಬಂದ ರೋಚಕ ಘಟನೆ ಕೇರಳದ ಎರ್ನಾಕುಲಂನಿಂದ ವರದಿಯಾಗಿದೆ.

ತಿರುವನಂತಪುರಂ ಸರಕಾರಿ ವೈದ್ಯ ಕಾಲೇಜು-ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿರುವ ಕಾರ್ತಿಕ್ ಮತ್ತು ಕೃಷಿ ಪದವಿ ವಿದ್ಯಾರ್ಥಿನಿ ವಿಸ್ಮಯಾ ವಿವಾಹವಾಗಿ 2 ತಿಂಗಳಷ್ಟೇ ಆಗಿತ್ತು. ಆಯುಧಪೂಜೆ-ವಿಜಯ ದಶಮಿ ಮತ್ತು ಭಾನುವಾರ ಒಟ್ಟಿಗೇ 3 ದಿನಗಳ ರಜೆ ಸಿಕ್ಕಿದ್ದರಿಂದ ನವದಂಪತಿ ಕಾರಿನಲ್ಲಿ ಶುಕ್ರವಾರ ರಾತ್ರಿ ಊರಿಗೆ ತೆರಳುತ್ತಿದ್ದರು. ಕೋಲೆಂಚೇರಿ ಬಳಿ ಇಳಿಜಾರು ರಸ್ತೆಯಲ್ಲಿ ಕತ್ತಲಲ್ಲಿ ಹಾದಿ ತಪ್ಪಿದ ಕಾರು ರಸ್ತೆ ಪಕ್ಕದಲ್ಲೇ ಇದ್ದ ಬಾವಿಯ ತಡೆಗೋಡೆಗೆ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ತಡೆಗೋಡೆ ಕುಸಿದು ಕಾರು ಬಾವಿಯೊಳಕ್ಕೆ ಜಾರಿದೆ. 15 ಅಡಿ ಆಳದಲ್ಲಿ ಕಾರು ಸಿಲುಕಿಕೊಂಡಿದೆ. ಆಗಿನ್ನೂ ರಾತ್ರಿ 9.30 ಆಗಿದ್ದರಿಂದ ರಸ್ತೆಯಲ್ಲಿ ಜನಸಂಚಾರವಿತ್ತು. ಸಮೀಪದಲ್ಲೇ ಸಾಗುತ್ತಿದ್ದವರು, ಸ್ಥಳೀಯರು ಅಪಘಾತ ಸದ್ದು ಕೇಳಿ ತಕ್ಷಣವೇ ಸಹಾಯಕ್ಕೆ ಧಾವಿಸಿದ್ದಾರೆ. ಬಳಿಕ ಹಗ್ಗದ ಏಣಿ ಇಳಿಬಿಟ್ಟು ಯುವ ದಂಪತಿ ಮೇಲಕ್ಕೆ ಬರಲು ನೆರವಾಗಿದ್ದಾರೆ. ಬಾಗಿಲು ತೆರೆಯುವಷ್ಟು ಜಾಗ ಇದ್ದುದರಿಂದ ಕಾರಿನಿಂದ ಸರಾಗ ಹೊರಬಂದ ಕಾರ್ತಿಕ್-ವಿಸ್ಮಯಾ, ಹಗ್ಗದ ಏಣಿ ಸಹಾಯದಿಂದ ಬಾವಿಯಿಂದ ಹೊರಬಂದರು. ದಂಪತಿ ಸ್ವಲ್ಪದರಲ್ಲೇ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಅಪಘಾತವಾಗಿದ್ದು, ಪಾರಾಗಿ ಬಂದಿದ್ದು ಎಲ್ಲವೂ ಸಿನಿಮಾದಲ್ಲಿನ ಘಟನೆಯಂತೆ ಭಾಸವಾಗಿದ್ದಾಗಿ ದಂಪತಿ ಪ್ರತಿಕ್ರಿಯಿಸಿ ನೆಮ್ಮದಿಯ ನಿಟ್ಟುಸಿರುಬಿಟ್ಟಿದ್ದಾರೆ.

ಕೋಲ್ಕತ್ತ ಕಿರಿಯ ವೈದ್ಯರ ನಿರಶನ 9ನೇ ದಿನ | ಹಿರಿಯ 70 ವೈದ್ಯರ ರಾಜೀನಾಮೆ ಬೆದರಿಕೆ

ಅಸ್ವಸ್ಥ ಮೂವರು ಕಿರಿಯ ವೈದ್ಯರು ಆಸ್ಪತ್ರೆಗೆ ದಾಖಲು

ಕೋಲ್ಕತ್ತ: ಪಶ್ಚಿಮ ಬಂಗಾಳದ ವಿವಿಧ ವೈದ್ಯಕೀಯ ಸಂಸ್ಥೆಗಳ 7 ಕಿರಿಯ ವೈದ್ಯರು ರಾಜ್ಯ ಸರಕಾರದ ಮುಂದೆ ವಿವಿಧ ಬೇಡಿಕೆಗಳನ್ನಿಟ್ಟು ಅವುಗಳ ಈಡೇರಿಕೆಗೆ ಆಗ್ರಹಿಸಿ ನಡೆಸುತ್ತಿರುವ ಆಮರಣಾಂತ ಉಪವಾಸ ಪ್ರತಿಭಟನೆ ಭಾನುವಾರ 9ನೇ ದಿನಕ್ಕೆ ಕಾಲಿಟ್ಟಿದೆ.

ಈ ಮಧ್ಯೆ, ಸತತ ನಿರಶನದ ಪರಿಣಾಮ ಕಿರಿಯ ವೈದ್ಯರ ದೇಹಾರೋಗ್ಯ ಕ್ಷೀಣಿಸುತ್ತಿದೆ. ಉಪವಾಸ ನಿರತರಲ್ಲಿ ಮೂವರ ಸ್ಥಿತಿ ವಿಷಮಿಸಿದ್ದರಿಂದ ಬಲವಂತವಾಗಿ ಭಾನುವಾರ ಆಸ್ಪತ್ರೆಗೆ ದಾಖಲಿಸಲಾಗಿದೆ. ಇನ್ನೊಂದೆಡೆ, 9 ದಿನಗಳಿಂದ ಉಪವಾಸ ನಡೆಸುತ್ತಿರುವ ಕಿರಿಯ ವೈದ್ಯರಿಗೆ ಬೆಂಬಲ ಸೂಚಿಸಲು ಆರ್‌ಜಿ ಕರ್ ಸರಕಾರಿ ವೈದ್ಯಕೀಯ ಕಾಲೇಜು-ಆಸ್ಪತ್ರೆಯ ಮಾಜಿ ವಿದ್ಯಾರ್ಥಿಗಳ ಗುಂಪು ಭಾನುವಾರ 12 ಗಂಟೆಗಳ

ಸಾಂಕೇತಿಕ ಉಪವಾಸ ಆರಂಭಿಸಸಲು ಆಸ್ಪತ್ರೆ ಬಳಿ ತೆರಳಿದಾಗ ಅಲ್ಲಿ ಭದ್ರತಾ ಕರ್ತವ್ಯದಲ್ಲಿದ್ದ 'ಸಿಐಎಸ್‌ಎಫ್' ಸಿಬ್ಬಂದಿಯಿಂದ ಪ್ರತಿರೋಧ ಎದುರಿಸಬೇಕಾಯಿತು. ಕಾಲೇಜಿನ ಮಾಜಿ ವಿದ್ಯಾರ್ಥಿಗಳು, ಹೆಚ್ಚಿನವರು ಹಿರಿಯ ನಾಗರಿಕರು ಸಾಂಕೇತಿಕ ಉಪವಾಸ ಮುಂದುವರಿಸುತ್ತೇವೆ ಎಂದು ಹೇಳಿದ್ದಾರೆ. ಈ ಮಧ್ಯೆ, ಸೋಮವಾರದಿಂದ ರಾಜ್ಯಾದ್ಯಂತ ಇರುವ ವೈದ್ಯಕೀಯ ಸಂಸ್ಥೆಗಳಲ್ಲಿ 48 ಗಂಟೆಗಳ ಸೇವೆಯನ್ನು ಭಾಗಶಃ ಸ್ಥಗಿತ ಮಾಡುವಂತೆ ವೈದ್ಯರ ಸಮೂಹ ಕರೆ ನೀಡಿದೆ. ಇನ್ನೊಂದೆಡೆ, ಪಶ್ಚಿಮ ಬಂಗಾಳ ರಾಜ್ಯಾದ್ಯಂತದ ವೈದ್ಯ ಸಮೂಹ ಅ.15ರ ಮಂಗಳವಾರ 'ಪ್ರತಿಭಟನಾ ಕಾರ್ನಿವಲ್'ಗೆ ಕರೆ ನೀಡಿದೆ.

ಐಎಂಎ, ಎಫ್‌ಎಐಎಂಎ ಎಚ್ಚರಿಕೆ

ಕಿರಿಯ ವೈದ್ಯರು ಅ.5ರಿಂದ ಉಪವಾಸ ನಡೆಸುತ್ತಿದ್ದಾರೆ. ಭಾನುವಾರ ಮೂವರು ವೈದ್ಯರು ಅಸ್ವಸ್ಥರಾಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ಪರಿಸ್ಥಿತಿ ಮತ್ತಷ್ಟು ಉಲ್ಬಣಗೊಳ್ಳುವ ಮೊದಲು ಮಧ್ಯಪ್ರವೇಶಿಸಿ ಎಂದು ಭಾರತೀಯ ವೈದ್ಯಕೀಯ ಸಂಘ(ಐಎಂಎ) ಪಶ್ಚಿಮ ಬಂಗಾ ಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರನ್ನು ಒತ್ತಾಯಿಸಿದೆ. ನಿರಶನದಲ್ಲಿರುವ ಕಿರಿಯ ವೈದ್ಯರಿಗೆ ಹಾನಿಯಾದರೆ ದೇಶಾದ್ಯಂತ ವೈದ್ಯಕೀಯ ಸೇವೆಗಳನ್ನು ಪೂರ್ಣ ಸ್ಥಗಿತಗೊಳಿಸುವುದಾಗಿ 'ಅಖಿಲ ಭಾರತ ವೈದ್ಯಕೀಯ ಸಂಘಗಳ ಒಕ್ಕೂಟ'(ಎಫ್‌ಎಐಎಂಎ) ನಡೆಸುತ್ತಿರುವ ಆಂದೋಲನದಲ್ಲಿ ರಾಜ್ಯ ಸರಕಾರಕ್ಕೆ ಎಚ್ಚರಿಕೆ ಸಂದೇಶ ರವಾನಿಸಲಾಗಿದೆ. ಇನ್ನೊಂದೆಡೆ, ಕಿರಿಯ ವೈದ್ಯರ ಬೇಡಿಕೆಗೆ ರಾಜ್ಯ ಸರಕಾರ ತಕ್ಷಣ ಸ್ಪಂದಿಸಬೇಕು. ಇಲ್ಲವಾದರೆ ವೈದ್ಯ ಹುದ್ದೆಗೆ ರಾಜೀನಾಮೆ ಸಲ್ಲಿಸುವುದಾಗಿ ಕೋಲ್ಕತ್ತದ ಕಲ್ಯಾಣಿ ಜೆಎನ್‌ಎಂ ಆಸ್ಪತ್ರೆಯ 70 ಹಿರಿಯ ವೈದ್ಯರು ಭಾನುವಾರ ಎಚ್ಚರಿಕೆ ನೀಡಿದ್ದಾರೆ.

22 ಗ್ರಾಮ ತೆರವಿಗೆ ಇಸ್ರೇಲ್ ಸೂಚನೆ

ಬೈರೂತ್: ದಕ್ಷಿಣ ಲೆಬನಾನ್‌ನ 22 ಗ್ರಾಮಗಳ ನಿವಾಸಿಗಳಿಗೆ ಅವಲಿ ನದಿಯ ಉತ್ತರದ ಪ್ರದೇಶದಿಂದ ತಕ್ಷಣವೇ ಸ್ಥಳಾಂತರಗೊಳ್ಳುವಂತೆ ಇಸ್ರೇಲಿ ಸೇನೆ ಆದೇಶಿಸಿದೆ. ಪಶ್ಚಿಮದ ಬೆಕಾ ಕಣಿವೆಯಿಂದ ಹರಿದು ಬರುವ ಅವಲಿ ನದಿಯು ಮೆಡಿಟರೇನಿಯನ್ ಸಮುದ್ರವನ್ನು ಸೇರಿಕೊಳ್ಳುತ್ತದೆ.

ದಕ್ಷಿಣ ಲೆಬನಾನ್‌ನ ಹಳ್ಳಿಗಳಲ್ಲಿ ಹಲವು ಈಗಾಗಲೇ ಖಾಲಿಯಾಗಿವೆ. ಹಿಜ್ಬೊಲ್ಲಾ ಉಗ್ರರು ಬೈರೂತ್ ನಗರ ತೊರೆದು ಹಳ್ಳಿಗಳಲ್ಲಿ ಅಡಗಿದ್ದಾರೆ ಎಂಬ ಮಾಹಿತಿ ಆಧರಿಸಿ ಇಸ್ರೇಲ್ ಸೇನೆಯು ಈಗ ಲೆಬನಾನ್ ದಕ್ಷಿಣ ಭಾಗದ ಗ್ರಾಮೀಣ ಪ್ರದೇಶಗಳತ್ತ ದಾಳಿ ನಡೆಸಲಾರಂಭಿಸಿದೆ. ಹಿಜ್ಬೊಲ್ಲಾ ಭಯೋತ್ಪಾದಕರು ತಮ್ಮ ಚಟುವಟಿಕೆಗಳಿಗೆ ಈಗ ಗ್ರಾಮೀಣ ಪ್ರದೇಶಗಳನ್ನು ಸುರಕ್ಷಿತ ತಾಣವಾಗಿಸಿಕೊಂಡಿದ್ದಾರೆ. ಈ ಸ್ಥಳಗಳನ್ನು ಶಸ್ತ್ರಾಸ್ತ್ರ ಸಂಗ್ರಹಿಸಿಡಲು ಮತ್ತು ಇಸ್ರೇಲ್ ಮೇಲೆ ಮರೆಯಿಂದ ದಾಳಿ ನಡೆಸಲು ಬಳಸುತ್ತಿದ್ದಾರೆ. ಉಗ್ರರ ಅಡಗುತಾಣಗಳ ಮೇಲೆ ದಾಳಿ ಮಾಡಬೇಕಿರುವುದರಿಂದ ಜನತೆ 22 ಹಳ್ಳಿಗಳಿಂದ ಸ್ಥಳಾಂತರಗೊಳ್ಳುವುದು ಅಗತ್ಯವಾಗಿದೆ ಎಂದು ಇಸ್ರೇಲ್ ಸೇನೆ ಶನಿವಾರ ಹೇಳಿದೆ. ಸೂಚನೆ ನೀಡಿದ ಬಳಿಕ ಇಸ್ರೇಲ್ ಈ ಗ್ರಾಮಗಳ ಮೇಲೆ 10 ನಿಮಿಷಗಳಲ್ಲಿ 3 ಬಾರಿ ವೈಮಾನಿಕ ದಾಳಿ ನಡೆಸಿದೆ.

ಹೃದಯಾಘಾತ ಭೀತಿ ತಂದ ಕರೋನಾ

ದೆಹಲಿ: ಮೂರು ವರ್ಷಗಳ ಹಿಂದೆ ವಿಶ್ವದೆಲ್ಲೆಡೆ ಕೋಟ್ಯಂತರ ಜನರ ಜೀವತೆಗೆದ ಕೋವಿಡ್-19 ಭೀತಿ ಇನ್ನೂ ಪೂರ್ಣ ನಿವಾರಣೆ ಆಗಿಲ್ಲ. ಒಂದಲ್ಲ ಒಂದು ರೀತಿ ಕರೋನಾ ವೈರಸ್ ಜಗತ್ತನ್ನು ಕಾಡುತ್ತಲೇ ಇದೆ. ಸದ್ಯ ಹೃದಯ ಆಘಾತದ ಅಪಾಯದ ರೂಪದಲ್ಲಿ ಭೀತಿ ಹುಟ್ಟಿಸಿದೆ. ಇತ್ತೀಚಿನ ಕರೋನಾ ಪರಿಣಾಮಗಳ ಅಧ್ಯಯನ ಪ್ರಕಾರ, ಕೋವಿಡ್-19ರ ಮೊದಲ ಅಲೆಯಲ್ಲಿ ತೀವ್ರ ಸೋಂಕಿಗೆ ಒಳಗಾಗಿ ಚೇತರಿಸಿಕೊಂಡವರು ಹೃದಯಾಘಾತ ಮತ್ತು ಪಾರ್ಶ್ವವಾಯು ಅಪಾಯಕ್ಕೆ ತುತ್ತಾಗುವುದು ಉಳಿದವರಿಗಿಂತಲೂ ಅಪಾ ಯ 2 ಪಟ್ಟು ಹೆಚ್ಚು ಇದೆ. ಅಧ್ಯಯನ ವರದಿ ಜೀವಶಾಸ್ತ್ರದ ಜರ್ನಲ್‌ನಲ್ಲಿ ಈ ವಾರ ಪ್ರಕಟವಾಗಿದೆ. ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಹೆಲ್ತ್ ಕೂಡಾ ಈ ಕುರಿತು ಮಾಹಿತಿ ನೀಡಿದ್ದು, ಈ ಬಗೆಯಲ್ಲಿ ಹೆಚ್ಚಿನ ಮಟ್ಟದ ಹೃದಯಾಘಾತ, ಪಾರ್ಶ್ವವಾಯುಗೆ ತುತ್ತಾಗುವ ಅಪಾಯ 3 ವರ್ಷಗಳವರೆಗೂ ಇರುತ್ತದೆ ಎಂದು ಹೇಳಿದೆ. ನಿಯಮಿತವಾಗಿ ವೈದ್ಯರ ತಪಾಸಣೆಯೂ ಅಗತ್ಯವಾಗಿದೆ' ಎಂದು ಅಧ್ಯಯನ ತಂಡದ ಮುಖ್ಯಸ್ಥರಾದ ಡಾ.ಹೂಮನ್ ಅಲ್ಲಾಯಿ ಹೇಳಿದ್ದಾರೆ.

ರತನ್ ಭಾರತದ ಹೆಮ್ಮೆ ಪುತ್ರ: ಇಸ್ರೇಲ್

ದೆಹಲಿ: ಹಿರಿಯ ಕೈಗಾರಿಕೋದ್ಯಮಿಯಾಗಿದ್ದ ರತನ್ ಟಾಟಾ ಭಾರತದ ಹೆಮ್ಮೆಯ ಪುತ್ರರಾಗಿದ್ದರು. ಇಸ್ರೇಲ್-ಭಾರತದ ನಡುವಿನ ಸ್ನೇಹಕ್ಕೆ ದೊಡ್ಡ ಕೊಡುಗೆ ನೀಡಿದ್ದರು ಎಂದು ಬಣ್ಣಿಸಿರುವ ಇಸ್ರೇಲ್ ಪ್ರಧಾನಿ ಬೆಂಜ ಮಿನ್ ನೆತನ್ಯಾಹು, ಟಾಟಾ ಅವರ ನಿಧನಕ್ಕೆ ಸಂತಾಪ ಸೂಚಿಸಿದ್ದಾರೆ.

ಉಭಯ ರಾಷ್ಟ್ರಗಳ ಸಂಬಂಧ ವೃದ್ಧಿಗೆ ರತನ್ ಟಾಟಾ ನೀಡಿದ ಕೊಡುಗೆಗಳನ್ನು ನೆತನ್ಯಾಹು ತಮ್ಮ ಸಂತಾಪ ಸಂದೇಶದಲ್ಲಿ ಉಲ್ಲೇಖಿಸಿ ದ್ದಾರೆ. 'ಮಿತ್ರ, ಪ್ರಧಾನಿ ನರೇಂದ್ರ ಮೋದಿ, ರತನ್ ಟಾಟಾ ಅವರ ನಿಧನಕ್ಕೆ ನಾನು ಮತ್ತು ಇಸ್ರೇಲ್ ಜನತೆ ಶೋಕ ವ್ಯಕ್ತಪಡಿಸುತ್ತಿದ್ದೇವೆ. ಟಾಟಾ ಅವರ ಕುಟುಂಬಕ್ಕೆ ನಮ್ಮ ಸಂತಾಪ ತಿಳಿಸಿ' ಎಂದು ಮನವಿ ಮಾಡಿದ್ದಾರೆ. ಸಿಂಗಾಪುರ ಪ್ರಧಾನಿ ಲಾರೆನ್ಸ್ ವಾಂಗ್, 'ರತನ್ ಟಾಟಾ ನಮ್ಮ ದೇಶದ ನಿಜ ವಾದ ಗೆಳೆಯ' ಎಂದು ಬಣ್ಣಿಸಿದ್ದರೆ, ಫ್ರಾನ್ಸ್ ಅಧ್ಯಕ್ಷ ಎಮ್ಯಾ ನುವೆಲ್ ಮ್ಯಾಕ್ರಾನ್, 'ರತನ್ ಟಾಟಾ ಅವರು ನಾವೀನ್ಯ ಮತ್ತು ಕೈಗಾರಿಕೆಗಳ ಉತ್ಪಾದನೆಗೆ ನೀಡಿದ ಕೊಡುಗೆಗಳನ್ನು ಶ್ಲಾಘಿಸಿದ್ದಾರೆ. ಭಾರತ-ಫ್ರಾನ್ಸ್ ನಡುವಿನ ಸಂಬಂಧ ಬಲಪಡಿ ಸುವಲ್ಲಿ ರತನ್ ಟಾಟಾ ಪಾತ್ರ ಸ್ಮರಣಾರ್ಹ ಎಂದಿದ್ದಾರೆ.

ಮಾಜಿ ಸಚಿವ ಸಿದ್ದಿಕಿ ಹತ್ಯೆ: 3 ಸೆರೆ

ಮುಂಬೈ: ಮಹಾರಾಷ್ಟ್ರದ ಮಾಜಿ ಸಚಿವ, ನ್ಯಾಷನಲಿಸ್ಟ್ ಕಾಂಗ್ರೆಸ್ ಪಕ್ಷದ ಮುಖಂಡ ಬಾಬಾ ಸಿದ್ದಿಕಿ(66), ಬಾಂದ್ರಾ ಪ್ರದೇಶದಲ್ಲಿ ಶನಿವಾರ ರಾತ್ರಿ ಮೂವರು ದುಷ್ಕರ್ಮಿಗಳ ಗುಂಡಿಗೆ ಬಲಿಯಾಗಿ ದ್ದಾರೆ. ಲಾರೆನ್ಸ್ ಬಿಷ್ಣೋಯಿ ಗ್ಯಾಂಗ್ ಹತ್ಯೆಯ ಹೊಣೆಯನ್ನು ಹೊತ್ತುಕೊಂಡಿದೆ.

ಸಿದ್ದಿಕಿ ಹತ್ಯೆ ಪ್ರಕರಣದಲ್ಲಿ ಕ್ಷಿಪ್ರಗತಿಯಲ್ಲಿ ಕಾರ್ಯಾಚರಣೆ ನಡೆಸಿದ ಮುಂಬೈ ಪೊಲೀಸರು, ಲಾರೆನ್ಸ್ ಬಿಷ್ಣೋಯಿ ಗ್ಯಾಂಗ್‌ನ ಸದಸ್ಯರಾದ ಹರ್ಯಾಣದ ಕರ್ನೈಲ್ ಸಿಂಗ್, ಉತ್ತರ ಪ್ರದೇಶದ ಧರ್ಮರಾಜ್ ಕಶ್ಯಪ್ ಸೇರಿದಂತೆ ಮೂವರನ್ನು ಬಂಧಿಸಿದ್ದಾರೆ. 4ನೇ ಆರೋಪಿಯನ್ನು ಗುರುತಿಸಲಾಗಿದೆ. ಸದ್ಯದಲ್ಲೇ ಬಂಧಿಸುವುದಾಗಿ ಪೊಲೀಸರು ತಿಳಿಸಿದ್ದಾರೆ. ಪ್ರಕರಣದ ತನಿಖೆಗೆ ಮುಂಬೈ ಪೊಲೀಸರ 4 ವಿಶೇಷ ತಂಡಗಳನ್ನು ರಚಿಸಲಾಗಿದೆ. ಹಂತಕರು 9.9 ಎಂಎಂ ಪಿಸ್ತೂಲ್‌ಗಳಿಂದ 6 ಗುಂಡುಗಳನ್ನು ಹಾರಿಸಿದ್ದಾರೆ. ಪಿಸ್ತೂಲ್‌ಗಳನ್ನು ವಶಪಡಿಸಿಕೊಂಡಿರುವುದಾಗಿ ಪೊಲೀಸರು ತಿಳಿಸಿದ್ದಾರೆ. ಎನ್‌ಸಿಪಿ(ಅಜಿತ್ ಬಣ) ಪ್ರಮುಖ ನಾಯಕರಲ್ಲೊಬ್ಬರಾದ ಸಿದ್ದಿಕಿ, ಬಾಂದ್ರಾ ಪಶ್ಚಿಮ ಕ್ಷೇತ್ರದಿಂದ 3 ಬಾರಿ ಶಾಸಕರಾಗಿ, ಸಚಿವರೂ ಆಗಿದ್ದರು. ಸಿದ್ದಿಕಿ ಅವರು ಬಾಂದ್ರಾದಲ್ಲಿ ತಮ್ಮ ಮಗನ ಕಚೇರಿಗೆ ತೆರಳಿದ್ದಾಗ ಹಂತಕರ ತಂಡ ಆರು ಗುಂಡುಗಳನ್ನು ಹಾರಿಸಿದೆ. ಗುಂಡುಗಳು ನೇರ ಎದೆಗೇ ಹೊಕ್ಕಿದ್ದರಿಂದ ಸಿದ್ದಿಕಿ ಸ್ಥಳದಲ್ಲೇ ಸಾವಿಗೀಡಾಗಿದ್ದಾರೆ. ಹಾಗಿದ್ದೂ ಪುತ್ರ ಮತ್ತು ಕಚೇರಿ ಸಿಬ್ಬಂದಿ ತಕ್ಷಣವೇ ಸಿದ್ದಿಕಿ ಅವರನ್ನು ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ಆದರೆ, ವೈದ್ಯರು, ಅದಾಗಲೇ ಸಿದ್ದಿಕಿ ಕೊನೆಯುಸಿರೆಳೆದಿದ್ದಾರೆ ಎಂದು ತಿಳಿಸಿದ್ದಾರೆ.

ಬಾಲಿವುಡ್ ನಟ ಸಲ್ಮಾನ್ ಖಾನ್‌ಗೆ ಸಿದ್ದಿಕಿ ಆಪ್ತರಾಗಿದ್ದರು. ಸಲ್ಮಾನ್ ಖಾನ್‌ಗೆ ಜೀವ ಬೆದರಿಕೆ ಒಡ್ಡಿರುವ ಬಿಷ್ಣೋಯ್ ಗ್ಯಾಂಗ್, ಸಿದ್ದಿಕಿ ಹತ್ಯೆಯನ್ನೂ ಭಾಗಿಯಾಗಿದೆ ಎಂಬುದು ಉಲ್ಲೇಖಾರ್ಹ. ಸಿದ್ದಿಕ್ ಅವರಿಗೆ 15 ದಿನಗಳ ಹಿಂದೆ ಜೀವ ಬೆದರಿಕೆ ಕರೆ ಬಂದಿತ್ತು. ಹಾಗಾಗಿ, ರಾಜ್ಯ ಸರಕಾರದಿಂದ ಅವರಿಗೆ 'ವೈ' ಶ್ರೇಣಿ ಭದ್ರತೆ ನೀಡಲಾಗಿತ್ತು ಎಂದು ಮೂಲಗಳು ತಿಳಿಸಿವೆ.

ದಲಿತರು, ದುರ್ಬಲ ವರ್ಗಗಳ ಜತೆ ಹಿಂದೂ ಸಮಾಜ ತೊಡಗಿಸಿಕೊಳ್ಳಲಿ

ನಾಗಪುರ: ಹಿಂದೂ ಸಮಾಜ ಜಾತಿ ಭೇದ ಬದಿಗೊತ್ತಬೇಕು. ದಲಿತರು ಮತ್ತು ದುರ್ಬಲ ವರ್ಗಗಳ ಜತೆ ಪ್ರೀತಿಯಿಂದ ತೊಡಗಿಸಿಕೊಳ್ಳ ಬೇಕಿದೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ(ಆರ್‌ಎಸ್‌ಎಸ್) ಸರಸಂಘಚಾಲಕ್ ಮೋಹನ್ ಭಾಗವತ್ ಹೇಳಿದ್ದಾರೆ. ಆರ್‌ಎಸ್‌ಎಸ್ ಪ್ರಧಾನ ಕಚೇರಿಯಲ್ಲಿ ವಾರ್ಷಿಕ ವಿಜಯದಶಮಿ ಭಾಷಣದಲ್ಲಿ ಅವರು, ರಾಷ್ಟ್ರವನ್ನು ಜಾತಿ-ಸಮುದಾಯದ ಆಧಾರ ವಿಭಜಿಸಲು ಆಳವಾದ ಹುನ್ನಾರ ನಡೆ ಯುತ್ತಿದೆ. ಪ್ರಸ್ತುತದ ವೈವಿಧ್ಯ ಸ್ಥಿತಿಯು ಸಂತರು ಮತ್ತು ದೇವತೆಗಳ ನಡುವೆಯೂ ವಿಭಜನೆಗೆ ಕಾರಣವಾಗಿದೆ. ಕೆಲವು ರಾಜಕೀಯ ಪಕ್ಷಗಳು ಮತ ಗಳಿಕೆಯ ಹಿತಾ ಸಕ್ತಿಗಾಗಿ ಇಂಥ ಕೃತ್ಯದಲ್ಲಿ ಭಾಗಿಯಾಗಿವೆ ಎಂದು ಕಳವಳ ವ್ಯಕ್ತಪಡಿಸಿದರು. ವಾಲ್ಮೀಕಿ ಕಾಲೋನಿಗಳಲ್ಲಷ್ಟೇ ಏಕೆ ವಾಲ್ಮೀಕಿ ಜಯಂತಿ ಆಚರಿಸಬೇಕು ಎಂದು ಪ್ರಶ್ನಿಸಿದ ಭಾಗವತ್, ರಾಮಾಯಣ ಬರೆದ ವಾಲ್ಮೀಕಿ ಇಡೀ ಹಿಂದೂ ಸಮಾಜಕ್ಕೆ ಸಲ್ಲುವಂತೆ ದೊಡ್ಡ ಪರಂಪರೆಯನ್ನು ಸೃಷ್ಟಿಸಿಕೊಟ್ಟವರು. ಹಿಂದೂಗಳು ವಾಲ್ಮೀಕಿ ಮತ್ತು ರವಿದಾಸರು ಮೊದಲಾದವರ ಜಯಂತಿ ಯನ್ನು ಒಟ್ಟುಗೂಡಿ ಆಚರಿಸಬೇಕು ಎಂದರು. ಈ ಸಂದೇಶವನ್ನು ಸಮಾಜದಲ್ಲಿ ಪಸರಿಸುವ ಗುರಿ ಆರ್‌ಎಸ್‌ಎಸ್‌ನದ್ದಾಗಿದೆ ಎಂದರು.

ಸಾಮರಸ್ಯ-ಸೌಹಾರ್ದ

ಸಾಂಕೇತಿಕವಾಗಿ ನಡೆಯುವ ಕಾರ್ಯಕ್ರಮಗಳಷ್ಟೇ ಆರೋಗ್ಯಕರ ಸಮಾಜಕ್ಕೆ ಸಾಲದು, ಸಾಮರಸ್ಯ-ಸೌಹಾರ್ದ ಮೂಲವಾಗಿರುತ್ತದೆ. ಸಮಾಜದ ವಿವಿಧ ವಿಭಾಗಗಳಲ್ಲಿ ವ್ಯಕ್ತಿಗಳು ಮತ್ತು ಕುಟುಂಬಗಳ ನಡುವೆ ನಿಜವಾದ ಸ್ನೇಹ ಅಗತ್ಯ. ಭಾಷೆಗಳು, ಸಂಸ್ಕೃತಿ, ಆಹಾರ ಪದ್ಧತಿ ವೈವಿಧ್ಯಮಯ ಇರಬಹುದು. ಆದರೆ ವ್ಯಕ್ತಿಗಳು ಮತ್ತು ಕುಟುಂಬಗಳ ನಡುವಿನ ಸ್ನೇಹ ಸಮಾಜದಲ್ಲಿ ಸಾಮರಸ್ಯ ತರುತ್ತದೆ ಎಂದು ಭಾಗವತ್ ಪ್ರತಿಪಾದಿಸಿದರು.

ಸಮಾಚಾರ ಸಣ್ಣದಲ್ಲ

ಶ್ರೀಕಾಳಿಕಾಂಬ ದೇವಿಗೆ ವಿಶೇಷ ಪೂಜೆ

ಚಿಕ್ಕಮಗಳೂರು: ನವರಾತ್ರಿ ಕೊನೆಯ ದಿನವಾದ ವಿಜಯದಶಮಿ ಅಂಗವಾಗಿಶ್ರೀ ಕಾಳಿಕಾಂಬ ಸೇವಾ ಸಮಿತಿ ವತಿಯಿಂದ ರಾಮನಹಳ್ಳಿ ಸಮೀಪದ ರತ್ನಗಿರಿ ಬೋರೆಯಲ್ಲಿ ಶ್ರೀಕಾಳಿಕಾಂಬ ದೇವಿಯ 32ನೇ ವರ್ಷದ ಶರವನ್ನರಾತ್ರಿ ಪೂಜಾ ಮಹೋತ್ಸವ ವಿಶೇಷಪೂಜೆ ಹಾಗೂ ವಿವಿಧ ಹೋಮ ನೆರವೇರಿಸಿ ಆಚರಿಸಲಾಯಿತು. ಬೆಳಗ್ಗೆ 6.30ಕ್ಕೆ ಧ್ವಜಾರೋಹಣ, ದೇವತಾ ಪ್ರಾರ್ಥನೆ, ಸಂಕಲ್ಪ ಗಣಪತಿ ಪೂಜೆ, ಪುಣ್ಯಾಹ, ದೇವನಾಂದಿ, ವೃತ್ತಿಗ್ರಹಣ, ಕಳಸ ಸ್ಥಾಪನೆ, ವಿವಿಧ ಹೋಮಗಳು ಜರುಗಿದವು. ಮಧ್ಯಾಹ್ನ 12 ಗಂಟೆಗೆ ಪೂರ್ಣಾಹುತಿ, ಅಷ್ಟಾವ ದಾನ ಸೇವೆ, ಶಮಿಪೂಜೆ, ಪುಷ್ಪಾಲಂಕೃತ ಉಯ್ಯಾಲೆ ಉತ್ಸವ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿ ಯೋಗ ಹಾಗೂ ಸಾರ್ವಜನಿಕ ಅನ್ನಸಂತರ್ಪಣೆ ನಡೆಯಿತು. ಪೂಜಾ ವಿಧಿವಿಧಾನ ಕೈಂಕರ್ಯಗಳನ್ನು ಪುರೋಹಿತ ಅರುಣ್‌ಶರ್ಮ ಮತ್ತು ಪೂರ್ವಾಚಾರ್ ಇವರ ಸಹಯೋಗದಲ್ಲಿ ಶ್ರದ್ಧಾಭಕ್ತಿಯಿಂದ ನಡೆದವು. ಈ ವೇಳೆ ಮಾತನಾಡಿ ಶ್ರೀಕಾಳಿಕಾಂಬ ಸೇವಾ ಸಮಿತಿ ಅಧ್ಯಕ್ಷ ಬಿ.ಚಂದ್ರಶೇಖರ್ ಮಾತನಾಡಿದರು. ಈ ಸಂದರ್ಭದಲ್ಲಿ ಸಮಿತಿಯ ಗೌರವಾಧ್ಯಕ್ಷ ಕೆ.ಆರ್. ಭೀಷ್ಮಾಚಾರ್, ಉಪಾಧ್ಯಕ್ಷ ಬಿ.ಜಗದೀಶ್, ರುದ್ರಯ್ಯಾಚಾರ್, ಕಾರ್ಯದರ್ಶಿ ಎಂ.ಕೆ.ಉಮೇಶ್, ಸಹಕಾರ್ಯದರ್ಶಿ ಆರ್.ದಕ್ಷಿಣಾಮೂರ್ತಿ, ಖಜಾಂಚಿ ಸಿ.ಎಸ್.ಅರುಣ್, ನಿರ್ದೇಶಕರುಗಳಾದ ಹೆಚ್.ಆರ್. ಉಮಾಶಂಕರ್, ಬಿ.ಪಿ.ರತೀಶ್, ಸಿ.ಆರ್.ಗಂಗಾಧರ್, ಎಂ.ಜೆ. ಚಂದ್ರಶೇಖರ್, ಸಿ.ಜೆ.ಬಾಲಕೃಷ್ಣ, ಕೆ.ಬಿ.ಅಶೋಕಚಾರ್, ಮಲ್ಲಿಕಾರ್ಜುನ್, ಕೆ.ಕೆ.ಧರ್ಮಾಚಾರ್ ಹಾಗೂ ಭಕ್ತಾಧಿಗ ಳು ಹಾಜರಿದ್ದರು.

ರಸ್ತೆ ದುರಸ್ತಿಗೆ ಗ್ರಾಮಸ್ಥರ ಆಗ್ರಹ

ಮೂಡಿಗೆರೆ: ತಾಲೂಕಿನ ಹೊಯ್ಸಳಲು ಗ್ರಾಮದಿಂದ ಜನ್ನಾಪುರಕ್ಕೆ ತೆರಳುವ 4 ಕಿ. ಮೀ ರಸ್ತೆ ಗುಂಡಿ ಗೊಟರುಗಳಿಂದ ಕೂಡಿದ್ದು, ರಸ್ತೆ ಸಂಪೂರ್ಣ ಹಾಳಾಗಿದೆ. ಇದರಿಂದ ವಾಹನಗಳು ಪ್ರತಿನಿತ್ಯ ಜಖಂಗೊಳ್ಳುತ್ತಿದ್ದು, ರಸ್ತೆ ಸಂಚಾರಕ್ಕೆ ತೊಂದರೆ ಎದುರಾಗಿದೆ. ಗ್ರಾಮದಲ್ಲಿ ಸುಮಾರು ಹೊಯ್ಸಳಲು ಗ್ರಾಮದಲ್ಲಿ 300ಕ್ಕೂ ಅಧಿಕ ಕುಟುಂಬವಿದೆ. ಇಲ್ಲಿಗೆ ಪ್ರತಿನಿತ್ಯ ಕೆಎಸ್‌ಆರ್ ಟಿಸಿ ಬಸ್ ಬರುತ್ತಿದ್ದು, ರಸ್ತೆ ಸಮಸ್ಯೆಯಿಂದ ಬಸ್ ಪ್ರಯಾಣಿಸಲು ಕಷ್ಟವಾಗಿದ್ದು, ಸಾರ್ವಜನಿಕರು ರಸ್ತೆ ದುರಸ್ಥಿಗೆ ಆಗ್ರಹಿಸಿದ್ದಾರೆ.

ಸೀತಾರಾಮ ದೇವಸ್ಥಾನ ಭಜನೆಯ ಸಂಭ್ರಮ

ಕೊಟ್ಟಿಗೆಹಾರ: ಇಲ್ಲಿನ ಸೀತಾರಾಮ ದೇವಸ್ಥಾನದಲ್ಲಿ ನವರಾತ್ರಿ ಹಬ್ಬದ ಕೊನೆಯ ದಿನ ಸಂಭ್ರಮದ ಭಜನೆ ನಡೆಯಿತು. ವಿಶೇಷ ರಂಗೋಲಿ ಜನರ ಗಮನ ಸೆಳೆಯಿತು. ಸಂಜೆ ಮಳೆಯ ನಡುವೆಯೂ ಭಕ್ತರು ನಗರ ಭಜನೆ ನಡೆಸಿದರು. ಭಜನಾ ಕುಣಿತ,ಕೊಟ್ಟಿಗೆಹಾರದ ರಾಜಬೀದಿಯಲ್ಲಿ ಡೊಳ್ಳು ಕುಣಿತ ಜೊತೆಗೆ ಭಕ್ತರು ಮೆರವಣಿಗೆ ನಡೆಸಿದರು. ರಸ್ತೆಯಲ್ಲಿ ಆಕರ್ಷಕ ನೃತ್ಯ ಮನಸೂರೆಗೊಂಡಿತು. ಬಳಿಕ ಅತ್ತಿಗೆರೆಯ ದೇವಸ್ಥಾನ ತನಕ ಮೆರವಣಿಗೆ ಸಾಗಿ ಸೋಮೇಶ್ವರ ದರ್ಶನ ಪಡೆದರು.ಸಂಜೆ ಕೆಲ್ಲೂರು ಕೊಲ್ಲಿ ಭಜನಾ ಮಂಡಳಿಯಿಂದ ಕುಣಿತ, ನಿಸಾನಿ ಮೇಳದೊಂದಿಗೆ ದೇವಸ್ಥಾನಕ್ಕೆ ತೆರಳಿ ಮಹಾ ಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ,ಲಘು ಉಪಾಹಾರದೊಂದಿಗೆ ನವರಾತ್ರಿ ಉತ್ಸವಕ್ಕೆ ಅಂತಿಮ ತೆರೆ ಎಳೆಯಲಾಯಿತು. ಬಣಕಲ್ ನಲ್ಲಿ ಇದೇ ಮೊದಲ ಬಾರಿಗೆ ದಸರಾ ಉತ್ಸವ ನಡೆಸಲಾಯಿತು. ಶ್ರೀಮಹಾಮ್ಮಾಯಿ ದೇವಸ್ಥಾನದಲ್ಲಿ ಸಾವರ್ಕರ್ ಪ್ರತಿಷ್ಠಾನದ ವತಿಯಿಂದ ಪ್ರತಿಷ್ಠಾಪಿಸಲಾಗಿದ್ದ ಶಾರದಾ ಮೂರ್ತಿಯನ್ನು ಶನಿವಾರ ನವರಾತ್ರಿ ಉತ್ಸವದ ಕೊನೆಯ ದಿನದಂದು ವಿವಿಧ ವಾದ್ಯ ತಂಡಗಳ ಜೊತೆಗೆ ಕುಣಿತ ಭಜನೆಯೊಂದಿಗೆ ಭವ್ಯ ಮೆರವಣಿಗೆ ನಡೆಸಲಾಯಿತು.

ಮೂರ್ತಿ ವಿಸರ್ಜನಾ ಮಹೋತ್ಸವ ಸಂಪನ್ನ

ಚಿಕ್ಕಮಗಳೂರು: ನವರಾತ್ರಿ ನಾಡಹಬ್ಬದ ಪ್ರಯುಕ್ತ ನಗರದ ವಿಜಯಪುರದಲ್ಲಿ ಪ್ರತಿಷ್ಠಾಪಿಸಲಾಗಿದ್ದ ಶ್ರೀ ದುರ್ಗಾದೇವಿ ವಿಗ್ರಹ ಮೂರ್ತಿಯನ್ನು ಪ್ರಮುಖ ರಾಜಾಬೀದಿಗಳಲ್ಲಿ ಮೆರವಣಿಗೆ ನಡೆಸಿ ಇಂದಾವರ ಕೆರೆಗೆ ವಿಸರ್ಜಿಸಲಾಯಿತು. ನವರಾತ್ರಿ ಅಂತಿಮದಿನ ವಿಜಯದಶಮಿಯಂದು ಸಂಜೆ 6 ಗಂಟೆಗೆ ಬೃಹತ್ ದೀಪಾಲಂಕಾರದ ಮಂಟಪದಲ್ಲಿ ದೇವಿಯನ್ನು ಕುಳ್ಳಿರಿಸಿ ವಾದ್ಯಗಳೊಂದಿಗೆ ರಾಜಾಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು. ಶ್ರೀದುರ್ಗಾದೇವಿ ಮೂರ್ತಿ ಮನೆಗಳ ಸಮೀಪ ಧಾವಿಸುತ್ತಿದ್ದಂತೆ ಸ್ಥಳೀಯ ನಿವಾಸಿಗಳು ಕುಟುಂಬ ಸಮೇತ ಪೂಜೆ ಸಲ್ಲಿಸಿದರು. ಹೂವಿನ ಹಾರಗಳನ್ನು ದೇವಿಗೆ ಅರ್ಪಿಸಿ ಭಕ್ತಿ ಪರಾವಶರಾದರು.

{ ಸಿದ್ದರಾಮಯ್ಯ } ಮುಖ್ಯಮಂತ್ರಿ

ಕೇಂದ್ರದಿಂದ ರಾಜ್ಯಕ್ಕೆ ಕೇವಲ 6498 ಕೋಟಿ ರು.ಗಳ ತೆರಿಗೆ ಪಾಲು ಬಂದಿದ್ದು, ತೆರಿಗೆ ಪಾಲಿನಲ್ಲಿ ರಾಜ್ಯಕ್ಕೆ ಅನ್ಯಾಯವಾಗಿದೆ. 31,000 ಕೋಟಿಗೂ ಹೆಚ್ಚಾಗಿ ಉತ್ತರ ಪ್ರದೇಶ ರಾಜ್ಯಕ್ಕೆ ನೀಡಲಾಗಿದೆ. ಕಳೆದ ಐದು ವರ್ಷಗಳಲ್ಲಿ ತೆರಿಗೆ ಹಂಚಿಕೆಯಲ್ಲಿ ರಾಜ್ಯಕ್ಕೆ ಸುಮಾರು 60 ಸಾವಿರ ಕೋಟಿ ರು. ಅನ್ಯಾಯವಾಗಿದೆ.

ಖಾಲಿ ಹುದ್ದೆಗಳ ನೇಮಕಕ್ಕೆ ದೇಶ ವ್ಯಾಪಿ ಆಂದೋಲನ

ಬ್ಯಾಂಕ್‌ಗಳಲ್ಲಿ ಉದ್ಯೋಗಿಗಳ ನೇಮಕ ನಡೆಯುತ್ತಿಲ್ಲ | ಎಐಬಿಇಎ ಅಧ್ಯಕ್ಷ

ಮಂಗಳೂರು: ದೇಶಾದ್ಯಂತ ಬ್ಯಾಂಕ್‌ಗಳಲ್ಲಿ ಖಾಲಿ ಇರುವ ಹುದ್ದೆಗಳ ನೇಮಕಗೊಳಿಸುವಂತೆ ಆಗ್ರಹಿಸಿ ಮುಷ್ಕರ ಸೇರಿದಂತೆ ದೇಶಾದ್ಯಂತ ಆಂದೋಲನ ನಡೆಸಲು ಎಐಬಿಇಎ ನಿರ್ಧರಿಸಿದೆ ಎಂದು ಅಖಿಲ ಭಾರತ ಬ್ಯಾಂಕ್ ಉದ್ಯೋಗಿಗಳ ಸಂಘ(ಎಐಬಿಇಎ)ದ ಅಧ್ಯಕ್ಷ ಸಿ.ಎಚ್. ವೆಂಕಟಾಚಲಂ ತಿಳಿಸಿದ್ದಾರೆ.

ಅಖಿಲ ಭಾರತ ಕರ್ನಾಟಕ ಬ್ಯಾಂಕ್ ಉದ್ಯೋಗಿಗಳ ಸಂಘದ (ಎಐಕೆಬಿಇಎ) ವಜ್ರ ಮಹೋತ್ಸವ ಸಮಾರಂಭಕ್ಕೆ ಭಾನುವಾರ ಆಗಮಿಸಿದ್ದ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಬ್ಯಾಂಕ್‌ಗಳು ಜನರ ಸೇವೆಗಾಗಿಯೇ ಇವೆ. ಈ ಉದ್ದೇಶಕ್ಕಾಗಿ ಬ್ಯಾಂಕ್‌ಗಳಲ್ಲಿ ಸಾಕಷ್ಟು ಸಿಬ್ಬಂದಿ ಇರಬೇಕು. ಆದರೆ ಕೆಲವು ವರ್ಷಗಳಿಂದ ಬ್ಯಾಂಕ್‌ಗಳು ಅಗತ್ಯದ ಉದ್ಯೋಗಿಗಳನ್ನು ನೇಮಕ ಮಾಡಿಕೊಳ್ಳುತ್ತಿಲ್ಲ ಎಂದು ಹೇಳಿದರು.

ಬ್ಯಾಂಕ್‌ಗಳಲ್ಲಿ ಖಾಲಿ ಹುದ್ದೆಗಳಿಗೆ ನೇಮಕಗೊಳಿಸುವಂತೆ ಒತ್ತಾಯಿಸಿ ದೇಶಾವ್ಯಾಪಿ ಆಂದೋಲನ ಕೈಗೊಳ್ಳುವ ನಿಟ್ಟಿನಲ್ಲಿ ಮುಂದಿನ ತಿಂಗಳು ಬ್ಯಾಂಕ್ ನೌಕರರ ಸಮಾವೇಶ ನಡೆಯಲಿದ್ದು, ಅಲ್ಲಿ ಮುಂದಿನ ಕಾರ್ಯತಂತ್ರಗಳನ್ನು ರೂಪಿಸಲಾ ಗುವುದು ಎಂದು ಅವರು ಹೇಳಿದರು.

ಕಾರ್ಪೊರೇಟ್ ಕಂಪೆನಿಗಳಿಗೆ ರಿಯಾಯಿತಿಗಳನ್ನು ನಿಲ್ಲಿಸಿ: ಬ್ಯಾಂಕ್‌ಗಳಲ್ಲಿ ಕೆಟ್ಟ ಸಾಲಗಳು, ಕಾರ್ಯನಿರ್ವಹಿಸದ ಆಸ್ತಿಗಳು ಇತ್ತೀಚಿನ ವರ್ಷಗಳಲ್ಲಿ ಹೆಚ್ಚುತ್ತಿವೆ. ಡೀಫಾಲ್ಟ್ ಆಗಿರುವ ಸಾಲಗಳಲ್ಲಿ ಹೆಚ್ಚಿನವು ದೊಡ್ಡ ಖಾಸಗಿ ಕಾರ್ಪೊರೇಟ್ ಕಂಪೆನಿಗಳಿಂದ ಬರ ಬೇಕಾಗಿರುವ ಸಾಲಗಳಾಗಿವೆ. ಆದರೆ ಸಾಲ ವಸೂಲಿ ಮಾಡಲು ಇಂತಹ ಸುಸ್ತಿದಾರರ ಮೇಲೆ ಕಠಿಣ ಕ್ರಮ ಕೈಗೊಳ್ಳುವ ಬದಲು ಅವರಿಗೆ ಭಾರೀ ರಿಯಾಯಿತಿ ನೀಡಲಾಗುತ್ತಿದೆ.

ಸುದ್ದಿಗೋಷ್ಠಿಯಲ್ಲಿ ಎಐಬಿಇಎ ಅಧ್ಯಕ್ಷ ಸಿ.ಎಚ್.ವೆಂಕಟಾಚಲಂ ಅವರು ಮಾತನಾಡಿದರು.

> ಬ್ಯಾಂಕ್‌ಗಳಲ್ಲಿ ಸಿಬ್ಬಂದಿ ನೇಮಕಾತಿ ನಿಧಾನಗತಿಯಲ್ಲಿ ಸಾಗಿದೆ. ಅಧೀನ ನೌಕರರ ನೇಮಕಾತಿಯನ್ನು ಸಂಪೂರ್ಣವಾಗಿ ನಿಲ್ಲಿಸಲಾಗಿದೆ. ಬ್ಯಾಂಕ್‌ಗಳಲ್ಲಿ ಲಕ್ಷಾಂತರ ಹುದ್ದೆಗಳು ಭರ್ತಿಯಾಗದೆ ಉಳಿದಿವೆ. ಇದು ಬ್ಯಾಂಕ್‌ಗಳಲ್ಲಿನ ಪರಿಣಾಮಕಾರಿ ಮತ್ತು ತೃಪ್ತಿದಾಯಕ ಗ್ರಾಹಕ ಸೇವೆಯ ಮೇಲೆ ಪರಿಣಾಮ ಬೀರುತ್ತಿದೆ. ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಬದಲು, ಬ್ಯಾಂಕ್‌ಗಳು ಈ ಖಾಯಂ ಉದ್ಯೋಗಗಳನ್ನು ತಾತ್ಕಾಲಿಕ ಮತ್ತು ಗುತ್ತಿಗೆ ಆಧಾರದ ಮೇಲೆ ಹೊರಗುತ್ತಿಗೆ ಮಾಡಲು ಪ್ರಯತ್ನಿಸುತ್ತಿವೆ. ಇದನ್ನು ನಾವು ಬಲವಾಗಿ ವಿರೋಧಿಸುತ್ತೇವೆ.
>
> **-ಸಿ.ಎಚ್.ವೆಂಕಟಾಚಲಂ,** ಎಐಬಿಇಎ ಅಧ್ಯಕ್ಷ

ಕಾರ್ಪೊರೇಟ್ ಕಂಪೆನಿಗಳಿಗೆ ನೀಡಿದ್ದ ಅಪಾರ ಪ್ರಮಾಣದ ಸಾಲ ಮನ್ನಾ ಮಾಡಲಾಗುತ್ತಿದೆ. ಸಣ್ಣ ಪ್ರಮಾಣದಲ್ಲಿ ಮನೆ ಕಟ್ಟಲು, ವಾಹನ, ಕೃಷಿ, ವ್ಯಾಪಾರ ಮತ್ತಿತರ ಉದ್ದೇಶಗಳಿಗೆ ಬ್ಯಾಂಕ್‌ಗಳಿಂದ ಸಾಲ ಪಡೆಯುವ ಜನಸಾಮಾನ್ಯರ ಸಾಲ ವಸೂಲಾತಿಗೆ ದಬ್ಬಾಳಿಕೆಯ ವಿಧಾನಗಳನ್ನು ಅನುಸರಿಸಲಾಗುತ್ತಿದೆ. ದೊಡ್ಡ ಸಾಲ ಸುಸ್ತಿದಾರರಿಗೆ ಈ ರಿಯಾಯಿತಿಗಳನ್ನು ನೀಡುವುದು ಸರಿಯಲ್ಲ. ಅಂಥವರ ಸಾಲವನ್ನು ಮನ್ನಾ ಮಾಡುವುದನ್ನು ನಾವು ಬಲವಾಗಿ ವಿರೋಧಿಸುತ್ತೇವೆ ಎಂದರು.

ಕೆಪಿಬಿಇಎಫ್ ಪ್ರಧಾನ ಕಾರ್ಯದರ್ಶಿ ಎಂ.ಜಯನಾಥ್, ಅಖಿಲ ಭಾರತ ಕರ್ನಾಟಕ ಬ್ಯಾಂಕ್ ಉದ್ಯೋಗಿಗಳ ಸಂಘದ ಅಧ್ಯಕ್ಷೆ ಪೂರ್ಣಿಮಾ.ಪಿ.ರಾವ್, ಅಖಿಲ ಭಾರತ ಕರ್ನಾಟಕ ಬ್ಯಾಂಕ್ ಉದ್ಯೋಗಿಗಳ ಸಂಘದ ಪ್ರಧಾನ ಕಾರ್ಯದರ್ಶಿ ಕೆ.ಜಿ.ಫಣೀಂದ್ರ, ಬ್ಯಾಂಕ್ ಉದ್ಯೋಗಿಗಳ ಸಂಘದ ದಕ್ಷಿಣ ಕನ್ನಡ ಜಿಲ್ಲಾ ಅಧ್ಯಕ್ಷ ವಿನ್ಸೆಂಟ್ ಡಿ ಸೋಜ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಕೊಟ್ಟಿಗೆಹಾರ ತರುವೆ ಏಕಲವ್ಯ ಮಾದರಿ ವಸತಿ ಶಾಲೆ ಜಿಲ್ಲಾ ಮಟ್ಟದ ಕಬಡ್ಡಿ ಪಂದ್ಯಾವಳಿಯಲ್ಲಿ ಪ್ರಥಮ ಸ್ಥಾನ ಪಡೆದು ವಿಭಾಗೀಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಈ ಸಂದರ್ಭದಲ್ಲಿ ದೈಹಿಕ ಶಿಕ್ಷಣ ಶಿಕ್ಷಕ ರವೀಂದ್ರ ಪೂಜೆರಿ,ಶಿಕ್ಷಕ ಎಚ್.ಎಸ್.ರವಿ ಇದ್ದರು.

ಕಾಂಗ್ರೆಸ್‌ನಿಂದ ದುಷ್ಟರ ರಕ್ಷಣೆ

ಚಿಕ್ಕಮಗಳೂರು: ರಾಜ್ಯದ ಕಾಂಗ್ರೆಸ್ ಸರಕಾರ ಕೋಮು ಗಲಭೆ ಹುಟ್ಟುಹಾಕಲು ಪ್ರಯತ್ನಿಸಿದವರ ಮೇಲಿನ ಮೊಕದ್ದಮೆ ಹಿಂದಕ್ಕೆ

ಪಡೆಯುವ ಮೂಲಕ ದಸರಾ ಸಂದರ್ಭದಲ್ಲಿ ದುಷ್ಟರ ರಕ್ಷಣೆಗೆ ಮುಂದಾಗಿದೆ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಆರೋಪಿಸಿದರು. ಶನಿವಾರ ಚಿಕ್ಕಮಗಳೂರು ನಗರದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ದಸರಾ, ವಿಜಯದಶಮಿ ಉದ್ದೇಶವೇ ದುಷ್ಟರಿಗೆ ಶಿಕ್ಷೆ ಕೊಡಬೇಕು ಎನ್ನುವುದು. ಸಜ್ಜನರ ರಕ್ಷಣೆ ಆಗಬೇಕು ಎನ್ನುವುದು ಆದರೆ ಈ ಸರ್ಕಾರ ಮೊಕದ್ದಮೆ ಹಿಂದಕ್ಕೆ ಪಡೆದು ಸಜ್ಜನರ ರಕ್ಷಣೆ ಮಾಡಲಿಲ್ಲ. ದುರ್ಜನರ ರಕ್ಷಣೆಗೆ ಹೊರಟಿದೆ. ಇದು ಅಕ್ಷಮ್ಯ ಅಪರಾಧ, ಮಹಾ ತಪ್ಪು ಎಂದರು.

ಈ ನಿರ್ಣಯವನ್ನು ಮರು ಪರಿಶೀಲಿಸದೆ ಇದ್ದಲ್ಲಿ ದುಷ್ಟರ ರಕ್ಷಣೆಗೆ ಹೊರಟಿರುವ ಕಾಂಗ್ರೆಸ್ ಸರ್ಕಾರದ ವಿರುದ್ಧ ಬಿಜೆಪಿ ಹುಬ್ಬಳ್ಳಿ ಚಲೋ ಕಾರ್ಯಕ್ರಮಕ್ಕೆ ಕರೆ ಕೊಡಬೇಕಾಗುತ್ತದೆ. ರಾಜ್ಯಾಧ್ಯಕ್ಷರ ಜೊತೆ ಚರ್ಚಿಸಿ ಸರ್ಕಾರದ ಕೆಟ್ಟ ನೀತಿ ವಿರುದ್ಧ ಜನಾಂದೋಲನವನ್ನು ರೂಪಿಸಬೇಕಾಗುತ್ತದೆ. ಹಿಂದಿನ ಅವಧಿಯಲ್ಲಿ ಇದೇ ಸಿದ್ದರಾಮಯ್ಯ ಸಿಎಂ ಆಗಿದ್ದಾಗಲೂ ಇದೇ ರೀತಿ ಎಸ್‌ಡಿಪಿಐ, ಪಿಎಫ್‌ಐಗೆ ಸೇರಿದ 2000 ಕ್ಕೂ ಹೆಚ್ಚು ಜನರ ಮೊಕದ್ದಮೆ ಹಿಂದಕ್ಕೆ ಪಡೆದ ಪರಿಣಾಮ ರಾಜು ಹತ್ಯೆ, ರುದ್ರೇಶ್ ಹತ್ಯೆ ಈ ರೀತಿ ಸರಣಿ ಹತ್ಯೆಗಳು ನಡೆದವು ಮತ್ತೆ ರಾಜ್ಯದಲ್ಲಿ ಇಂತಹ ಪರಂಪರೆಯನ್ನ ಪುನರ್ ಪ್ರಾರಂಭಿಸಬೇಕೆಂದು ದುಷ್ಟರ ಮೇಲಿನ ಮೊಕದ್ದಮೆ ಹಿಂದಕ್ಕೆ ಪಡೆದಿದ್ದೀರಿ ಇದನ್ನು ಪುನರ್ ಪರಿಶೀಲಿಸಬೇಕು ಎಂದು ಆಗ್ರಹಿಸುತ್ತೇವೆ ಎಂದರು. ದಸರಾಗೆ ಅದರದ್ದೇ ಆದ ಗೌರವ ಇದೆ. ಅದಕ್ಕೆ ಚ್ಯುತಿ ಬರುವಂತೆ ಕಾಂಗ್ರೆಸ್ ಸರ್ಕಾರ ನಡೆದು ಕೊಂಡಿದೆ. ಎಲ್ಲಿ ರಾಜಕಾರಣ ಮಾತನಾ ಡಬೇಕು, ಎಲ್ಲಿ ಮಾನತಾಡಬಾರದು ಎನ್ನುವ ಪತಿಜ್ಞಾನವೇ ಇಲ್ಲದಂತೆ ಅವರ ವರ್ತನೆ ಇದೆ ಎಂದರು.

ಸರಕಾರಿ ಶಾಲೆಗಳಿಗೆ ಸೌಕರ್ಯ ಒದಗಿಸಬೇಕಿದೆ: ಉದ್ಯಮಿ

ಉಡುಪಿ: ಅಂದು ನಾವೆಲ್ಲ ಸರಕಾರಿ ಶಾಲೆಯಲ್ಲೇ ಕಲಿತು ಮುಂದೆ ಬಂದಿದ್ದೇವೆ. ಆದರೆ ಈಗ ಖಾಸಗಿ ಶಾಲೆಗಳ ಪೈಪೋಟಿಯಿಂದ ಬಡವರು ಶಿಕ್ಷಣ ಪಡೆಯುವುದು ಕಷ್ಟವಾಗುತ್ತಿದೆ. ಸ್ಥಿತಿವಂತರೂ ಸರಕಾರಿ ಶಾಲೆಗಳಿಗೆ ಮೂಲ ಸೌಕರ್ಯವನ್ನು ಒದಗಿಸುವ ಮೂಲಕ ಶಾಲೆಗಳಲ್ಲಿ ಉನ್ನತ ಗುಣಮಟ್ಟದ ಶಿಕ್ಷಣ ದೊರೆಯುವಂತೆ ಮಾಡಬೇಕು. ಹಿಂದಿನ ಕಾಲದ ಸರಕಾರಿ ಶಾಲೆಗಳ ವೈಭವ ಮತ್ತೇ ಕಾಣಬೇಕು, ಹೀಗೆ ಮಾಡಿದಾಗ ಮಾತ್ರ ತಾಯಿಯ ಸೇವೆ, ಸರಸ್ವತಿ ವಿದ್ಯಾದೇವತೆಯ ಸೇವೆ ಮಾಡಿದ ಸಂತೃಪ್ತಿ ದೊರೆಯುತ್ತದೆ ಹೆಬ್ರಿ ಸರ್ಕಾರಿ ಶಾಲೆಗಳ ಅಭಿವೃದ್ಧಿಯ ರೂವಾರಿ ಉದ್ಯಮಿ ಎಚ್. ಸತೀಶ್ ಪೈ ಹೇಳಿದರು.

ಅವರು ಮುದ್ರಾಡಿ ಶ್ರೀಗುರುರಕ್ಷಾದ ಆವರಣದಲ್ಲಿ ಸಾರ್ವಜನಿಕ ಶ್ರೀಶಾರದೋತ್ಸವ ಸಮಿತಿ ಮುದ್ರಾಡಿ ವತಿಯಿಂದ ಶುಕ್ರವಾರ ನಡೆದ 5ನೇ ವರ್ಷದ ಶ್ರೀಶಾರದೋತ್ಸವ ಸಂಭ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಗಣ್ಯರು, ವಿವಿಧ ಕ್ಷೇತ್ರದ ಸಾಧಕರ ಸನ್ಮಾನ, ಮುದ್ರಾಡಿ ಶಾರದೋತ್ಸವ ಪುರಸ್ಕಾರ 2024 ಪ್ರಧಾನ ಮತ್ತು ಶೈಕ್ಷಣಿಕ ಸಾಧಕರಿಗೆ ಪ್ರತಿಭಾ ಪುರಸ್ಕಾರ ನಡೆಯಿತು. ಮುದ್ರಾಡಿ ಸಾರ್ವಜನಿಕ ಶ್ರೀಶಾರದೋತ್ಸವ ಸಮಿತಿ ಅಧ್ಯಕ್ಷರಾದ ಮುದ್ರಾಡಿ ಮಂಜುನಾಥ ಪೂಜಾರಿ, ಚಿಂತಕ ಮುನಿರಾಜ ರೆಂಜಾಳ, ಮುದ್ರಾಡಿ ಗ್ರಾಮ ಪಂಚಾಯತಿ ಅಧ್ಯಕ್ಷೆ ವಸಂತಿ ಪೂಜಾರಿ, ಕಾಡುಹೊಳೆಯ ಉದ್ಯಮಿ ಮಂಜುನಾಥ ಕೆ, ಹೆಬ್ರಿ ಎಸ್. ಆರ್ ಸಮೂಹ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎಚ್. ನಾಗರಾಜ ಶೆಟ್ಟಿ, ನಿವೃತ್ತ ಲೆಫ್ಟಿನೆಂಟ್ ಕರ್ನಲ್ ಜಗದೀಶ್ ಜರ್ವತ್ತು, ಉಡುಪಿಯ ಉದ್ಯಮಿ ತಾರಾನಾಥ ಕೋಟ್ಯಾನ್, ವರಂಗ ವ್ಯವಸಾಯ ಸೇವಾ ಸಹಕಾರಿ ಸಂಘದ ಅಧ್ಯಕ್ಷ ಲಕ್ಷ್ಮಣ ಆಚಾರ್ಯ, ಸಮಾಜ ಸೇವಕ ಗ್ರಾಮ ಪಂಚಾಯಿತಿ ಸದಸ್ಯ ಗಣಪತಿ ಮುದ್ರಾಡಿ, ಸಮಿತಿಯ ಉಪಾಧ್ಯಕ್ಷ ಚಂದ್ರಶೇಖರ ಬಾಯರಿ, ಶಾರದೋತ್ಸವ ಸಮಿತಿ ಪದಾಧಿಕಾರಿಗಳು, ಗಣ್ಯರು ಉಪಸ್ಥಿತರಿದ್ದರು. ಡ್ರಾಮ ಜ್ಯೂನಿಯರ್ ಸೀಸನ್ 5 ವಿಜೇತೆ ರಿಷಿಕಾ ಕುಂದೇಶ್ವರ ಅವರಿಂದ ಕಾರ್ಯಕ್ರಮ ವೈವಿಧ್ಯ ಸೇರಿದಂತೆ ಶಾರದೋತ್ಸವದಲ್ಲಿ ವಿವಿಧ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಿತು. ಭಜನಾ ತಂಡಗಳ ಕುಣಿತ ಭಜನೆಯೊಂದಿಗೆ ಶಾರದಾ ಮಾತೆಯ ಭವ್ಯ ಶೋಭಾಯಾತ್ರೆ ನಡೆಯಿತು. ಮಾತಿಬೆಟ್ಟು ಪ್ರಕಾಶ ಪೂಜಾರಿ, ಬಲ್ಲಾಡಿ ಚಂದ್ರಶೇಖರ ಭಟ್ ನಿರೂಪಿಸಿ ಕಬ್ಬಿನಾಲೆ ಚಂದ್ರಶೇಖರ ಬಾಯರಿ ವಂದಿಸಿದರು.

ಶ್ರೀಶಾರದೋತ್ಸವ ಸಂಭ್ರಮದಲ್ಲಿ ವಿವಿಧ ಕ್ಷೇತ್ರಗಳ ಸಾಧಕರನ್ನು ಗೌರವಿಸಲಾಯಿತು.

ಕುದ್ರೋಳಿಯಲ್ಲಿ ದಸರಾ ಶೋಭಾಯಾತ್ರೆ

ಮಂಗಳೂರು: ದಸರಾ ಮೆರವಣಿಗೆಯು ಮಂಗಳೂರು ದಸಾರದ ವಿಶೇಷ ಆಕರ್ಷಣೆ, ಈ ಭವ್ಯ ಹಾಗೂ ದಿವ್ಯ ಮೆರವಣಿಗೆಯನ್ನು ವೀಕ್ಷಿಸಲು ಮಂಗಳೂರಿನ ನಾಗರಿಕರು ಮತ್ತು ವಿವಿಧ ಭಾಗಗಳಿಂದ ಸಾವಿರಾರು ಭಕ್ತರು ನಗರದಲ್ಲಿ ಸೇರುತ್ತಾರೆ. ಜನರು ತಮ್ಮ ಮನೆ ಮತ್ತು ವ್ಯಾಪಾರ ಕಟ್ಟಡ, ಅಂಗಡಿಗಳು, ಹೋಟೆಲ್ ಇತ್ಯಾದಿಗಳನ್ನು ಅಲಂಕರಿಸುತ್ತಾರೆ.

ಭಾನುವಾರ ಸಂಜೆ ಕುದ್ರೋಳಿ ದೇವಸ್ಥಾನದಿಂದ ಆರಂಭವಾದ ಶೋಭಾಯಾತ್ರೆ, ಮಂಗಳೂರಿನ ಪ್ರಮುಖ ರಸ್ತೆಗಳ ಮೂಲಕ ಸಾಗಿತು. ನವದುರ್ಗೆಯರ ವಿಗ್ರಹಗಳು ಹಾಗೂ ಮಹಾಗಣಪತಿ, ಶಾರದೆಯರ ಮೂರ್ತಿಗಳನ್ನು ಪುಷ್ಪಾರ್ಚನೆ ಮಾಡಿ, ಅಲಂಕಾರಿಕ ಛತ್ರ, ಪಟಲ, ವಾದ್ಯ, ಚೆಂಡೆ, ಸಾಂಪ್ರದಾಯಿಕ ನೃತ್ಯ, ಜಾನಪದ ನೃತ್ಯ, ಸಂಗೀತ, ಯಕ್ಷಗಾನ ಪಾತ್ರಧಾರಿಗಳು, ಡೊಳ್ಳು ಕುಣಿತ, ಗೊಂಬೆಗಳ ಮೆರವಣಿಗೆ ಕರಗ, ಹುಲಿವೇಷ (ಹುಲಿ ನೃತ್ಯ) ಮತ್ತು ಇತರ ಸಾಂಪ್ರದಾಯಿಕ ಕಲಾ ಪ್ರಕಾರಗಳು, ಸ್ತಬ್ಧಚಿತ್ರಗಳೊಂದಿಗೆ ಸಾಗಿದ್ದು ಮೆರವಣಿಗೆಯು ಸೋಮವಾರ ಮುಂಜಾನೆ ವಿಗ್ರಹ ವಿಸರ್ಜನೆಗೊಳ್ಳಲಿದೆ.

ಗೋಕರ್ಣನಾಥೇಶ್ವರ ಕ್ಷೇತ್ರದಲ್ಲಿ ದಸರಾ ಹಬ್ಬದ ಸಮಯದಲ್ಲಿ ಶಾರದಾದೇವಿ ಸೇರಿದಂತೆ 9 ದೇವಿಯರು ಮತ್ತು ಮಹಾಗಣಪತಿ ದೇವರಿಗೆ ವೈದಿಕ ಪದ್ಧತಿಯಲ್ಲಿ ಪೂಜೆ ಸಲ್ಲಿಸಲಾಗುತ್ತದೆ. ಗಣಪತಿ, ಶಾರದಾ ಮಾತೆ, ಆದಿಶಕ್ತಿಯೊಂದಿಗೆ ನವದುರ್ಗೆಯರಾದ ಶೈಲಪುತ್ರಿ, ಬ್ರಹ್ಮಚಾರಿಣಿ, ಚಂದ್ರಘಂಟ, ಕೂಷ್ಮಾಂಡಿನಿ, ದ ತ್ರಿ, ಮಹಾಕಾಳಿ, ಕಾತ್ಯಾಯಿನಿ, ಸ್ಕಂದಮಾತೆ ಮಹಾಗೌರಿಯರನ್ನು ಇಲ್ಲಿನ ಸುಂದರ ಕಲಾಕೃತಿಗಳ ಮಂಟಪದಲ್ಲಿ ಪ್ರತಿಷ್ಠಾಪಿಸಲಾಗಿತ್ತು. ಅತ್ಯಾಕರ್ಷ ಸಂಯೋಜನೆಯಲ್ಲಿ ಈ 12 ದೇವರುಗಳನ್ನು ಹತ್ತು ದಿನಗಳ ಕಾಲ ಭಕ್ತರು ದರ್ಶನ ಮಾಡಿ ಸಂತೋಷ ಪಟ್ಟರು.

ಮಂಗಳೂರಿನ ಪ್ರಮುಖ ರಸ್ತೆಗಳಲ್ಲಿ ವಿಜೃಂಭಣೆಯಿಂದ ಸಾಗಿದ ದಸರಾ ಶೋಭಾಯಾತ್ರೆ

ಬಿಜೆಪಿ ಅಭ್ಯರ್ಥಿ ಗೆಲುವಿಗೆ ಶ್ರಮಿಸಿ

ಬಂಟ್ವಾಳ: ವಿಧಾನ ಪರಿಷತ್ ದಕ್ಷಿಣ ಕನ್ನಡ ಸ್ಥಳೀಯ ಪ್ರಾಧಿಕಾರದ ಕ್ಷೇತ್ರದಲ್ಲಿ ಬಿಜೆಪಿಯು ಸಂಘ-ಪಕ್ಷದ ನಿಷ್ಠೆಯ ಕೆಲಸಕ್ಕಾಗಿ ಸಣ್ಣ ಸಮುದಾಯದ ಪ್ರಾಮಾಣಿಕ ಕೆಲಸಗಾರನಿಗೆ ಅವಕಾಶ ನೀಡಿದ್ದು, ಇದು ಕಾರ್ಯಕರ್ತರೇ ಕಾರ್ಯಕರ್ತನನ್ನು ಗೆಲ್ಲಿಸುವ ಚುನಾವಣೆಯಾಗಿದೆ. ಹೀಗಾಗಿ ಗ್ರಾ.ಪಂ.ಸದಸ್ಯರು, ಪುರಸಭಾ ಸದಸ್ಯರು ಜತೆಯಾಗಿ ತೆರಳಿ ಮತ ಹಾಕುವ ಮೂಲಕ ನಮ್ಮ ಅಭ್ಯರ್ಥಿಯನ್ನು ಗೆಲ್ಲಿಸುವ ಕಾರ್ಯ ಮಾಡಬೇಕು ಎಂದು ದ.ಕ. ಲೋಕಸಭಾ ಕ್ಷೇತ್ರದ ಸಂಸದ ಕ್ಯಾ.ಬ್ರಿಜೇಶ್ ಚೌಟ ಹೇಳಿದರು.

ಅವರು ಬಿ.ಸಿ.ರೋಡಿನ ಸ್ಪರ್ಶ ಕಲಾಮಂದಿರದಲ್ಲಿ ದಕ್ಷಿಣ ಕನ್ನಡ ಸ್ಥಳೀಯ ಪ್ರಾಧಿಕಾರ ಕ್ಷೇತ್ರ ಪರಿಷತ್ ಉಪಚುನಾವಣೆಯ ಹಿನ್ನೆಲೆಯಲ್ಲಿ ಬಂಟ್ವಾಳ ಬಿಜೆಪಿ ವತಿಯಿಂದ ನಡೆದ ಜನಪ್ರತಿನಿಧಿಗಳ ಸಮಾವೇಶದಲ್ಲಿ ಮಾತನಾಡಿದರು. ಸಮಾವೇಶ ಉದ್ಘಾಟಿಸಿದ ಬಂಟ್ವಾಳ ಶಾಸಕ ರಾಜೇಶ್ ನಾಯ್ಕ್ ಉಳಿಪ್ಪಾಡಿ ಮಾತನಾಡಿ,ಈ ಹಿಂದೆ ಕೋಟ ಶ್ರೀನಿವಾಸ ಪೂಜಾರಿ ಅವರು 1500 ಮತಗಳಿಂದ ಗೆದ್ದಿದ್ದು, ಸಂಘಟನೆಯಲ್ಲಿ ತೊಡಗಿ ನಾಯಕರ ಜತೆ ಒಡನಾಟ ಹೊಂದಿರುವ ಪ್ರಾಮಾಣಿಕ ಕಾರ್ಯಕರ್ತನಿಗೆ ಪಕ್ಷ ಅವಕಾಶ ನೀಡಿದೆ ಎಂದರು.

ಬಿಜೆಪಿ ಅಭ್ಯರ್ಥಿ ಕಿಶೋರ್ ಕುಮಾರ್ ಪುತ್ತೂರು ಮಾತನಾಡಿ, ಸಂಘದ ಕಟ್ಟಾಳುವಾಗಿ, ಪಕ್ಷದ ಸಾಮಾನ್ಯ ಕಾರ್ಯಕರ್ತನಾಗಿ ಈವರೆಗೆ ಎಲ್ಲಾ ಜವಾಬ್ದಾರಿಗಳನ್ನು ಪ್ರಾಮಾಣಿಕ ನಿರ್ವಹಿಸಿಕೊಂಡು ಬಂದಿದ್ದು, ಪರಿಷತ್‌ನಲ್ಲಿ ನಿಮ್ಮ ಪರ ಗಟ್ಟಿ ಧ್ವನಿಯಲ್ಲಿ ಮಾತನಾಡುವ ಶಕ್ತಿಯನ್ನು ಪಕ್ಷ ಕೊಟ್ಟಿದೆ ಎಂದರು.

ಚುನಾವಣಾ ನಿರ್ವಹಣಾ ಸಮಿತಿಯ ಸಂಚಾಲಕ ಕ್ಯಾ.ಗಣೇಶ್ ಕ್ಯಾರ್ಣಿಕ್ ಮಾತನಾಡಿ, ಪ್ರತಿ ಚುನಾವಣೆಯಂತೆ ಇದನ್ನೂ ಗಂಭೀರವಾಗಿ ಪರಿಗಣಿಸಿ ಬಿಜೆಪಿ ಅಭ್ಯರ್ಥಿ ಪರ ಕೆಲಸ ಮಾಡಬೇಕಿದೆ ಎಂದರು.

ಚುನಾವಣಾ ನಿರ್ವಹಣಾ ಸಮಿತಿಯ ಸಂಚಾಲಕ ಕ್ಯಾ.ಗಣೇಶ್ ಕ್ಯಾರ್ಣಿಕ್, ಬಿಜೆಪಿ ದ.ಕ.ಜಿಲ್ಲಾಧ್ಯಕ್ಷ ಸತೀಶ್ ಕುಂಪಲ, ಬಿಜೆಪಿ ಬಂಟ್ವಾಳ ಮಂಡಲ ಅಧ್ಯಕ್ಷ ಆರ್.ಚೆನ್ನಪ್ಪ ಕೋಟ್ಯಾನ್ ಅಧ್ಯಕ್ಷತೆ ವಹಿಸಿದ್ದರು. ಚುನಾವಣಾ ನಿರ್ವಹಣಾ ಸಮಿತಿಯ ಜಿಲ್ಲಾ ಸಹಸಂಚಾಲಕ ರಾಕೇಶ್ ರೈ ಕೆಡೆಂಜಿ, ಮಾಜಿ ಸಚಿವ ಬಿ.ನಾಗರಾಜ ಶೆಟ್ಟಿ, ಮಾಜಿ ಶಾಸಕರಾದ ರುಕ್ಮಯ ಪೂಜಾರಿ, ಪದ್ಮನಾಭ ಕೊಟ್ಟಾರಿ, ಚುನಾವಣಾ ಜಿಲ್ಲಾ ಪ್ರವಾಸ ಪ್ರಮುಖ್ ಬಿ.ದೇವದಾಸ್ ಶೆಟ್ಟಿ, ಮಂಡಲ ಪ್ರಧಾನ ಕಾರ್ಯದರ್ಶಿ ಶಿವಪ್ರಸಾದ್ ಶೆಟ್ಟಿ, ಬಂಟ್ವಾಳ ಚುನಾವಣಾ ನಿರ್ವಹಣಾ ಸಮಿತಿ ಸಂಚಾಲಕ ಪ್ರಭಾಕರ ಪ್ರಭು ವೇದಿಕೆಯಲ್ಲಿದ್ದರು.

ಮಂಡಲ ಪ್ರಧಾನ ಕಾರ್ಯದರ್ಶಿ ಸುದರ್ಶನ್ ಬಜ ಸ್ವಾಗತಿಸಿದರು. ಬಂಟ್ವಾಳ ಚುನಾವಣಾ ನಿರ್ವಹಣಾ ಸಮಿತಿಯ ಸಹಸಂಚಾಲಕ ಸಂಜೀವ ಪೂಜಾರಿ ವಂದಿಸಿದರು. ಮಾತೇಶ್ ಭಂಡಾರಿ ಕಾರ್ಯಕ್ರಮ ನಿರ್ವಹಿಸಿದರು.

ಜನಪ್ರತಿನಿಧಿಗಳ ಸಮಾವೇಶದಲ್ಲಿ ಸಂಸದ ಕ್ಯಾ.ಬ್ರಿಜೇಶ್ ಚೌಟ ಅವರು ಮಾತನಾಡಿದರು

> ಬಂಟ್ವಾಳ ಕ್ಷೇತ್ರದಲ್ಲಿ ಒಟ್ಟು 329 ಬಿಜೆಪಿಯ ಮತಗಳಿದ್ದು, 317 ಪಂಚಾಯತ್ ಸದಸ್ಯರು, 11 ಪುರಸಭಾ ಸದಸ್ಯರು, ತಲಾ ಒಂದೊಂದು ಶಾಸಕರು-ಸಂಸದರ ಮತಗಳಿವೆ. ನಮ್ಮ ಮತ ಜಾಸ್ತಿ ಇದೆ ಎಂದು ಯಾರೂ ಕೂಡ ಸುಮ್ಮನೆ ಕೂರದೆ ತಮ್ಮ ಹಕ್ಕನ್ನು ಚಲಾಯಿಸುವ ಕಾರ್ಯ ಮಾಡಬೇಕು.
>
> **-ರಾಜೇಶ್ ನಾಯ್ಕ್ ಉಳಿಪ್ಪಾಡಿ,** ಶಾಸಕ

ಮಾನಸಿಕ ಆರೋಗ್ಯ ಕುರಿತ ಅರಿವು ಅಗತ್ಯ

ವಿದ್ಯಾಗಿರಿ: ಮನೋವಿಜ್ಞಾನ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಸಹಾನುಭೂತಿಯ ನೆಲೆಸಿರಬೇಕು ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ವ್ಯವಸ್ಥಾಪಕ ಟ್ರಸ್ಟಿ ವಿವೇಕ್ ಆಳ್ವ ಹೇಳಿದರು.

ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆಯ ಅಂಗವಾಗಿ ಆಳ್ವಾಸ್‌ನ ಪದವಿ ಮತ್ತು ಸ್ನಾತಕೋತ್ತರ ಮನೋವಿಜ್ಞಾನ ವಿಭಾಗಗಳು ಆಳ್ವಾಸ್ ಕ್ಷೇಮ ತರಬೇತಿ ಕೇಂದ್ರದ ಸಹಯೋಗದೊಂದಿಗೆ ವಿಭಾಗದ ಆವರಣದಲ್ಲಿ ಹಮ್ಮಿಕೊಂಡ 'ಮೆಟಾನೋಯಾ'- ಮನೋ ವಿಜ್ಞಾನ ಪ್ರದರ್ಶನವನ್ನು ಉದ್ಘಾಟಿಸಿ ಅವರು ಮಾತನಾಡಿದರು .

ಸದೃಢ ಮಾನಸಿಕ ಆರೋಗ್ಯ ಕಾಯ್ದುಕೊಳ್ಳುವಲ್ಲಿ ಗೆಳೆಯರ ಪಾತ್ರವು ಪ್ರಮುಖವಾಗಿದೆ ಎಂದ ಅವರು, ಇಂತಹ ಕಾರ್ಯಕ್ರಮಗಳ ಮಾನಸಿಕ ಆರೋಗ್ಯದ ಬಗ್ಗೆ ಉತ್ತಮ ತಿಳಿವಳಿಕೆಯನ್ನು ಉತ್ತೇಜಿಸುವಲ್ಲಿ ಪೂರಕವಾಗಿದೆ ಎಂದರು.

ಆಳ್ವಾಸ್ (ಸ್ವಾಯತ್ತ) ಕಾಲೇಜಿನ ಪ್ರಾಂಶುಪಾಲ ಡಾ.ಕುರಿಯನ್ ಮಾತನಾಡಿ, ಇಂದು ನಮ್ಮ ಕೆಲಸದ ಸ್ಥಳಗಳು ಹೆಚ್ಚು ವಾಣಿಜ್ಯೀಕರಣ ಹಾಗೂ ಕಾರ್ಪೊರೇಟ್ ಸಂಸ್ಕೃತಿಯತ್ತ ಸಾಗುತ್ತಿವೆ ಎಂದರು.

ಪ್ರದರ್ಶನದಲ್ಲಿ ಎಂಟು ವಿನ್ಯಾಸಗಳನ್ನು ಆಯೋಜಿಸಲಾಗಿತ್ತು. ಪ್ರತಿ ಮಾದರಿಗಳು ಮಾನಸಿಕ ಆರೋಗ್ಯದ ವಿವಿಧ ಅಂಶಗಳನ್ನು ಪ್ರತಿನಿಧಿಸಿತು. ಒಟ್ಟು ಎಂಟು ಮಾದರಿಗಳ ಪೈಕಿ ಆಡ್ಲರ್‌ನ ಜನ್ಮ ಕ್ರಮ, ಭಾವನಾತ್ಮಕ ಮಿದುಳು, ಡಿಜಿಟಲ್ ನಿರ್ವಿಷಿಕರಣ, ಸಕಾರಾತ್ಮಕ ಭಾವನೆಗಳ ಶಕ್ತಿ, ಪರಿಸರ ಸಿದ್ಧಾಂತ ಮತ್ತು ಮಾನಸಿಕ ಯೋಗಕ್ಷೇಮದ ತಿಳುವಳಿಕೆಯನ್ನು ಗಾಢವಾಗಿಸಲು ಶೈಕ್ಷಣಿಕ ಸಾಧನಗಳಾಗಿ ಕಾರ್ಯನಿರ್ವಹಿಸುವ ವರ್ತನೆಯ ಮಂಜುಗಡ್ಡೆಯಂತಹ ಪರಿಕಲ್ಪನೆಗಳನ್ನು ಎತ್ತಿ ತೋರಿಸುವಂತಿತ್ತು. ಮಾದರಿಗಳ ಜೊತೆಗೆ, ಆರು ಧನಾತ್ಮಕ ಮನೋವಿಜ್ಞಾನ ಮೌಲ್ಯ ಮಾಪನಗಳನ್ನು ರೂಪಿಸಲಾಗಿತ್ತು.

ಇದರೊಂದಿಗೆ ಎಂಟು ಸಂವಾದಾತ್ಮಕ ಸವಾಲುಗಳ ಪರೀಕ್ಷಾಕಟ್ಟೆಗಳನ್ನು ರಚಿಸಲಾಗಿದ್ದು, ಪ್ರತಿಯೊಂದೂ ಭಾಗವಹಿಸುವವರ ಪರಿಕಲ್ಪನೆ ರಚನೆ, ಆಯ್ದ ಗಮನ, ಕಣ್ಣು-ಕೈಯ ಸಮನ್ವಯ, ಸಮಸ್ಯೆ ಪರಿಹಾರ ಮತ್ತು ವಿಮರ್ಶಾತ್ಮಕ ಚಿಂತನೆಯಂತಹ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು, ಪ್ರಾಯೋಗಿಕ ಕಲಿಕೆಯ ಅವಕಾಶವನ್ನು ಒದಗಿಸಲು ವಿನ್ಯಾಸಗೊಳಿಸಲಾಗಿತ್ತು.

ಸಮಾರಂಭದಲ್ಲಿ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸಿದ್ದರು. ವಿದ್ಯಾರ್ಥಿಗಳ ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಲು ಉತ್ತಮ ಅಭ್ಯಾಸದೊಂದಿಗೆ ಜೀವನಶೈಲಿಯನ್ನು ರೂಪಿಸಲು ಪ್ರೇರಣೆ ನೀಡಲಾಯಿತು. ತಮ್ಮ ದೈನಂದಿನ ಜೀವನದಲ್ಲಿ ಧನಾತ್ಮಕ ಮಾನಸಿಕ ಆರೋಗ್ಯವನ್ನು ಅಭಿವೃದ್ಧಿಪಡಿಸಲು ಪ್ರೋತ್ಸಾಹಿಸುವಲ್ಲಿ ಯಶಸ್ವಿಯಾಯಿತು.

ಮನೋವಿಜ್ಞಾನ ವಿಭಾಗದ ಮುಖ್ಯಸ್ಥರಾದ ಡಾ.ಆಡ್ರೆ ಪಿಂಟೋ, ಜೋಸ್ವಿಟಾ ಡೆಸಾ, ಆಳ್ವಾಸ್ ಕ್ಷೇಮ ತರಬೇತಿ ಕೇಂದ್ರದ ನಿರ್ದೇಶಕಿ ಡಾ.ದೀಪಾ ಕೊಠಾರಿ, ಕಾಲೇಜಿನ ಐಕ್ಯುಎಸಿ ಸಂಯೋಜಕಿ ಡಾ.ಮೂಕಾಂಬಿಕಾ ಹಾಗೂ ವಿವಿಧ ವಿಭಾಗಗಳ ಪ್ರಾಧ್ಯಾಪಕರು ಇದ್ದರು. ವಿದ್ಯಾರ್ಥಿನಿ ಹಿಸಾನಾತ್ ಎಂ. ಕಾರ್ಯಕ್ರಮ ನಿರೂಪಿಸಿದರು.

'ಮೆಟಾನೋಯಾ'- ಮನೋವಿಜ್ಞಾನ ಪ್ರದರ್ಶನವನ್ನು ಟ್ರಸ್ಟಿ ವಿವೇಕ್ ಆಳ್ವ ಅವರು ಉದ್ಘಾಟಿಸಿದರು.

ಅಂಬು ಛೇದಿಸಿ ವಿಜಯ ದಶಮಿ ಹಬ್ಬ ಆಚರಣೆ

ಚಿಕ್ಕಮಗಳೂರು: ದಸರಾ ನವರಾತ್ರಿಯ ನಾಡಹಬ್ಬದ ಅಂಗವಾಗಿ ತಾಲೂಕಿನ ಅಂ ಬಳೆ ಹೋಬಳಿಯ ಆರದವಳ್ಳಿ ಗ್ರಾಮದಲ್ಲಿ ನೂರಾರು ಗ್ರಾಮಸ್ಥರು ಹಾಗೂ ಶಾಸಕರ ಸಮ್ಮುಖದಲ್ಲಿ ಗ್ರಾಮದ ಪಟೇಲ ವಂಶಸ್ಥ ಎ.ಎನ್. ಮಹೇಶ್ ಸಾರಥ್ಯದಲ್ಲಿ ವಿಜಯ ದಶಮಿ ಯಂದು ಸಂಪ್ರದಾಯಿಕ ಪೂಜಾ ವಿಧಿ ವಿಧಾನಗಳ ಮೂಲಕ ಅಂಬು ಒಡೆದು 27ನೇ ವರ್ಷದ ಸಂಭ್ರಮವನ್ನು ಶನಿವಾರ ಆಚರಿಸಿದರು. ಗ್ರಾಮಸ್ಥರು ಗ್ರಾಮದೇವರನ್ನು ಹೊತ್ತು ಊರಿನ ಸುತ್ತ ಮೆರವಣಿಗೆ ನಡೆಸಿ ಅಂಬು ಒಡೆಯುವ ಸ್ಥಳಕ್ಕೆ ಸಾಗಿದರು. ಸಾಂಪ್ರದಾಯಿಕ ಅಲಂಕೃತ ಉಡುಗೆಯೊಂದಿಗೆ ಸಿಂಗಾರಗೊಂಡಿದ್ದ ಪಟೇಲ ವಂಶಸ್ಥ ಎ.ಎನ್. ಮಹೇಶ್ ಹಾಗೂ ಕುಟುಂಬಸ್ಥರನ್ನು ಊರಿನ ಮುಖಂಡರು, ಗ್ರಾಮಸ್ಥರುಗಳು ವಾದ್ಯಗೋಷ್ಠಿಯೆಂದಿಗೆ ಮೆರವ ಣಿಗೆ ಮೂಲಕ ಗ್ರಾಮದ ಅಂಬು ಒಡೆಯುವ ದೊಡ್ಡಕೆರೆ ಬಳಿಗೆ ಕರೆ ತರಲಾಯಿತು. ಈ ವೇಳೆ ಮಾತನಾಡಿದ ಮೂಡಿಗೆರೆ ಶಾಸಕಿ ನಯನ ಮೋಟಮ್ಮ ಆರದವಳ್ಳಿ ಗ್ರಾಮಸ್ಥರು ಮನೆಮಗಳಂತೆ ಕೈಗೆ ಕಂಕಣಗಟ್ಟಿ ತಮ್ಮನ್ನು ಹಬ್ಬಕ್ಕೆ ಬರಮಾಡಿಕೊಂಡಿರುವುದು ಸಂತಸ ಮೂಡಿಸಿದೆ ಎಂದರು. ಈ ಸಂದರ್ಭದಲ್ಲಿ ಹರಿಹರದಹಳ್ಳಿ ಗ್ರಾ.ಪಂ. ಅಧ್ಯಕ್ಷೆ ಸ್ವಪ್ನ ಚಂದ್ರಶೇಖರ್, ಉಪಾಧ್ಯಕ್ಷ ಯಶ್ವಂತ್‌ರಾಜ್, ಎಪಿಎಂಸಿ ಮಾಜಿ ಅಧ್ಯಕ್ಷ, ಅರೇನಳ್ಳಿ ಪ್ರಕಾಶ್, ಕಾಂಗ್ರೆಸ್ ಅಂಬಳೆ ಹೋಬಳಿ ಅಧ್ಯಕ್ಷ ವಿಜಯ್‌ಕುಮಾರ್, ಆರದವಳ್ಳಿ ಗ್ರಾಮಸ್ಥರಾದ ಪಾಪಣ್ಣ, ಎ.ಪಿ.ಜಯಣ್ಣ, ವೀರತ್ತೇಗೌಡ, ನಾಗರಾಜ್, ಕಲ್ಲೇಗೌಡ, ತಾಂಡವ ಮೂರ್ತಾ ಚಾರ್, ಎ.ಎಂ.ಅಣ್ಣೇಗೌಡ, ಎ.ಎಂ.ಚಂದ್ರೇಗೌಡ, ಹಾಲೇಶ್, ಎ.ಎಂ.ಪುಟ್ಟೇಗೌಡ, ಸಣ್ಣೇಗೌಡ ಹಾಜರಿದ್ದರು.

ಮಂಗಳೂರಿನ ನಗರದ ರಥಬೀದಿಯಲ್ಲಿರುವ ಗೋಕರ್ಣ ಪರ್ತಗಾಳಿ ಶಾಖಾ ಮಠದಲ್ಲಿ ಕಳೆದ 53 ನೇ ವರ್ಷ ಆಚರಣೆಯ ವೀರ ಬಾಲಕರ ಶ್ರೀಶಾರದಾ ಮಹೋತ್ಸವದ ಶ್ರೀಶಾರದಾ ಮಾತೆಯ ವಿಗ್ರಹದ ಪೂರ್ಣಾಲಂಕಾರ ದೊಂದಿಗೆ ವಿಸರ್ಜನಾ ಮೆರವಣಿಕೆ ಸಹಸ್ರಾರು ಭಜಕರ ಉಪಸ್ಥಿತಿಯಲ್ಲಿ ವಿಜೃಂಭಣೆಯಿಂದ ಜರಗಿತು . ಈ ಸಂದರ್ಭದಲ್ಲಿ ಸಮಿತಿಯ ಪದಾಧಿಕಾರಿಗಳು ಸರ್ವ ಸದಸ್ಯರು ಉಪಸ್ಥಿತರಿದ್ದರು . ಭವ್ಯ ಮೆರವಣಿಗೆಬಳಿಕ ಶ್ರೀಮಹಾಮಾಯ ತೀರ್ಥದಲ್ಲಿ ಜಲಸ್ತಂಭನ ಮಾಡಲಾಯಿತು .

ತೇಜಸ್ವಿ 'ವಿಸ್ಮಯ ಲೋಕ'ದ ಅನಾವರಣ

ಕೊಟ್ಟಿಗೆಹಾರ: ಈ ಬಾರಿಯ ಮೈಸೂರು ದಸರಾದ ಜಂಬೂ ಸವಾರಿಯಲ್ಲಿ ಚಿಕ್ಕಮಗಳೂರು ಜಿಲ್ಲೆಯಿಂದ ತೇಜಸ್ವಿ ಪ್ರತಿಷ್ಠಾನ, ತೇಜಸ್ವಿ ವಿಸ್ಮಯ ಲೋಕದ ಸ್ತಬ್ಧಚಿತ್ರ ಪ್ರದರ್ಶನಗೊಂಡಿದೆ.

ಚಿಕ್ಕಮಗಳೂರು ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತಿ ವತಿಯಿಂದ ಈ ಬಾರಿ ತೇಜಸ್ವಿ ಪ್ರತಿಷ್ಠಾನ, ತೇಜಸ್ವಿ ವಿಸ್ಮಯ ಲೋಕದ ಸ್ತಬ್ಧ ಚಿತ್ರವನ್ನು ಆಯ್ಕೆ ಮಾಡಲಾಗಿದ್ದು, ಕೊಟ್ಟಿಗೆಹಾರದ ತೇಜಸ್ವಿ ಪ್ರತಿಷ್ಠಾನದ ಕಟ್ಟಡ, ತೇಜಸ್ವಿ ಅವರ ಪ್ರತಿಮೆ, ಹಾರುವ ಓತಿ, ಪಶ್ಚಿಮ ಘಟ್ಟದಲ್ಲಿ ಕಾಣ ಸಿಗುವ ಕಪ್ಪೆ, ವಿವಿಧ ಬಗ್ಗೆ ಕೀಟಗಳು, ಹಕ್ಕಿಗಳು, ತೇಜಸ್ವಿ ಅವರ ಸಾಕುನಾಯಿ ಕಿವಿ, ಮೀನು ಶಿಕಾರಿ, ಪ್ರಕೃತಿ ಎಲ್ಲಾ ಅಂಶಗಳು ಇದರಲ್ಲಿ ಪ್ರದರ್ಶಿಸಲಾಗುತ್ತಿದೆ ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಅವರ ಆಸಕ್ತಿಯನ್ನು ಪ್ರತಿಬಿಂಬಿಸುವ ರೀತಿಯಲ್ಲಿ ಸ್ತಬ್ಧಚಿತ್ರವನ್ನು ರೂಪಿಸಲಾಗಿದೆ.ಕಲಾವಿದ, ಚಿಕ್ಕಮಗಳೂರಿನ ಶಾಂತಿ ನಿಕೇತನಾ ಚಿತ್ರಕಲಾ ಮಹಾವಿದ್ಯಾಲಯದ ಪ್ರಾಚಾರ್ಯರು, ಹಾಗೂ ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಸದಸ್ಯರಾದ ವಿಶ್ವಕರ್ಮ ಆಚಾರ್ಯ ಅವರ ಕಲ್ಪನೆಯಲ್ಲಿ ಸ್ತಬ್ಧಚಿತ್ರ ಮೂಡಿಬಂದಿದ್ದು ಜಂಬೂ ಸವಾರಿಯ ಮೆರವಣಿಗೆಯಲ್ಲಿ ಚಿಕ್ಕಮಗಳೂರು ಜಿಲ್ಲೆಯನ್ನು ಪ್ರತಿನಿಧಿಸುವ ಸ್ತಬ್ಧಚಿತ್ರ ತೇಜಸ್ವಿ ವಿಸ್ಮಯ ಲೋಕವನ್ನು ಅನಾವರಣಗೊಳಿಸಲಿದೆ. ಮೂಡಿಗೆರೆಯಲ್ಲಿ ವಾಸವಾಗಿದ್ದ ಶ್ರೇಷ್ಠ ಲೇಖಕ ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಅವರು ಪರಿಸರ ಸಂರಕ್ಷಣೆಯ ಮಹತ್ವವನ್ನು ತಮ್ಮ ಕೃತಿಗಳ ಮೂಲಕ ತಿಳಿಸಿದ್ದರು.

ಸ್ಕೌಟ್ಸ್, ಗೈಡ್ಸ್ ದೀರ್ಘ ಸೇವೆಗಾಗಿ ಸನ್ಮಾನ

ಚಿಕ್ಕಮಗಳೂರು: ಜಿಲ್ಲಾ ತರಬೇತಿ ಆಯುಕ್ತೆ ಸಂಧ್ಯಾರಾಣಿ ಹಾಗೂ ಜಿಲ್ಲಾ ಕಾರ್ಯದರ್ಶಿ ನೀಲಕಂಠಚಾರ್ಯ ಇವರನ್ನು ರಾಜ್ಯ ಮಟ್ಟದ ಕಬ್ಸ್ ಮತ್ತು ಬುಲ್‌ಬುಲ್ ಉತ್ಸವದಲ್ಲಿ ಚಿತ್ರಕಲಾ ಪರಿಷತ್‌ನ ಅಧ್ಯಕ್ಷ ಬಿ.ಎಲ್ ಶಂಕರ್ ಮತ್ತಿತರ ಗಣ್ಯರು, ದೀರ್ಘ ಹಾಗೂ ಅವಿರತ ಸೇವೆಗಾಗಿ ಸನ್ಮಾನಿಸಿದರು.

ಕಳೆದ 48 ವರ್ಷಗಳಿಂದ ತಾವು ಸೇವೆ ಸಲ್ಲಿಸುತ್ತಿರುವ ಸೇಯಿಂಟ್ ಜೋಸೆಫ್ ಶಾಲೆಯಲ್ಲಿ ಕಬ್ಸ್ ಘಟಕವನ್ನು ನಡೆಸುವುದರ ಜೊತೆಗೆ ಹೆಚ್ಚಿನ ತರಬೇತಿ ಪಡೆದು, ರಾಜ್ಯದಾದ್ಯಂತ 70 ಕ್ಕೂ ಹೆಚ್ಚು ಶಿಕ್ಷಕರ ತರಬೇತಿ ಶಿಬಿರಗಳನ್ನು ನಡೆಸಿ ಸಾವಿರಾರು ಕ್ಲಬ್ಸ್ ಮತ್ತು ಬುಲ್ ಬುಲ್ಸ್ ಉತ್ಸವಗಳ ನಾಯಕರಾಗಿ ಕಾರ್ಯ ನಿರ್ವಹಿಸುವುದಲ್ಲದೆ, ಕಳೆದ 18 ವರ್ಷಗಳಿಂದ ಜಿಲ್ಲಾ ತರಬೇತಿ ಆಯುಕ್ತರಾಗಿ ಕಾರ್ಯ ನಿರ್ವಹಿಸುತ್ತಿರುತ್ತಾರೆ.

ಸುಮಾರು 40 ವರ್ಷದ ಹಿಂದೆ ಸ್ಕೌಟ್ ಮಾಸ್ಟರ್ ಮೂಲ ತರಬೇತಿ ಪಡೆದು ಹಿರೇಗೌಜದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ದಳ ಪ್ರಾರಂಭಿಸಿ, ನಂತರದಲ್ಲಿ ತಾವು ಸೇವೆ ಸಲ್ಲಿಸಿದ ಕಡೆಯಲ್ಲಾ ಘಟಕಗಳನ್ನು ಪ್ರಾರಂಭಿಸಿ ಗ್ರಾಮೀಣ ಮಕ್ಕಳ ತರಬೇತಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಸ್ಥಳೀಯ ಹಾಗೂ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿ ಪ್ರಸ್ತುತ ಜಿಲ್ಲಾ ಕಾರ್ಯದರ್ಶಿ ಯಾಗಿ ರಾಜ್ಯ ಮಟ್ಟದ ಕಬ್ ಮತ್ತು ಬುಲ್‌ಬುಲ್ ಉತ್ಸವವನ್ನು ಅತ್ಯಂತ ಯಶಸ್ವಿಯಾಗಿ ನಡೆಸಿರುತ್ತಾರೆ. ಇವರಿಬ್ಬರ ಸೇವೆಯನ್ನು ಗುರುತಿಸಿ ಸನ್ಮಾನಿಸಲಾಯಿತು.

ಸಮಾಚಾರ ಸಣ್ಣದಲ್ಲ

ಐಟಿಎಫ್ ಸಿಂಗಲ್ ಜೆಸ್ಸಿ ಆ್ಯನೆ ಫೈನಲ್‌ಗೆ

ಮೈಸೂರು: ಅಮೆರಿಕದ ಆಟಗಾರ್ತಿ ಜೆಸ್ಸಿ ಆ್ಯನೆ ಇಲ್ಲಿ ನಡೆದಿರುವ ಮೈಸೂರು ಓಪನ್ ಮಹಿಳೆಯರ ಐಟಿಎಫ್ ಟೆನಿಸ್ ಟೂರ್ನಿಯ ಡಬಲ್ಸ್ ವಿಭಾಗದಲ್ಲಿ ಪ್ರಶಸ್ತಿ ಮುಡಿಗೇರಿಸಿಕೊಂಡಿದ್ದು, ಸಿಂಗಲ್ಸ್‌ನಲ್ಲಿ ಫೈನಲ್ ತಲುಪಿದ್ದಾರೆ. ಚಾಮರಾಜಪುರಂನ ಮೈಸೂರು ಟೆನಿಸ್ ಕ್ಲಬ್ (ಎಂಟಿಸಿ) ಅಂಗಳದಲ್ಲಿ ಶುಕ್ರವಾರ ನಡೆದ ಸಿಂಗಲ್ಸ್ ವಿಭಾಗದ ಸೆಮಿಫೈನಲ್‌ನಲ್ಲಿ ಜೆಸ್ಸಿ 6-1, 6-0 ಅಂತರದಿಂದ ಲಕ್ಷ್ಮಿಪ್ರಭಾ ಅರುಣ್‌ಕುಮಾರ್ ಅವರನ್ನು ಸುಲಭವಾಗಿ ಮಣಿಸಿದರು. ಟೂರ್ನಿಯ ಎರಡನೇ ಶ್ರೇಯಾಂಕಿತೆ ಜೆಸ್ಸಿ ಪಂದ್ಯದ ಮೊದಲ ಸೆಟ್‌ನ ಮೊದಲ ಗೇಮ್‌ನಿಂದಲೂ ಹಿಡಿತ ಸಾಧಿಸಿದರು. ಅರ್ಹತಾ ಸುತ್ತಿನಿಂದ ಸೆಮಿಫೈನಲ್‌ವರೆಗೆ ಅಚ್ಚರಿಯ ಪ್ರದರ್ಶನ ನೀಡಿದ್ದ ಲಕ್ಷ್ಮಿಪ್ರಭಾ, ಅಮೆರಿಕ ಆಟಗಾರ್ತಿಗೆ ಯಾವ ಹಂತದಲ್ಲೂ ಸಾಟಿಯಾಗಲಿಲ್ಲ. ಸಿಂಗಲ್ಸ್‌ನ ಮತ್ತೊಂದು ಸೆಮಿಫೈನಲ್‌ನಲ್ಲಿ ಟೂರ್ನಿಯ ಅಗ್ರ ಶ್ರೇಯಾಂಕಿತೆ ತಮಿಳುನಾಡಿನ ಆರ್.ಬಿ. ಶ್ರೀವಲ್ಲಿ 6-3, 6-2ರಲ್ಲಿ ರಿಯಾ ಭಾಟಿಯಾರನ್ನು ಸುಲಭವಾಗಿ ಮಣಿಸಿ ಫೈನಲ್ ಪ್ರವೇಶಿಸಿದರು.

ಸೋಹಾಗೆ ನಿರಾಸೆ: ಡಬಲ್ಸ್ ವಿಭಾಗದ ಫೈನಲ್‌ನಲ್ಲಿ ಜೆಸ್ಸಿ ಹಾಗೂ ರಿಯಾ ಭಾಟಿಯಾ ಜೋಡಿಯು 6-1, 6-1ರಲ್ಲಿ ಕರ್ನಾಟಕದ ಸೋಹಾ ಸಾದಿಕ್ ಹಾಗೂ ಆಕಾಂಕ್ಷಾ ನಿಟ್ಟೂರೆ ಜೋಡಿಯನ್ನು ಮಣಿಸಿ ಪ್ರಶಸ್ತಿ ಎತ್ತಿ ಹಿಡಿಯಿತು. ಸೋಹಾ ಹಾಗೂ ಆಕಾಂಕ್ಷಾ ಮೊದಲ ಸೆಟ್‌ನ ನಾಲ್ಕನೇ ಗೇಮ್‌ನಲ್ಲಿ ಭಾಟಿಯಾರ ಸರ್ವ್ ಮುರಿದು ಪ್ರತಿರೋಧ ತೋರುವ ಪ್ರಯತ್ನ ನಡೆಸಿದರಾದರೂ ನಂತರ ಹೋರಾಟ ಬಿಟ್ಟುಕೊಟ್ಟರು. ಕೇವಲ 53 ನಿಮಿಷದಲ್ಲೇ ಪಂದ್ಯ ಮುಗಿಯಿತು.

ಟಿಟಿ: ಐಹಿಕಾ, ಸುತೀರ್ಥಗೆ ಕಂಚು

ಅಸ್ತಾನಾ: ಭಾರತದ ಐಹಿಕಾ ಮುಖರ್ಜಿ ಮತ್ತು ಸುತೀರ್ಥ ಮುಖರ್ಜಿ ಅವರು ಏಷ್ಯನ್ ಟೇಬಲ್ ಟೆನಿಸ್ ಚಾಂಪಿಯನ್‌ಶಿಪ್‌ನ ಮಹಿಳೆಯರ ಡಬಲ್ಸ್‌ನಲ್ಲಿ ಚಾರಿತ್ರಿಕ ಕಂಚಿನ ಪದಕಕ್ಕೆ ಕೊರಳೊಡ್ಡಿದರು. ಈ ಮೂಲಕ ಮೂರು ಕಂಚಿನೊಂದಿಗೆ ಭಾರತದ ಅಭಿಯಾನದ ಮುಕ್ತಾಯವಾಯಿತು. ಶನಿವಾರ ಸೆಮಿಫೈನಲ್ ತಲುಪುವ ಮೂಲಕ ಭಾರತದ ಆಟಗಾರ್ತಿಯರು ಪದಕವನ್ನು ಖಚಿತಪಡಿಸಿಕೊಂಡಿದ್ದರು. ವಿಶ್ವದ 15ನೇ ಕ್ರಮಾಂಕದ ಭಾರತದ ಜೋಡಿ ನಾಲ್ಕರ ಘಟ್ಟದ ಪಂದ್ಯದಲ್ಲಿ 4-11, 9-11, 8-11ರಿಂದ ಜಪಾನ್ನ ಮಿವಾ ಹರಿಮೋಟೊ- ಮಿಯು ಕಿಶಾರಾ ಅವರಿಗೆ ಶರಣಾಗಿ ಕಂಚು ಜಯಿಸಿತು.

ರೋಹಿತ್ ಸ್ಥಾನ ತುಂಬಲು ಸಂಜು ಫಿಟ್ | ಬಾಂಗ್ಲಾ ವಿರುದ್ಧದ ಪಂದ್ಯದಲ್ಲಿ 40 ಬಾಲ್‌ಗೆ ಶತಕ ಬಾರಿಸಿದ್ದ ಬ್ಯಾಟರ್ | ರೋಹಿತ್ ಶರ್ಮಾ ಬಳಿಕ ಅತಿ ವೇಗದ ಶತಕದ ದಾಖಲೆ

ತಂಡಕ್ಕೆ ಲಭಿಸಿದ ಹೊಸ ಹಿಟ್‌ಮ್ಯಾನ್

ಬೆಂಗಳೂರು: ಟಿ20 ವಿಶ್ವಕಪ್ ಬಳಿಕ ಭಾರತದ ಹಿಟ್‌ಮ್ಯಾನ್ ರೋಹಿತ್ ಶರ್ಮಾ ಟಿ20ಗೆ ವಿದಾಯ ಹೇಳಿದ್ದರು. ಅದಾದ ಮೇಲೆ, ಟಿ20 ಕ್ರಿಕೆಟ್‌ನಲ್ಲಿ ಟೀಮ್ ಇಂಡಿಯಾದ ಆರಂಭಿಕ ಆಟಗಾರನಾಗಿ ಹಿಟ್‌ಮ್ಯಾನ್ ಸ್ಥಾನವನ್ನು ಯಾರು ತುಂಬಲಿದ್ದಾರೆ ಎಂಬ ಬಗ್ಗೆ ಪ್ರಶ್ನೆ ಕಾಡಿತ್ತು. ಇದಕ್ಕೀಗ ಬಿರುಸಿನ ಶತಕದ ಮೂಲಕ ಸಂಜು ಸ್ಯಾಮ್ಸನ್ ಉತ್ತರ ನೀಡಿದ್ದಾರೆ. ಬಾಂಗ್ಲಾದೇಶ ವಿರುದ್ಧದ ಸರಣಿಯಲ್ಲಿ ಸಂಜು ಅವರನ್ನು ಓಪನ್‌ರ್ ಆಗಿ ಕಣಕ್ಕಿಳಿಸಲು ನಾಯಕ ಸೂರ್ಯಕುಮಾರ್ ಯಾದವ್ ಹಾಗೂ ಕೋಚ್ ಗೌತಮ್ ಗಂಭೀರ್ ನಿರ್ಧಾರ ಕೈಗೊಂಡಿದ್ದರು.

ಮೊದಲೆರಡು ಪಂದ್ಯಗಳಲ್ಲಿ ವೈಫಲ್ಯ ಕಂಡಿದ್ದ ಸಂಜು, ಹೈದರಾಬಾದ್‌ನಲ್ಲಿ ನಡೆದ ಮೂರನೇ ಹಾಗೂ ಅಂತಿಮ ಟಿ20 ಪಂದ್ಯದಲ್ಲಿ ಕೇವಲ 40 ಎಸೆತಗಳಲ್ಲಿ ಶತಕ ಗಳಿಸುವ ಮೂಲಕ ತಮ್ಮ ಸಾಮರ್ಥ್ಯವನ್ನು ಸಾಬೀತು ಮಾಡಿದ್ದಾರೆ.

ಆ ಮೂಲಕ ರೋಹಿತ್ ಶರ್ಮಾ ಬಳಿಕ (35 ಎಸೆತ) ಟಿ20 ಕ್ರಿಕೆಟ್‌ನಲ್ಲಿ ಭಾರತದ ಪರ ವೇಗದ ಶತಕ ಗಳಿಸಿದ ಎರಡನೇ ಬ್ಯಾಟರ್ ಎನಿಸಿದ್ದಾರೆ. ಈ ಹಿಂದೆಯೂ ಸಂಜು ಅವರ ತೋಳ್ಬಲವನ್ನು ರೋಹಿತ್ ಅವರೊಂದಿಗೆ ಹೋಲಿಕೆ ಮಾಡಲಾಗುತ್ತಿತ್ತು. ಆದರೆ ಸಿಕ್ಕಿದ ಅವಕಾಶಗಳನ್ನು ಕೈಚೆಲ್ಲುತ್ತಾರೆ ಎಂಬ ಟೀಕೆಯೂ ಸಂಜು ಮೇಲಿತ್ತು.

ಸಂಜು ಸ್ಯಾಮ್ಸನ್ 47 ಎಸೆತಗಳಲ್ಲಿ 111 ರನ್ ಗಳಿಸಿ ಔಟ್ ಆದರು. ಅವರ ಇನ್ನಿಂಗ್ಸ್‌ನಲ್ಲಿ 11 ಬೌಂಡರಿ ಹಾಗೂ ಎಂಟು ಸಿಕ್ಸರ್‌ಗಳು ಸೇರಿದ್ದವು. ಸಂಜು ಶತಕದ ಬಲದೊಂದಿಗೆ ಭಾರತ ಆರು ವಿಕೆಟ್ ನಷ್ಟಕ್ಕೆ 297 ರನ್ ಪೇರಿಸಿತು. ಇದು ಅಂತಾರಾಷ್ಟ್ರೀಯ ಟಿ20 ಕ್ರಿಕೆಟ್‌ನಲ್ಲಿ ದಾಖಲಾದ ಎರಡನೇ ಅತ್ಯಧಿಕ ಮೊತ್ತ. ಟೆಸ್ಟ್ ಆಡುವ ತಂಡಗಳ ಪೈಕಿ ಇದು ದಾಖಲೆಯ ಮೊತ್ತವಾಗಿದೆ. ಭಾರತದ ಇನ್ನಿಂಗ್ಸ್‌ನಲ್ಲಿ ಒಟ್ಟು 22 ಸಿಕ್ಸರ್‌ಗಳು ಸೇರಿದ್ದವು. ಈವರೆಗೆ 33 ಟಿ20 ಅಂತಾರಾಷ್ಟ್ರೀಯ ಪಂದ್ಯ ಗಳನ್ನು ಆಡಿರುವ ಸಂಜು 22.85ರ ಸರಾಸರಿಯಲ್ಲಿ 594 ರನ್ ಗಳಿಸಿದ್ದಾರೆ. ಇದರಲ್ಲಿ ಒಂದು ಶತಕ ಹಾಗೂ ಎರಡು ಅರ್ಧಶತಕಗಳು ಸೇರಿವೆ.

ಏಕದಿನದಲ್ಲಿ ಒಂದು ಶತಕ ಹಾಗೂ ಐಪಿಎಲ್‌ನಲ್ಲಿ ಮೂರು ಶತಕಗಳು ಸಂಜು ಹೆಸರಿನಲ್ಲಿದೆ. ಸಂಜು ಸ್ಯಾಮ್ಸನ್ ಈ ವರ್ಷ ರೋಹಿತ್ ಶರ್ಮಾ ನಾಯಕತ್ವದಲ್ಲಿ ಟಿ20 ವಿಶ್ವಕಪ್ ಗೆದ್ದ ಭಾರತ ತಂಡದ ಸದಸ್ಯರಾಗಿದ್ದರು.

ಸರಣಿ ಆರಂಭಕ್ಕೂ ಮುನ್ನವೇ ಸಿದ್ಧತೆ

ಕಳೆದ ಶ್ರೀಲಂಕಾ ವಿರುದ್ಧದ ಸರಣಿಯಲ್ಲಿ ಎರಡು ಸಲ ಶೂನ್ಯಕ್ಕೆ ಔಟ್ ಆದ ಬಳಿಕ ಮುಂದಿನ ಸರಣಿಯಲ್ಲಿ ಅವಕಾಶ ಸಿಗುವ ಬಗ್ಗೆ ಸ್ವಲ್ಪ ಅನುಮಾನ ಮೂಡಿತ್ತು. ಆದರೆ ಕೋಚ್ ಹಾಗೂ ನಾಯಕ ನನಗೆ ಬೆಂಬಲ ನೀಡಿದರು. ಏನೇ ಆದರೂ ನಿನ್ನನ್ನು ಬೆಂಬಲಿಸುವುದಾಗಿ ಭರವಸೆ ಕೊಟ್ಟಿದ್ದರು ಎಂದು ಸಂಜು ವಿವರಿಸಿದ್ದಾರೆ. ಭಾರತೀಯ ಕ್ರಿಕೆಟಿಗನಾಗಿ ಮಾನಸಿಕವಾಗಿ ಅನೇಕ ಏರಿಳಿತಗಳನ್ನು ಕಂಡಿದ್ದೇನೆ. ಒತ್ತಡ ಮತ್ತು ವೈಫಲ್ಯಗಳನ್ನು ನಿಭಾಯಿಸಲು ಕಲಿತಿದ್ದೇನೆ ಎಂದು ಅವರು ತಿಳಿಸಿದ್ದಾರೆ. ಡ್ರೆಸ್ಸಿಂಗ್ ರೂಮ್‌ನಲ್ಲಿ ಉತ್ತಮ ವಾತಾವರಣವಿದೆ. ಎಲ್ಲರೂ ನನ್ನನ್ನು ಬೆಂಬಲಿಸುತ್ತಾರೆ. ನನ್ನ ಪ್ರದರ್ಶನದಿಂದ ಅವರೆಲ್ಲರೂ ಸಂತಸಗೊಂಡಿದ್ದಾರೆ. ಸರಣಿ ಆರಂಭಕ್ಕೂ ಮೊದಲೇ ತಾನು ಇನ್ನಿಂಗ್ಸ್ ಆರಂಭಿಸುವ ಬಗ್ಗೆ ಖಚಿತ ಮಾಹಿತಿ ನೀಡಿದ್ದರು. ಇದರಿಂದ ಸರಣಿಗೂ ಮುನ್ನ ಪೂರ್ವ ಸಿದ್ಧತೆ ನಡೆಸಲು ನೆರವಾಯಿತು. ನನ್ನ ವೃತ್ತಿ ಜೀವನದಲ್ಲಿ ಅನೇಕ ವೈಫಲ್ಯಗಳನ್ನು ಕಂಡಿದ್ದೇನೆ. ಓವರ್ ಅನುಭವಿ ಕ್ರಿಕೆಟಿಗನಾಗಿ ನನ್ನ ಕ್ರಿಕೆಟ್ ಬಗ್ಗೆ ಹೆಚ್ಚು ಅರ್ಥ ಮಾಡಿಕೊಂಡಿದ್ದೇನೆ. ಆದ್ದರಿಂದ, ವೈಫಲ್ಯಗಳನ್ನು ನಿಭಾಯಿಸಿ ನನ್ನದೇ ರೀತಿಯಲ್ಲಿ ಯಶಸ್ಸು ಗಳಿಸಲು ಬಯಸುತ್ತೇನೆ. ನಾನು ನಾನಾಗಿರಲು ಬಯಸುತ್ತೇನೆ' ಎಂದು ತಿಳಿಸಿದ್ದಾರೆ.

ಆಜಂ, ಅಫ್ರಿದಿ, ಶಾ ಪಾಕ್ ತಂಡದಿಂದ ಹೊರಕ್ಕೆ

ಲಾಹೋರ್: ಇತ್ತೀಚೆಗಿನ ಸರಣಿಗಳಲ್ಲಿ ತಂಡದ ಹೀನಾಯ ಪ್ರದರ್ಶನದ ಹಿನ್ನೆಲೆಯಲ್ಲಿ ಪಾಕಿಸ್ತಾನದ ಟೆಸ್ಟ್ ಕ್ರಿಕೆಟ್ ತಂಡದಿಂದ ಮಾಜಿ ನಾಯಕ ಬಾಬರ್ ಆಜಂ, ವೇಗದ ಬೌಲರ್‌ಗಳಾದ ಶಾಹೀನ್ ಅಫ್ರಿದಿ ಮತ್ತು ನಸೀಮ್ ಶಾ ಅವರನ್ನು ಕೈಬಿಡಲಾಗಿದೆ.

ಇಂಗ್ಲೆಂಡ್ ವಿರುದ್ಧದ ಅಂತಿಮದ ಎರಡು ಟೆಸ್ಟ್ ಪಂದ್ಯಗಳಿಗೆ ಪಾಕಿಸ್ತಾನ ಕ್ರಿಕೆಟ್ ಮಂಡಳಿ ಭಾನುವಾರ ತಂಡವನ್ನು ಪ್ರಕಟಿಸಿದೆ.

ಬಾಬರ್ ಆಜಂ, ಶಾಹೀನ್ ಅಫ್ರಿದಿ ಮತ್ತು ನಸೀಮ್ ಶಾ ಅವರಿಗೆ ವಿಶ್ರಾಂತಿ ನೀಡಲು ಪಿಸಿಬಿ ನಿರ್ಧರಿಸಿದೆ. ಈ ಪೈಕಿ ಗಾಯದ ಸಮಸ್ಯೆಯಿಂದಾಗಿ ಶಾಹೀನ್ ಹಾಗೂ ನಸೀಮ್ ಸರಣಿಯಿಂದ ಹಿಂದೆ ಸರಿಯಲು ನಿರ್ಧರಿಸಿದ್ದಾರೆ ಎಂದು ತಂಡದ ಮೂಲಗಳು ತಿಳಿಸಿವೆ.

54 ಟೆಸ್ಟ್ ಪಂದ್ಯಗಳ ವೃತ್ತಿ ಜೀವನದಲ್ಲಿ ಇದೇ ಮೊದಲ ಸಲ ಬಾಬರ್ ಆಜಂ ಅವರನ್ನು ತಂಡದಿಂದ ಹೊರಗಟ್ಟಲಾಗಿದೆ. ಆಟಗಾರರ ಈಗಿನ ನಿರ್ವಹಣೆ, ಫಿಟ್ನೆಸ್ ಹಾಗೂ ಭವಿಷ್ಯದ 2024-25ನೇ ಸಾಲಿನ ಸರಣಿಗಳನ್ನು ಪರಿಗಣಿಸಿ ಈ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ ಎನ್ನಲಾಗಿದೆ. ಡೆಂಗಿ ಜ್ವರದಿಂದ ಚೇತರಿಸಿಕೊಳ್ಳುತ್ತಿರುವ ಅಬ್ರಾರ್ ಅಹ್ಮದ್ ಅವರನ್ನೂ ಆಯ್ಕೆಗೆ ಪರಿಗಣಿಸಿಲ್ಲ. 2023ರ ನಂತರ ಟೆಸ್ಟ್ ಕ್ರಿಕೆಟ್‌ನಲ್ಲಿ ಲಯ ಕಂಡುಕೊಳ್ಳಲು ಪರದಾಡುತ್ತಿರುವ ಬಾಬರ್, ಕಳೆದ 18 ಇನಿಂಗ್ಸ್‌ಗಳಲ್ಲಿ ಒಂದೇ ಒಂದು ಅರ್ಧಶತಕ ಗಳಿಸಲು ಸಾಧ್ಯವಾಗಿರಲಿಲ್ಲ. ಈ ಅವಧಿಯಲ್ಲಿ ಆಡಿರುವ 9 ಪಂದ್ಯಗಳಲ್ಲಿ ಕೇವಲ 21ರ ಸರಾಸರಿ ಹೊಂದಿದ್ದಾರೆ. ಬಾಬರ್ ಅವರನ್ನು ತಂಡದಿಂದ ಕೈಬಿಟ್ಟಿರುವುದಕ್ಕೆ ಪರ ಹಾಗೂ ವಿರೋಧ ಅಭಿಪ್ರಾಯಗಳು ಕೇಳಿಬರುತ್ತಿವೆ. ಇಂಗ್ಲೆಂಡ್ ವಿರುದ್ಧ ಮುಲ್ತಾನ್‌ನಲ್ಲಿ ನಡೆದ ಮೊದಲ ಟೆಸ್ಟ್ ಪಂದ್ಯದಲ್ಲಿ ಮೊದಲ ಇನ್ನಿಂಗ್ಸ್‌ನಲ್ಲಿ 556 ರನ್ ಗಳಿಸಿದ್ದರೂ ಪಾಕಿಸ್ತಾನ ಸೋಲಿಗೆ ಶರಣಾಗಿತ್ತು.

ಅ.18ರಿಂದ ಒಮನ್‌ನಲ್ಲಿ ಸರಣಿ ಆರಂಭ | ರಾಜ್ಯದಿಂದ ಒಬ್ಬರೂ ಇಲ್ಲ

ಎಮರ್ಜಿಂಗ್ ಏಷ್ಯಾಕಪ್: ಭಾರತ ತಂಡ ಪ್ರಕಟ

ಮುಂಬಯಿ: ಅಕ್ಟೋಬರ್ 18ರಂದು ಒಮನ್‌ನಲ್ಲಿ ನಡೆಯಲಿರುವ ಪುರುಷರ ಟಿ20 ಉದಯೋನ್ಮುಖ ತಂಡಗಳ ಏಷ್ಯಾ ಕಪ್‌ಗೆ ಭಾರತ ಎ ತಂಡ ಪ್ರಕಟಗೊಂಡಿದೆ. ಎಡಗೈ ಬ್ಯಾಟರ್ ತಿಲಕ್ ವರ್ಮಾ ತಂಡವನ್ನು ಮುನ್ನಡೆಸಲಿದ್ದಾರೆ. ವಿಪರ್ಯಾಸವೆಂದರೆ ಈ ತಂಡದಲ್ಲಿ ಕನಿಷ್ಠ ಒಬ್ಬ ಕನ್ನಡಿಗನಿಗೂ ಅವಕಾಶ ಸಿಕ್ಕಿಲ್ಲ. ಭಾರತ ಮತ್ತು ಪಾಕಿಸ್ತಾನ ಒಂದೇ ಗುಂಪಿನಲ್ಲಿ ಸ್ಥಾನ ಪಡೆದಿದೆ. ಅಕ್ಟೋಬರ್ 19 ರಂದು ಇತ್ತಂಡಗಳು ಮುಖಾಮುಖಿಯಾಗಿದೆ. ತಿಲಕ್ ವರ್ಮಾ ನಾಲ್ಕು ಏಕದಿನ ಮತ್ತು 16 ಟಿ20 ಪಂದ್ಯಗಳಲ್ಲಿ ಭಾರತವನ್ನು ಪ್ರತಿನಿಧಿಸಿರುವ ಅನುಭವ ಹೊಂದಿದ್ದಾರೆ. ಬಾಂಗ್ಲಾ ವಿರುದ್ಧದ ಟಿ20ಯಲ್ಲಿ ನಿರೀಕ್ಷಿತ ಪ್ರದರ್ಶನ ತೋರುವಲ್ಲಿ ವಿಫಲವಾಗಿದ್ದ ಅಭಿಷೇಕ್ ಶರ್ಮಾ ಕೂಡ ಸ್ಥಾನ ಪಡೆದಿದ್ದಾರೆ.

ಭಾರತ ಎ ತಂಡ

ತಿಲಕ್ ವರ್ಮಾ (ನಾಯಕ), ಅಭಿಷೇಕ್ ಶರ್ಮಾ, ರಮಣ್‌ದೀಪ್ ಸಿಂಗ್, ಆಯುಷ್ ಬದೋನಿ, ನಿಶಾಂತ್ ಸಿಂಧು, ಅನೂಜ್ ರಾವತ್, ಪ್ರಭ್ ಸಿಮ್ರಾನ್ ಸಿಂಗ್, ನೆಹಾಲ್ ವಧೇರಾ, ಅನ್ಶುಲ್ ಕಾಂಬೋಜ್, ಹೃತಿಕ್ ಶೋಕೀನ್, ಆಕಿಬ್ ಖಾನ್, ವೈಭವ್ ಅರೋರಾ, ರಾಸಿಖ್ ಸಲಾಂ, ಸಾಯಿ ಕಿಶೋರ್, ರಾಹುಲ್ ಚಹರ್.

ವೇಳಾಪಟ್ಟಿ

ದಿನಾಂಕ	ಸೆಣಸಾಡುವ ದೇಶಗಳು
ಅಕ್ಟೋಬರ್ 18	ಬಾಂಗ್ಲಾದೇಶ ಎ VS ಹಾಂಗ್ ಕಾಂಗ್ ಎ
ಅಕ್ಟೋಬರ್ 18	ಶ್ರೀಲಂಕಾ ಎ VS ಅಫ್ಘಾನಿಸ್ತಾನ ಎ
ಅಕ್ಟೋಬರ್ 19	ಒಮಾನ್ VS ಯುಎಇ ಎ
ಅಕ್ಟೋಬರ್ 19	ಭಾರತ ಎ VS ಪಾಕಿಸ್ತಾನ ಎ
ಅಕ್ಟೋಬರ್ 20	ಶ್ರೀಲಂಕಾ ಎ VS ಹಾಂಗ್ ಕಾಂಗ್ ಎ
ಅಕ್ಟೋಬರ್ 20	ಬಾಂಗ್ಲಾದೇಶ ಎ VS ಅಫ್ಘಾನಿಸ್ತಾನ ಎ
ಅಕ್ಟೋಬರ್ 21	ಒಮಾನ್ VS ಪಾಕಿಸ್ತಾನ ಎ
ಅಕ್ಟೋಬರ್ 21	ಭಾರತ ಎ VS ಯುಎಇ ಎ
ಅಕ್ಟೋಬರ್ 22	ಅಫ್ಘಾನಿಸ್ತಾನ ಎ VS ಹಾಂಗ್ ಕಾಂಗ್ ಎ
ಅಕ್ಟೋಬರ್ 22	ಶ್ರೀಲಂಕಾ ಎ VS ಬಾಂಗ್ಲಾದೇಶ ಎ
ಅಕ್ಟೋಬರ್ 23	ಪಾಕಿಸ್ತಾನ ಎ VS ಯುಎಇ ಎ
ಅಕ್ಟೋಬರ್ 23	ಒಮಾನ್ VS ಭಾರತ ಎ
ಅಕ್ಟೋಬರ್ 25	ಸೆಮಿಫೈನಲ್ 1
ಅಕ್ಟೋಬರ್ 25	ಸೆಮಿಫೈನಲ್ 2
ಅಕ್ಟೋಬರ್ 27	ಫೈನಲ್

ಮುಂಬೈ ತಂಡಕ್ಕೆ ಜಯವರ್ಧನೆ ಕೋಚ್

ದೆಹಲಿ: ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) 2025ಕ್ಕೆ ಮುಂಚಿತವಾಗಿ ಶ್ರೀಲಂಕಾದ ಮಾಜಿ ಕ್ರಿಕೆಟಿಗ ಮಹೇಲಾ ಜಯವರ್ಧನೆ ಅವರನ್ನು ಮುಂಬೈ ಇಂಡಿಯನ್ಸ್ ತನ್ನ ಹೊಸ ಮುಖ್ಯ ಕೋಚ್ ಆಗಿ ಘೋಷಿಸಿದೆ. 2023 ಮತ್ತು 2024ರಲ್ಲಿ ಕ್ರಮವಾಗಿ ಕಳೆದ ಎರಡು ಋತುಗಳಲ್ಲಿ ತಂಡದ ಕೋಚ್ ಹುದ್ದೆ ವಹಿಸಿದ್ದ ಮಾರ್ಕ್ ಬೌಷರ್ ಅವರ ಸ್ಥಾನವನ್ನು ಜಯವರ್ಧನೆ ತುಂಬಲಿದ್ದಾರೆ. ವಿಶೇಷವೆಂದರೆ, ಶ್ರೀಲಂಕಾದ ದಂತಕಥೆ ಜಯವರ್ಧನೆ 2017ರಿಂದ 2022 ರವರೆಗೆ ಮುಂಬೈಗೆ ಮುಖ್ಯ ತರಬೇತುದಾರರಾಗಿ ಸೇವೆ ಸಲ್ಲಿಸಿದ್ದರು. ಅವರ ಅಧಿಕಾರಾವಧಿಯಲ್ಲಿ ಮುಂಬೈ 2017ರಲ್ಲಿ ತಮ್ಮ ಮೂರನೇ ಐಪಿಎಲ್ ಪ್ರಶಸ್ತಿಯನ್ನು ಗೆದ್ದಿತ್ತು. ಲೀಗ್ ಇತಿಹಾಸದಲ್ಲಿ ಅತ್ಯಂತ ಯಶಸ್ವಿ ಫ್ರಾಂಚೈಸಿಯಾಯಿತು. ಜಯವರ್ಧನೆ ಅವರು ಮುಂಬೈಗೆ ಕ್ರಮವಾಗಿ 2019 ಮತ್ತು 2020ರಲ್ಲಿ ಇನ್ನೂ ಎರಡು ಟ್ರೋಫಿಗಳನ್ನು ಸೇರಿಸಲು ಸಹಾಯ ಮಾಡಿದ್ದರು. ಅವರ ಟ್ರೋಫಿಗಳ ಸಂಖ್ಯೆಯನ್ನು ಐದಕ್ಕೆ ಏರಿಸಿದ್ದರು.

ಬ್ಯಾಂಕಾಕ್‌ನಲ್ಲಿ ಮುಕ್ತಾಯಗೊಂಡ ಇಂಡೋ ಥಾಯ್ಲೆಂಡ್ ಅಂತಾರಾಷ್ಟ್ರೀಯ ಥ್ರೋ ಬಾಲ್ ಟೆಸ್ಟ್ ಸೀರೀಸ್‌ನಲ್ಲಿ ಭಾರತದ ಮಹಿಳಾ ಥ್ರೋ ಬಾಲ್ ತಂಡ ಚಾಂಪಿಯನ್ನಾಗಿ ಹೊರಹೊಮ್ಮಿದೆ.

ವಿಟಾಕೀಸ್

ಜಲಂಧರನ ಮಧುರ ಗಾನ

ಶೀರ್ಷಿಕೆಯಲ್ಲಿ ಮನಗೆದ್ದಿದ್ದ ಜಲಂಧರ ಚಿತ್ರದ ಹಾಡುಗಳು ಬಿಡುಗಡೆಯಾಗಿವೆ. ಜಿ.ಜತಿನ್ ದರ್ಶನ್ ಸಂಗೀತ ನಿರ್ದೇಶನದಲ್ಲಿ ಹಾಡುಗಳು ಮಧುರ ವಾಗಿ ಮೂಡಿಬಂದಿವೆ. ಪ್ರಮೋದ್ ಶೆಟ್ಟಿ ನಾಯಕನಾಗಿ ನಟಿಸಿರುವ ಈ ಚಿತ್ರದ ಪ್ರಮುಖಪಾತ್ರದಲ್ಲಿ ರಂಗಭೂಮಿಯ ಹಿನ್ನೆಲೆ ಇರುವ ಸ್ಟೆಪ್ ಅಫ್ ಲೋಕಿ ಅಭಿನಯಿಸಿದ್ದಾರೆ. ಜತೆಗೆ ಟಗರು ಚಿತ್ರದಲ್ಲಿ ಕಾನ್ ಸ್ಟೇಬಲ್ ಪಾತ್ರದ ಮೂಲಕ ಜನಪ್ರಿಯರಾಗಿದ್ದ ಸರೋಜಾ ಖ್ಯಾತಿಯ ನಟಿ ಋಷಿಕಾ ರಾಜ್, ಅಧ್ಯಕ್ಷ ಖ್ಯಾತಿಯ ನಟಿ ಆರೋಹಿತಾ ಗೌಡ , ಬಲ ರಾಜವಾಡಿ, ರಘು ರಾಮನಕೊಪ್ಪ, ಪ್ರತಾಪ್ ನನಸು, ಆದಿ ಕೇಶವರೆಡ್ಡಿ, ಭೀಷ್ಮಾ ರಾಮಯ್ಯ, ವಿಜಯರಾಜ್, ಪ್ರಸಾದ್ ಮತ್ತು ಅಂಬು ಜಲಂಧರ್ ಚಿತ್ರದಲ್ಲಿ ಅಭಿನಯಿಸಿದ್ದಾರೆ. ಈ ಚಿತ್ರವನ್ನು ಸ್ಟೆಪ್ ಅಪ್ ಪಿಕ್ಚರ್ಸ್ ಲಾಂಛನದಲ್ಲಿ ಮದನ್ ನಿರ್ಮಿಸುತ್ತಿದ್ದಾರೆ. ಹಲವು ಚಿತ್ರಗಳಲ್ಲಿ ಸಹ ನಿರ್ದೇಶಕರಾಗಿ ಕೆಲಸ ಮಾಡಿ ಅನುಭವವಿರುವ ವಿಷ್ಣು ವಿ ಪ್ರಸನ್ನ ಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಕೇರಳ ಮೂಲದ ಸರಿನ್ ರವೀಂದ್ರನ್ ಮತ್ತು ವಿದ್ಯಾ ಶಂಕರ್ ಪಿ.ಎಸ್ ಛಾಯಾಗ್ರಹಣ ಹಾಗೂ ಜಿ. ಜತಿನ್ ದರ್ಶನ್ ಸಂಗೀತ ನಿರ್ದೇಶನ ಈ ಚಿತ್ರಕ್ಕಿದೆ.

ಮಹಾಕಾಳಿ ಕಥೆ ಹೇಳಲಿದೆ ಹನುಮಾನ್ ತಂಡ

ಹನುಮಾನ್ ಸಿನಿಮಾ ನಿರ್ದೇಶಿಸಿ ಸೈ ಎನಿಸಿಕೊಂಡಿರುವ ಪ್ರಶಾಂತ್ ವರ್ಮಾ ಸಾಲು ಸಾಲು ಸಿನಿಮಾಗಳಲ್ಲಿ ಬ್ಯುಸಿಯಾಗಿದ್ದಾರೆ. ಈ ನಡುವೆಯೆ ಪ್ರಶಾಂತ್ ಭಾರತದ ಮೊದಲ ಮಹಿಳಾ ಸೂಪರ್ ಹೀರೋ ಮಹಾಕಾಳಿ ಕಥೆಯನ್ನು ಹೇಳಲು ಸಿದ್ಧವಾಗಿದ್ದಾರೆ. ಮಹಾಕಾಳಿ ಸಿನಿಮಾಗೆ ಪ್ರಶಾಂತ್ ಕಥೆ ಬರೆದಿದ್ದು, ಈ ಹಿಂದೆ ಮಾರ್ಟಿನ್ ಲೂಥರ್ ಕಿಂಗ್ ಚಿತ್ರ ನಿರ್ದೇಶಿಸಿದ್ದ ಪೂಜಾ ಅಪರ್ಣಾ ಕೊಲ್ಲೂರು, ಮಹಾಕಾಳಿ ಸಾರಥ್ಯ ವಹಿಸಿಕೊಂಡಿದ್ದಾರೆ. ಪಶ್ಚಿಮ ಬಂಗಾಳದ ಜನಪ್ರಿಯ ದೇವಿ ಯಾಗಿರುವ ಕಾಳಿ ಹಿನ್ನೆಲೆ, ಅಲ್ಲಿನ ನೆಲದ ಸಂಸ್ಕೃತಿಯನ್ನು ಸಿನಿಮಾ ರೂಪದಲ್ಲಿ ಕಟ್ಟಿಕೊಡಲಾಗುತ್ತಿದೆ. ಮಹಾಕಾಳಿ ಪೋಸ್ಟರ್ ಬಿಡುಗಡೆ ಮಾಡಲಾಗಿದ್ದು, ಹುಡುಗಿ ಯೊಬ್ಬಳು ಹುಲಿಗೆ ತನ್ನ ಹಣೆ ಕೊಟ್ಟು ನಿಂತಿರುವ ಲುಕ್ ಗಮನಸೆಳೆಯುತ್ತಿದೆ. ಮಹಾಕಾಳಿ ಸಿನಿಮಾವನ್ನು ಆರ್ ಕೆಎಂಡಿ ಸ್ಟುಡಿಯೋಸ್ ಬ್ಯಾನರ್ ನಲ್ಲಿ ರಿಜ್ವಾನ್ ರಮೇಶ್ ದುಗ್ಗಲ್ ನಿರ್ಮಾಣ ಮಾಡು ತ್ತಿದ್ದಾರೆ.

ಸ್ಮರಣ್ ಸಾಯಿ ಸಂಗೀತ ನಿರ್ದೇಶನ ಮಾಡುತ್ತಿದ್ದಾರೆ. ದೊಡ್ಡ ತಾರಾಬಳಗವೇ ಚಿತ್ರದಲ್ಲಿರಲಿದೆ. ಮಹಾಕಾಳಿ ಸಿನಿಮಾ ಪ್ಯಾನ್ ಇಂಡಿಯಾ ಸಿನಿಮಾವಾಗಿ ಮೂಡಿಬರಲಿದೆ.

ಅಭಿಮನ್ಯುಗೆ ಸಾಥ್ ನೀಡಿದ ಕೋಮಲ್

ಕನ್ನಡ ಚಿತ್ರರಂಗದ ದಂತಕಥೆ ಕಾಶಿನಾಥ್ ಸುಪುತ್ರ ಅಭಿಮನ್ಯು ಕಾಶಿನಾಥ್ ಚಿತ್ರರಂಗದಲ್ಲಿ ಬ್ಯುಸಿಯಾಗಿದ್ದಾರೆ. ಎಲ್ಲಿಗೆ ಪಯಣ ಯಾವುದೋ ದಾರಿ ಚಿತ್ರ ಬಿಡುಗಡೆಗೆ ಎದಿರು ನೋಡುತ್ತಿರುವ ಅಭಿಮನ್ಯು ಈಗ ಹೊಸ ಸಿನಿಮಾದಲ್ಲಿ ನಟಿಸಲು ಸಿದ್ಧವಾಗಿದ್ದಾರೆ. ಈ ಚಿತ್ರದ ಮುಹೂರ್ತ ಸಮಾರಂಭ ಬೆಂಗಳೂರಿನ ಸಹಕಾರ ನಗರದ ಥೇರ್ಮನ್ ಕ್ಲಬ್ ನಲ್ಲಿ ನಡೆಯಿತು. ನಟ ಕೋಮಲ್ ಚಿತ್ರದ ಮೊದಲ ದೃಶ್ಯಕ್ಕೆ ಕ್ಲಾಪ್ ಮಾಡಿ ಶುಭಕೋರಿದರು. ನಾನು ಇಂಡಸ್ಟ್ರಿಗೆ ಬಂದು ಮೂರು ದಶಕಗಳು ಕಳೆದವು. ಕ್ಲ್ಯಾಪ್ ಮಾಡಿದ್ದು ಇದೇ ಮೊದಲ ಚಿತ್ರ. ಸಿನಿಮಾ ಚೆನ್ನಾಗಿ ಮೂಡಿಬರಲಿ, ಅಭಿಮನ್ಯು ಅವರಿಗೆ ಸದಾ ಬೆಂಬಲವಿರುತ್ತದೆ ಎಂದು ಕೋಮಲ್ ಹೇಳಿದರು.

ಹೊಸ ಸಿನಿಮಾದ ಟೈಟಲ್ ಹಾಗೂ ಫಸ್ಟ್ ಲುಕ್ ಬಿಡುಗಡೆ ಮಾಡಲಾಗಿದೆ. ಈ ಚಿತ್ರಕ್ಕೆ ಅಭಿಮನ್ಯು ಸನ್ ಆಫ್ ಕಾಶಿನಾಥ್ ಎಂಬ ಶೀರ್ಷಿಕೆ ಇಡಲಾಗಿದೆ. ಫಸ್ಟ್ ಲುಕ್ ಪೋಸ್ಟರ್ ಕುತೂಹಲಭರಿತವಾಗಿದ್ದು, ಅಭಿಮನ್ಯು ಸನ್ ಆಫ್ ಕಾಶೀನಾಥ್ ಎಂಬ ಶೀರ್ಷಿಕೆ ಜತೆಗೆ ಇದು ಹೊಸ ಅನುಭವ ಎಂಬ ಅಡಿಬರಹವೂ ಇದೆ. ಬುಕ್ ಹಿಡಿದು ಅರ್ಧ ಮುಖ ತೋರಿಸುತ್ತಿರುವ ಅಭಿಮನ್ಯು ಸೂಟು ಬೂಟು ತೊಟ್ಟು ಸ್ಟೈಲಿಶ್ ಗೆಟಪ್‌ನಲ್ಲಿ ಮಿಂಚಿದ್ದಾರೆ. ನಿರ್ದೇಶಕರು ರಾಜ್ ಮುರಳಿ, ಅಪ್ಪನ ಜಾನರ್ ಇಟ್ಕೊಂಡು ಈಗಿನ ಕಾಲದ ಹುಡುಗರಿಗೆ ಮಾಡಿದರೆ ಹೇಗಿರುತ್ತೆ ಅದನ್ನು ನಿಮ್ಮನ್ನು ಇಟ್ಕೊಂಡು ಪ್ಲಾನ್ ಮಾಡಿಕೊಂಡಿದ್ದೀನಿ ಅಂದರು. ಅಪ್ಪ ಇದ್ದಾಗ ನನಗೆ ಇಂತಹದ್ದೇ ಆಫರ್ ಬರುತ್ತಿದ್ದವು. ಅಪ್ಪ ಡೈರೆಕ್ಷನ್ ಮಾಡಬೇಕು, ನಾನು ಆಕ್ಟಿಂಗ್ ಮಾಡಬೇಕು. ಅನಂತನ ಅವಾಂತರ ಪಾರ್ಟ್ 2 ಮಾಡಬೇಕು. ಅನುಭವ ಪಾರ್ಟ್ 2 ಮಾಡಬೇಕು ಎನ್ನುತ್ತಿದ್ದರು. ಆದರೆ ಅದು ಸಾಧ್ಯವಾಗಲಿಲ್ಲ. ಈಗ ಅಪ್ಪ ಆಯ್ದುಕೊಳ್ಳುತ್ತಿದ್ದ ಕಥೆಗೆ ಈ ಸ್ಟೋರಿಯೂ ಹೊಂದುತ್ತದೆ ಎನ್ನುತ್ತಾರೆ ಅಭಿಮನ್ಯು ಕಾಶಿನಾಥ್ ಹಲವು ಸಿನಿಮಾಗಳಲ್ಲಿ ಸಹಾಯಕ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದ ರಾಜ್ ಮುರಳಿ ಈ ಚಿತ್ರದ ಮೂಲಕ ಪೂರ್ಣ ಪ್ರಮಾಣದ ನಿರ್ದೇಶಕರಾಗಿ ಹೆಜ್ಜೆ ಇಡುತ್ತಿದ್ದಾರೆ. ಅಭಿಮನ್ಯು ಸನ್ ಆಫ್ ಕಾಶಿನಾಥ್ ಚಿತ್ರದ ಮೂಲಕ ರಾಜ್ ಕಾಮಿಡಿ ಡ್ರಾಮಾ ಕಥೆ ಹೇಳುತ್ತಿದ್ದಾರೆ. ಐಸಿರಿ ಪ್ರೊಡಕ್ಷನ್ ಬ್ಯಾನರ್‌ನಲ್ಲಿ ಮಾರಪ್ಪ ಶ್ರೀನಿವಾಸ್ ಈ ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ. ನಾಯಕ ಅಭಿಮನ್ಯುಗೆ ಜತೆಯಾಗಿ ಸ್ಪಂದನಾ ಸೋಮಣ್ಣ, ವಿಜಯಶ್ರೀ ಕಲ್ಬುರ್ಗಿ ಬಣ್ಣ ಹಚ್ಚುತ್ತಿದ್ದಾರೆ. ಸಂದೀಪ್ ವಲ್ಲೂರಿ ಛಾಯಾಗ್ರಹಣ, ಅಭಿನಂದನ್ ಕಶ್ಯಪ್ ಸಂಗೀತ, ಚಂದನ್ ಪಿ ಸಂಕಲನ ಚಿತ್ರಕ್ಕಿದೆ. ನವೆಂಬರ್ ತಿಂಗಳಿನಿಂದ ಅಭಿಮನ್ಯು ಸನ್ ಆಫ್ ಕಾಶಿನಾಥ್ ಚಿತ್ರದ ಶೂಟಿಂಗ್ ಆರಂಭವಾಗಲಿದ್ದು, ಚಿಕ್ಕಮಗಳೂರು, ಮೈಸೂರು, ಹೈದರಾಬಾದ್ ಭಾಗದಲ್ಲಿ ಚಿತ್ರೀಕರಣ ನಡೆಸಲು ಚಿತ್ರತಂಡ ಯೋಜನೆ ಹಾಕಿಕೊಂಡಿದೆ.

ತಮಟೆ ಬಾರಿಸಿದ ಮಯೂರ್

ನಟನಾಗಿ ಪ್ರಸಿದ್ಧಿ ಪಡೆದಿರುವ ಮಯೂರ್ ಪಟೇಲ್ ಈಗ ನಿರ್ದೇಶಕರಾಗಿಯೂ ಗುರುತಿಸಿಕೊಳ್ಳುತ್ತಿದ್ದಾರೆ. ತಮಟೆ ಶೀರ್ಷಿಕೆಯಲ್ಲಿ ಸಿನಿಮಾವನ್ನು ನಿರ್ದೇಶನ ಮಾಡಿದ್ದು, ಹಿರಿಯ ನಟ ಮದನ್ ಪಟೇಲ್ ಮುಖ್ಯ ಪಾತ್ರದಲ್ಲಿ ನಟಿಸಿದ್ದಾರೆ. ಸದ್ಯ ತಮಟೆ ಚಿತ್ರದ ಶೋ ರೀಲ್ ಅನ್ನು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬಿಡುಗಡೆ ಮಾಡಿ ಶುಭಕೋರಿದರು.

ನಾನು ಸಿನಿಮಾ ನೋಡಿ ಇಪ್ಪತ್ತೈದು ವರ್ಷಗಳಾಗಿವೆ. ನಮ್ಮದೇ ಚಿತ್ರಮಂದಿರ ಗಳಿದ್ದರೂ ಸಹ ನಾನು ಸಿನಿಮಾ ನೋಡಿಲ್ಲ. ಎಷ್ಟೋ ದಿನಗಳ ನಂತರ ತಮಟೆ ಚಿತ್ರದ ಶೋ ರೀಲ್ ಅನ್ನು ಬಿಡುಗಡೆ ಮಾಡಿ ವೀಕ್ಷಿಸಿದ್ದೇನೆ. ಚಿತ್ರ ತುಂಬಾ ಚೆನ್ನಾಗಿದೆ. ಮುಂದೆ ಸಮಯ ಸಿಕ್ಕಾಗ ಪೂರ್ತಿ

ಚಲನಚಿತ್ರ ವೀಕ್ಷಿಸುತ್ತೇನೆ. ಮದನ್ ಪಟೇಲ್ ಅವರು ಮೊದಲಿನಿಂದಲೂ ಪರಿಚಯ. ಅವರ ಮಗ ಮಯೂರ್ ಪಟೇಲ್ ಈ ಚಿತ್ರವನ್ನು ನಿರ್ದೇಶಿಸಿರುವುದು ಖುಷಿ ತಂದಿದೆ ಎಂದು ಡಿ.ಕೆ. ಶಿವಕುಮಾರ್ ಹೇಳಿದರು. ತಮಟೆ ವಾದ್ಯಗಾರ ನೊಬ್ಬನ ಜೀವನದ ಯಶೋಗಾಥೆಯಾಗಿದ್ದು, ಈ ಚಿತ್ರ ಗ್ರಾಮೀಣ ಸೊಗಡಿನಲ್ಲಿ ಮೂಡಿಬಂದಿದೆ.

ನಾನು ಕೆಲವು ವರ್ಷಗಳ ಹಿಂದೆ ಈ ಕಾದಂಬರಿ ಬರೆದಿದ್ದೆ. ಈಗ ಅದನ್ನು ನನ್ನ ಮಗ ಮಯೂರ್ ಪಟೇಲ್ ನಿರ್ದೇಶನ ಮಾಡಿದ್ದಾರೆ. ತಮಟೆ ವಾದ್ಯಗಾರನೊಬ್ಬನ ಜೀವನ ಆಧರಿಸಿತ ಕಥೆಯಿದು. ನಾನೇ ಮುಖ್ಯ ಪಾತ್ರದಲ್ಲಿ ಅಭಿನಯಿಸಿದ್ದೇನೆ. ನಾನು ಈವರೆಗೂ ಮಾಡಿರದ ಪಾತ್ರವಿದು. ಈ ಚಿತ್ರಕ್ಕೆ ಚಿತ್ರಕಥೆ ಬರೆಯುವುದರೊಂದಿಗೆ ಸಂಗೀತವನ್ನು ನೀಡಿ, ನಿರ್ಮಾಣವನ್ನು ಮಾಡಿದ್ದೇನೆ. ಈಗಾಗಲೇ ಅನೇಕ ಚಿತ್ರೋತ್ಸವಗಳಲ್ಲಿ ಪ್ರದರ್ಶನವಾಗಿರುವ ತಮಟೆ ಪ್ರಶಂಸೆ ಪಡೆದಿದೆ. ಈ ಚಿತ್ರವನ್ನು ಸದ್ಯದಲ್ಲೇ ಬಿಡುಗಡೆ ಮಾಡುತ್ತಿದ್ದೇವೆ ಎಂದು ಮದನ್ ಪಟೇಲ್ ಹೇಳಿದರು. ಅಪ್ಪ ಬರೆದಿರುವ ತಮಟೆ ಕಾದಂಬರಿ ಓದುತ್ತಿದ್ದಾಗ, ಈ ಕಾದಂಬರಿ ಸಿನಿಮಾ ಮಾಡುವ ಆಸೆಯಾಯಿತು. ಅಪ್ಪನ ಬಳಿ ಹೇಳಿದೆ. ಅಪ್ಪ, ನೀನೇ ಈ ಚಿತ್ರ ನಿರ್ದೇಶನ ಮಾಡು. ನಾನು ನಿರ್ಮಾಣ ಮಾಡುತ್ತೇನೆ ಎಂದರು. ಸಿನಿಮಾದ ಮುಖ್ಯಪಾತ್ರದ ಅನ್ವೇಷಣೆಯಲ್ಲಿದ್ದಾಗ ಎಲ್ಲರೂ ಈ ಪಾತ್ರವನ್ನು ನಿಮ್ಮ ತಂದೆ ಅವರೇ ಮಾಡಿದರೆ ಚೆನ್ನಾಗಿರುತ್ತದೆ ಎಂದರು. ಅಪ್ಪ ತಮಟೆ ಚಿತ್ರದ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಪ್ರತಿಭಾವಂತ ಕಲಾವಿದರು ಸಿನಿಮಾದಲ್ಲಿ ನಟಿಸಿದ್ದಾರೆ ಎಂದರು ನಿರ್ದೇಶಕ ಮಯೂರ್ ಪಟೇಲ್ ಸಂತಸದಿಂದ ನುಡಿದರು.